ಮಂಗಳವಾರ, ಜುಲೈ 19, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪೋತರಾಜ
ಸಿಕಂದರಾಬಾದ್‌ನ ಉಜ್ಜಯಿನಿ ಮಹಾಕಾಳಿ ದೇವಸ್ಥಾನದಲ್ಲಿ ಸೋಮವಾರ ನಡೆದ 'ಬೋನಾಲು ಹಬ್ಬದಲ್ಲಿ ಭಕ್ತರೊಬ್ಬರು ಪೋತರಾಜ ವೇಷ ಧರಿಸಿದ್ದರು

ಸಂಕ್ಷಿಪ್ತ ಸುದ್ದಿ

ಜಿಎಸ್‌ಟಿ ವಿನಾಯ್ತಿಗೆ ‘ಚಿಟ್‌ಸ್ವರ್ಸ್’ ಆಗ್ರಹ

ಬೆಂಗಳೂರು: ಜಿಎಸ್‌ಟಿ ಸಮಿತಿಯ 47ನೇ ಕೌನ್ಸಿಲ್ ಸಭೆಯಲ್ಲಿ ಚಿಟ್ ಫಂಡ್‌ಗಳು ನೀಡುವ ಸೇವೆಗಳ ಮೇಲೆ ಶೇಕಡಾ 12ರಷ್ಟಿದ್ದ ಜಿಎಸ್‌ಟಿಯನ್ನು 18ರಷ್ಟಕ್ಕೆ ಹೆಚ್ಚಿಸಿರುವ ಆದೇಶ ಹಿಂಪಡೆಯಬೇಕು ಎಂದು ಕರ್ನಾಟಕ ಚಿಟ್‌ಸ್ವರ್ಸ್ ಅಸೋಸಿಯೇಷನ್ ಆಗ್ರಹಿಸಿದೆ.

ಇದನ್ನು ವಿರೋಧಿಸಿ ಜುಲೈ 25ರಂದು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಬಸವಲಿಂಗಪ್ಪ ಶಾಂತಗೇರ ತಿಳಿಸಿದರು.

‘ಬ್ಯಾಂಕಿಂಗ್ ಕ್ಷೇತ್ರಕ್ಕೆ ಜಿಎಸ್‌ಟಿಯಿಂದ ವಿನಾಯ್ತಿ ನೀಡಿರುವ ಹಾಗೆ ನಮಗೂ ನೀಡಬೇಕು. ಸರ್ಕಾರಕ್ಕೆ ಈ ಕುರಿತು ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ’ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಎಂಎಸ್‌ಪಿ ಜಾರಿಗೆ ಸಮಿತಿ ರಚನೆ

ನವದೆಹಲಿ (ಪಿಟಿಐ): ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಜಾರಿ ಸಂಬಂಧ ಕೇಂದ್ರ ಸರ್ಕಾರವು ಸೋಮವಾರ ಸಮಿತಿಯೊಂದನ್ನು ರಚಿಸಿದೆ. ಕೇಂದ್ರ ಕೃಷಿ ಸಚಿವಾಲಯದ ಮಾಜಿ ಕಾರ್ಯದರ್ಶಿ ಸಂಜಯ್ ಅಗರವಾಲ್ ನೇತೃತ್ವದ ಸಮಿತಿಯಲ್ಲಿ ಸಂಯುಕ್ತ ಕಿಶಾನ್ ಮೋರ್ಚಾದ ಮೂವರು ಸದಸ್ಯರ ಸೇರ್ಪಡೆಗೆ ಅವಕಾಶ ನೀಡಲಾಗಿದೆ.

ಭಾರತ–ಚೀನಾ ಮಾತುಕತೆ: ಮಹತ್ವದ ಸಮಸ್ಯೆಗಳ ಇತ್ಯರ್ಥಕ್ಕೆ ಮೂಡದ ಒಮ್ಮತ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಉದ್ಭವಿಸಿರುವ ಗಡಿ ಬಿಕ್ಕಟ್ಟು ಶಮನ ಸಂಬಂಧ ಭಾರತ ಮತ್ತು ಚೀನಾ ನಡುವೆ ಸೇನಾ ಹಂತದಲ್ಲಿ ನಡೆದ 16ನೇ ಸುತ್ತಿನ ಮಾತುಕತೆಯಲ್ಲಿ ಮಹತ್ವದ ಸಮಸ್ಯೆಗಳ ಇತ್ಯರ್ಥಕ್ಕೆ ಒಮ್ಮತ ಮೂಡಿಲ್ಲ.

‘ಪರಸ್ಪರ ಒಪ್ಪಿದ ನಿರ್ಣಯ ಕೈಗೊಳ್ಳಲು ಹಾಗೂ ಆದಷ್ಟು ಶೀಘ್ರ ಪರಿಹಾರ ಕಂಡುಕೊಳ್ಳುವ ಹಾದಿಯಲ್ಲಿ ನಿಕಟ ಬಾಂಧವ್ಯ ಹೊಂದಲು ಉಭಯ ದೇಶಗಳು ಸಮ್ಮತಿಸಿವೆ’ ಎಂದು ಸೇನೆಯ ಜಂಟಿ ಪ್ರಕಟಣೆ ತಿಳಿಸಿದೆ.

‘ಉಭಯ ದೇಶಗಳ ಸೇನಾ ಅಧಿಕಾರಿಗಳ ನಡುವೆ ಭಾನುವಾರ ಸುಮಾರು 12 ಗಂಟೆಗಳ ಸುದೀರ್ಘ ಮಾತುಕತೆ ನಡೆದಿತ್ತು. ಈ ವೇಳೆ ಕೆಲ ವಿಚಾರಗಳ ಬಗ್ಗೆ ಒಮ್ಮತದ ನಿರ್ಧಾರ ಕೈಗೊಳ್ಳಬಹುದು ಎಂದು ಊಹಿಸಲಾಗಿತ್ತು. ಆ ನಿರೀಕ್ಷೆ ತಲೆಕೆಳಗಾಗಿದೆ’ ಎಂದು ಸೇನಾ ಮೂಲಗಳು ತಿಳಿಸಿವೆ.

ದೋಣಿ ಮಗುಚಿ 19 ಮಹಿಳೆಯರು ಸಾವು

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಮತ್ತು ಸಿಂಧ್ ಗಡಿ ಪ್ರದೇಶದ ಬಳಿ ಸಿಂಧೂ ನದಿಯಲ್ಲಿ ಸೋಮವಾರ ದೋಣಿ ಮಗುಚಿ ಕನಿಷ್ಠ 19 ಮಹಿಳೆಯರು ಸಾವಿಗೀಡಾಗಿದ್ದಾರೆ.

ಪಂಜಾಬ್‌ನ ರಾಜನ್‌ಪುರದಲ್ಲಿ ಮದುವೆ ಮುಗಿಸಿಕೊಂಡು ಸುಮಾರು 100 ಜನರು ಮಚ್ಕಾಗೆ ಹಿಂತಿರುಗುತ್ತಿದ್ದರು.

ದೋಣಿಯ ಸಾಮರ್ಥ್ಯಕ್ಕಿಂತ ಹೆಚ್ಚು ಜನರಿದ್ದ ಕಾರಣ ದೋಣಿ ಮಗುಚಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.

‘ದಿವ್ಯಾ ಹಾಗರಗಿ ಜೈಲಿನಲ್ಲಿ ಏಕೆ ಇದ್ದಾರೆ?’

ಬೆಂಗಳೂರು: ‘ದಿವ್ಯಾ ರಾಜೇಶ ಹಾಗರಗಿ ಯಾವ ಕಾರಣಕ್ಕಾಗಿ ಮತ್ತು ಯಾವ ಸಾರ್ವಜನಿಕ ಹೋರಾಟ ನಡೆಸಿ ಜೈಲಿನಲ್ಲಿದ್ದಾರೆ’ ಎಂದು ಪ್ರಶ್ನಿಸಿರುವ ಹೈಕೋರ್ಟ್, ‘ಅವರು ಜೈಲಿನಲ್ಲಿ ಇರುವುದಕ್ಕೆ ಕಾರಣವೇನು ಎಂಬುದನ್ನು ತಿಳಿಸಿ’ ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದೆ.

ನರ್ಸಿಂಗ್ ಮಂಡಳಿಗೆ ಸಂಬಂಧಿಸಿದಂತೆ ದಿವ್ಯಾ 2020ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ನಮ್ಮ ಕಕ್ಷಿದಾರರು ಜೈಲಿನಲ್ಲಿದ್ದಾರೆ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಸಿಗುತ್ತಿಲ್ಲ. ಹಾಗಾಗಿ ಸ್ವಲ್ಪ ಸಮಯಾವಕಾಶ ನೀಡಬೇಕು’ ಎಂದು ಕೋರಿದರು.

ಇದಕ್ಕೆ ಅಚ್ಚರಿ ವ್ಯಕ್ತಪಡಿಸಿದ ನ್ಯಾಯಪೀಠ, ‘ಪಿಐಎಲ್ ಸಲ್ಲಿಸಿದವರು ಜೈಲಿನಲ್ಲಿರುವುದು ಕುತೂಹಲಕರ ಸಂಗತಿ. ಅವರನ್ನು ಜೈಲಿಗೆ ಹಾಕಿರುವ ಕಾರಣವೇನು ಎಂಬುದನ್ನು ತಿಳಿಸಿ’ ಎಂದು ವಿಚಾರಣೆ ಮುಂದೂಡಿತು.

ಪಿಎಸ್‌ಐ ಹಗರಣದ ಪ್ರಮುಖ ಆರೋಪಿಯಾಗಿರುವ ದಿವ್ಯಾ ಸದ್ಯ ಕಲಬುರಗಿಯ ಕಾರಾಗೃಹದಲ್ಲಿದ್ದಾರೆ.

ರೇವಾ ವಿ.ವಿ: ಪುನರ್ ಮನನ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಿ.ವಿ.ಸಿಂಧು

‘ಶ್ರದ್ಧೆಯಿಂದ ಗುರಿ ಸಾಧನೆ ಸಾಧ್ಯ’

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಪಿ.ವಿ.ಸಿಂಧು ಅವರನ್ನು ಸನ್ಮಾನಿಸಲಾಯಿತು. ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್‌.ರಮೇಶ್, ಟ್ರಸ್ಟಿ ಉಮೇಶ್ ರಾಜು, ಪರೀಕ್ಷಾ ನಿಯಂತ್ರಣ ವಿಭಾಗದ ಮುಖ್ಯಸ್ಥೆ ಡಾ.ಜಿ.ಬೀನಾ ಇತರರು ಇದ್ದರು

ಯಲಹಂಕ: ‘ಕ್ರೀಡೆ ಮತ್ತು ಶಿಕ್ಷಣ ಮಾತ್ರವಲ್ಲದೆ ತಮಗೆ ಇಷ್ಟವಾಗುವ ಯಾವುದೇ ಕ್ಷೇತ್ರದಲ್ಲಾದರೂ ಆಸಕ್ತಿ ಮತ್ತು ಶ್ರದ್ಧೆಯಿಂದ ಸಾಧನೆ ಮಾಡಿದರೆ ಜೀವನದಲ್ಲಿ ನಿಶ್ಚಿತ ಗುರಿ ಸಾಧಿಸಲು ಸಾಧ್ಯವಾಗುತ್ತದೆ’ ಎಂದು ಅಂತರ ರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಅಭಿಪ್ರಾಯಪಟ್ಟರು.

ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಪುನರ್‌ಮನನ ಮತ್ತು ಪ್ರಸ್ತುತ ಸಾಲಿನ ಬಿ.ಬಿ.ಎ, ಬಿ.ಸಿ.ಎ ಹಾಗೂ ಬಿ.ಕಾಂ ತರಗತಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ನಾನೂ ಚೆನ್ನಾಗಿ ಓದಬೇಕೆಂದಿದ್ದೆ. ಆದರೆ, ಆ ಸಂದರ್ಭದಲ್ಲಿ ಕ್ರೀಡಾ ತರಬೇತಿ ಪಡೆಯುವುದರ ಕಡೆಗೆ ಹೆಚ್ಚಿನ ಗಮನಹರಿಸಿದೆ. ನೀವೂ ನಿಮಗೆ ಆಸಕ್ತಿ ಇರುವ ರಂಗಗಳಲ್ಲಿ ಶೇ 100 ರಷ್ಟು ಕಠಿಣ ಪರಿಶ್ರಮ ಹಾಕಿದರೆ ಗುರಿ ತಲುಪಲು ಸಾಧ್ಯ’ ಎಂದರು.

ತಮ್ಮ ತಂದೆ–ತಾಯಿ ನೀಡಿದ ಪ್ರೋತ್ಸಾಹವನ್ನು ಸ್ಮರಿಸಿದ ಅವರು, ‘ಪೋಷಕರ ಕನಸುಗಳನ್ನು ಈಡೇರಿಸುವುದರಿಂದ ಅವರಿಗೆ ಹೆಮ್ಮೆಯಾಗುವುದರ ಜೊತೆಗೆ ಗೌರವ ಹೆಚ್ಚುತ್ತದೆ. ಇದರಿಂದ ನೀವೂ ಸಮಾಜದಲ್ಲಿ ಉನ್ನತಮಟ್ಟ ತಲುಪಲು ನೆರವಾಗುತ್ತದೆ’ ಎಂದು ಹೇಳಿದರು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮಾತನಾಡಿ, ‘ವಿಶ್ವವಿದ್ಯಾಲಯದಲ್ಲಿ ಪರಿಸರ ಸಂರಕ್ಷಣೆ, ಸ್ವಚ್ಛತೆ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವುದರ ಜೊತೆಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗೂ ಅಗತ್ಯ ಪ್ರೋತ್ಸಾಹ ನೀಡಲಾಗುತ್ತಿದೆ’ ಎಂದು ತಿಳಿಸಿದರು.

ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಟ್ರಸ್ಟಿ ಉಮೇಶ್ ರಾಜು, ಪರೀಕ್ಷಾ ನಿಯಂತ್ರಣ ವಿಭಾಗದ ಮುಖ್ಯಸ್ಥೆ ಡಾ.ಜಿ.ಬೀನಾ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Notice is hereby given that our client intends to purchase the property described in the schedule given below, from its owner, Mr. M. A. Dayananda, presently residing at #461, Cumberland Avenue, West Lafayette, Indiana 47906, USA and Permanently Residing at No. 511, 3rd A Cross, 2nd Main Road, RMV Extension, 2nd Stage, 3rd Block, Bengaluru – 560 094.

Any person or persons other than the owner named above having any claim or interest in or to the said property or any part thereof in any manner is/are required to forward their claim/s on or to the property, to the undersigned at their office along with the relevant documents thereof, within fifteen (15) days from the date of publication of this notice in this newspaper. In the absence of any claims within the above said period it shall be deemed that there are no such claims or that if there are any claims and they have not been made, it shall be deemed to have been waived and the sale will be executed in my client's favour without any further reference in this regard.

Schedule

All that piece and parcel of property bearing Site No. 511, Block III, Raj Mahal Vilas (RMV) II Stage Extension, Bangalore, measuring East to West 28 meters and North to South 15 meters in all measuring 420 sq. meters, alongwith the residential building constructed on the same and bound on the:
East by : Site No. 506
West by : 3rd A Cross Road
North by : Site No. 510
South by : Site No. 512

Sd/-
G.Sridhar, Advocate
206, 2nd Floor, Embassy Square, No. 148, Infantry Road, Bangalore – 560001

PUBLIC NOTICE

My client intends to purchase the schedule property from Smt. Veena Girish, Resident of No. 243/2, WOC Road, Rajajinagar, Bengaluru- 560010 who is the owner of the schedule properties described in the Schedule which was acquired through a Gift Deed from Sri. Marigowda and Smt. Nagamma, Smt. Veena Girish has assured that she is the absolute owner and possession of the schedule properties (Property No. 1 and Property No. 2). She further assured that she has clear and marketable title and the said properties are free from all the encumbrances and she has the full right to sell the said properties and therefore negotiating to sell the properties to my client. Any person having any right, title, interest, claim or demand whatsoever in respect of the said properties by way of Sale inheritance, bequest, exchange, gift, possession, trust, mortgage, lease, license, lien, charge, tenancy, lis pendency development rights, maintenance, easement or under any agreement of sale or Power of attorney, option, right of refusal or pre-emption, whatsoever or otherwise howsoever is hereby required to make the same know in writing with the documentary poof thereof, to the undersigned Advocate at the address mentioned herein below with in fifteen days (15 Days) from the date of publication of this notice, failing which the sale of transaction shall be completed without any reference to such right, title, interest, claim or demand and the same shall be deemed to have been waived of all intends and purposes. Claim without documentary proofs and or objections directly published in Newspaper shall not be considered as valid.

SCHEDULE “A”

All the piece and parcel of immovable property being a vacant site bearing No. 1133/D, New Municipal No. 4, Greater Bengaluru Mahanagara Palike, Ward No. 34, Measuring East to West: 90 feet, North to South: 60 feet totally measuring 5400 Square feet and bounded on:-
East by: Site No.1138, West by: Road, North by: Site No. 1133/E/3, South by: Site No. 1133/C/5.

SCHEDULE “B”

All the piece and parcel of immovable property being a vacant site bearing No. 1133/C, New Municipal No. 5, (Northern Portion), Greater Bengaluru Mahanagara Palike, Ward No. 34, Measuring East to West: 90 feet, North to South: 20 feet totally measuring 1800 Square feet and bounded on:-
East by: Site No. 1139, West by: Road, North by: Site No.1133/D/4, South by: Site No. 1133/C/5 which is gifted to Beena Roopak.

N.M. HANDRAL, Advocate
No. 20, 2nd Floor, Opp : Link Road Bus Stop, Malleshwaram, Bengaluru-560003.
Mob: 9449502430, 9741452511
PLACE: BENGALURU
DATE: 18-7-2022

PROCLAMATION

Smt. Tasmiya Taj

FORM No. 4
Proclamation requiring the appearance of Accused persons
See Section 82 Cr. P.C.

Whereas complaint has been made before me that Smt. Tasmiya Taj, Age about 28 Years, W/o Abdul Rahaman Pasha, House No. 180/1, ‘B’ Block, III Cross, Rashad Nagar, Govindapura, Bangalore – 560045 has committed (or is suspected to have committed) the offence punishable under Section. 132, 135(1)(a), 135(1)(b) of the Customs Act, 1962 and it has been returned to warrant of arrest thereupon issued that the said Smt. Tasmiya Taj cannot be found and whereas it been shown to my satisfaction that the Smt. Tasmiya Taj have absconded Or is concealing themselves to avoid the service of the said warrant.

Proclamation is hereby made that the said Tasmiya Taj is required to appear before Special Court for Economic Offences, Bangalore answer the said complaint on 24.08.2022.

Dated this 29th day of June 2022.

By Order, Presiding Officer,
Special Court for Economic Offenses,
Nrupatunga Road, Bangalore 560 001.

JOB OPPORTUNITIES

Teachers/ Professors

WANTED TRAINED LADY TEACHERS to teach English, Computer in English Medium Primary and High schools and NTT Trained/ Untrained for NURSERY Classes. Attractive salary for Talented Candidates. Walk-in Interview on 20.07.2022 between 2.00 PM and 4.00 PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080 26710170/ 74833-77387

AUTOMOTIVE

Four Wheelers Selling

Toyota

ACCIDENT VEHICLE KA-51 AB-2145 Toyota Etios 2017 model for sale. Without papers for inspection contact 7624968943 Gururaj.R (Within SEVENDAYS)

BUSINESS

Business to Business

Finance

WE NEED Investors for one of the leading Pvt Ltd inBangalore and Mysore. Very attractive, guaranteed RETURNS. Those who areinterested contact: 8296092609.

Financial Services

LOANS AVAILABLE against properties (mortgage,purchase, personal loans) preferred direct owners. Interested Please contact: 8296092609.

PERSONAL

Announcements

ANANDI DEVI, Mother/o 14817478L HAV, NEERAJ KUMAR PANDEY, Vill-Pandey Chak Bindoul Danapur Patna Bihar, wrongly mentioned DOB as 01-07-1958 hereby declaring correct DOB:01-07-1948, 03/05/2022 K.V.Mani, Bangalore

Change of Name

I, SHANTHAMMA R/@-24 KEB Soudamini Layout, Doddakallasandra, Bengaluru-62 have changed my name to SHANTHA.J.N Vide affidavit dated-18/07/2022, Before notary K.V. Mani

I, Y NEELIMA, residing at #305, A Block, Rams Lakeview Meadows Apartment, Vinayaka Nagar, Bagalur Cross, Bangalore-560063, have changed my name to TOTA NEELIMA, vide affidavit dated 18.07.2022 before Notary Gangaraju B.N., Bangalore. Henceforth I shall be known as TOTA NEELIMA only.

EDUCATION CORNER ಕ್ಲಾಸಿಫೈಡ್ಸ್

Bharathi Educational Trust
BANGALORE PUBLIC SCHOOL
(Affiliated to C.I.S.C.E, New Delhi)
HAL 2nd Stage, Bengaluru

THE MANAGEMENT
HEARTILY CONGRATULATES !
THE STAFF AND STUDENTS
FOR ACHIEVING 100% RESULT in CLASS 10, ICSE 2022 EXAMINATIONS
School Toppers

TANUSHREE R (96.40%)
SAKSHAM BAJPAYI (93.80%)
M DARSHAN KUMAR (93.40%)
ANANYA N (93.00%)
S BHUVANESHWARI BAI (92.00%)

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

ಹೋಲಿ ಏಂಜಲ್ಸ್ ಹೈಸ್ಕೂಲ್
ಹಂಪಿನಗರ, ವಿಜಯನಗರ, ಬೆಂ–104.
P. LOKESH, PRINCIPAL
CHANDRAMOHAN P., DIRECTOR
TOPPERS OF X - ICSE EXAMINATION 2021-22

ಮೇಘನ ಎನ್. 97.60%	ಸದಾಫ್ ಸಜಿದ್ ಕಚ್ಚಿ 96.20%	ಮಧುರ ಎನ್. 95.80%	ಕೇಶವ್ ತೋಷ್ಟಿವಾಲ್ 94.80%	ನಂದಿನಿ ಜಿ.ಎಂ. 94.60%	ರಾನಕ್ ಕೆ.ರಮಣಿ 94.40%
ಗ್ರೀಷ್ಮ ಪಿ. 93.20%	ಮುಸ್ಕಾನ್ ಜೈನ್ 92.80%	ಸ್ವಾತಿ ಎಸ್. ಮಾತ್ರಭಾಯಿ 92.60%	ಮಹಂತೇಶ್ ಜಿ.ವೈ. 92.40%	ಧನುಶ್ ಎಂ. 92.20%	ಕುಶಾಲ್ ಪಿ. 91.60%
ಹರ್ಷಿತ ಎ. 91.20%	ಮನ್ವಂತ್ ಶೆಟ್ಟಿ 91%	ಹರಿಪ್ರಿಯ ಎಸ್.ಎಂ. 90%	ಶ್ರೇಯ ಎಸ್. 88.60%	ಅಪೂರ್ವ ಆನಂದ್ 88.40%	ಧನುಶ್ ಆರ್. 87%
ದಿಶಾ ಗೌಡ ಎ. 87%	ಮಾನಸ ಕೆ.ಎಸ್. 85.80%	ನಯನ ಮಲ್ಲಿಕ್ ಕೆ.ಎಂ. 85.80%	ಭೂಮಿ ಎಂ. 85.20%	ಅಷಿಕಾ ಎ. 85%	ವಿಭಾ ಓಸ್ವಾಲ್ 84.40%	ಕಾವ್ಯ ಆರ್. 84.20%
ಅಭಯ್ ಕೃಷ್ಣನ್ ಪ್ರಸಾದ್ 84%	ಯಶಸ್ವಿನಿ ಎಂ. ಶೆಟ್ಟಿ 84%	ತನಿಷ್ಕ ಯು. 83.80%	ಉನ್ನತಿ ಚಾವತ್ ಡಿ.ಆರ್. 83.40%	ಮುದಿತ್ ಜೈನ್ 83.20%	ನಿಶಾಂತ್ ಎಸ್. 83.20%	ಹಿತೈಷಿ ಜಿ. ಕುಲ್ಕರ್ಣಿ 81.60%

I, MARGRET DAVEENA, Wife of Niranjan Nicholas .S, residing at No. 11, 15th cross, 1st block, D.V.Nagar, P.O. AkshayaNagar, Bengaluru- 560016, have changed my minor daughter's name from SHERLIN NICHOLAS to N. SHERLIN IMMACULATE, vide affidavit dated 18.07.2022 before Notary L. Gopalakrishna, Bangalore. Henceforth she shall be known as N. SHERLIN IMMACULATE only.

I, ASWATHY ASHOK MENON, R/a No. 9, NHCS Layout, Kaverinagar, Magadi Road, Bengaluru- 560079, have changed my minor daughter's name from NATASHA MENON VIG to DURGA ANANTHVIKAS, vide affidavit dated 16.07.2022 before Notary K. Venkateshan, Bengaluru. Henceforth she shall be known as DURGA ANANTHVIKAS only.

I, MUNIVENKATAPPA LAKSHMINARYAN, residing at #43, 3rd cross, VivekanandaNagar, Jaibharathnagar, Bangalore-560033, have changed my name to MUNIVENKATAPPA LAKSHMI NARAYANA, vide affidavit dated 18.07.2022 before Notary L. Gopalakrishna, Bangalore. Henceforth I shall be known as MUNIVENKATAPPA LAKSHMI NARAYANA only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

HEARTY CONGRATULATIONS

Miss. SAMEEKSHA MANJUNATH
CAMBRIDGE PUBLIC SCHOOL
HSR Layout, Bangalore.
For Securing 95% in ICSE 10th
Best Wishes from:
AM Family and Dr. Manjunath

CHAMPA DEVI W/O JC672391K SUB/MT GOPAL SINGH R/a PANYALI SHAMA KAPKOTE UTTARAKHAND my name CHAMPA DEVI to CHAMPA KORANGA Notary KV Mani

14842271W SEP/MT PATIL RAJENDRA BUDHA 2ATC Mother name Records USHABAIE instead of USHABAI BUDHA PATIL Notary KV Mani

For Online Classified Booking
Name Change / Education / Property / Job / Services and many more contact
9880856233
9886213331
dhclassifieds.com

I, GUNDUMALLA VENKATA NAGA LAKSHMI R/a Harsha Landmark Flat #303, Block-2, Brindavan Layout, Horamavu Bengaluru-560043 have changed my minor daughter’s name from GUNDUMALLA SAI SRIMAYEE SHRIYA GAYATHRI to GUNDUMALLA SAI SRIMAYEE vide affidavit dated 11-10-2018 before notary T.V.Chandra Shekara Reddy Bengaluru

I, REKHA HARIKESH r/at Unica Impression, Flat-No.104, 1st Floor, 3rd 'B' Block, C Cross, Srinidhi Layout, Vidyaranyapura, Bangalore-560097 have changed my name to REKHA BANGALORE VIJAYA KUMAR affidavit dated-15.06.2022 notary V.Anjanappa, B.lore.

I, BYAPPANA HALLI RAMESH, residing at No. 25, 4th cross, New Byappanahalli Extension, Indiranagar Post, Bengaluru-560038, have changed my name to D. RAMESH, vide affidavit dated 15.07.2022 before Notary K. Venkateshan, Bangalore. Henceforth I shall be known as D. RAMESH only.

I, ASLAM PASHA RAZAK S/o Habeeb Abdul Razak R/o #8/1, 'J' Cross 8th 'A' Main Road, New Gurappanapalya, Bannerghatta Road Bangalore- 560029 Have Changed My Name to ASLAM PASHA vide Affidavit Dated 16-07-2022 Before Notary B. Chitra Bangalore

I, PRADEEP SIDDAPPA r/at No.554/1, 6th B Cross, Madduramma Layout, Sunkadakatte, Magadi Main Road, Bengaluru-560091 have changed our daughter name from LAKSHYA PRADEEP to CHERITHA PRADEEP affidavit dated-11.07.2022 notary V.Anjanappa, B.lore.

I, K.SRINIVASAREDDY Father of CHANDANA SRINIVASAREDDY R/@ 02, GOVT School, Ichangur, Bengaluru- 562107 have changed my minor daughter name JAHNAVI SRINIVASAREDDY Vide affidavit dated-18/07/2022 Before notary K.V.Mani

I, VIJAYA LAKSHMI W/o B. Vijay R/a #8.701, Shriram Sameeksha, Near Gangamma Gudi Police Station, Jalahalli East Bangalore- 560013 Have Changed My Name to S. VIJAYALAKSHMI vide Affidavit Dated 18-07-2022 Before Notary Sreedharan Nair .P.N Bangalore.

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ.
ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಮನೆ: ಗುರುಕೃಪಾ ನಿಲಯ, ನಂ. 24, 1ನೇ ಕ್ರಾಸ್, ಕೆ.ಇ.ಬಿ ಕಛೇರಿ ರಸ್ತೆ, ಸಿಟಿ ಸೂಪರ್ ಮಾರ್ಕೆಟ್ ಎದುರು, ಕುಳ್ಳಪ್ಪ ವೃತ್ತ, ಕಮ್ಮನಹಳ್ಳಿ, ಬೆಂಗಳೂರು - 560 084. ದೂ: 080-2542 0833.
ಮೊಬೈಲ್: 98441 65272 / 99727 41083
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಮತ್ತು 3 ರಿಂದ ರಾತ್ರಿ 8ರವರೆಗೆ

CONNECT ಕ್ಲಾಸಿಫೈಡ್ಸ್

ಬೆಂಗಳೂರು ಉತ್ಸವ
Bengaluru Utsava
ಚಿತ್ರಕಲಾ चित्रकला
Grand Flea Market
Karnataka Chitrakala Parishath
Kumara Krupa Road, Bengaluru
Date: 15th July 2022, Friday to 24th July 2022, Sunday
Timing: 11:00 AM - 7:00 PM
(Art, Craft, Handlooms & Lifestyle Exhibition)
Art & Craft | Handicraft | Clothing
Fashion Accessories | Home Decor & More
FOOD MUSIC
(10 Days Exhibition) 90+ Stalls
Entry Free!
Yes, Covid19 Safety standards are in place
Also open on Sunday!
Visit & Shop For 90+ Stalls | Live Performance | Much More..!

Dollu Kunitha Live
23rd July 2022, Saturday
Timings: 5 PM - 6:30 PM
Yakshagana Show Live
24th July 2022, Sunday
Timings 5 PM - 6:30 PM

Home Decors | Handmade Paintings | Lampshades | Ceramic Pots |Handlooms & Handicrafts | Curtains | Carpets | Mats | Bags | Khadi Kurtas | Silks Saree | Sarees | Designer Kurtis | Bandhani Bedsheets | Designer Jewelry | Handmade Jewelry | Toys | Pots & Much more...
For Details Contact : 6364685716 / 9036658774 Entry Free..!
90+ Shopping Stalls | Live Performance | Much More!

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಜಗತ್ತಿನಲ್ಲಿ ಕಾಯಿಲೆ ಇರುವವರು ಒಂದು ವಿಧದವರಾದರೆ, ದೈಹಿಕವಾಗಿ ಆರೋಗ್ಯವಾಗಿದ್ದರೂ ಯಾವುದೋ ಘೋರ ಕಾಯಿಲೆ ಬಂದೇಬಿಟ್ಟದೆಯೆಂಬ ಅತಾರ್ಕಿಕ ಭಯದಲ್ಲಿ ಬದುಕುವವರು ಮತ್ತೊಂದು ಬಗೆ

ಸಂಖ್ಯೆ-ಸುದ್ದಿ

‘ಆರ್‌ಎಸ್‌ಎಸ್ ಆಳ ಮತ್ತು ಅಗಲ’: 16 ದಿನಗಳಲ್ಲಿ 84 ಸಾವಿರ ಪ್ರತಿ ಮುದ್ರಣ! 5

ಎಸ್‌ಎಚ್‌ಜಿ ಹಣಕಾಸು ನೆರವು: ಕೆಲವೇ ರಾಜ್ಯಗಳಿಗೆ ಸಿಂಹಪಾಲು

ರಾಷ್ಟ್ರಪತಿ ಚುನಾವಣೆ: ಶೇ 99 ಮತದಾನ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,521 ▲	16,278 ▲	₹52,240 (ಬೆಂಗಳೂರು)	₹57,300 (ಬೆಂಗಳೂರು)	79.98 ▼

ಪ್ಯಾಕ್ ಮಾಡಿರುವ, ಲೇಬಲ್ ಇರುವ ಪದಾರ್ಥಗಳಿಗೆ ಮಾತ್ರ ತೆರಿಗೆ

25 ಕೆ.ಜಿಗಿಂತ ಕಡಿಮೆಗಷ್ಟೇ ಜಿಎಸ್‌ಟಿ

ನವದೆಹಲಿ (ಪಿಟಿಐ): 25 ಕೆ.ಜಿ.ಗಿಂತ ಹೆಚ್ಚಿನ ತೂಕದ, ಪ್ಯಾಕ್ ಮಾಡಿರುವ ಮತ್ತು ಲೇಬಲ್ ಇರುವ ಬೇಳೆಕಾಳು, ಧಾನ್ಯ ಮತ್ತು ಹಿಟ್ಟು ಖರೀದಿಗೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇರುವುದಿಲ್ಲ.

ಅಂತೆಯೇ, 25 ಲೀಟರ್‌ಗಿಂತ ಹೆಚ್ಚಿನ ಪ್ರಮಾಣದ, ಪ್ಯಾಕ್ ಮಾಡಿರುವ, ಲೇಬಲ್ ಇರುವ ಮೊಸರು, ಮಜ್ಜಿಗೆ, ಲಸ್ಸಿಯನ್ನು ಖರೀದಿಸಿದರೆ ಜಿಎಸ್‌ಟಿ ಅನ್ವಯ ವಾಗುವುದಿಲ್ಲ.

25 ಕೆ.ಜಿ.ಗಿಂತ ಕಡಿಮೆ ತೂಕದ ಆಹಾರ ಧಾನ್ಯಗಳು, ಬೇಳೆಕಾಳು, 25 ಲೀಟರ್‌ಗಿಂತ ಕಡಿಮೆ ಪ್ರಮಾಣದ ಮೊಸರು, ಮಜ್ಜಿಗೆ, ಲಸ್ಸಿಗೆ ಮಾತ್ರ ಜಿಎಸ್‌ಟಿ ಅನ್ವಯವಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಸೋಮವಾರ ಸ್ಪಷ್ಟಪಡಿಸಿದೆ.

ಆಹಾರ ಧಾನ್ಯಗಳು, ಮೊಸರಿಗೆ ಅನ್ವಯವಾಗುವ ಜಿಎಸ್‌ಟಿ ಕುರಿತ ಕೆಲವು ಪ್ರಶ್ನೆಗಳಿಗೆ ಸಚಿವಾಲಯವು ಒಂದಿಷ್ಟು ವಿವರಗಳನ್ನು ನೀಡಿದೆ.

6ನೇ ಪುಟ ನೋಡಿ

ದರ ಏರಿಕೆ ಅನಿವಾರ್ಯವಲ್ಲ: ಸಿ.ಎಂ

ಬೆಂಗಳೂರು: ಮೊಸರು, ಅಕ್ಕಿ, ಮಂಡಕ್ಕಿ ಸೇರಿದಂತೆ ಅಗತ್ಯ ವಸ್ತುಗಳ ಮೇಲೆ ವಿಧಿಸಿರುವ ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಮರುಪಾವತಿ ಮಾಡಿಕೊಳ್ಳಲು ಅವಕಾಶವಿದ್ದು, ದರ ಏರಿಕೆ ಅನಿವಾರ್ಯವಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಈ ಕುರಿತು ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಜಿಎಸ್‌ಟಿ ಮೊತ್ತವನ್ನು ಗ್ರಾಹಕರಿಗೆ ವರ್ಗಾವಣೆ ಮಾಡುವುದು ಅನಿವಾರ್ಯ ವೇನಲ್ಲ. ವರ್ತಕರು ಮರುಪಾವತಿ ಅರ್ಜಿ ಸಲ್ಲಿಸಲು ಅವಕಾಶವಿದೆ. ತೆರಿಗೆಯ ಮೊತ್ತ ಮರುಪಾವತಿ ಆದರೆ ಸದ್ಯ ಇರುವ ದರಗಳನ್ನೇ ಮುಂದುವರಿಸಬೇಕಾಗುತ್ತದೆ’ ಎಂದರು. ‘ತೆರಿಗೆ ಮರುಪಾವತಿ ಕುರಿತಂತೆ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಚರ್ಚಿಸಲಾಗುವುದು. ಬಳಿಕ ವರ್ತಕರಿಗೆ ಸೂಚನೆ ನೀಡಲಾಗುವುದು’ ಎಂದು ಹೇಳಿದರು.

ಅಚ್ಛೇ ದಿನದ ಭಾಗವೇ: ಸಿದ್ದರಾಮಯ್ಯ ಪ್ರಶ್ನೆ

ಬೆಂಗಳೂರು: ‘ಅಗತ್ಯ ವಸ್ತುಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹೇರಿಕೆ ಮಾಡಿರುವುದು ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ನೀಡಿದ್ದ ಅಚ್ಛೇ ದಿನಗಳ ಭಾಗವೇ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೊಸರು, ಮಜ್ಜಿಗೆ, ಮಂಡಕ್ಕಿ ಸೇರಿದಂತೆ ಬಡವರು, ಮಧ್ಯಮ ವರ್ಗದ ಜನರು ಬಳಸುವ ವಸ್ತುಗಳ ಮೇಲೆ ಜಿಎಸ್‌ಟಿ ಹೇರುವ ಅಗತ್ಯ ಏನಿತ್ತು? ಶ್ರೀಮಂತರ ಮೇಲಿನ ತೆರಿಗೆ ಕಡಿಮೆ ಮಾಡಿ ಬಡವರ ಮೇಲೆ ತೆರಿಗೆ ಹೆಚ್ಚಿಸುವುದು ಯಾವ ನ್ಯಾಯ’ ಎಂದು ಕೇಳಿದರು.

ಮೊಸರು, ಲಸ್ಸಿ, ಮಜ್ಜಿಗೆ ದರ ಇಳಿಕೆ

ದಿಢೀರನೇ ಏರಿಕೆ ಮಾಡಿದ್ದ ನಂದಿನಿ ಮೊಸರು, ಲಸ್ಸಿ ಮತ್ತು ಮಜ್ಜಿಗೆ ದರಗಳನ್ನು ತಕ್ಷಣದಿಂದ ಕಡಿಮೆ ಮಾಡಿ, ಸೋಮವಾರ ಆದೇಶ ಹೊರಡಿಸಲಾಗಿದೆ. ಈ ಎಲ್ಲ ಹಾಲಿನ ಉತ್ಪನ್ನಗಳ ದರ 50 ಪೈಸೆಯಿಂದ ₹1.50ರಷ್ಟು ಕಡಿಮೆ ಯಾಗಲಿದೆ. ಭಾನುವಾರ ಈ ಉತ್ಪನ್ನಗಳ ದರಗಳನ್ನು ₹1ರಿಂದ ₹3ರಷ್ಟು ಹೆಚ್ಚಿಸಲಾಗಿತ್ತು. ಗ್ರಾಹಕರಿಂದ ಬೆಲೆ ಏರಿಕೆಗೆ ಅಸಮಾಧಾನ ವ್ಯಕ್ತವಾಗಿದ್ದರಿಂದ ಕೆಎಂಎಫ್ ಈ ಕ್ರಮಕೈಗೊಂಡಿದೆ.

ಪರಿಷ್ಕರಿಸಿದ ದರಗಳ ಅನ್ವಯ 200 ಗ್ರಾಂ ಮೊಸರಿಗೆ ₹10.50ಕ್ಕೆ ನಿಗದಿ ಪಡಿಸಲಾಗಿದೆ. ಇದರಿಂದ, ಮೂಲ ಹಿಂದಿನ ದರಕ್ಕಿಂತ 50 ಪೈಸೆಯಷ್ಟು ಮಾತ್ರ ಹೆಚ್ಚಿಸಿದಂತಾಗಿದೆ. 200 ಮಿ.ಲೀ. ಸ್ಯಾಷೆಯ ಮಜ್ಜಿಗೆ ದರವು ₹7 ರಿಂದ ₹8ಕ್ಕೆ ಹೆಚ್ಚಿಸಲಾಗಿತ್ತು. ಪರಿಷ್ಕೃತ ದರಗಳ ಅನ್ವಯ ₹7.50ಕ್ಕೆ ನಿಗದಿಪಡಿಸಲಾಗಿದೆ. ಇದೇ ರೀತಿ, 200 ಮಿ.ಲೀ. ಸ್ಯಾಷೆಯ ಲಸ್ಸಿ ದರವನ್ನು ₹10ರಿಂದ 11ಕ್ಕೆ ಹೆಚ್ಚಿಸಲಾಗಿತ್ತು. ಈಗ, ಹೊಸ ದರಗಳ ಅನ್ವಯ ₹10.50ಕ್ಕೆ ನಿಗದಿಪಡಿಸಲಾಗಿದೆ.

ಒಂದೆಡೆ ನಿರುದ್ಯೋಗ, ಮತ್ತೊಂದೆಡೆ ತೆರಿಗೆ ಹೆಚ್ಚಳ, ಅತ್ಯಂತ ವೇಗವಾಗಿ ಬೆಳೆಯುತ್ತಿದ್ದ ಆರ್ಥಿಕತೆಯನ್ನು ನಾಶ ಮಾಡುವುದು ಹೇಗೆ ಎಂಬುದಕ್ಕೆ ಬಿಜೆಪಿ ನಿಲುವೇ ನಿದರ್ಶನ

ರಾಹುಲ್ ಗಾಂಧಿ
ಕಾಂಗ್ರೆಸ್ ಮುಖಂಡ

ಅಕ್ಕಿ, ಮೊಸರಿಗೆ ಜಿಎಸ್‌ಟಿ ವಿಧಿಸಿರುವುದನ್ನು ವಿರೋಧಿಸುವವರು ಶ್ರೀಲಂಕಾ, ಪಾಕಿಸ್ತಾನ, ಮಾಲ್ದೀವ್ಸ್‌ಗಳ ಆರ್ಥಿಕ ಸ್ಥಿತಿಗತಿ ಗಮನಿಸಲಿ. ಆಗ ಸರ್ಕಾರದ ನಿಲುವು ಅರ್ಥವಾಗುತ್ತದೆ. ಜಿಎಸ್‌ಟಿ ಸಂಗ್ರಹವಾದಲ್ಲಿ ಮಾತ್ರ ಸರ್ಕಾರಕ್ಕೆ ಆದಾಯ. ಸರ್ಕಾರ ಆರ್ಥಿಕವಾಗಿ ಸುಭದ್ರವಾಗಿದ್ದರೆ ಅದೇ ಹಣ ಮತ್ತೆ ವಾಪಸ್ ಜನರ ಅವಶ್ಯಕತೆಗಳಿಗೆ ಬಳಕೆಯಾಗುತ್ತದೆ.

ಡಿ.ಎಸ್.ಅರುಣ್
ವಿಧಾನಪರಿಷತ್‌ನ ಬಿಜೆಪಿ ಸದಸ್ಯ

ನರ್ಮದಾ ನದಿಗೆ ಉರುಳಿದ ಬಸ್

ಮಧ್ಯಪ್ರದೇಶದ ಧಾರ್ ಜಿಲ್ಲೆಯ ನರ್ಮದಾ ನದಿಗೆ ಸೋಮವಾರ ಮಹಾರಾಷ್ಟ್ರ ಸಾರಿಗೆ ನಿಗಮಕ್ಕೆ ಸೇರಿದ ಬಸ್ ಉರುಳಿ ಬಿದ್ದು 13 ಮಂದಿ ಮೃತಪಟ್ಟಿದ್ದಾರೆ ಹಾಗೂ 15 ಜನರನ್ನು ರಕ್ಷಿಸಲಾಗಿದೆ. ಇಂದೋರ್‌ನಿಂದ ಮಹಾರಾಷ್ಟ್ರದ ಅಮಲ್ನೇರ್‌ಗೆ ತೆರಳುತ್ತಿದ್ದ ಈ ಬಸ್ ಅನ್ನು ಕ್ರೇನ್ ಮೂಲಕ ಮೇಲೆತ್ತಲಾಯಿತು –ಪಿಟಿಐ ಚಿತ್ರ

ಎಸಿಬಿ ವಿರುದ್ಧ ವಿಚಾರಣಾ ಪ್ರಕ್ರಿಯೆ: ‘ಸುಪ್ರೀಂ’ ಆದೇಶ

ಹೈಕೋರ್ಟ್ ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಹಾಗೂ ಅದರ ಮುಖ್ಯಸ್ಥ ಸೀಮಾಂತ್ ಕುಮಾರ್ ಸಿಂಗ್ ಬಗ್ಗೆ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರು ನೀಡಿದ್ದ ಹೇಳಿಕೆಗಳು ಹಾಗೂ ವಿಚಾರಣಾ ಪ್ರಕ್ರಿಯೆಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದ್ದು, ನ್ಯಾಯಮೂರ್ತಿ ಅವರ ಹೇಳಿಕೆಗಳು ‘ಅಪ್ರಸ್ತುತ ಹಾಗೂ ಹಾನಿಕಾರಕ’ ಎಂದು ಅಭಿಪ್ರಾಯಪಟ್ಟಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಅವರನ್ನು ಒಳಗೊಂಡ ತ್ರಿಸದಸ್ಯ ಪೀಠ ಮೇಲ್ಮನವಿಯ ವಿಚಾರಣೆನಡೆಸಿ, ‘ಜಾಮೀನು ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಂದುವರಿಸಬಹುದು’ ಎಂದು ಸ್ಪಷ್ಟಪಡಿಸಿದೆ.

ಲಂಚ ಪ್ರಕರಣದಲ್ಲಿ ಆರೋಪಿಯಾಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್, ಎಸಿಬಿ ವಿರುದ್ಧ ಕೆಂಡ ಕಾರಿದ್ದರು.

5ನೇ ಪುಟ ನೋಡಿ

ಅರ್ಜಿ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಕಂದಾಯ ವ್ಯಾಜ್ಯವೊಂದರಲ್ಲಿ ಅನುಕೂಲಕರ ಆದೇಶ ನೀಡಲು ₹ 5 ಲಕ್ಷ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಜಾಮೀನು ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಇದೇ 21ಕ್ಕೆ ಮುಂದೂಡಿದೆ.

ಈ ಕುರಿತ ಅರ್ಜಿಯು, ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಸೋಮವಾರ ವಿಚಾರಣೆಗೆ ನಿಗದಿಯಾಗಿತ್ತು.

ವಿಚಾರಣೆ ವೇಳೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪರ ವಕೀಲ ಪಿ.ಎನ್. ಮನಮೋಹನ್, 'ಎಸಿಬಿ ಮುಖ್ಯಸ್ಥ ಎಡಿಜಿಪಿ ಸೀಮಾಂತ ಕುಮಾರ್ ಸಿಂಗ್ ಅವರ ಸೇವಾ ದಾಖಲೆ ಮತ್ತು ವಿಚಾರಣಾ ಕೋರ್ಟ್‌ನಲ್ಲಿ ಎಸಿಬಿ ದಾಖಲಿಸಿರುವ ಬಿ ರಿಪೋರ್ಟ್ ಮಾಹಿತಿ ಸಲ್ಲಿಸುವಂತೆ ತಾವು ಇದೇ 7ರಂದು ನೀಡಿದ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ಬೆಳಿಗ್ಗೆ ತಡೆ ನೀಡಿದೆ. ಆದರೆ, ಮಹೇಶ್ ಜಾಮೀನು ಅರ್ಜಿ ವಿಚಾರಣೆ ಮುಂದುವರಿಸಬಹುದು ಎಂದು ತಿಳಿಸಿದೆ.

ಆದೇಶದ ಪ್ರತಿ ಇನ್ನೂ ಲಭ್ಯವಾಗಿಲ್ಲ. ಹಾಗಾಗಿ, ಆದೇಶದಲ್ಲಿ ಏನಿದೆ ಎಂಬುದು ಸ್ಪಷ್ಟವಾಗಿಲ್ಲ. ಆದ್ದರಿಂದ, ವಿಚಾರಣೆ ಮುಂದೂಡಬೇಕು' ಎಂದು ಕೋರಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿದೆ.

ದರ ಬದಲಾವಣೆ (ಪ್ರತಿ ಲೀಟರಿಗೆ)

	ಹಾಲಿ ದರ	ಪರಿಷ್ಕೃತ ದರ
ಫಾರ್ಚೂನ್ ಸೋಯಾಬೀನ್	₹195	₹165
ಸೂರ್ಯಕಾಂತಿ ಎಣ್ಣೆ	₹210	₹199
ಸಾಸಿವೆ ಎಣ್ಣೆ	₹195	₹190
ಕಡಲೆಕಾಯಿ ಎಣ್ಣೆ	₹220	₹210
ರೈಸ್ ಬ್ರಾನ್ ಎಣ್ಣೆ	₹225	₹210
ರಾಗ್ ವನಸ್ಪತಿ	₹200	₹185
ರಾಗ್ ಪಾಮೊಲಿನ್	₹170	₹144

ಅದಾನಿ ವಿಲ್ಮರ್ ಅಡುಗೆ ಎಣ್ಣೆ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಫಾರ್ಚೂನ್ ಬ್ರ್ಯಾಂಡ್ ಅಡಿಯಲ್ಲಿ ಮಾರಾಟವಾಗುತ್ತಿರುವ ಅಡುಗೆ ಎಣ್ಣೆಗಳ ಮೇಲಿನ ದರವನ್ನು ಲೀಟರಿಗೆ ₹ 30ರವರೆಗೆ ಇಳಿಕೆ ಮಾಡಿರುವುದಾಗಿ ಅದಾನಿ ವಿಲ್ಮರ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಅಂಗ್ಶು ಮಲ್ಲಿಕ್ ಹೇಳಿದ್ದಾರೆ.

ಮದರ್ ಡೈರಿ ಕಂಪನಿಯು ‘ಧಾರಾ’ ಬ್ರ್ಯಾಂಡ್‌ನ ಸೋಯಾ ಹಾಗೂ ರೈಸ್ ಬ್ರಾನ್ ಎಣ್ಣೆಗಳ ಬೆಲೆಯನ್ನು ಜುಲೈ 7ರಂದು ಲೀಟರಿಗೆ ₹ 14ರವರೆಗೆ ತಗ್ಗಿಸಿದೆ.

ಸೂಕ್ಷ್ಮ ವಲಯಕ್ಕೆ ವಿರೋಧ 25ಕ್ಕೆ ಕೇಂದ್ರಕ್ಕೆ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿ ಕರಡು ಅಧಿಸೂಚನೆ ಹೊರಡಿಸಿರುವುದನ್ನು ಮಲೆನಾಡು ಮತ್ತು ಕರಾವಳಿ ಭಾಗದ ಶಾಸಕರು ತೀವ್ರವಾಗಿ ವಿರೋಧಿಸಿದ್ದು, ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಇದೇ 25 ರಂದು ಕೇಂದ್ರ ಪರಿಸರ ಸಚಿವರ ಬಳಿ ಸರ್ವಪಕ್ಷಗಳ ಜನಪ್ರತಿನಿಧಿಗಳ ನಿಯೋಗವೊಂದನ್ನು ಒಯ್ಯಲು ತೀರ್ಮಾನಿಸಲಾಗಿದೆ.

ಅಧಿಸೂಚನೆಯ ಕುರಿತು ಚರ್ಚಿಸಲು ಸೋಮವಾರ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಅಧ್ಯಕ್ಷತೆಯಲ್ಲಿ ಮಲೆನಾಡು ಮತ್ತು ಕರಾವಳಿ ಭಾಗದ ಶಾಸಕರ ಸಭೆ ಕರೆಯಲಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಇದ್ದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಜ್ಞಾನೇಂದ್ರ, ಕೇಂದ್ರ ಪರಿಸರ ಸಚಿವಾಲಯ ಹೊರಡಿಸಿರುವ ಅಧಿಸೂಚನೆಯ ಬಗ್ಗೆ ಸಭೆಯಲ್ಲಿ ಪಕ್ಷಭೇದ ಮರೆತು ಎಲ್ಲಾ ಶಾಸಕರು ವಿರೋಧಿಸಿದರು. ಅಧಿಸೂಚನೆ ವಿರುದ್ಧ ಕಾನೂನಿನ ಹೋರಾಟ ನಡೆಸುವುದರ ಜತೆಗೆ, ಜನಾಭಿಪ್ರಾಯವನ್ನು ಸಂಗ್ರಹಿಸಲು ನಿರ್ಧರಿಸಲಾಯಿತು ಎಂದರು.

‘ಈ ಹಿಂದೆ ಮಾಧವ ಗಾಡ್ಗೀಳ್ ಮತ್ತು ಕಸ್ತೂರಿರಂಗನ್ ವರದಿಗಳ ಬಗ್ಗೆ ವ್ಯಕ್ತವಾದ ಆಕ್ಷೇಪಣೆಗಳನ್ನು ಕೇಂದ್ರ ಸರ್ಕಾರ ಪರಿಗಣಿಸಿಲ್ಲ. ವೈಜ್ಞಾನಿಕ ರೀತಿಯಲ್ಲೂ ಸಮೀಕ್ಷೆ ನಡೆಸಿಲ್ಲ. ಒಂದು ವೇಳೆ ಈ ಅಧಿಸೂಚನೆ ಜಾರಿಯಾದರೆ ಆ ಭಾಗದ ಗ್ರಾಮೀಣ ಜನರ ಬದುಕು ಅಸಹನೀಯವಾಗುತ್ತದೆ. ಆದ್ದರಿಂದ ಈ ಅಧಿಸೂಚನೆಯನ್ನು ನಾವೆಲ್ಲರೂ ಶತಾಯಗತಾಯ ವಿರೋಧಿಸುತ್ತೇವೆ’ ಎಂದು ಜ್ಞಾನೇಂದ್ರ ಹೇಳಿದರು.

ಗ್ರಾಮೀಣ ಪ್ರದೇಶದ ಜನರ ಅಭಿಪ್ರಾಯವನ್ನು ಕೇಂದ್ರ ಪರಿಸರ ಸಚಿವರಿಗೆ ಮನವರಿಕೆ ಮಾಡಲು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಎಲ್ಲ ಪಕ್ಷಗಳ ಶಾಸಕರು, ಲೋಕಸಭಾ ಸದಸ್ಯರನ್ನು ಒಳಗೊಂಡ ನಿಯೋಗವನ್ನು ಕರೆದೊಯ್ಯಲು ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದೂ ಅವರು ತಿಳಿಸಿದರು.

ವರ್ತಕರಿಂದ ಪ್ರತಿಭಟನೆಗೆ ಸಿದ್ಧತೆ

ನವದೆಹಲಿ (ರಾಯಿಟರ್ಸ್/ಪಿಟಿಐ): ಆಹಾರ ಧಾನ್ಯಗಳ ಮೇಲೆ ತೆರಿಗೆ ವಿಧಿಸಿರುವುದನ್ನು ವಿರೋಧಿಸಿ ವರ್ತಕರು ಮುಂದಿನ ವಾರ ದೇಶದಾದ್ಯಂತ ಪ್ರತಿಭಟನೆ ನಡೆಸಲಿದ್ದಾರೆ ಎಂದು ಅಖಿಲ ಭಾರತ ವರ್ತಕರ ಒಕ್ಕೂಟದ (ಸಿಎಐಟಿ) ಅಧ್ಯಕ್ಷ ಪ್ರವೀಣ್ ಖಂಡೇಲ್ವಾಲ್ ತಿಳಿಸಿದ್ದಾರೆ.

ಒಕ್ಕೂಟವು ಒಂದು ಕೋಟಿಗೂ ಹೆಚ್ಚು ಸದಸ್ಯರನ್ನು ಪ್ರತಿನಿಧಿಸುತ್ತದೆ. ಸರಣಿ ಪ್ರತಿಭಟನಾ ಸಭೆಗಳು ಜುಲೈ 26ರಿಂದ ಭೋಪಾಲ್‌ನಿಂದ ಶುರುವಾಗಲಿವೆ ಎಂದು ಖಂಡೇಲ್ವಾಲ್ ಹೇಳಿದ್ದಾರೆ.

ದೆಹಲಿಯ ವರ್ತಕರ ಸಂಘಟನೆಯಾಗಿರುವ ಸಿಟಿಐ, ಆಹಾರ ಧಾನ್ಯಗಳ ಮೇಲಿನ ಜಿಎಸ್‌ಟಿ ವಿರೋಧಿಸಿ ಬುಧವಾರ ವರ್ತಕರ ಮಹಾಪಂಚಾಯತ್‌ಗೆ ಕರೆ ನೀಡಿದೆ. ಹೊಸ ತೆರಿಗೆಗಳ ವಿರುದ್ಧ ಹೋರಾಟ ಹೇಗಿರಬೇಕು ಎಂಬುದನ್ನು ವರ್ತಕ ಸಮುದಾಯದ ಪ್ರಮುಖರು ತೀರ್ಮಾನಿಸಲಿದ್ದಾರೆ ಎಂದು ಸಿಟಿಐ ಅಧ್ಯಕ್ಷ ಬ್ರಿಜೇಶ್ ಗೋಯಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಚೂಣಿಯಲ್ಲಿ ರಿಷಿ ಸುನಕ್

ಲಂಡನ್ (ಪಿಟಿಐ): ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ನಾಯಕತ್ವದ ಆಯ್ಕೆ ಕುರಿತು ಸೋಮವಾರ ನಡೆದ ಮೂರನೇ ಸುತ್ತಿನ ಮತದಾನದಲ್ಲೂ ಭಾರತೀಯ ಸಂಜಾತ ರಿಷಿ ಸುನಕ್ ಅಗ್ರಸ್ಥಾನದಲ್ಲಿ ಮುಂದುವರೆದಿದ್ದಾರೆ. ನಾಲ್ವರ ಪೈಕಿ ರಿಷಿ 115 ಮತಗಳನ್ನು ಪಡೆದಿದ್ದಾರೆ.

ಮುಂದಿನ ಸುತ್ತು ಮಂಗಳ ವಾರ ನಡೆಯುವ ಸಾಧ್ಯತೆ ಇದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮಂಗಳೂರು ವಿಮಾನನಿಲ್ದಾಣದ ಮೂಲಕ ಪ್ರಯಾಣಿಸಿದ್ದ ಮಂಕಿಪಾಕ್ಸ್ ಸೋಂಕಿತ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಕಿಪಾಕ್ಸ್ ದೃಢಪಟ್ಟ ಕೇರಳದ ಯುವಕ ಮಂಗಳೂರು ವಿಮಾನ ನಿಲ್ದಾಣದ ಮೂಲಕ ಪ್ರಯಾಣಿಸಿದ್ದು, ಇಲ್ಲೂ ಸೋಂಕು ಹರಡುವ ಆತಂಕ ಎದುರಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲಾ ಆರೋಗ್ಯ ಇಲಾಖೆಯು ಸೋಂಕಿತ ಯುವಕನೊಂದಿಗೆ ಪ್ರಯಾಣಿಸಿದ್ದವರೂ ಸೇರಿದಂತೆ 35 ಮಂದಿಗೆ ಪ್ರತ್ಯೇಕ ವಾಸಕ್ಕೆ ಒಳಗಾಗುವಂತೆ ಸೂಚನೆ ನೀಡಿದೆ.

‘ಯುವಕ (31 ವರ್ಷ) ದುಬೈನಿಂದ ಜುಲೈ 13ರಂದು ತವರಿಗೆ ಮರಳಿದ್ದ. ಆತನಿಗೆ ಜುಲೈ 15ರಂದು ಜ್ವರ

ಹಾಗೂ ಮೈಯಲ್ಲಿ ಗುಳ್ಳೆಗಳು ಕಾಣಿಸಿಕೊಂಡಿದ್ದವು. ಕೇರಳದ ಕಣ್ಣೂರಿನ ಪೆರಿಯಾರ್ ವೈದ್ಯಕೀಯ ಕಾಲೇಜಿನಲ್ಲಿ ಆರೋಗ್ಯ ತಪಾಸಣೆ ನಡೆಸಿದಾಗ ಆತನಿಗೆ ಮಂಕಿಪಾಕ್ಸ್ ಹೊಂದಿರುವುದು ದೃಢಪಟ್ಟಿತ್ತು. ದುಬೈನಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿದ್ದ ಯುವಕ ಇಲ್ಲಿಂದ ಕೇರಳಕ್ಕೆ ಪ್ರಯಾಣ ಬೆಳೆಸಿದ್ದ. ಹಾಗಾಗಿ ಮಂಗಳೂರಿನಲ್ಲಿ ಸೋಂಕು ಹರಡದಂತೆ ಎಚ್ಚರಿಕೆ ವಹಿಸಲಾಗಿದೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯ ಸರ್ವೇಕ್ಷಣಾಧಿಕಾರಿ ಡಾ.ಜಗದೀಶ ಕೆ. ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ದುಬೈನಿಂದ ಯುವಕ ಪ್ರಯಾಣಿಸಿದ್ದ ವಿಮಾನದಲ್ಲಿ ಒಟ್ಟು 191 ಪ್ರಯಾಣಿಕರಿದ್ದರು. ವಿಮಾನದಲ್ಲಿ ಯುವಕ ಕುಳಿತಿದ್ದ ಸಾಲು, ಅದರ ಎದುರು ಮತ್ತು ಹಿಂದಿನ ಮೂರು ಸಾಲುಗಳ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ್ದವರು ಸೇರಿ ಒಟ್ಟು 35 ಮಂದಿಗೆ ಪ್ರತ್ಯೇಕ ವಾಸಕ್ಕೆ ಒಳಗಾಗುವಂತೆ ಸೂಚಿಸಿದ್ದೇವೆ’ ಎಂದರು.

6ನೇ ಪುಟ ನೋಡಿ

ನೆರೆ ರಾಜ್ಯಗಳಿಗೆ ನೆರವು ಗಣನೀಯ ಏರಿಕೆ

ಪಿ.ಎಂ ಆವಾಸ್ ಅನುದಾನಕ್ಕೂ ಕತ್ತರಿ

● ಮಂಜುನಾಥ ಹೆಬ್ಬಾರ್

ನವದೆಹಲಿ: ‘ಎಲ್ಲರಿಗೂ ವಸತಿ’ ಒದಗಿಸುವ ಉದ್ದೇಶದಿಂದ ಆರಂಭವಾದ ‘ಪ್ರಧಾನಮಂತ್ರಿ ಆವಾಸ್ ಯೋಜನೆ-ನಗರ (ಪಿಎಂಎಯು-ಯು)’ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಕರ್ನಾಟಕ ಸರ್ಕಾರಕ್ಕೆ ಬಿಡುಗಡೆಯಾಗುತ್ತಿರುವ ಅನುದಾನ ಗಣನೀಯವಾಗಿ ಕಡಿಮೆಯಾಗಿದೆ. ಆದರೆ, ನೆರೆಯ ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳಿಗೆ ಅನುದಾನ ಹರಿವಿನ ಪ್ರಮಾಣ ಹೆಚ್ಚಾಗಿದೆ.

ಪ್ರಜಾವಾಣಿ ವಿಶೇಷ

ದೇಶದಲ್ಲಿರುವ ವಸತಿ ರಹಿತರು, ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ರಾಜ್ಯಗಳಿಗೆ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಮಂಜೂರಾದ ಮನೆಗಳು ಹಾಗೂ ಬಿಡುಗಡೆಯಾದ ಅನುದಾನದ ಬಗ್ಗೆ ಕೇಂದ್ರ ವಸತಿ ಖಾತೆಯ ರಾಜ್ಯ ಸಚಿವ ಕೌಶಲ್ ಕಿಶೋರ್ ಅವರು ರಾಜ್ಯಸಭೆಗೆ ಸೋಮವಾರ ಲಿಖಿತ ಉತ್ತರ ನೀಡಿದ್ದಾರೆ. ಈ ಉತ್ತರದ ಪ್ರಕಾರ ರಾಜ್ಯಕ್ಕೆ ಅನುದಾನ ಇಳಿಕೆಯಾಗಿ ಅಕ್ಕಪಕ್ಕದ ರಾಜ್ಯಗಳಿಗೆ ಭರಪೂರ ಅನುದಾನ ಹಂಚಿಕೆಯಾಗಿರುವುದು ಗೊತ್ತಾಗಿದೆ.

ಕರ್ನಾಟಕಕ್ಕೆ 2017-18ರಲ್ಲಿ 2.22 ಲಕ್ಷ ಮನೆಗಳು ಮಂಜೂರಾಗಿ ₹1,681 ಕೋಟಿ ಅನುದಾನ ಬಿಡುಗಡೆಯಾಗಿತ್ತು. 2021-22ರಲ್ಲಿ 67,950 ಮನೆಗಳನ್ನು ಮಂಜೂರು ಮಾಡಿ ₹529 ಕೋಟಿ ಮಾತ್ರ ಬಿಡುಗಡೆಗೊಳಿಸಲಾಗಿದೆ.

ತಮಿಳುನಾಡಿಗೆ 2017-18ನೇ ಸಾಲಿನಲ್ಲಿ 1.15 ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿತ್ತು ಹಾಗೂ ₹1,194 ಕೋಟಿ ಬಿಡುಗಡೆಗೊಳಿಸಲಾಗಿತ್ತು. 2021-22ರಲ್ಲಿ 97,656 ಮನೆಗಳನ್ನು ಮಂಜೂರು ಮಾಡಲಾಗಿದೆ. ಆದರೆ, ಬಿಡುಗಡೆ ಮಾಡಿರುವ ಅನುದಾನದ ಮೊತ್ತ ₹1,569 ಕೋಟಿಗೆ ಏರಿದೆ.

ಆಂಧ್ರ ಪ್ರದೇಶಕ್ಕೆ 2017-18ರಲ್ಲಿ 2.42 ಲಕ್ಷ ಮನೆಗಳನ್ನು ಮಂಜೂರು ಮಾಡಿ ₹2,160 ಕೋಟಿ ಬಿಡುಗಡೆ ಮಾಡಲಾಗಿತ್ತು. 2021-22ರಲ್ಲಿ ಮಂಜೂರಾದ ಮನೆಗಳ ಸಂಖ್ಯೆ 4.47 ಲಕ್ಷಕ್ಕೆ ಏರಿದೆ. ₹2,475 ಕೋಟಿ ಸಹಾಯಾನುದಾನ ಬಿಡುಗಡೆ ಆಗಿದೆ. ಮಹಾರಾಷ್ಟ್ರಕ್ಕೆ ಮಂಜೂರಾದ ಮನೆಗಳು ಹಾಗೂ ಬಿಡುಗಡೆಯಾದ ಅನುದಾನದ ಪ್ರಮಾಣವೂ ಗಣನೀಯವಾಗಿ ಏರಿಕೆ ಆಗಿದೆ ಎಂಬ ಅಂಶವು ಸಚಿವರ ಉತ್ತರದಲ್ಲಿದೆ.

‘ಈ ಯೋಜನೆಯ ಫಲಾನುಭವಿಗಳ ಆಯ್ಕೆಗಾಗಿ ರಾಜ್ಯಗಳು ಬೇಡಿಕೆ ಸಮೀಕ್ಷೆ ನಡೆಸಿ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿವೆ. ಅದರ ಆಧಾರದಲ್ಲಿ ಮನೆ ಮಂಜೂರು ಮಾಡಿ ಅನುದಾನ ಬಿಡುಗಡೆ ಮಾಡಲಾಗಿದೆ’ ಎಂದೂ ಉತ್ತರದಲ್ಲಿ ಹೇಳಲಾಗಿದೆ.

‘ಕರ್ನಾಟಕದಲ್ಲಿ ಇನ್ನೂ ಸಹ 30 ಲಕ್ಷಕ್ಕೂ ಅಧಿಕ ವಸತಿ ರಹಿತರು ಇದ್ದಾರೆ. ನಗರ, ಪಟ್ಟಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಸತಿ ರಹಿತರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಫಲಾನುಭವಿಗಳ ಪಟ್ಟಿ ತಯಾರಿಸುವಾಗ ರಾಜ್ಯ ಸರ್ಕಾರದಿಂದಲೂ ಲೋಪ ಆಗಿದೆ. ವೈಜ್ಞಾನಿಕವಾಗಿ ಪಟ್ಟಿ ತಯಾರಿಸಿ ಕೇಂದ್ರಕ್ಕೆ ಸಲ್ಲಿಸಿದ್ದರೆ ಹೆಚ್ಚುವರಿ ಅನುದಾನ ಸಿಗುವ ಸಾಧ್ಯತೆ ಇತ್ತು. ಪಕ್ಕದ ರಾಜ್ಯಗಳು ಈ ಕೆಲಸ ಮಾಡಿವೆ. ಹೀಗಾಗಿ, ಹೆಚ್ಚುವರಿ ಅನುದಾನ ಪಡೆದಿವೆ’ ಎಂದು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ವಿಶ್ಲೇಷಿಸಿದರು.

ಕೇಂದ್ರದಿಂದ ಮನೆ ಮಂಜೂರಾತಿ

ವರ್ಷ	ಮನೆ
2017-18	2,22,524
2018-19	1,69,289
2019-20	74,432
2020-21	47,054
2021-22	67,950

ಕೇಂದ್ರದಿಂದ ಬಂದ ಅನುದಾನ (₹ಕೋಟಿಗಳಲ್ಲಿ)

2017-18	1,681
2018-19	728
2019-20	702
2020-21	1,142
2021-22	529

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045

ಈಮೇಲ್: comp.secy@astrazeneca.com, ವೆಬ್: www.astrazeneca.com/india

ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರವು ಕಳೆದಿವೆ ಎಂದು ಷೇರುದಾರರು ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಷೇರು ಪ್ರಮಾಣಪತ್ರಗಳನ್ನು ನೀಡುವಂತೆ ಷೇರುದಾರರು ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರುಗಳ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
R000974	750	120	13452691 ಇಂದ 13453440 ವರೆಗೆ	ರಮೇಶ್ ಚಂದ್ರ ಸಿನ್ಹಾಲ್ (ಮೃತ)

ಒಂದು ವೇಳೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಈ ಪ್ರಕಟಣೆಯ ದಿನದಿಂದ ಹದಿನೈದು ದಿನಗಳ ಒಳಗಾಗಿ ಸ್ವೀಕರಿಸದಿದ್ದಲ್ಲಿ, ಕಂಪನಿಯು ಅಗತ್ಯವಿರುವ ಶಾಸನಬದ್ಧ ಪ್ರಕ್ರಿಯೆಯ ಪ್ರಕಾರ ಹಕ್ಕುದಾರರ ಮನವಿಯೊಂದಿಗೆ ಮುಂದುವರಿಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸಹಿ/–
ಪ್ರತಾಪ್ ರುದ್ರ
ಕಂಪನಿ ಸೆಕ್ರಟರಿ ಮತ್ತು ಲೀಗಲ್ ಕೌನ್ಸಲ್

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 18, 2022

ಇದೇ 22ರಂದು ಪ್ರತಿಭಟನೆ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ದೇವನಹಳ್ಳಿ ತಾಲ್ಲೂಕು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಇದೇ 22ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ರಾಜ್ಯ ಘಟಕದ ಅಧ್ಯಕ್ಷ ನಿಂಗರಾಜುಗೌಡ ಹೇಳಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: 09/2022, ದಿನಾಂಕ: 13.07.2022

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಆರ್ಐಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. **ಟೆಂಡರು ಮುಕ್ತಾಯದ ದಿನಾಂಕ: 14.00 ಗಂಟೆ.**

ಕ್ರ.ಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರು ದಿನಾಂಕ
1	18221123	ಇಎಂಡಿ ಭಾಗ ಸಂ. 9325207ಗೆ ಬೇಕಾದ ಕಾಂಟಾಕ್ಟರ್ ಎಸ್ಸಿ	62 ಸಂ.	01.08.2022
2	ಎಲ್3225495	ಬ್ರೇಕ್ ಸಿಸ್ಟಂಗೆ ಬದಲಾಯಿಸಲೇಬೇಕಾದ ಕಿಟ್ ಸೆಟ್‌ಗಳು	16 ಸೆಟ್	28.07.2022
3	33221258	ಸಿಬಿಸಿ ಕಪ್ಲರ್ ಬಾಡಿ ಅಸೆಂಬ್ಲಿಗೆ ಗೇಕಾದ ನಕಲ್‌ಗಳು	97 ಸಂ.	04.08.2022
4	56225018ಎ	ಎಲೆಕ್ಟ್ರಿಕಲ್ ಪಾಯಿಂಟ್ ಯಂತ್ರ ಪತ್ತೆಹಚ್ಚಲಾಗದ ಆಂತರಿಕ ಲಾಕ್‌ನೊಂದಿಗೆ	44 ಸಂ.	05.08.2022
5	56225029	ರಿಲೇ ನಾನ್ ಎಸಿಐ ಪ್ಲಗ್–ಇನ್ ಟೈಪ್ ಸ್ಟೈಲ್ ಕ್ಯೂಎನ್1 ಡಿಸಿ ಮಾದರಿಯ ರಿಲೇ	1200 ಸಂ.	08.08.2022
6	67215001ಎ	ಸಿಸರ್ ಲಿಫ್ಟ್‌ಗಳು	04 ಸಂ.	29.07.2022
7	17221076	8 ಐಟಂಗಳನ್ನು ಒಳಗೊಂಡ ಗಿಯರ್ ಕೇಸ್ ಅಸೆಂಬ್ಲಿ	42 ಸೆಟ್	17.08.2022
8	56225021ಎ	ಕ್ಯೂಎನ್ಎ1 ಡಿಸಿ ಮಾದರಿಯ ರಿಲೇ ಎಸಿ ಇಮ್ಯೂನ್ ಪ್ಲಗ್	1010 ಸಂ.	05.08.2022
9	79221018ಎ	ಬೆಡ್‌ಷೀಟ್‌ಗಳು	20000 ಸಂ.	28.07.2022
10	18221229	ಇಎಂಡಿ ಬಿಡಿಭಾಗ ಸಂ. 8298178ನ ಸ್ವಿಚ್ ರೋಲರ್‌ಗಳು	1050 ಸಂ.	16.08.2022
11	56221092ಎ	ಪಿವಿಸಿ ಸಿಗ್ನಲಿಂಗ್ ಕೇಬಲ್	160 ಕಿಮೀ	04.08.2022

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/231/AAD/PRB/SWR/2022-23 — ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways | sw_rly | SWRRLY | southwesternrailway | SWRRLY

20, 21ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಜುಲೈ 20 ಮತ್ತು 21ರಂದು ವಿದ್ಯುತ್ ವ್ಯತ್ಯಯವಾಗಲಿದೆ.

20ರಂದು ವ್ಯತ್ಯಯವಾಗುವ ಸ್ಥಳಗಳು: ಶೋಭಾ ಫಾರೆಸ್ಟ್ ಅಪಾರ್ಟ್‌ಮೆಂಟ್, ತಲಘಟ್ಟಪುರ ಸುತ್ತಮುತ್ತಲಿನ ಪ್ರದೇಶಗಳು.

21ರಂದು ವ್ಯತ್ಯಯವಾಗುವ ಸ್ಥಳಗಳು: ಕಾವೇರಿ ನಗರ, ಹುಳಿಮಾವು, ಅಕ್ಷಯನಗರ, ಹೊಂಗಸಂದ್ರ, ಬಿಟಿಎಸ್ ಲೇಔಟ್, ವಿರಾಟ್ ನಗರ, ಕಾಳೇನ ಅಗ್ರಹಾರ, ಅರೆಕೆರೆ ಬಿಡಿಎ, ನ್ಯಾನಪ್ಪನಹಳ್ಳಿ, ಸತ್ಯಸಾಯಿ ಬಿಡಿಎ, ಕೋಡಿಚಿಕ್ಕನಹಳ್ಳಿ, ವಿಜಯ ಬ್ಯಾಂಕ್ ಲೇಔಟ್, ವಿಶ್ವಪ್ರಿಯ ಲೇಔಟ್ ಸುತ್ತಮುತ್ತ ಪ್ರದೇಶಗಳು.

‘ಜಿಎಸ್‌ಟಿ ಹೆಸರಿನಲ್ಲಿ ಬಡವರನ್ನು ದೋಚುತ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಜಿಎಸ್‌ಟಿ ಹೆಸರಿನಲ್ಲಿ ಬಡವರನ್ನು ದೋಚುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಆರೋಪಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಪೆಟ್ರೋಲಿಯಂ ಉತ್ಪನ್ನಗಳು, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ತತ್ತರಿಸಿ ಹೋಗಿದ್ದಾರೆ. ಈಗ ಅಗತ್ಯ ವಸ್ತುಗಳಿಗೆ ಜಿಎಸ್‌ಟಿ ವಿಧಿಸಿ ಬಡವರ ಅನ್ನವನ್ನೂ ಕಿತ್ತುಕೊಳ್ಳುತ್ತಿದ್ದಾರೆ. ತೆರಿಗೆ ಹೆಸರಿನಲ್ಲಿ ಜನರನ್ನು ಲೂಟಿ ಮಾಡುವುದಕ್ಕೂ ಒಂದು ಮಿತಿ ಬೇಡವೆ’ ಎಂದು ಪ್ರಶ್ನಿಸಿದರು.

‘ಒಂದು ಕಡೆ ತೆರಿಗೆ ಹೆಚ್ಚಿಸುತ್ತಿದ್ದಾರೆ. ಇನ್ನೊಂದು ಕಡೆ ಉಚಿತ ಯೋಜನೆಗಳು ಬೇಡ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿದ್ದಾರೆ. ದೇಶದಲ್ಲಿ ಬಡತನ ಹೆಚ್ಚುತ್ತಿದೆ. ತಿನ್ನಲು ಆಹಾರವಿಲ್ಲದೆ ಜನರು ಸಾಯುತ್ತಿದ್ದಾರೆ. ಶ್ರೀಲಂಕಾಕ್ಕಿಂತ ಭಿನ್ನವಾದ ಪರಿಸ್ಥಿತಿ ದೇಶದಲ್ಲಿಲ್ಲ. ಬಡವರ ಮನೆಗಳಲ್ಲಿ ಎರಡು ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ಇದೆ’ ಎಂದರು.

ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಲೇ ಇದೆ. ವಿದೇಶಿ ವಿನಿಮಯ ಸಂಗ್ರಹವೂ ತಗ್ಗುತ್ತಿದೆ. ಕೇಂದ್ರ ಸರ್ಕಾರದ ನೀತಿಯಿಂದಾಗಿ ವಿದೇಶಿ ಕಂಪನಿಗಳು ಹೂಡಿಕೆ ಹಿಂಪಡೆಯುತ್ತಿವೆ. ಈ ಬಗ್ಗೆಯೂ ಚರ್ಚೆಯಾಗಲಿ ಎಂದು ಅವರು ಹೇಳಿದರು.

ವಿಶೇಷ ಆಯುಕ್ತರಾಗಿ ಜಯರಾಂ ರಾಯ್‌ಪುರ ನೇಮಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರನ್ನಾಗಿ ಭಾರತೀಯ ಕಂದಾಯ ಸೇವೆ ಅಧಿಕಾರಿ ಜಯರಾಂ ರಾಯ್‌ಪುರ ಅವರನ್ನು ನೇಮಕ ಮಾಡಿ ಸೋಮವಾರ ಆದೇಶ ಹೊರಡಿಸಲಾಗಿದೆ.

ಹಣಕಾಸು ವಿಭಾಗದ ವಿಶೇಷ ಆಯುಕ್ತರ ಹುದ್ದೆಯಲ್ಲಿದ್ದ ಐಎಎಸ್ ಅಧಿಕಾರಿ ತುಳಸಿ ಮದ್ದಿನೇನಿ ಅವರನ್ನು ವರ್ಗಾವಣೆ ಮಾಡಲಾಗಿದೆ. ಅವರ ಸ್ಥಾನಕ್ಕೆ ಜಯರಾಂ ಅವರನ್ನು ನೇಮಿಸಲಾಗಿದೆ. ಜಯರಾಂ ಅವರಿಗೆ ಹೆಚ್ಚುವರಿಯಾಗಿ ಮುಖ್ಯಮಂತ್ರಿಯವರ ಕಾರ್ಯದರ್ಶಿ-2 ಹುದ್ದೆಯ ಪ್ರಭಾರವನ್ನೂ ನೀಡಲಾಗಿದೆ.

ಶೋಭ ಲಿಮಿಟೆಡ್

CIN: L45201KA1995PLC018475

ನೋಂದಾಯಿತ ಕಛೇರಿ: ‘ಶೋಭ,’ ಸರ್ಜಾಪುರ–ಮಾರತಹಳ್ಳಿ ಹೊರವರ್ತುಲ ರಸ್ತೆ, ದೇವರಬೀಸನಹಳ್ಳಿ, ಬೆಳ್ಳಂದೂರ ಅಂಚೆ, ಬೆಂಗಳೂರು–560 103

ಫೋನ್: +91–80–49320000 ಫ್ಯಾಕ್ಸ್: +91–80–49320444

ಇ–ಮೇಲ್: investors@sobha.com ವೆಬ್‌ಸೈಟ್: www.sobha.com

SOBHA PASSION AT WORK

27ನೇ ವಾರ್ಷಿಕ ಮಹಾಸಭೆ, ಇ–ವೋಟಿಂಗ್ ಮಾಹಿತಿ ಮತ್ತು ಬುಕ್ ಕ್ಲೋಸರ್ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, 10ನೇ ಆಗಸ್ಟ್ 2022 ಬುಧವಾರದಂದು ಮಧ್ಯಾಹ್ನ 03.00 ಗಂಟೆಗೆ (ಐಎಸ್‌ಟಿ) ವಿಡಿಯೋ ಕಾನ್ಫರೆನ್ಸ್ (ವಿಸಿ) ಸೌಲಭ್ಯ/ ಇತರೆ ಆಡಿಯೋ ವಿಷುಯಲ್ (ಒವಿಎಂ) ಮುಖಾಂತರ ಕಂಪನಿಯ ಸದಸ್ಯರ 27ನೇ ವಾರ್ಷಿಕ ಮಹಾಸಭೆ (ಎಜಿಎಂ)ಯನ್ನು ಏರ್ಪಡಿಸಲಾಗಿದ್ದು ಸದರಿ ಸಭೆಯಲ್ಲಿ ಎಜಿಎಂ ಸೂಚನಾಪತ್ರದಲ್ಲಿ ಉಲ್ಲೇಖಿಸಲಾಗಿರುವ ವ್ಯಾವಹಾರಿಕ ಆಗುಹೋಗುಗಳನ್ನು ಚರ್ಚಿಸಲಾಗುತ್ತದೆ. ಭಾರತ ಸರ್ಕಾರದ ಕಂಪನಿ ವ್ಯವಹಾರಗಳ ಸಚಿವಾಲಯವು ದಿನಾಂಕ ಮೇ 5, 2022ರಂದು ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 2/2022 ಹಾಗೂ ದಿನಾಂಕ 13, ಮೇ 2022ರಂದು ಸೆಕ್ಯೂರಿಟೀಸ್ & ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (‘ಸೆಬಿ’) ಹೊರಡಿಸಿರುವ ಸುತ್ತೋಲೆ ಸಂಖ್ಯೆ **SEBI/HO/CFD/CMD2/CIR/P/2022/62** ಗಳ ಪ್ರಕಾರ, ಕಂಪನಿಯಲ್ಲಿ ಅಥವಾ ರಜಿಸ್ಟ್ರಾರ್ & ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಮತ್ತು ಡೆಪಾಸಿಟರೀಸ್ ಇವರಲ್ಲಿ ಇಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಸದಸ್ಯರಿಗೆ, 18ನೇ ಜುಲೈ, 2022 ರಂದು ಲಿಂಕ್ ಇನ್ ಟೈಂ ಇಂಡಿಯಾ ಪ್ರೈ. ಲಿ. (ಲಿಂಕ್ ಇನ್ ಟೈಂ) ಇವರಿಂದ ಎಲೆಕ್ಟ್ರಾನಿಕ್ ವಿಧಾನದಲ್ಲಿ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಒಳಗೊಂಡಿರುವ ವಾರ್ಷಿಕ ವರದಿ 2021–22 ಅನ್ನು ರವಾನಿಸಲಾಗುತ್ತಿದೆ. ಮೇಲೆ ತಿಳಿಸಿರುವ ಸುತ್ತೋಲೆಗಳ ಮೇರೆಗೆ ವಾರ್ಷಿಕ ಮಹಾಸಭೆಯ ಸೂಚನಾಪತ್ರ ಹಾಗೂ ವಾರ್ಷಿಕ ವರದಿಗಳ ಮುದ್ರಿತ ಪ್ರತಿಗಳನ್ನು ರವಾನಿಸುವುದು ಅಗತ್ಯವಾಗಿರುವುದಿಲ್ಲ.

ಕಂಪನಿಯ ಸಭೆಯಲ್ಲಿ ಚರ್ಚಿಸಲು ಉದ್ದೇಶಿಸಲಾಗಿರುವ ಸಾಮಾನ್ಯ ವ್ಯವಹಾರ ಮತ್ತು ವಿಶೇಷ ವ್ಯವಹಾರಗಳು ಹಾಗೂ ಇನ್ನಿತರ ವಿಷಯಗಳು ಸೇರಿದಂತೆ ಮಹಾಸಭೆಯ ಸೂಚನಾಪತ್ರವನ್ನು ಒಳಗೊಂಡಿರುವ ವಾರ್ಷಿಕ ವರದಿ 2021–22 ಕಂಪನಿಯ ವೆಬ್‌ಸೈಟ್, **www.sobha.com** ಹಾಗೂ ಸ್ಟಾಕ್ ಎಕ್ಸ್ ಚೇಂಜ್ ಗಳ ವೆಬ್ ಸೈಟ್ **www.bseindia.com www.nseindia.com** ಮತ್ತು ಲಿಂಕ್ ಇನ್ ಟೈಮ್ ವೆಬ್ ಸೈಟ್ **https://instavote.linkintime.co.in** ಗಳಲ್ಲಿ ಕೂಡಾ ಲಭ್ಯವಿರುತ್ತದೆ.

ಮಾನ್ಯ ಸದಸ್ಯರು ವಿಸಿ/ಒಎವಿಎಂ ಮುಖಾಂತರ ವಾರ್ಷಿಕ ಮಹಾಸಭೆಗೆ ಹಾಜರಾಗುವ ವಿವರಗಳಿಗಾಗಿ ಎಜಿಎಂ ಸೂಚನಾ ಪತ್ರವನ್ನು ಪರಿಶೀಲಿಸಬೇಕೆಂದು ಕೋರಲಾಗಿದೆ.

ರಿಮೋಟ್ ಇ–ವೋಟಿಂಗ್:

ಕಾಲಕಾಲಕ್ಕೆ ತಿದ್ದುಪಡಿಗೆ ಒಳಗಾಗಿರುವ ಕಂಪನಿಗಳ ಕಾಯ್ದೆ, 2013ರ (‘ಕಂಪನಿಗಳ ಕಾಯ್ದೆ’) ಸೆಕ್ಷನ್ 108 ಅನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಮೇರೆಗೆ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಇವರಿಂದ ಹೊರಡಿಸಲಾದ ಮಹಾಸಭೆಗಳು ಕುರಿತಾದ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ (‘ಎಸ್ಎಸ್–2’) ಮತ್ತು ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ & ಡಿಸ್ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಗಳು 2015ರ ನಿಯಮ 44ರ ಪ್ರಕಾರ ವಾರ್ಷಿಕ ಮಹಾಸಭೆಯಲ್ಲಿ ಚರ್ಚಿಸಲಾಗುವ ವ್ಯಾವಹಾರಿಕ ಆಗುಹೋಗುಗಳಿಗೆ ಸಂಬಂಧಿಸಿದಂತೆ, ಎಜಿಎಂಗೆ ಮುಂಚಿತವಾಗಿ ಹಾಗೂ ಎಜಿಎಂ ಅವಧಿಯಲ್ಲಿ ಕಂಪನಿಯು ತನ್ನ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸುತ್ತಲಿದೆ ಮತ್ತು ಸದರಿ ಉದ್ದೇಶಕಾಗಿ ಕಂಪನಿಯು ಎಲೆಕ್ಟ್ರಾನಿಕ್ ವಿಧಾನದಲ್ಲಿ ಮತದಾನ ಮಾಡುವ ಸೌಲಭ್ಯ ಒದಗಿಸಲಿಕ್ಕೆ ಲಿಂಕ್ ಇನ್ ಟೈಂ ಇಂಡಿಯಾ ಪ್ರೈ. ಲಿ. (ಇನ್ಸ್ಟಾ ವೋಟ್) ಇವರನ್ನು ನಿಯೋಜಿಸಿರುತ್ತದೆ.

ರಿಮೋಟ್ ಇ–ವೋಟಿಂಗ್‌ಗೆ ಸಂಬಂಧಿತ ವಿವರಗಳನ್ನು ಎಜಿಎಂ ಸೂಚನಾ ಪತ್ರದಲ್ಲಿ ನೀಡಲಾಗಿದೆ. ದಯವಿಟ್ಟು ಸದಸ್ಯರೆಲ್ಲ ಈ ಕೆಳಗಿನ ಅಂಶಗಳನ್ನು ಗಮನಿಸಬೇಕೆಂದು ವಿನಂತಿಸಲಾಗಿದೆ;

ಎ) ರಿಮೋಟ್ ಇ–ವೋಟಿಂಗ್ ಸೌಲಭ್ಯವು ರವಿವಾರ, ಆಗಸ್ಟ್ 7, 2022 ರಂದು ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಆರಂಭವಾಗುತ್ತದೆ ಮತ್ತು ಮಂಗಳವಾರ, ಆಗಸ್ಟ್ 9, 2022 ರಂದು ಸಂಜೆ 5 ಗಂಟೆಗೆ (ಐಎಸ್‌ಟಿ) ಅಂತ್ಯಗೊಳ್ಳುತ್ತದೆ. ತದನಂತರ ಲಿಂಕ್ ಇನ್ ಟೈಂ ಇವರಿಂದ ಇ–ವೋಟಿಂಗ್ ಮಾಡ್ಯೂಲ್‌ನ್ನು ಸ್ಥಗಿತಗೊಳಿಸಲಾಗುತ್ತದೆ. ಸದಸ್ಯರೊಬ್ಬರು ಒಂದು ನಿರ್ದಿಷ್ಟ ಠರಾವಿಗೆ ಮತದಾನ ಮಾಡಿದ ನಂತರ, ಅದನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಸಾಧ್ಯವಿರುವುದಿಲ್ಲ.

ಬಿ) ವಿಸಿ/ಒಎವಿಎಂ ಸೌಲಭ್ಯದ ಮುಖಾಂತರ ವಾರ್ಷಿಕ ಮಹಾಸಭೆಗೆ ಹಾಜರಾದ ಸದಸ್ಯರು ರಿಮೋಟ್ ಇ–ವೋಟಿಂಗ್ ಮೂಲಕ ಠರಾವುಗಳಿಗೆ ತಮ್ಮ ಮತ ಚಲಾಯಿಸದೇ ಇದ್ದಲ್ಲಿ ಮತ್ತು ಮತದಾನಕ್ಕೆ ಅನರ್ಹರಾಗಿರದ ಸದಸ್ಯರು, ವಾರ್ಷಿಕ ಮಹಾಸಭೆ ಅವಧಿಯಲ್ಲಿ ಇ–ವೋಟಿಂಗ್ ವಿಧಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

ಸಿ) ಕಟ್–ಆಫ್ ದಿನಾಂಕ ಎಂದರೆ ಬುಧವಾರ ಆಗಸ್ಟ್ 03, 2022ಕ್ಕೆ ಸದಸ್ಯರ ನೊಂದಣಿ ಪುಸ್ತಕ/ಫಲಾನುಭವಿ ಮಾಲೀಕರ ನೊಂದಣಿ ಪುಸ್ತಕದಲ್ಲಿ ಹೆಸರು ನಮೂದಾಗಿರುವ ವ್ಯಕ್ತಿಗಳು ಮಾತ್ರ ವಾರ್ಷಿಕ ಮಹಾಸಭೆಯ ಸೂಚನಾ ಪತ್ರದಲ್ಲಿ ನಮೂದಿಸಲಾದ ವಿಷಯಗಳಿಗೆ ಮತದಾನ ಮಾಡಲು ರಿಮೋಟ್ ಇ–ವೋಟಿಂಗ್/ಇ–ವೋಟಿಂಗ್ ಸೌಲಭ್ಯ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಡಿ) ರಿಮೋಟ್ ಇ–ವೋಟಿಂಗ್ ಮುಖಾಂತರ ತಮ್ಮ ಮತಗಳನ್ನು ಚಲಾಯಿಸಿರುವ ಸದಸ್ಯರು ಕೂಡ ವಾರ್ಷಿಕ ಮಹಾಸಭೆಗೆ ಹಾಜರಾಗಬಹುದು, ಆದರೆ ಪುನಃ ವಾರ್ಷಿಕ ಮಹಾಸಭೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

ಇ) ಕಂಪನಿಯ ಷೇರುಗಳನ್ನು ಹೊಂದಿರುವ ಮತ್ತು ಪ್ರಕಟಣೆಯು ರವಾನೆಗೊಂಡ ಬಳಿಕ ಕಂಪನಿಯ ಸದಸ್ಯನಾಗುವ ಮತ್ತು ಕಟ್–ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು **instameet@linkintime.co.in / enotices@linkintime.co.in** ವಿಳಾಸಕ್ಕೆ ಮನವಿ ಸಲ್ಲಿಸುವ ಮೂಲಕ ಅಥವಾ ಲಿಂಕ್ ಇನ್ ಟೈಂ ನೀಡಿರುವ ಸಹಾಯವಾಣಿ 022–49186000 / 022–49186175 ಸಂಖ್ಯೆಗೆ ಕರೆ ಮಾಡಿ ತಮ್ಮ ಲಾಗಿನ್–ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬಹುದು. ಕಟ್–ಆಫ್ ದಿನಾಂಕದಂದು ಸದಸ್ಯ ಆಗಿಲ್ಲದಿರುವ ವ್ಯಕ್ತಿಯು, ಸದರಿ ಎಜಿಎಂ ಸೂಚನಾ ಪತ್ರವನ್ನು ಮಾಹಿತಿಗಾಗಿ ಮಾತ್ರ ಎಂದು ಭಾವಿಸತಕ್ಕದ್ದು.

ಷೇರುದಾರರು ತಮ್ಮ ಇ–ಮೇಲ್ ವಿಳಾಸ ಮತ್ತು ಬ್ಯಾಂಕ್ ವಿವರಗಳನ್ನು ನೋಂದಣಿ ಮಾಡಿಕೊಳ್ಳುವ ವಿಧಾನ:

ಎ) ಡಿಮ್ಯಾಟ್ ಷೇರುದಾರರ ತಾತ್ಕಾಲಿಕ ನೋಂದಣಿ: ಡಿಮ್ಯಾಟ್ ಮಾದರಿಯಲ್ಲಿ ಕಂಪನಿಯ ಇಕ್ವಿಟಿ ಷೇರುಗಳನ್ನು ಹೊಂದಿರುವ ಕಂಪನಿ ಸದಸ್ಯರು ಮತ್ತು ತಮ್ಮ ಇ–ಮೇಲ್ ವಿಳಾಸಗಳನ್ನು ನೊಂದಣಿ ಮಾಡಿಸಿಕೊಂಡಿರದ ಸದಸ್ಯರು ಲಿಂಕ್ ಇನ್ ಟೈಂ ಇಂಡಿಯಾ ಪ್ರೈ. ಲಿ. ಇವರ **www.linkintime.co.in** ವೆಬ್‌ಸೈಟ್‌ನಲ್ಲಿರುವ ಇನ್ವೆಸ್ಟರ್ ಸರ್ವೀಸಸ್ ಟ್ಯಾಬ್ ಕ್ಲಿಕ್ ಮಾಡಿ, ಇ–ಮೇಲ್ ನೋಂದಣಿ ತಲೆಬರಹದಡಿ ಇರುವ **https://linkintime.co.in/emailreg/email_register.html** ಲಿಂಕ್‌ಗೆ ಭೇಟಿ ನೀಡಿ, ಅದರಲ್ಲಿ ನೀಡಲಾಗಿರುವ ನೋಂದಣಿ ಮಾರ್ಗಸೂಚಿಗಳ ಪ್ರಕಾರ ಮುಂದುವರೆದು, ತಾತ್ಕಾಲಿಕವಾಗಿ ತಮ್ಮ ಇ–ಮೇಲ್ ವಿಳಾಸವನ್ನು ನೊಂದಾಯಿಸಿಕೊಳ್ಳಬಹುದು. ಸದಸ್ಯರು ತಮ್ಮ ಹೆಸರು, ಡಿಪಿಐಡಿ, ಕ್ಲೈಂಟ್ ಐಡಿ, ಪಾನ್, ಮೊಬೈಲ್ ನಂಬರ್ ಮತ್ತು ಇ–ಮೇಲ್ ಐಡಿ ವಿವರಗಳನ್ನು ನೀಡಬೇಕೆಂದು ಕೋರಲಾಗಿದೆ. ಯಾವುದೇ ವಿಚಾರಣೆ ಇದ್ದಲ್ಲಿ, ಸದಸ್ಯರು ತಮ್ಮ ವಿಚಾರಣೆಯನ್ನು ಆರ್‌ಟಿಎ ಇವರ **rnt.helpdesk@linkintime.co.in** ಇ–ಮೇಲ್ ವಿಳಾಸಕ್ಕೆ ಮೇಲ್ ರವಾನಿಸುವ ಮೂಲಕ ಸ್ಪಷ್ಟೀಕರಣ ಪಡೆದುಕೊಳ್ಳಬಹುದು. ಷೇರುದಾರರು ತಮ್ಮ ವಿವರಗಳನ್ನು ಸಲ್ಲಿಸಿದ ನಂತರ, ಅವರಿಗೆ ಒಂದು ಒಟಿಪಿ ರವಾನೆಯಾಗುತ್ತದೆ ಮತ್ತು ಸದರಿ ಒಟಿಪಿಯನ್ನು ಲಿಂಕ್‌ನಲ್ಲಿ ನಮೂದಿಸಿ ಪರಿಶೀಲನೆಯನ್ನು ಪೂರ್ತಿಗೊಳಿಸಬೇಕು.

ಬಿ) ಡಿಮ್ಯಾಟ್ ಷೇರುದಾರರ ಶಾಶ್ವತ ನೋಂದಣಿ: ಡಿಮ್ಯಾಟ್ ಮಾದರಿಯಲ್ಲಿ ಕಂಪನಿಯ ಷೇರುಗಳನ್ನು ಹೊಂದಿರುವ ಸದಸ್ಯರು, ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಇವರಿಂದ ನಿಗದಿಪಡಿಸಲಾಗಿರುವ ಪ್ರಕ್ರಿಯೆಗಳ ಪ್ರಕಾರ ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಇವರಲ್ಲಿ ತಮ್ಮ ಡಿಮ್ಯಾಟ್ ಷೇರುದಾರಿಕೆಯನ್ನು ನವೀಕರಿಸಿಕೊಳ್ಳಬೇಕೆಂದು ಕೋರಲಾಗಿದೆ.

ಸಿ) ಭೌತಿಕ ಷೇರುಗಳನ್ನು ಹೊಂದಿರುವ ಷೇರುದಾರರ ಇ–ಮೇಲ್ ಐಡಿ ನೋಂದಣಿ: ಕಂಪನಿಯ ಇಕ್ವಿಟಿ ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಕಂಪನಿಯ ಸದಸ್ಯರು ಮತ್ತು ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳದಿರುವ ಸದಸ್ಯರು, ಲಿಂಕ್ ಇನ್ ಟೈಂ ಇಂಡಿಯಾ ಪ್ರೈ. ಲಿ. ಇವರ **www.linkintime.co.in** ವೆಬ್‌ಸೈಟ್‌ನಲ್ಲಿರುವ ಇನ್ವೆಸ್ಟರ್ ಸರ್ವೀಸಸ್ ಟ್ಯಾಬ್ ಕ್ಲಿಕ್ ಮಾಡಿ, ಇ–ಮೇಲ್/ಬ್ಯಾಂಕ್ ನೋಂದಣಿ ತಲೆಬರಹದಡಿ ಇರುವ **https://linkintime.co.in/emailreg/email_register.html** ಲಿಂಕ್‌ಗೆ ಭೇಟಿ ನೀಡಿ, ಅದರಲ್ಲಿ ನೀಡಲಾಗಿರುವ ನೋಂದಣಿ ಮಾರ್ಗಸೂಚಿಗಳ ಪ್ರಕಾರ ನೊಂದಾಯಿಸಿಕೊಳ್ಳಬಹುದು. ಸದಸ್ಯರು ತಮ್ಮ ಹೆಸರು, ಫೊಲಿಯೊ ನಂಬರ್, ಸರ್ಟಿಫಿಕೇಟ್ ನಂಬರ್, ಪಾನ್, ಮೊಬೈಲ್ ನಂಬರ್ ಮತ್ತು ಇ–ಮೇಲ್ ಐಡಿ ವಿವರಗಳನ್ನು ನೀಡಬೇಕು. ಹಾಗೂ ತಮ್ಮ ಷೇರು ಪ್ರಮಾಣ ಪತ್ರದ ಭಾವಪ್ರತಿಯನ್ನು ಪಿಡಿಎಫ್ ಅಥವಾ ಜೆಪಿಇಜಿ ಫಾರ್ಮಾಟ್‌ನಲ್ಲಿ (ಗರಿಷ್ಠ 1ಎಂಬಿ) ಅಪ್‌ಲೋಡ್ ಮಾಡಬೇಕೆಂದು ಕೋರಲಾಗಿದೆ. ಯಾವುದೇ ವಿಚಾರಣೆ ಇದ್ದಲ್ಲಿ, ಸದಸ್ಯರು ತಮ್ಮ ವಿಚಾರಣೆಯನ್ನು ಕೋರಿ ಆರ್‌ಟಿಎ ಇವರ **rnt.helpdesk@linkintime.co.in** ವಿಳಾಸಕ್ಕೆ ಮೇಲ್ ರವಾನಿಸುವ ಮೂಲಕ ಸ್ಪಷ್ಟೀಕರಣ ಪಡೆದುಕೊಳ್ಳಬಹುದು.

ಡಿ) ಭೌತಿಕ ಷೇರುಗಳನ್ನು ಹೊಂದಿರುವ ಷೇರುದಾರರ ಬ್ಯಾಂಕ್ ವಿವರಗಳ ನೋಂದಣಿ: ಭೌತಿಕ ರೂಪದಲ್ಲಿ ಕಂಪನಿಯ ಇಕ್ವಿಟಿ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ಮತ್ತು ತಮ್ಮ ಬ್ಯಾಂಕ್ ವಿವರಗಳನ್ನು ನೋಂದಣಿ ಮಾಡಿಕೊಳ್ಳದಿರುವ ಸದಸ್ಯರು, ಲಿಂಕ್ ಇನ್ ಟೈಮ್ ಇಂಡಿಯಾ ಪ್ರೈ, ಲಿ. ಇವರ **www.linkintime.co.in** ವೆಬ್‌ಸೈಟ್‌ನಲ್ಲಿರುವ ಇನ್ವೆಸ್ಟರ್ ಸರ್ವೀಸಸ್ ಟ್ಯಾಬ್ ಕ್ಲಿಕ್ ಮಾಡಿ, ಇ–ಮೇಲ್/ಬ್ಯಾಂಕ್ ನೋಂದಣಿ ತಲೆಬರಹದಲ್ಲಿರುವ **https://linkintime.co.in/emailreg/email_register.html** ಲಿಂಕ್‌ಗೆ ಭೇಟಿ ನೀಡಿ, ಅದರಲ್ಲಿ ನೀಡಲಾಗಿರುವ ನೋಂದಣಿ ಮಾರ್ಗಸೂಚಿಗಳ ಪ್ರಕಾರ ನೊಂದಾಯಿಸಿಕೊಳ್ಳಬಹುದು. ಸದಸ್ಯರು ತಮ್ಮ ಹೆಸರು, ಫೊಲಿಯೊ ನಂಬರ್, ಸರ್ಟಿಫಿಕೇಟ್ ನಂಬರ್, ಪಾನ್, ಇ–ಮೇಲ್ ಐಡಿ ಜೊತೆಗೆ ಬ್ಯಾಂಕ್ ಹೆಸರು ಮತ್ತು ಬ್ರ್ಯಾಂಚ್ ಹೆಸರು ಹೊಂದಿರುವ ಷೇರುದಾರರ ಮೊದಲ ಹೆಸರು ಮುದ್ರಣಗೊಂಡಿರುವ ಒಂದು ಚೆಕ್ ಹಾಳೆಯ ಪ್ರತಿ, ಖಾತೆಯ ಮಾದರಿ, ಬ್ಯಾಂಕ್ ಅಕೌಂಟ್ ನಂಬರ್, ಎಂಐಸಿಆರ್ ಹಾಗೂ ಐಎಫ್ಎಸ್‌ಸಿ ಕೋಡ್ ವಿವರಗಳನ್ನು ಪಿಡಿಎಫ್ ಅಥವಾ ಜೆಪಿಇಜಿ ಮಾದರಿಯಲ್ಲಿ ನೀಡಬೇಕೆಂದು ಕೋರಲಾಗಿದೆ. ಯಾವುದೇ ವಿಚಾರಣೆ ಇದ್ದಲ್ಲಿ, ಸದಸ್ಯರು ತಮ್ಮ ವಿಚಾರಣೆಯನ್ನು ಕೋರಿ ಆರ್‌ಟಿಎ ಇವರ **rnt.helpdesk@linkintime.co.in** ವಿಳಾಸಕ್ಕೆ ಮೇಲ್ ರವಾನಿಸುವ ಮೂಲಕ ಸ್ಪಷ್ಟೀಕರಣ ಪಡೆದುಕೊಳ್ಳಬಹುದು. ಷೇರುದಾರರು ತಮ್ಮ ವಿವರಗಳನ್ನು ಸಲ್ಲಿಸಿದ ನಂತರ, ಅವರಿಗೆ ಒಂದು ಒಟಿಪಿ ರವಾನೆಯಾಗುತ್ತದೆ ಮತ್ತು ಸದರಿ ಒಟಿಪಿಯನ್ನು ಲಿಂಕ್‌ನಲ್ಲಿ ನಮೂದಿಸಿ ಪರಿಶೀಲನೆಯನ್ನು ಪೂರ್ತಿಗೊಳಿಸಬೇಕು.

ಒಂದು ವೇಳೆ, ರಿಮೋಟ್ ಇ–ವೋಟಿಂಗ್‌ಗೆ ಸಂಬಂಧಿಸಿದಂತೆ ಸದಸ್ಯರಿಗೆ ಯಾವುದೇ ರೀತಿಯ ವಿಚಾರಣೆಗಳು/ದೂರು ದುಮ್ಮಾನಗಳಿದ್ದಲ್ಲಿ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಪದೇ ಪದೇ ಕೇಳಲಾಗುವ ಪ್ರಶ್ನೆಗಳು ಮತ್ತು ಇನ್ಸ್ಟಾ ವೋಟ್ ಇ–ವೋಟಿಂಗ್ ಮ್ಯಾನುಯಲ್ ಪರಿಶೀಲಿಸಬಹುದು ಅಥವಾ **enotices@linkintime.co.in** ವಿಳಾಸಕ್ಕೆ ಮನವಿ ಸಲ್ಲಿಸುವ ಮೂಲಕ ಅಥವಾ ಲಿಂಕ್ ಇನ್ ಟೈಂ ನೀಡಿರುವ ಸಹಾಯವಾಣಿ 022–49186000/6175 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು.

ದಾಖಲಾತಿ ದಿನಾಂಕ ಹಾಗೂ ಬುಕ್ ಕ್ಲೋಸರ್ ಮತ್ತು ಡಿವಿಡೆಂಡ್:

ಶುಕ್ರವಾರ, ಜುಲೈ 29, 2022ನ್ನು ದಾಖಲಾತಿ ದಿನವಾಗಿ ನಿಶ್ಚಯಿಸಲಾಗಿದೆ ಮತ್ತು ಶನಿವಾರ, ಜುಲೈ 30, 2022ರಂದು ಕಂಪನಿಯ ಸದಸ್ಯರ ನೊಂದಣಿ ಪುಸ್ತಕ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಮುಚ್ಚಲಾಗುತ್ತದೆ. ರೂ 10/– ಮೌಲ್ಯದ ಪ್ರತಿ ಇಕ್ವಿಟಿ ಷೇರ್‌ಗೆ ರೂ. 3.00/– ಅಂತಿಮ ಡಿವಿಡೆಂಡ್‌ನ್ನು ನಿರ್ದೇಶಕರ ಮಂಡಳಿಯು ಶಿಫಾರಸ್ಸು ಮಾಡಿರುತ್ತದೆ, ಒಂದು ವೇಳೆ ವಾರ್ಷಿಕ ಮಹಾಸಭೆಯಲ್ಲಿ ಕಂಪನಿಯ ಸದಸ್ಯರು ಇದನ್ನು ಅನುಮೋದಿಸಿದಲ್ಲಿ, ಸದರಿ ಮೊತ್ತವನ್ನು ಎಜಿಎಂ ದಿನಾಂಕದಿಂದ 5 ದಿನಗಳೊಳಗೆ ಪ್ರತ್ಯೇಕ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ ಮತ್ತು ಕಂಪನಿಗಳ ಕಾಯ್ದೆ, 2013 ರ ನಿಯಮಗಳನ್ವಯ ಸದರಿ ಮೊತ್ತವನ್ನು ಷೇರುದಾರರಿಗೆ ಪಾವತಿಸಲಾಗುತ್ತದೆ. ಒಂದು ವೇಳೆ ಕಂಪನಿಯು ಡಿವಿಡೆಂಡ್‌ನ್ನು ಯಾವುದೇ ಸದಸ್ಯರ ಬ್ಯಾಂಕ್ ಖಾತೆಗೆ ಎಲೆಕ್ಟ್ರಾನಿಕ್ ಅಥವಾ ಇನ್ನಾವುದೇ ವಿಧಾನದಲ್ಲಿ ಪಾವತಿಸಲು ಸಾಧ್ಯವಾಗದಿದ್ದಲ್ಲಿ, ಸದಸ್ಯರು ತಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಿರದಿದ್ದಲ್ಲಿ, ಅಂತಹ ಸದಸ್ಯರಿಗೆ ಅಂಚೆ ಸೇವೆಗಳ ಅಥವಾ ಕೊರಿಯರ್ ಸೇವೆಗಳ ಮೂಲಕ ತ್ವರಿತವಾಗಿ ಕಂಪನಿಯಿಂದ ಡಿವಿಡೆಂಡ್ ವಾರಂಟ್/ಚೆಕ್ ರವಾನಿಸಲಾಗುತ್ತದೆ.

ವಾರ್ಷಿಕ ಮಹಾಸಭೆಯಲ್ಲಿ ಮಾತನಾಡುವ ಅವಕಾಶಕ್ಕಾಗಿ ನೊಂದಣಿಯ ಕುರಿತು:

ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ತಮ್ಮ ವಿಚಾರಗಳನ್ನು ವಿಷದಪಡಿಸಲು ಇಚ್ಛಿಸುವ ಅಥವಾ ಪ್ರಶ್ನೆಗಳನ್ನು ಕೇಳಬಯಸುವ ಸದಸ್ಯರು, ಆಗಸ್ಟ್ 05, 2022 (ಬೆಳಿಗ್ಗೆ 9:00 ಗಂಟೆ ಐಎಸ್‌ಟಿ) ಇಂದ ಆಗಸ್ಟ್ 7, 2022 (ಸಂಜೆ 5:00 ಗಂಟೆ ಐಎಸ್‌ಟಿ) ವರೆಗೆ ತಮ್ಮ ನೊಂದಾಯಿತ ಇ–ಮೇಲ್ ವಿಳಾಸದ ಮುಖಾಂತರ ತಮ್ಮ ಹೆಸರು, ಡಿಪಿಐಡಿ ಮತ್ತು ಕ್ಲೈಂಟ್ ಐಡಿ/ಫೊಲಿಯೊ ನಂಬರ್, ಪಾನ್, ಮೊಬೈಲ್ ನಂಬರ್ ನಮೂದಿಸಿ ತಮ್ಮನ್ನು ತಾವು ಸ್ಪೀಕರ್ ಎಂದು ನೊಂದಣಿ ಮಾಡಿಕೊಳ್ಳಲು **investors@sobha.com** ವಿಳಾಸಕ್ಕೆ ಒಂದು ಮನವಿಯನ್ನು ಸಲ್ಲಿಸಬೇಕು. ತಮ್ಮನ್ನು ತಾವು ಸ್ಪೀಕರ್ ಎಂದು ನೊಂದಣಿ ಮಾಡಿಕೊಂಡಿರುವ ಸದಸ್ಯರಿಗೆ ಮಾತ್ರ ಎಜಿಎಂ ಸಂದರ್ಭದಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು/ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡಲಾಗುತ್ತದೆ. ಕಂಪನಿಯ, ಮಹಾಸಭೆಯಲ್ಲಿ ಕಾಲಾವಕಾಶದ ಲಭ್ಯತೆಯ ಆಧಾರವನ್ನು ಗಮನದಲ್ಲಿಟ್ಟುಕೊಂಡು, ಸ್ಪೀಕರ್‌ಗಳ ಸಂಖ್ಯೆಯನ್ನು ಸೀಮಿತಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಹೂಡಿಕೆದಾರರ ವಿಚಾರಣೆ/ ದೂರು/ದುಮ್ಮಾನಗಳನ್ನು **investors@sobha.com** ವಿಳಾಸಕ್ಕೆ ಸಲ್ಲಿಸಬಹುದು.

ದಿನಾಂಕ: ಜುಲೈ 18, 2022
ಸ್ಥಳ: ಬೆಂಗಳೂರು

ಶೋಭ ಲಿಮಿಟೆಡ್ ಪರವಾಗಿ,
ವಿಘ್ನೇಶ್ವರ ಜಿ. ಭಟ್ಟ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾಧಿಕಾರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯೋಜನೆ ವಿಭಾಗ, ರಾ.ರಾ. ನಗರ ವಲಯ, ಬಿಬಿಎಂಪಿ ಕಛೇರಿ ಕಟ್ಟಡ, 2ನೇ ಮಹಡಿ, ನೆಹರು ರಸ್ತೆ, ಬಿಇಎಂಎಲ್ ಲೇಔಟ್, ಬೆಂಗಳೂರು–560098

ನಂ.: ಬಿಬಿಎಂಪಿ/ಕಾಪಾಅ/ಯೋ/ಟೆಂಡರ್/06/2022–23 ದಿನಾಂಕ: 18.07.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ದ್ವಿ ಲಕೋಟೆ ಪದ್ಧತಿ

ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ರಾ.ರಾ. ನಗರ ವಲಯ, ಬಿಬಿಎಂಪಿ ಇವರು, ಅರ್ಹ ಪ್ರತಿಷ್ಠಿತ ಸೇವಾ ಪೂರೈಕೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಯೋಜನೆ ನಿರ್ವಹಣೆ ಸಲಹಾ ಸೇವೆ (ಪಿಎಂಸಿ)ಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನಾ ವೆಚ್ಚ (ಲಕ್ಷಗಳಲ್ಲಿ)
1	ಬೆಂಗಳೂರು, ವಾರ್ಡ್ ಸಂಖ್ಯೆ 129 ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೆಂಪೇಗೌಡ ಅಧ್ಯಯನ ಕೇಂದ್ರದ ನಿರ್ಮಾಣ ಕಾಮಗಾರಿಗಾಗಿ ಪ್ರೂಫ್ ಚೆಕ್ಕಿಂಗ್ ಮತ್ತು ಗುಣಮಟ್ಟ ನಿಯಂತ್ರಣ ಸೇರಿದಂತೆ ನಿರ್ಮಾಣ ಮೇಲ್ವಿಚಾರಣೆಯ ಯೋಜನೆ ನಿರ್ವಹಣೆ ಸೇವೆಗಾಗಿ ಸಲಹಾ ಸೇವೆಗಳನ್ನು ಒದಗಿಸುವುದು.	5000.00

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ **20.07.2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **30.07.2022ರ ಸಂಜೆ 4:00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **01.08.2022ರ ಸಂಜೆ 4:00 ಗಂಟೆಗೆ** ಅಥವಾ ಮುಂದಿನ ಕೆಲಸದ ದಿನದಂದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ಯೋಜನೆ), ರಾರಾ ನಗರ ವಲಯ, ಬಿಬಿಎಂಪಿ

ಕೋವಿಡ್‌–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಾಗಾರ ಇಂದು

ಬೆಂಗಳೂರು: ಮಕ್ಕಳ ರಕ್ಷಣಾ ನಿರ್ದೇಶನಾಲಯದ ವತಿಯಿಂದ ‘ದತ್ತು ಪ್ರಕ್ರಿಯೆಯಲ್ಲಿನ ಸೂಕ್ತ ಕಾಳಜಿಗಳು’ ಕುರಿತು ಯುನೈಟೆಡ್ ಥಿಯೋಲಾಜಿಕಲ್ ಕಾಲೇಜಿನಲ್ಲಿ ಜುಲೈ 19 ಮತ್ತು 20ರಂದು ಕಾರ್ಯಾಗಾರ ನಡೆಯಲಿದೆ.

ಮಾನಸಿಕ ಆರೋಗ್ಯ ವೃತ್ತಿಪರರು ಮತ್ತು ದತ್ತು ಪ್ರಕ್ರಿಯೆಯ ಸಾಮಾಜಿಕ ಕಾರ್ಯಕರ್ತರಿಗೆ ಈ ಕಾರ್ಯಾಗಾರ ಆಯೋಜಿಸಲಾಗಿದೆ.

ನಿಧನ ವಾರ್ತೆ

ನಾರಾಯಣಪ್ಪ ಎನ್.

ಬೆಂಗಳೂರು: ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ರವೀಂದ್ರ ಅವರ ತಂದೆ, ಚಿಕ್ಕ ಬೇಗೂರಿನ ನಾರಾಯಣಪ್ಪ ಎನ್. (86) ಸೋಮವಾರ ನಿಧನರಾದರು.

ಅವರಿಗೆ ಪತ್ನಿ, ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ. ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಚಿಕ್ಕ ಬೇಗೂರಿನ ಲಕ್ಷ್ಮಿ ಲೇಔಟ್‌ನ ತೋಟದ ಮನೆ ಹತ್ತಿರ ಮೃತರ ಅಂತ್ಯಕ್ರಿಯೆ ನೆರವೇರಲಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ CENTUM

ಕಾರ್ಪೊರೇಟ್ ಗುರುತಿನ ಸಂಖ್ಯೆ (CIN) - L85110KA1993PLC013869

ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106. ದೂರವಾಣಿ: +91-80-41436000 ಫ್ಯಾಕ್ಸ್: +91-80-41436005

ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ 29ನೇ ವಾರ್ಷಿಕ ಸಾಮಾನ್ಯ ಮಹಾಸಭೆಯ ಸೂಚನೆ

ಈ ಮೂಲಕ ತಿಳಿಸುವುದೇನೆಂದರೆ ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ("Company") **29ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು (AGM) ಶುಕ್ರವಾರ, ಆಗಸ್ಟ್ 12, 2022 ರಂದು ಸಂಜೆ 4.30 ಗಂಟೆಗೆ (ಭಾರತೀಯ ಕಾಲಮಾನದ ಪ್ರಕಾರ) ವೀಡಿಯೋ ಕಾನ್ಫರೆನ್ಸಿಂಗ್ ("VC") ಮೂಲಕ ಅಥವಾ ಇತರೆ ಆಡಿಯೋ ವಿಷುಯಲ್ ಮೀನ್ಸ್ ('OAVM')** ಮೂಲಕ ಕಂಪನಿಗಳ ಕಾಯಿದೆ, 2013 ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು SEBI (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು), ನಿಯಮಗಳು, 2015 ರ ಅನ್ವಯವಾಗುವ ನಿಬಂಧನೆಗಳಿಗೆ ಅನುಗುಣವಾಗಿ ಸಾಮಾನ್ಯ ಸುತ್ತೋಲೆ ಸಂಖ್ಯೆಗಳು 14/ 2020, 17/2020, 20/2020, 02/2021, 19/2021, 21/ 2021 and 2/2022 ಅನುಗುಣವಾಗಿ ದಿನಾಂಕ ಏಪ್ರಿಲ್ 8, 2020; ಏಪ್ರಿಲ್ 13, 2020; ಮೇ 5, 2020; ಜನವರಿ 13, 2021; ಡಿಸೆಂಬರ್ 8, 2021; ಡಿಸೆಂಬರ್ 14, 2021 ಮತ್ತು ಮೇ 5, 2022 ಅನುಕ್ರಮವಾಗಿ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಒಟ್ಟಾರೆಯಾಗಿ "MCA ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗಿದೆ) ಮತ್ತು ಸುತ್ತೋಲೆ ಸಂಖ್ಯೆಗಳು SEBI/HO/CFD/CMD1/CIR/P/2020/79, SEBI/HO/CFD/CMD2/CIR/P/2021/11 ಮತ್ತು SEBI/HO/CFD/CMD2/CIR /P/2022/62 ದಿನಾಂಕ ಮೇ 12 2020, ಜನವರಿ 15 2021 ಮತ್ತು ಮೇ 13 2022 ಕ್ರಮವಾಗಿ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಒಟ್ಟಾರೆಯಾಗಿ "SEBI ಸುತ್ತೋಲೆಗಳು ಎಂದು ಉಲ್ಲೇಖಿಸಲಾಗಿದೆ) ನಿಂದ ಹೊರಡಿಸಲಾಗಿದೆ. 2021–22 ವಾರ್ಷಿಕ ವರದಿಯಲ್ಲಿರುವ AGM ಪ್ರಕಟಣೆಯನ್ನು, 2022ರ ಜುಲೈ 18 ರಂದು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ (RTA) ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಹಿಂದೆ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ರವರಿಂದ ಎಲೆಕ್ಟ್ರಾನಿಕ್ ಮೋಡ್ ಮೂಲಕ ರವಾನಿಸಲಾಗಿದೆ / ಆ ಷೇರುದಾರರಿಗೆ ಅವರ ಇ–ಮೇಲ್ ವಿಳಾಸಗಳನ್ನು ಕಂಪನಿ ಅಥವಾ RTA ಮತ್ತು / ಅಥವಾ ಠೇವಣಿಗಳಲ್ಲಿ ನೋಂದಾಯಿಸಿದವರಿಗೆ ಕಳುಹಿಸಲಾಗುತ್ತಿದೆ. MCA ಸುತ್ತೋಲೆಗಳು ಮತ್ತು SEBI ಸುತ್ತೋಲೆಗಳ ಪ್ರಕಾರ AGM ನೋಟೀಸ್‌ನ ಭೌತಿಕ ಪ್ರತಿಗಳನ್ನು ಕಳುಹಿಸುವ ಅಗತ್ಯವನ್ನು ರದ್ದುಪಡಿಸಲಾಗಿದೆ.

29ನೇ ಎಜಿಎಂ ಪ್ರಕಟಣೆ ಹಾಗೂ ವಾರ್ಷಿಕ ವರದಿ 2021–22ರ ಪ್ರತಿಗಳನ್ನು ಕಂಪನಿಯ https://www.centumelectronics.com/annual-report/ ವೆಬ್‌ಸೈಟ್‌ನಲ್ಲಿ, RTA ರವರ https://evoting.kfintech.com ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ಗಳಲ್ಲೂ ಸಹ ಪ್ರಕಟಿಸಲಾಗಿರುತ್ತದೆ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 91ರ ಅಡಿಯಲ್ಲಿನ ನಿಯಮಗಳನ್ವಯ ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮಗಳನ್ನು SEBI (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015ರ ನಿಯಮಗಳ ಜೊತೆಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳನ್ವಯ, ಒಂದು ವೇಳೆ ಕಂಪನಿಯ ಹಣಕಾಸು ವರ್ಷ 2021–22ನೇ ಸಾಲಿನ ಎಜಿಎಂನಲ್ಲಿ ಖಚಿತಗೊಳ್ಳುವ ಅಂತಿಮ ಡಿವಿಡೆಂಡ್‌ಗೆ ಅರ್ಹವಿರುವ ಇಕ್ವಿಟಿ ಷೇರುಗಳನ್ನು ಹೊಂದಿರುವ ಅರ್ಹ ಸದಸ್ಯರ ಇತ್ಯರ್ಥಪಡಿಸುವ ದಾಖಲಾತಿ ದಿನಾಂಕವೆಂದು **ಬುಧವಾರ, ಆಗಸ್ಟ್ 3, 2022** ಎಂಬ ದಿನಾಂಕವನ್ನು ನಿಗದಿಪಡಿಸಿಲಾಗಿರುತ್ತದೆ. AGM ಸಭೆಯಲ್ಲಿ ಡಿವಿಡೆಂಡ್ ಘೋಷಣೆಯಾದಲ್ಲಿ, ಅಂತಹುದನ್ನು ಸೆಪ್ಟೆಂಬರ್ 6, 2022 ರೊಳಗೆ ಪಾವತಿಸಲಾಗುತ್ತದೆ.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಅನುಸರಣೆಯಲ್ಲಿ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ರೊಂದಿಗೆ ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ , SEBI ಯ ನಿಯಮ 44 (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು ಮತ್ತು 2015, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮಾನದಂಡಗಳು, ಕಂಪನಿಯು ತನ್ನ 29ನೇ ಎಜಿಎಂ ಪ್ರಕಟಣೆಯಲ್ಲಿ ನಿಗದಿಪಡಿಸಿರುವ ವ್ಯವಹಾರಗಳಿಗೆ, ತನ್ನ ಸದಸ್ಯರುಗಳು ತಮ್ಮ ಮತದಾನ ಹಕ್ಕು ಚಲಾಯಿಸಲು ರಿಮೋಟ್ ಇ–ವೋಟಿಂಗ್ ಮತ್ತು ಇನ್‌ಸ್ಟಾ ಪೋಲ್ ಸಿಸ್ಟಂ, ಇವೆರಡೂ ವಿಧಾನಗಳಲ್ಲಿ ಮತ ಚಲಾಯಿಸುವ ಸೌಲಭ್ಯವನ್ನು ಒದಗಿಸುತ್ತಲಿದೆ. ಸರ್ವ ಸದಸ್ಯರಿಗೂ ನೀಡಲಾಗುತ್ತಿರುವ ಮಾಹಿತಿ:

1. ಸದಸ್ಯರು VC / OAVM ಮುಖಾಂತರ ತಮ್ಮ ರಿಮೋಟ್ ಇ–ವೋಟಿಂಗ್ ಕ್ರೆಡೆನ್ಶಿಯಲ್ಸ್ ಬಳಸಿಕೊಂಡು 29ನೇ AGM ಸಭೆಗೆ https://emeetings.kfintech.com ಮುಖಾಂತರ ಹಾಜರಾಗಬಹುದು.
2. VC / OAVM ಮುಖಾಂತರ ಪಾಲ್ಗೊಳ್ಳುವ ಸೂಚನೆಗಳು ಮತ್ತು ಇನ್‌ಸ್ಟಾ ಪೋಲ್ ಪ್ರಕ್ರಿಯೆ ಸೇರಿದಂತೆ, ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಅಥವಾ ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳದಿರುವ ಸದಸ್ಯರು ತಮ್ಮ ಮತದಾನವನ್ನು ಇನ್‌ಸ್ಟಾ ಪೋಲ್ ಮುಖಾಂತರ ಚಲಾಯಿಸುವ ಸೂಚನೆಗಳನ್ನು 29ನೇ AGM ಪ್ರಕಟಣೆಯಲ್ಲಿ ನೀಡಲಾಗಿರುತ್ತದೆ.
3. ನಿಗದಿತ ಕಟ್ ಆಫ್ ದಿನಾಂಕ **ಶುಕ್ರವಾರ, ಆಗಸ್ಟ್ 5, 2022** ರಂದು ಡೆಪಾಸಿಟರೀಸ್ ನಿರ್ವಹಿಸುವ ಸದಸ್ಯರ ರಜಿಸ್ಟ್ರಾರ್‌ರಲ್ಲಿ ನೋಂದಾಗಿರುವ ಅಥವಾ ಫಲಾನುಭವಿ ಮಾಲೀಕರ ರಜಿಸ್ಟರ್‌ನಲ್ಲಿ ನೋಂದಾಗಿರುವ ಹೆಸರುಗಳನ್ನು ಹೊಂದಿರುವ ಸದಸ್ಯರು ಮಾತ್ರ, ಸಂದರ್ಭಕ್ಕೆ ಅನುಗುಣವಾಗಿ AGM ಸಭೆಯಲ್ಲಿ ಮತದಾನ ಚಲಾಯಿಸಲು ರಿಮೋಟ್ ಇ–ವೋಟಿಂಗ್ ಸೌಲಭ್ಯ ಅಥವಾ ಮತದಾನ ಹಕ್ಕು ಪಡೆಯುತ್ತಾರೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದವರು AGM ಸೂಚನೆಯನ್ನು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.
4. **ರಿಮೋಟ್ ಇ–ವೋಟಿಂಗ್ ಅವಧಿಯು ಮಂಗಳವಾರ, ಆಗಸ್ಟ್ 9, 2022 ರಂದು ಬೆಳಗ್ಗೆ 9.00 ಗಂಟೆಗೆ ಆರಂಭವಾಗುತ್ತದೆ ಮತ್ತು ಗುರುವಾರ, ಆಗಸ್ಟ್ 11, 2022 ರಂದು ಸಂಜೆ 5.00** ಗಂಟೆವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ, ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಸ್ಥಗಿತಗೊಳಿಸಲಾಗುತ್ತದೆ. ಸದಸ್ಯರು ಒಂದು ಬಾರಿ ನಿರ್ದಿಷ್ಟ ಠರಾವಿಗೆ ಮತ ಚಲಾಯಿಸಿದ ಬಳಿಕ, ನಂತರದಲ್ಲಿ ಸದಸ್ಯರು ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
5. ಒಂದು ವೇಳೆ, ವ್ಯಕ್ತಿಯೊಬ್ಬರು ಎಜಿಎಂ ಪ್ರಕಟಣೆಯು ರವಾನೆಗೊಂಡ ಬಳಿಕ, ಆದರೆ ರಿಮೋಟ್ ಇ–ವೋಟಿಂಗ್‌ನ **ಕಟ್ ಆಫ್ ದಿನಾಂಕದೊಳಗಾಗಿ** ಕಂಪನಿಯ ಸದಸ್ಯರಾಗಿದ್ದಲ್ಲಿ, ಅಥವಾ ಪ್ರಕಟಣೆಯು ರವಾನೆಗೊಂಡ ಬಳಿಕ ಇಮೇಲ್ ವಿಳಾಸ ನೋಂದಣಿ ಮಾಡಿಕೊಂಡಿದ್ದಲ್ಲಿ, ಅಂತಹ ಸದಸ್ಯರು ಇ–ವೋಟಿಂಗ್‌ನಲ್ಲಿ ನೀಡಲಾಗಿರುವ ಪ್ರೊಸೀಜರ್ ಮತ್ತು ಇನ್‌ಸ್ಟ್ರಕ್ಷನ್ಸ್ ಪ್ರಕಾರ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬಹುದು.
6. AGM ಸಭೆಗೂ ಮುನ್ನವೇ ರಿಮೋಟ್ ಇ–ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಿದ ಸದಸ್ಯರು VC / OAVM ಮುಖಾಂತರ AGM ಸಭೆಗೆ ಹಾಜರಾಗಬಹುದಾಗಿರುತ್ತದೆ, ಆದರೆ ಅಂತಹವರು ಪುನಃ ತಮ್ಮ ಮತ ಚಲಾಯಿಸಲು ಸಾಧ್ಯವಿರುವುದಿಲ್ಲ. ರಿಮೋಟ್ ಇ–ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸದಿರುವ ಸದಸ್ಯರು ಮತ್ತು VC / OAVM ಮುಖಾಂತರ AGM ಸಭೆಗೆ ಹಾಜರಾಗುವ ಸದಸ್ಯರು, AGM ಸಭೆಯ ಅವಧಿಯಲ್ಲಿ ಲಭ್ಯವಿರುವ ಇನ್‌ಸ್ಟಾ ಪೋಲ್ ಸಿಸ್ಟಂ ಮುಖಾಂತರ ತಮ್ಮ ಮತದಾನ ಮಾಡಲು ಅರ್ಹರಾಗಿರುತ್ತಾರೆ.
7. ಎಜಿಎಂ ಸಮಯದಲ್ಲಿ ರಿಮೋಟ್ ಇ–ವೋಟಿಂಗ್ ಮತ್ತು ಇ–ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯೋಚಿತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯು ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿ ಶ್ರೀ.ಎಸ್.ಪಿ.ನಾಗರಾಜನ್ ಅವರನ್ನು ಸ್ಕ್ರೂಟಿನೈಸರ್ ಆಗಿ ನೇಮಿಸಿದೆ.
8. ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ತಮ್ಮ ಠೇವಣಿ ಭಾಗವಹಿಸುವವರು(ಗಳು) ಮೂಲಕ ಠೇವಣಿಗಳೊಂದಿಗೆ ಎಲೆಕ್ಟ್ರಾನಿಕ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ನೋಂದಾಯಿಸಲು ಕೋರಲಾಗಿದೆ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಕಂಪನಿಯ RTA ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ ಸಂಖ್ಯೆ31 ಮತ್ತು 32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್ ನಾನಕ್ರಮ್‌ಗುಡಾ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500 032 ಗೆ ಬರೆಯಬಹುದು.
9. ಕಂಪನಿಯು ತನ್ನ ವಾರ್ಷಿಕ ವರದಿ 2021-22 ಹಾಗೂ 29ನೇ AGM ಪ್ರಕಟಣೆ (ರಿಮೋಟ್ ಇ–ವೋಟಿಂಗ್ ಇನ್‌ಸ್ಟ್ರಕ್ಷನ್ಸ್ ಹೊಂದಿರುವ) ಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಸೀಮಿತ ಸ್ವೀಕೃತಿ ಉದ್ದೇಶಕ್ಕೆ ಒಂದು ಪ್ರಕ್ರಿಯೆಯನ್ನು ಚಾಲನೆಗೊಳಿಸಿದೆ, ಮತ್ತು ಸದಸ್ಯರು https://ris.kfintech.com/clientservices/mobilereg/mobileemailreg.aspx ಎಂಬ ಲಿಂಕ್‌ನ್ನು ಸಂಪರ್ಕಿಸಿ ತಾತ್ಕಾಲಿಕವಾಗಿ ತಮ್ಮ ಇಮೇಲ್ ವಿಳಾಸವನ್ನು ಅಪ್‌ಡೇಟ್ ಮಾಡಿಕೊಳ್ಳಬಹುದು. .
10. ಯಾವುದೇ ಸದಸ್ಯರಿಗೆ, ಎಜಿಎಂ ಸಭೆಯ ಅವಧಿಯಲ್ಲಾಗಲಿ ಅಥವಾ ಅದಕ್ಕೂ ಮುಂಚಿತವಾಗಿರಲಿ, ಯಾವುದೇ ರೀತಿಯ ತಾಂತ್ರಿಕ ನೆರವು ಅಥವಾ ಸಹಾಯ ಪಡೆಯಬಯಸಿದಲ್ಲಿ, ಅಂತಹವರು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಇವರನ್ನು ಟೋಲ್ ಫ್ರೀ ನಂಬರ್ 1–800–309–4001 ಮುಖಾಂತರ ಸಂಪರ್ಕಿಸಿ ಅಥವಾ evoting@kfintech.com ವಿಳಾಸಕ್ಕೆ ಇಮೇಲ್ ಬರೆಯಿರಿ ಎಂದು ಕೋರಲಾಗಿದೆ. ಸದಸ್ಯರು ಹೆಚ್ಚಿನ ವಿವರ ಅಥವಾ ಸ್ಪಷ್ಟೀಕರಣಗಳಿಗಾಗಿ, ಮೇಲೆ ತಿಳಿಸಲಾಗಿರುವ RTA ರವರ ವಿಳಾಸದಲ್ಲಿರುವ ಶ್ರೀ. ಎನ್ ಶಿವಕುಮಾರ್ ಇವರನ್ನು ಕೂಡ ಸಂಪರ್ಕಿಸಬಹುದು ಅಥವಾ ಅವರ shivakumar.n@kfintech.com ಇಮೇಲ್ ವಿಳಾಸಕ್ಕೆ ಅಥವಾ ದೂರವಾಣಿ 1–800–309–4001 ಸಂಖ್ಯೆಗೆ ಕೂಡ ಸಂಪರ್ಕಿಸಬಹುದು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಇಂದು ಎಚ್ ಎಸ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯನ್ಸ್ ಆಫೀಸರ್

ಬೆಂಗಳೂರು
ಜುಲೈ 18, 2022

ಹುಚ್ಚ ವೆಂಕಟ್ ಹೆಸರಿನಲ್ಲಿ ಇ–ಮೇಲ್ • ಪೊಲೀಸರಿಂದ ಶೋಧ

ಡಿಕೆಶಿ ಒಡೆತನದ ಶಾಲೆಗೆ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒಡೆತನದ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್‌ಗೆ ಬಾಂಬ್ ಬೆದರಿಕೆ ಬಂದಿದ್ದರಿಂದ ಶಾಲೆ ಕ್ಯಾಂಪಸ್‌ನಲ್ಲಿ ಪೊಲೀಸರು ಸೋಮವಾರ ತೀವ್ರ ಶೋಧ ನಡೆಸಿದರು.

ರಾಜರಾಜೇಶ್ವರಿನಗರದ ಐಡಿಯಲ್ ಹೋಮ್ಸ್‌ನಲ್ಲಿರುವ ಶಾಲೆಯಲ್ಲಿ ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1 ಗಂಟೆಯವರೆಗೂ ಬಾಂಬ್ ನಿಷ್ಕ್ರಿಯ ದಳದ ಹಾಗೂ ಶ್ವಾನ ದಳದ ಸಿಬ್ಬಂದಿ ತಪಾಸಣೆ ಮಾಡಿದರು. ಯಾವುದೇ ಅನುಮಾನಾಸ್ಪದ ವಸ್ತು ಸಿಗದಿದ್ದರಿಂದ, ಇದೊಂದು ಹುಸಿ ಬೆದರಿಕೆ ಎಂಬುದಾಗಿ ಘೋಷಿಸಿದರು.

ಬಾಂಬ್ ಬೆದರಿಕೆ ಸುದ್ದಿ ಕೇಳಿ ಆತಂಕಗೊಂಡ ಪೋಷಕರು ಶಾಲೆ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ತಮ್ಮ ಮಕ್ಕಳನ್ನು ಮನೆಗೆ ಕರೆದೊಯ್ಯಲು ಮುಗಿಬಿದ್ದರು. ಡಿ.ಕೆ. ಶಿವಕುಮಾರ್ ಪುತ್ರಿಯೂ ಆಗಿರುವ ಶಾಲೆ ಆಡಳಿತ ಮಂಡಳಿ ಕಾರ್ಯದರ್ಶಿ ಐಶ್ವರ್ಯ, ಪೋಷಕರ ಮನವೊಲಿಸಿ ಸಮಾಧಾನಪಡಿಸಿದರು. ಮಕ್ಕಳನ್ನು ಸುರಕ್ಷಿತವಾಗಿ ಮನೆಗೆ ಕಳುಹಿಸುವುದಾಗಿ ಹೇಳಿದರು.

'ಬಾಂಬ್ ಬೆದರಿಕೆ ನಮಗೂ ಆತಂಕ ತಂದಿದೆ. ಮಕ್ಕಳು ಸುರಕ್ಷಿತವಾಗಿದ್ದಾರೆ. ಆತಂಕ ಪಡಬೇಡಿ. ಆಡಳಿತ ಮಂಡಳಿ ಜೊತೆ ಸಹಕರಿಸಿ' ಎಂದು ಐಶ್ವರ್ಯ ಕೋರಿದರು. ಹುಸಿ ಬಾಂಬ್ ಎಂಬುದು ಗೊತ್ತಾಗುತ್ತಿದ್ದಂತೆ ಆಡಳಿತ ಮಂಡಳಿ ಹಾಗೂ ಪೋಷಕರ ಆತಂಕ ದೂರವಾಯಿತು.

ಹುಚ್ಚ ವೆಂಕಟ್ ಹೆಸರಿನಲ್ಲಿ ಮೇಲ್: 'ಸೋಮವಾರ ಬೆಳಿಗ್ಗೆ ಎಂದಿನಂತೆ ಸಿಬ್ಬಂದಿ ಶಾಲೆಗೆ ಬಂದು, ಇ–ಮೇಲ್ ಪರಿಶೀಲಿಸಿದ್ದರು. ಹುಚ್ಚ ವೆಂಕಟ್ (huchaswamyvenkat96@gmail.com) ಹೆಸರಿನಲ್ಲಿ ಜುಲೈ 17ರ ಸಂಜೆ 6.20ಕ್ಕೆ ಬಂದಿದ್ದ ಇ–ಮೇಲ್ ತೆರೆದು ನೋಡಿದಾಗ, ಬಾಂಬ್ ಬೆದರಿಕೆ ಇತ್ತು' ಎಂದು ಪೊಲೀಸರು ಹೇಳಿದರು.

'ನಿಮ್ಮ ಶಾಲೆ ಕ್ಯಾಂಪಸ್‌ನಲ್ಲಿ ಬಾಂಬ್ ಇರಿಸಲಾಗಿದೆ. ನಾಳೆ 10 ಗಂಟೆಯೊಳಗೆ ಬಾಂಬ್ ಸ್ಫೋಟಗೊಳ್ಳಲಿದ್ದು, 200 ಅಡಿ ಸುತ್ತಮುತ್ತ ತೀವ್ರತೆ ಇರಲಿದೆ– ಇಂತಿ ಬಾಂಬ್ ಟೆರರಿಸ್ಟ್' ಎಂಬುದಾಗಿ ಇ–ಮೇಲ್‌ನಲ್ಲಿ ಬರೆಯಲಾಗಿತ್ತು. ಇದರಿಂದ ಶಾಲಾ ಶಿಕ್ಷಕರು ಹಾಗೂ ಸಿಬ್ಬಂದಿ ಆತಂಕಗೊಂಡಿದ್ದರು.'

'ಸ್ಥಳಕ್ಕೆ ಹೋದ ಪೊಲೀಸರು, ಶಾಲೆಯ 1,500 ಮಕ್ಕಳನ್ನು ಬೇರೆ ಶಾಲಾ ಕಟ್ಟಡಕ್ಕೆ ಸ್ಥಳಾಂತರಿಸಿದರು. ನಂತರ ಕೊಠಡಿಗಳು, ಮೈದಾನ ಹಾಗೂ ಇತರೆ ಸ್ಥಳಗಳಲ್ಲಿ ಪೊಲೀಸರು ತಪಾಸಣೆ ಮಾಡಿದರು. ಮುಂಜಾಗ್ರತಾ ಕ್ರಮವಾಗಿ ಶಾಲೆಗೆ ಸೋಮವಾರ ರಜೆ ಘೋಷಿಸಲಾಯಿತು' ಎಂದೂ ತಿಳಿಸಿದರು.

ಬೆದರಿಕೆ ನಿರಂತರ–ಪೊಲೀಸರ ವೈಫಲ್ಯ: ಪೋಷಕರ ಆರೋಪ

'ನಗರದ ಶಾಲೆಗಳಿಗೆ ನಿರಂತರವಾಗಿ ಬಾಂಬ್ ಬೆದರಿಕೆ ಇ–ಮೇಲ್‌ಗಳು ಬರುತ್ತಿದ್ದು, ಆರೋಪಿ ಪತ್ತೆಹಚ್ಚುವಲ್ಲಿ ಪೊಲೀಸರು ವಿಫಲರಾಗುತ್ತಿದ್ದಾರೆ' ಎಂದು ಪೋಷಕರು ಆರೋಪಿಸುತ್ತಿದ್ದಾರೆ.

'ಮಹದೇವಪುರದ ಗೋಪಾಲನ್ ಇಂಟರ್‌ನ್ಯಾಷನಲ್ ಶಾಲೆ, ವರ್ತೂರು ಬಳಿಯ ಡೆಲ್ಲಿ ಪಬ್ಲಿಕ್ ಸ್ಕೂಲ್, ಮಾರತ್ತಹಳ್ಳಿಯ ನ್ಯೂ ಅಕಾಡೆಮಿ ಸ್ಕೂಲ್, ಹೆಣ್ಣೂರು ಬಳಿಯ ವಿನ್ಸೆಂಟ್ ಪಲ್ಲೋಟಿ, ಗೋವಿಂದಪುರ ಠಾಣೆ ವ್ಯಾಪ್ತಿಯ ಇಂಡಿಯನ್ ಪಬ್ಲಿಕ್ ಸ್ಕೂಲ್ ಹಾಗೂ ಹೆಬ್ಬಗೋಡಿಯ ಎಬಿನೈಸರ್ ಸ್ಕೂಲ್‌ನಲ್ಲಿ ಬಾಂಬ್ ಇರಿಸಿದ್ದ ಬಗ್ಗೆಯೂ ಬೆದರಿಕೆ ಬಂದಿತ್ತು. ಈ ಪ್ರಕರಣದಲ್ಲಿ ಇದುವರೆಗೂ ಆರೋಪಿ ಬಂಧನವಾಗಿಲ್ಲ' ಎಂದು ಪೋಷಕರು ದೂರಿದರು.

'ಸಮಾಜದಲ್ಲಿ ಶಾಂತಿ ಕದಡಲು ಕಿಡಿಗೇಡಿಗಳು ಈ ರೀತಿ ಕೃತ್ಯ ಎಸಗುತ್ತಿದ್ದಾರೆ. ಶಾಲೆಗಳಿಗೆ ಬೆದರಿಕೆ ಇ–ಮೇಲ್ ಕಳುಹಿಸಿ, ಮಕ್ಕಳ ಭವಿಷ್ಯದ ಜೊತೆ ಆಟವಾಡುತ್ತಿದ್ದಾರೆ. ಇಂಥವರನ್ನು ಕೂಡಲೇ ಬಂಧಿಸಿ, ಕಠಿಣ ಶಿಕ್ಷೆ ನೀಡಬೇಕು' ಎಂದೂ ಅವರು ಒತ್ತಾಯಿಸಿದರು.

ಜಾನಪದ ವಿ.ವಿ ಕುಲಪತಿ ಪತ್ನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾವೇರಿ ಜಿಲ್ಲೆಯ ಗೊಟಗೋಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ (ಪ್ರಭಾರ) ಪ್ರೊ. ಸಿ.ಟಿ. ಗುರುಪ್ರಸಾದ್ ಅವರ ಪತ್ನಿ ಎಚ್.ಕೆ. ಚೈತ್ರಾ (41) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಜ್ಞಾನಭಾರತಿ ಠಾಣೆಯಲ್ಲಿ ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಾಗಿದೆ.

'ಜ್ಞಾನಭಾರತಿ ಬಳಿಯ ಕದಂಬ ಬಡಾವಣೆ ನಿವಾಸಿ ಚೈತ್ರಾ ಅವರು ಸೋಮವಾರ ಬೆಳಿಗ್ಗೆ ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಬಗ್ಗೆ ಸಹೋದರ ಡಾ. ಶರತ್ ಬಾಬು ದೂರು ನೀಡಿದ್ದಾರೆ. ಯುಡಿಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು. 'ಚೈತ್ರಾ, ಗುರುಪ್ರಸಾದ್, 23 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕದಂಬ ಬಡಾವಣೆಯಲ್ಲಿ ಕುಟುಂಬ ವಾಸವಿತ್ತು. ಕೆಲಸದ ನಿಮಿತ್ತ ಗುರುಪ್ರಸಾದ್ ಹಾವೇರಿಯಲ್ಲಿ ನೆಲೆಸಿದ್ದರು' ಎಂದು ಹೇಳಿದರು.

ಮರಣಪತ್ರ ಪತ್ತೆ: 'ಚೈತ್ರಾ ಅವರು ಬರೆದಿದ್ದಾರೆ ಎನ್ನಲಾದ ಮರಣಪತ್ರ ಪತ್ತೆಯಾಗಿದೆ. 'ನನ್ನ ಆರೋಗ್ಯ ಸರಿ ಇಲ್ಲದಿದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ನಾನೇ ಕಾರಣ' ಎಂದು ಅದರಲ್ಲಿ ಬರೆಯಲಾಗಿದ್ದು, ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚೈತ್ರಾ ಅವರಿಗೆ ಎರಡು ತಿಂಗಳಿನಿಂದ ಆರೋಗ್ಯ ಸರಿ ಇರಲಿಲ್ಲ. ಮನೆಯಲ್ಲಿ ಒಬ್ಬರೇ ಇರುತ್ತಿದ್ದರೆಂದು ಸಹೋದರ ದೂರಿನಲ್ಲಿ ತಿಳಿಸಿದ್ದಾರೆ. ಇದು ಆತ್ಮಹತ್ಯೆಯಷ್ಟೇ ಎಂದಿರುವ ಸಹೋದರ, ಸಾವಿನಲ್ಲಿ ಯಾವುದೇ ಅನುಮಾನವಿಲ್ಲವೆಂದು ಸಹ ಹೇಳಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಮನೆಗೆ ನುಗ್ಗಿ ಸರಗಳವು: ಕೋಳಿ ಮಂಜ ಬಂಧನ

ಬೆಂಗಳೂರು: ಮನೆಯೊಳಗೆ ನುಗ್ಗಿ ಮಹಿಳೆಯರ ಚಿನ್ನದ ಸರ ಕದ್ದೊಯ್ದಿದ್ದ ಆರೋಪದಡಿ ಮಂಜುನಾಥ್ ಅಲಿಯಾಸ್ ಕೋಳಿ ಮಂಜನನ್ನು (31) ಪೀಣ್ಯ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಮಂಜ 2017ರಿಂದ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ. ಜೈಲಿಗೂ ಹೋಗಿ ಜಾಮೀನಿನ ಮೇಲೆ ಹೊರಬಂದಿದ್ದ. ಈತನಿಂದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ತಂಡ ಕಟ್ಟಿಕೊಂಡಿದ್ದ ಆರೋಪಿ ಮನೆಗಳನ್ನು ಗುರುತಿಸಿ ಕೃತ್ಯ ಎಸಗುತ್ತಿದ್ದ. ಈತ ಕದ್ದು ತಂದ ಆಭರಣಗಳನ್ನು ತಾಯಿ–ತಂಗಿ ವಿಲೇವಾರಿ ಮಾಡುತ್ತಿದ್ದರು. ಇವರೆಲ್ಲರನ್ನೂ ಈ ಹಿಂದೆ ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದರು' ಎಂದೂ ತಿಳಿಸಿದರು.

₹ 65 ಕೋಟಿ ಅವ್ಯವಹಾರ ಆರೋಪ

'ಸಿರಿವೈಭವ' ಅಧ್ಯಕ್ಷೆ ನಾಗವಲ್ಲಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ₹ 65 ಕೋಟಿ ಅವ್ಯವಹಾರ ನಡೆಸಿದ್ದ ಆರೋಪದಡಿ ಸಿರಿವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಅಧ್ಯಕ್ಷೆ ಬಿ.ಎಸ್. ನಾಗವಲ್ಲಿ ಹಾಗೂ ಇವರ ಪತಿ ವಿ.ಆರ್. ರಾಜೇಶ್ ಅವರನ್ನು ಸುಬ್ರಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಕ್ರಮ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾಗವಲ್ಲಿ ಹಾಗೂ ರಾಜೇಶ್ ಅವರನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಎರಡೂವರೆ ತಿಂಗಳ ಹಿಂದೆಯೇ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಿದ್ದರು. ಜೈಲಿನಲ್ಲಿದ್ದ ಇಬ್ಬರನ್ನೂ ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆದಿರುವ ಸುಬ್ರಮಣ್ಯಪುರ ಪೊಲೀಸರು, ವಿಚಾರಣೆ ಆರಂಭಿಸಿದ್ದಾರೆ.

'ಸಹಕಾರ ಸಂಘಗಳ ನಿಬಂಧಕರು ಅವ್ಯವಹಾರದ ಬಗ್ಗೆ ದಾಖಲೆ ಸಮೇತ ದೂರು ನೀಡಿದ್ದಾರೆ. ಅದರನ್ವಯ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ನಾಗವಲ್ಲಿ ಹಾಗೂ ರಾಜೇಶ್

'ಬಸವೇಶ್ವರನಗರ, ರಾಜರಾಜೇಶ್ವರಿನಗರ, ಉತ್ತರಹಳ್ಳಿ, ಬಿಳೆಕಹಳ್ಳಿಯಲ್ಲಿ ಸಿರಿವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಶಾಖೆಗಳಿದ್ದವು. ಸುಮಾರು 2,500 ಸದಸ್ಯರು ಹಣ ಹೂಡಿಕೆ ಮಾಡಿದ್ದರು.'

'ಹೂಡಿಕೆ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದ ಅಧ್ಯಕ್ಷೆ ಹಾಗೂ ಅವರ ಪತಿ ಸ್ವಂತ ಉದ್ದೇಶಕ್ಕೆ ಬಳಸಿಕೊಂಡು ಅವ್ಯವಹಾರ ಮಾಡಿದ್ದಾರೆ. ಸಹಕಾರ ಸಂಘಗಳ ನಿಬಂಧಕರು, ಲೆಕ್ಕಪತ್ರಗಳ ಪರಿಶೀಲನೆ ವೇಳೆ ಅಕ್ರಮ ಪತ್ತೆ ಮಾಡಿದ್ದಾರೆ' ಎಂದು ತಿಳಿಸಿದರು.

'ವಿವಿಧ ಉದ್ಯಮಗಳಲ್ಲಿ ಹಣ ಹೂಡಿಕೆ ಮಾಡಿ, ಲಾಭ ನೀಡುವುದಾಗಿ ಆರೋಪಿಗಳು ಸದಸ್ಯರಿಗೆ ಭರವಸೆ ನೀಡುತ್ತಿದ್ದರು. ಸಿರಿವೈಭವ್ ಗೋಲ್ಡ್ ಪ್ಯಾಲೆಸ್ ಹಾಗೂ ಇತರೆ ವ್ಯವಹಾರ ಸಹ ಆರೋಪಿಗಳು ನಡೆಸುತ್ತಿದ್ದರು. ಇವುಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಹೇಳಿದರು.

ಸದಸ್ಯರಿಂದ ಮಾಹಿತಿ ಸಂಗ್ರಹ: 'ಸಿರಿವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದಲ್ಲಿ ಹಣ ಹೂಡಿಕೆ ಮಾಡಿದ್ದ ಸದಸ್ಯರಿಂದ ಮಾಹಿತಿ ಪಡೆಯಲಾಗುತ್ತಿದೆ. ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಮಾಜಿ ಕಾರ್ಪೊರೇಟರ್ ಪತಿ ಕೊಲೆ: ಬಂಧನ

ಬೆಂಗಳೂರು: ಚಾಮರಾಜಪೇಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಮಾಜಿ ಕಾರ್ಪೊರೇಟರ್ ನಾಜಿಮಾ ಖಾನಂ ಪತಿ ಅಯೂಬ್ ಖಾನ್ (48) ಕೊಲೆ ಪ್ರಕರಣ ಸಂಬಂಧ, ಸಹೋದರನ ಮಗ ಮತೀನ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಟಿಪ್ಪುನಗರದ ಖುದಾವತ್ ಮಸೀದಿ ಅಧ್ಯಕ್ಷರಾಗಿದ್ದ ಅಯೂಬ್ ಖಾನ್ ಅವರಿಗೆ ಜುಲೈ 13ರಂದು ರಾತ್ರಿ ಚಾಕುವಿನಿಂದ ಇರಿಯಲಾಗಿತ್ತು. ತಲೆಮರೆಸಿಕೊಂಡಿದ್ದ ಆರೋಪಿ ಮತೀನ್‌ನನ್ನು ಕೆಂಗೇರಿ ಬಳಿ ಬಂಧಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಹೇಳಿದರು. 'ಮಸೀದಿ ಅಧ್ಯಕ್ಷ ಸ್ಥಾನ, ಆಸ್ತಿ ಹಂಚಿಕೆ ಸಂಬಂಧ ಎರಡೂ ಕುಟುಂಬಗಳ ನಡುವೆ ಪದೇಪದೇ ಜಗಳ ನಡೆಯುತ್ತಿತ್ತು. ತನ್ನ ತಂದೆಗೆ ಆಸ್ತಿ ನೀಡುತ್ತಿಲ್ಲವೆಂದು ಕೋಪಗೊಂಡಿದ್ದ ಮತೀನ್, ಚಿಕ್ಕಪ್ಪ ಅಯೂಬ್ ಖಾನ್‌ರನ್ನು ಕೊಲೆ ಮಾಡಿದ್ದಾನೆ. ಈ ಬಗ್ಗೆ ಆತ ತಪ್ಪೊಪ್ಪಿಕೊಂಡಿದ್ದಾನೆ' ಎಂದೂ ತಿಳಿಸಿದರು.

ನಿಧನ ವಾರ್ತೆ

ಗಾಯಕ ಭೂಪಿಂದರ್ ಸಿಂಗ್

ಮುಂಬೈ(ಪಿಟಿಐ): ಬಾಲಿವುಡ್‌ನ ಖ್ಯಾತ ಗಜಲ್ ಗಾಯಕ ಭೂಪಿಂದರ್ ಸಿಂಗ್ (82) ಅವರು ಅನಾರೋಗ್ಯದಿಂದ ಸೋಮವಾರ ರಾತ್ರಿ 7.45ಕ್ಕೆ ಮುಂಬೈನ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಗಾಯಕಿ, ಪತ್ನಿ ಮಿಥಾಲಿ ಸಿಂಗ್ ಮತ್ತು ಪುತ್ರ ಇದ್ದಾನೆ.

'ಮೂತ್ರ ಸೋಂಕಿನಿಂದ ಬಳಲುತ್ತಿದ್ದ ಭೂಪಿಂದರ್ ಅವರನ್ನು ಹತ್ತು ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶಂಕಿತ ಕರುಳಿನ ಕ್ಯಾನ್ಸರ್ ಮತ್ತು ಕೋವಿಡ್ ಸಂಬಂಧಿ ಕಾಯಿಲೆಗಳಿಂದ ಅವರು ಮೃತಪಟ್ಟರು' ಎಂದು ಮಿಥಾಲಿ ಸಿಂಗ್ ತಿಳಿಸಿದ್ದಾರೆ.

ಪಂಜಾಬ್‌ನ ಅಮೃತಸರದಲ್ಲಿ ಜನಿಸಿದ ಭೂಪಿಂದರ್ ಸಿಂಗ್ ಅವರು ಐದು ದಶಕಗಳ ಕಾಲ ಸಂಗೀತ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದರು. ಬಾಲಿವುಡ್‌ನ ಖ್ಯಾತನಾಮರಾದ ಮೊಹಮ್ಮದ್ ರಫಿ, ಆರ್‌.ಡಿ. ಬರ್ಮನ್, ಲತಾ ಮಂಗೇಶ್ಕರ್, ಆಶಾ ಭೋಂಸ್ಲೆ, ಬಪ್ಪಿ ಲಹಿರಿ ಸೇರಿದಂತೆ ಅನೇಕರೊಂದಿಗೆ ಅವರು ಕೆಲಸ ಮಾಡಿದ್ದರು.

ಭೂಪಿಂದರ್ ಅವರು ಪತ್ನಿ ಮಿಥಾಲಿ ಜೊತೆಗೆ 'ದೋ ದಿವಾನೆ ಶಹರ್ ಮೇ', 'ನಾಮ್ ಗುಮ್ ಜಾಯೇಗಾ', 'ಕಭಿ ಕಿಸಿ ಕೊ ಮುಖಮ್ಮಲ್' 'ಏಕ್ ಅಕೇಲಾ ಇಸ್ ಶೆಹರ್ ಮೇ' ಸೇರಿದಂತೆ ಅನೇಕ ಜನಪ್ರಿಯ ಗೀತೆಗಳಿಗೆ ದನಿಯಾಗಿದ್ದರು. 'ದುನಿಯಾ ಛೂಟೆ ಯಾರ್ ನಾ ಛೂಟೆ' (ಧರಂ ಕಾಂತಾ), 'ಥೋಡಿ ಸಿ ಜಮೀನ್ ಥೋಡಾ ಆಸ್ಮಾನ್' (ಸಿತಾರಾ) 'ದಿಲ್ ಢೂಂಡ್ತಾ ಹೈ (ಮೌಸಮ್) ಮತ್ತು 'ನಾಮ್ ಗುಮ್ ಜಾಯೇಗಾ (ಕಿನಾರಾ) ಹಾಡುಗಳು ಭೂಪಿಂದರ್ ಅವರಿಗೆ ಜನಪ್ರಿಯತೆ ತಂದು ಕೊಟ್ಟಿದ್ದವು.

ಬಾಲಕಿಗೆ ಸಂದೇಶ: ಯುವಕನ ಕೊಂದಿದ್ದವರ ಬಂಧನ

ಬೆಂಗಳೂರು: 'ನನ್ನನ್ನು ಪ್ರೀತಿಸು' ಎಂದು ಬಾಲಕಿ ಮೊಬೈಲ್‌ಗೆ ಸಂದೇಶ ಕಳುಹಿಸಿದರೆಂಬ ಕಾರಣಕ್ಕೆ ಪ್ರಜ್ವಲ್ (19) ಎಂಬುವರನ್ನು ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಬೈಯಪ್ಪನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ನಾಗೇಂದ್ರ ಮತ್ತು ರಂಗಸ್ವಾಮಿ ಬಂಧಿತರು. ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಬನಶಂಕರಿ ನಿವಾಸಿ ಪ್ರಜ್ವಲ್, ಆರೋಪಿ ನಾಗೇಂದ್ರನ ಅಣ್ಣನ ಮಗಳಿಗೆ ಸಂದೇಶ ಕಳುಹಿಸಿದ್ದ. ಇದರಿಂದ ಸಿಟ್ಟಾದ ನಾಗೇಂದ್ರ, ತನ್ನ ಸ್ನೇಹಿತರ ಜೊತೆ ಸೇರಿ ಪ್ರಜ್ವಲ್ ಕೊಲೆ ಮಾಡಲು ಸಂಚು ರೂಪಿಸಿದ್ದ' ಎಂದರು.

'ಪ್ರಜ್ವಲ್ ಅವರನ್ನು ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಬಳಿ ಜುಲೈ 15ರಂದು ಕರೆಸಿಕೊಂಡಿದ್ದ ಆರೋಪಿಗಳು, ದೊಣ್ಣೆಯಿಂದ ತಲೆಗೆ ಹೊಡೆದಿದ್ದರು. ಪ್ರಜ್ಞೆ ಕಳೆದುಕೊಂಡಿದ್ದ ಪ್ರಜ್ವಲ್ ಅವರನ್ನು ಆಸ್ಪತ್ರೆಗೆ ಸೇರಿಸಿ ಪರಾರಿಯಾಗಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಪ್ರಜ್ವಲ್ ಮೃತಪಟ್ಟಿರುವುದಾಗಿ ಠಾಣೆಗೆ ಮಾಹಿತಿ ನೀಡಿದ್ದರು' ಎಂದೂ ತಿಳಿಸಿದರು.

ಪ್ರೇಮಿಗಳ ವಿಡಿಯೊ ಚಿತ್ರೀಕರಿಸಿ ₹ 25 ಲಕ್ಷಕ್ಕೆ ಬ್ಲ್ಯಾಕ್‌ಮೇಲ್

ಬೆಂಗಳೂರು: ಪ್ರೇಮಿಗಳ ಖಾಸಗಿ ಕ್ಷಣದ ವಿಡಿಯೊ ಚಿತ್ರೀಕರಿಸಿ, ₹ 25 ಲಕ್ಷಕ್ಕೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಹಕಾರ ನಗರದ ನಿವಾಸಿ ಉಷಾ ಹಾಗೂ ದ್ವಾರಕನಗರದ ಸುರೇಶ್ ಬಾಬು ಬಂಧಿತರು. ಪ್ರೇಮಿಗಳು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕೊಠಡಿಯಲ್ಲಿ ಕ್ಯಾಮೆರಾ ಇರಿಸಿ ಚಿತ್ರೀಕರಣ: 'ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದ ಪ್ರೇಮಿಗಳು ಯಲಹಂಕ ಬಳಿಯ ಹೋಟೆಲ್‌ವೊಂದರ ಕೊಠಡಿಗೆ ಹಲವು ಬಾರಿ ಹೋಗಿ ಬಂದಿದ್ದರು. ಈ ವಿಷಯ ತಿಳಿದುಕೊಂಡಿದ್ದ ಆರೋಪಿಗಳು, ಪ್ರೇಮಿಗಳ ವಿಡಿಯೊ ಚಿತ್ರೀಕರಣ ಮಾಡಿ ಬ್ಲ್ಯಾಕ್‌ಮೇಲ್ ಮಾಡಲು ಸಂಚು ರೂಪಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪ್ರೇಮಿಗಳು ಇತ್ತೀಚೆಗೆ ಪುನಃ ಹೋಟೆಲ್ ಕೊಠಡಿಗೆ ಹೋಗಿ ಉಳಿದುಕೊಂಡಿದ್ದರು. ಅದೇ ಕೊಠಡಿಯಲ್ಲೇ ರಹಸ್ಯ ಕ್ಯಾಮೆರಾ ಅಳವಡಿಸಿದ್ದ ಆರೋಪಿಗಳು, ಪ್ರೇಮಿಗಳ ಖಾಸಗಿ ಕ್ಷಣಗಳ ವಿಡಿಯೊ ಚಿತ್ರೀಕರಣ ಮಾಡಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ. 'ಕೆಲ ದಿನ ಬಿಟ್ಟು ಪ್ರೇಮಿಗಳ ವಾಟ್ಸ್‌ಆ್ಯಪ್‌ಗೆ ವಿಡಿಯೊ ಕಳುಹಿಸಿದ್ದ ಆರೋಪಿ ಉಷಾ, 'ನಿಮ್ಮಿಬ್ಬರ ಖಾಸಗಿ ವಿಡಿಯೊ ನನ್ನ ಬಳಿ ಇದೆ. ₹ 25 ಲಕ್ಷ ನೀಡಬೇಕು. ಇಲ್ಲದಿದ್ದರೆ, ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂದಿದ್ದರು. ಇದರಿಂದ ನೊಂದ ಪ್ರೇಮಿಗಳು, ಕುಟುಂಬದವರಿಗೆ ಮಾಹಿತಿ ನೀಡಿ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿವೆ.

ಮದುವೆಗೆ ದುಡ್ಡು ಹೊಂದಿಸಲು ಕೃತ್ಯ: 'ಆರೋಪಿ ಉಷಾ ಹಾಗೂ ಸುರೇಶ್‌ಬಾಬು, ಪರಸ್ಪರ ಪ್ರೀತಿಸಿ ಮದುವೆಯಾಗಲು ತೀರ್ಮಾನಿಸಿದ್ದರೆಂದು ಹೇಳಲಾಗುತ್ತಿದೆ. ಉಷಾ, ಸಂಬಂಧಿಕರೇ ಆಗಿದ್ದ ಯುವತಿ ಹಾಗೂ ಅವರ ಪ್ರಿಯತಮೆ ವಿಡಿಯೊ ಮಾಡಿದ್ದಳು. ಅದೇ ವಿಡಿಯೊ ಬಳಸಿಕೊಂಡು ಹಣ ಪಡೆದು, ಮದುವೆಗೆ ಬಳಸಿಕೊಳ್ಳಲು ಯೋಚಿಸಿದ್ದಳೆಂದು ಗೊತ್ತಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಕೆಲಸಕ್ಕಿದ್ದ ಮಳಿಗೆಯಲ್ಲಿ ಕಳವು: ಇಬ್ಬರ ಬಂಧನ

ಬೆಂಗಳೂರು: ಯಶವಂತಪುರದ ಒಂದನೇ ಮುಖ್ಯರಸ್ತೆಯಲ್ಲಿರುವ 'ದಿ ಬೆಸ್ಟ್' ಆಭರಣ ಮಳಿಗೆಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಚೇತನ್ ನಾಯ್ಡು ಹಾಗೂ ವಿಜಯ್ ಬಂಧಿತರು. ಇವರಿಂದ 373 ಗ್ರಾಂ ಚಿನ್ನಾಭರಣ, ₹99 ಸಾವಿರ ನಗದು, ಕಾರು ಹಾಗೂ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಸಾರಿಗೆ ಇಲಾಖೆ ಪರಿಷ್ಕೃತ ದರಕ್ಕೆ ವಾಹನಗಳ ಮಾಲೀಕರಿಂದ ಖಂಡನೆ

ವಾಯು ಮಾಲಿನ್ಯ ತಪಾಸಣೆ ದುಬಾರಿ

ಪ್ರಜಾವಾಣಿ ವಾರ್ತೆ

ವಾಹನ ಮಾದರಿ	ಹಳೇ ದರ	ಹೊಸ ದರ
ದ್ವಿಚಕ್ರ ವಾಹನ	50	65
ಕಾರು (ಪೆಟ್ರೋಲ್)	90	115
ಕಾರು (ಡೀಸೆಲ್)	115	160

ಬೆಂಗಳೂರು: ವಾಹನಗಳ ವಾಯು ಮಾಲಿನ್ಯ ತಪಾಸಣೆ ದರ ಹೆಚ್ಚಳ ಮಾಡಲಾಗಿದ್ದು, ಸಾರಿಗೆ ಇಲಾಖೆಯ ಪರಿಷ್ಕೃತ ದರಕ್ಕೆ ವಾಹನಗಳ ಮಾಲೀಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಹಾಗೂ ಹೆಚ್ಚು ಹೊಗೆ ಉಗುಳುವ ವಾಹನಗಳಿಗೆ ಸಾರಿಗೆ ಇಲಾಖೆಯಿಂದ ದಂಡ ವಿಧಿಸಲಾಗುತ್ತಿದೆ. ಹೀಗಾಗಿ, ಎಲ್ಲ ವಾಹನಗಳ ವಾಯು ಮಾಲಿನ್ಯ ತಪಾಸಣೆಯನ್ನು ಕಡ್ಡಾಯಗೊಳಿಸಲಾಗಿದೆ. ಇದಕ್ಕಾಗಿ ರಾಜ್ಯದೆಲ್ಲೆಡೆ ತಪಾಸಣೆ ಕೇಂದ್ರಗಳನ್ನು ಖಾಸಗಿ ವ್ಯಕ್ತಿಗಳ ಸಹಯೋಗದಲ್ಲಿ ತೆರೆಯಲಾಗಿದೆ.

'ಕೋವಿಡ್ ಲಾಕ್‌ಡೌನ್ ನಂತರ ಕ್ರಮೇಣ ಆರ್ಥಿಕ ಚಟುವಟಿಕೆಗಳು ಚೇತರಿಸಿಕೊಳ್ಳುತ್ತಿವೆ. ಕೋವಿಡ್ ಸಂದರ್ಭದಲ್ಲೇ ತತ್ತರಿಸಿದ್ದ ಸಾರಿಗೆ ಕ್ಷೇತ್ರವೂ ನಿಧಾನವಾಗಿ ಚಿಗುರೊಡೆಯುತ್ತಿದೆ. ಇಂಥ ಸಂದರ್ಭದಲ್ಲೇ ವಾಯು ಮಾಲಿನ್ಯ ತಪಾಸಣೆ ದರವನ್ನು ಏರಿಕೆ ಮಾಡಿರುವುದು ಖಂಡನೀಯ' ಎಂದು ಕ್ಯಾಬ್ ಚಾಲಕ ನಾಗರಾಜ್ ಅಸಮಾಧಾನ ವ್ಯಕ್ತಪಡಿಸಿದರು.

'ಒಮ್ಮೆ ವಾಹನ ತಪಾಸಣೆ ಮಾಡಿದರೆ, ಅದರ ಪ್ರಮಾಣಪತ್ರದ ಮುಕ್ತಾಯದ ಅವಧಿ 6 ತಿಂಗಳು ಇರುತ್ತದೆ. ತಪಾಸಣೆ ದರವನ್ನು ದಿಢೀರ್ ಏರಿಕೆ ಮಾಡಲಾಗಿದ್ದು, ಇದರಿಂದ ವಾಹನಗಳ ಮಾಲೀಕರಿಗೆ ಹೊರೆ ಆಗುತ್ತಿದೆ' ಎಂದು ದೂರಿದರು.

'ವಾಹನಗಳ ಮಾಲೀಕರು ಹಾಗೂ ಚಾಲಕರ ಜೊತೆಯಲ್ಲಿ ಚರ್ಚಿಸಿ ದರ ಏರಿಕೆ ಬಗ್ಗೆ ತೀರ್ಮಾನಿಸಬೇಕಿತ್ತು. ಆದರೆ, ಯಾವುದೇ ಮುನ್ಸೂಚನೆ ನೀಡದೇ ದರ ಏರಿಕೆ ಮಾಡಿರುವುದು ನಿಯಮಬಾಹಿರ. ಈ ದರವನ್ನು ಕೂಡಲೇ ಹಿಂಪಡೆಯಬೇಕು' ಎಂದೂ ಒತ್ತಾಯಿಸಿದರು.

ದರ ಏರಿಕೆ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಾರಿಗೆ ಇಲಾಖೆ ಆಯುಕ್ತ ಹಾಗೂ ಇ–ಆಡಳಿತ ವಿಭಾಗದ ಜಂಟಿ ಕಮಿಷನರ್ ಲಭ್ಯರಾಗಲಿಲ್ಲ.

'ಮೂರು ತಿಂಗಳ ಹಿಂದೆಯೇ ಏರಿಕೆ: ಮನವಿ ಸಲ್ಲಿಕೆ'

'ವಾಯು ಮಾಲಿನ್ಯ ತಪಾಸಣೆ ದರವನ್ನು ಮೂರು ತಿಂಗಳ ಹಿಂದೆಯೇ ಹೆಚ್ಚಳ ಮಾಡಲಾಗಿದೆ. ದರ ಇಳಿಕೆ ಮಾಡುವಂತೆ ಕೆಲ ವಾಹನಗಳ ಮಾಲೀಕರು ಮನವಿ ನೀಡಿದ್ದು, ಪರಿಶೀಲನೆ ನಡೆಯುತ್ತಿದೆ' ಎಂದು ಸಾರಿಗೆ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಡಾಂಬರು, ಚರಂಡಿ ಅಭಿವೃದ್ಧಿಯ 227 ಕಾಮಗಾರಿಗಳಿಗೆ ₹700 ಕೋಟಿ ಬಿಡುಗಡೆ

ರಸ್ತೆ: ಆರ್.ಆರ್. ನಗರಕ್ಕೆ ಸಿಂಹಪಾಲು

• ಆರ್. ಮಂಜುನಾಥ್

ರಸ್ತೆ ಕಾಮಗಾರಿ

ಬೆಂಗಳೂರು: ಅಮೃತ ನಗರೋತ್ಥಾನ ಯೋಜನೆಯಲ್ಲಿ ವಿಧಾನಸಭೆ ಕ್ಷೇತ್ರವಾರು ಅನುದಾನ ಪಡೆದುಕೊಳ್ಳುವಲ್ಲಿ ಅಗ್ರಸ್ಥಾನದಲ್ಲಿರುವ ರಾಜರಾಜೇಶ್ವರಿ ನಗರ, ರಸ್ತೆ ಮೂಲಸೌಕರ್ಯ ಯೋಜನೆಗಳಲ್ಲೂ ಅಧಿಕ ಪ್ರಮಾಣವನ್ನೇ ಪಡೆದುಕೊಂಡಿದೆ. ₹700 ಕೋಟಿಗಳಲ್ಲಿ ಸಚಿವರಾದ ಮುನಿರತ್ನ, ಸೋಮಶೇಖರ್ ಅವರಿಗೇ ಸಿಂಹಪಾಲು.

ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಲ್ಲಿ ರಸ್ತೆ ಮೂಲಸೌಕರ್ಯ ವಿಭಾಗದಿಂದ ಒಟ್ಟು 227 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ರಸ್ತೆ ಮೂಲಸೌಕರ್ಯಕ್ಕಾಗಿ ಒಂಬತ್ತು ವಿಭಾಗಗಳಲ್ಲಿ ಕಾಮಗಾರಿಗೆ ಹಣ ಹಂಚಲಾಗಿದೆ. ಇದರಲ್ಲಿ ಮತ್ತೆ ರಾಜರಾಜೇಶ್ವರಿ ನಗರ ವಲಯವೇ ಅತಿಹೆಚ್ಚು ಪಾಲನ್ನು ಪಡೆದಿದೆ. ಇದು ಕಾಂಗ್ರೆಸ್ ಶಾಸಕರ ಜೊತೆಗೆ ಬಿಜೆಪಿ ಶಾಸಕರನ್ನೂ ಕೆರಳಿಸಿದೆ.

ರಸ್ತೆ ಮೂಲಸೌಕರ್ಯದ ರಾಜರಾಜೇಶ್ವರಿ ನಗರ ವಿಭಾಗದ ಕಾಮಗಾರಿಗಳು ರಾಜರಾಜೇಶ್ವರಿನಗರ ಹಾಗೂ ಯಶವಂತಪುರ ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಿಸಿದ್ದವಾಗಿವೆ. ಇವೇ ವಿಧಾನಸಭೆ ಕ್ಷೇತ್ರಗಳಿಗೆ ಅನುದಾನವಾಗಿ ಕ್ರಮವಾಗಿ ₹208 ಮತ್ತು ₹202 ಕೋಟಿಗಳನ್ನು ನೀಡಲಾಗಿದೆ. ಈಗ ಇವೆರಡು ಕ್ಷೇತ್ರಗಳ ರಸ್ತೆ, ಚರಂಡಿಗಾಗಿ ₹190 ಕೋಟಿ ನೀಡಿರುವುದು ಎಲ್ಲರ ಕಣ್ಣನ್ನು ಕೆಂಪಾಗಿಸಿದೆ.

ರಸ್ತೆಗಳ ಅಭಿವೃದ್ಧಿ, ಚರಂಡಿ ನಿರ್ಮಾಣ, ನಿರ್ವಹಣೆ, ಡಾಂಬರು ಇಂತಹದ್ದೇ ಕಾಮಗಾರಿಗಳನ್ನು ರಸ್ತೆ ಮೂಲಸೌಕರ್ಯದ ಹಣದಲ್ಲಿ ಮಾಡಲಾಗುತ್ತಿದೆ. ಪೂರ್ವ ವಿಭಾಗದಲ್ಲಿ ತಲಾ ₹50 ಲಕ್ಷದಿಂದ ₹6.5 ಕೋಟಿವರೆಗೂ ಕಾಮಗಾರಿಗಳಿವೆ. ಪಶ್ಚಿಮ ವಿಭಾಗದಲ್ಲಿ ₹50 ಲಕ್ಷದಿಂದ ₹22.50 ಕೋಟಿವರೆಗೆ ಇದೆ. ಪ್ರಮುಖ ಹಾಗೂ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ಮಲ್ಲೇಶ್ವರ ವಿಧಾನಸಭೆ ಕ್ಷೇತ್ರಕ್ಕೆ ₹20 ಕೋಟಿ, ಮಹಾಲಕ್ಷ್ಮಿ ಬಡಾವಣೆ ಕ್ಷೇತ್ರಕ್ಕೆ ₹22.50 ಕೋಟಿ, ರಾಜಾಜಿನಗರ ಕ್ಷೇತ್ರಕ್ಕೆ ₹15 ಕೋಟಿ ಹಂಚಲಾಗಿದೆ.

ದಕ್ಷಿಣ ವಿಭಾಗದಲ್ಲಿ ₹35 ಲಕ್ಷದಿಂದ ₹17 ಕೋಟಿವರೆಗಿನ ಕಾಮಗಾರಿಗಳಿವೆ. ಇಟ್ಟಮಡು ರಸ್ತೆಯಲ್ಲಿ ವಿಸ್ತರಣೆ, ಅಭಿವೃದ್ಧಿಗೆ ₹17 ಕೋಟಿ ಹಾಗೂ ಚಿಕ್ಕಪೇಟೆ ಕ್ಷೇತ್ರದಲ್ಲಿ ರಸ್ತೆಗಳ ಮರುಅಭಿವೃದ್ಧಿಗೆ ₹10 ಕೋಟಿ ಅನುಮೋದನೆ ನೀಡಲಾಗಿದೆ. ಮಹದೇವಪುರ ವಿಭಾಗದಲ್ಲಿ ₹20 ಲಕ್ಷದಿಂದ ₹11 ಕೋಟಿವರೆಗಿನ ಕಾಮಗಾರಿಗಳಲ್ಲಿ ಪಣತ್ತೂರು–ಬಾಲಗೆರೆ ರಸ್ತೆ ನಿರ್ಮಾಣಕ್ಕೆ ಅಧಿಕ ಹಣ ನೀಡಲಾಗಿದೆ. ಕೆ.ಆರ್.ಪುರ ವಿಭಾಗದಲ್ಲಿ 7 ಕಾಮಗಾರಿಗಳಲ್ಲಿ ₹13 ಕೋಟಿಯನ್ನು ಹಳೆ ಮದ್ರಾಸ್ ರಸ್ತೆ ಅಭಿವೃದ್ಧಿಗೆ ಮೀಸಲಿಡಲಾಗಿದೆ.

ಬೊಮ್ಮನಹಳ್ಳಿ ವಿಭಾಗದಲ್ಲಿ ₹40 ಲಕ್ಷದಿಂದ ₹5 ಕೋಟಿವರೆಗಿನ ಕಾಮಗಾರಿಗಳಿವೆ. ಬೊಮ್ಮನಹಳ್ಳಿ ಕ್ಷೇತ್ರದ ಕಾಮಗಾರಿಗಳಿಗೆ ಗರಿಷ್ಠ ಹಣ ಮೀಸಲಾಗಿದೆ. ದಾಸರಹಳ್ಳಿ ವಿಭಾಗದಲ್ಲಿ ಮೂರು ಕಾಮಗಾರಿ ಮಾತ್ರ ಇದ್ದು, ಒಟ್ಟಾರೆ ₹10 ಕೋಟಿ ವಿನಿಯೋಗವಾಗಲಿದೆ. ಯಲಹಂಕ ವಿಭಾಗದಲ್ಲಿ ₹30 ಲಕ್ಷದಿಂದ ₹6 ಕೋಟಿವರೆಗಿನ ಕಾಮಗಾರಿಗಳಿದ್ದು, ಯಲಹಂಕ ಕ್ಷೇತ್ರದಲ್ಲಿ ಬಹುತೇಕ ಹಣ ವ್ಯಯವಾಗಲಿದೆ.

₹1 ಕೋಟಿಗಿಂತ ಕಡಿಮೆ ಇಲ್ಲ: ಆರ್. ಆರ್. ನಗರ ವಿಭಾಗದಲ್ಲಿ ಒಟ್ಟು 49 ಕಾಮಗಾರಿಗಳು ₹190 ಕೋಟಿ ವೆಚ್ಚದಲ್ಲಿ ನಡೆಯಲಿವೆ. ಇದರಲ್ಲಿ ₹1 ಕೋಟಿಗಿಂತ ಕಡಿಮೆಯ ಯಾವ ಕಾಮಗಾರಿಯೂ ಇಲ್ಲ. ಬಿಇಎಲ್ ವೃತ್ತದಲ್ಲಿ ರಸ್ತೆ ವಿಸ್ತರಣೆಗೆ ₹70 ಕೋಟಿ, ಅಂದ್ರಹಳ್ಳಿ ರಸ್ತೆ ಅಭಿವೃದ್ಧಿಗೆ ₹11 ಕೋಟಿ ವೆಚ್ಚ ಮಾಡಲಾಗುತ್ತದೆ. ರಾಜರಾಜೇಶ್ವರಿ ನಗರ ಕ್ಷೇತ್ರಕ್ಕೆ ಹೆಚ್ಚು ಹಣದ ಕಾಮಗಾರಿಗಳು ಅನುಮೋದನೆಯಾಗಿವೆ. ಇಷ್ಟೇ ಅಲ್ಲ, ಮುಖ್ಯಮಂತ್ರಿಯವರ ವಿವೇಚನೆಯಲ್ಲಿ ಕಾಯ್ದಿಟ್ಟಿರುವ ₹50 ಕೋಟಿ ಮೌಲ್ಯದ ಹಣವೂ ರಾಜರಾಜೇಶ್ವರಿ ನಗರ ವಿಭಾಗದಲ್ಲೇ ಇದೆ.

ಬಿಬಿಎಂಪಿ ಎಲ್ಲಿಗೆ ಎಷ್ಟು 'ಅಮೃತ'?

ರಸ್ತೆ ಮೂಲಸೌಕರ್ಯ ಕಾಮಗಾರಿಗಳು

ವಿಭಾಗ	ಕಾಮಗಾರಿಗಳು	ವೆಚ್ಚ (ಕೋಟಿಗಳಲ್ಲಿ)
ಆರ್.ಆರ್. ನಗರ	28	₹190
ಪಶ್ಚಿಮ	33	₹125
ದಕ್ಷಿಣ	43	₹105
ಪೂರ್ವ	39	₹75
ಬೊಮ್ಮನಹಳ್ಳಿ	38	₹75
ಯಲಹಂಕ	21	₹50
ಮಹದೇವಪುರ	43	₹35
ಕೆ.ಆರ್.ಪುರ	7	₹35
ದಾಸರಹಳ್ಳಿ	3	₹10

ಬಿಜೆಪಿ ಶಾಸಕರ ಅಸಮಾಧಾನ

'ನಾವು ಪಕ್ಷದ ಶಾಸಕರೇ ಅಲ್ಲವೇ? ನಮ್ಮ ಕ್ಷೇತ್ರಗಳಲ್ಲೂ ಬಹಳಷ್ಟು ರಸ್ತೆಗಳು, ಚರಂಡಿಗಳು ಹಾಳಾಗಿಹೋಗಿವೆ. ಆದರೆ, ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ರಸ್ತೆ ಮೂಲಸೌಕರ್ಯದ ವತಿಯಿಂದ ಕಡಿಮೆ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಕ್ಷೇತ್ರಕ್ಕೆ ನೀಡುವ ಅನುದಾನದಲ್ಲೂ ಒಂದಿಬ್ಬರಿಗೇ ಹೆಚ್ಚು ನೀಡಿದ್ದಾರೆ. ಅದರಲ್ಲೂ ನಮಗೆ ಅನ್ಯಾಯವಾಗಿದೆ. ನಮ್ಮ ಕ್ಷೇತ್ರದ ರಸ್ತೆಗೆ ಸಂಬಂಧಿಸಿದ ಕಾಮಗಾರಿಗಳಿಗೂ ಅನುಮತಿ ನೀಡಿಲ್ಲ. ನಮ್ಮ ಮನೆಯಲ್ಲೇ ನಾವು ಪರಕೀಯರಂತಾಗಿದ್ದೇವೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ, ಬಿಜೆಪಿಯ ನಾಲ್ವರು ಶಾಸಕರು ಅಸಮಾಧಾನ ತೋಡಿಕೊಂಡರು.

ಒಂದೇ ರಸ್ತೆಗೆ ಮತ್ತೆ ಮತ್ತೆ ಹಣ

'ರಸ್ತೆ ಮೂಲಸೌಕರ್ಯ ವಿಭಾಗದ ₹700 ಕೋಟಿ ಅನುದಾನ ಕ್ರಿಯಾಯೋಜನೆಗಳಲ್ಲಿ ಸಾಕಷ್ಟು ಕಾಮಗಾರಿಗಳು ಮತ್ತೆ ಕಾಣಿಸಿಕೊಂಡಿವೆ. ಹಿಂದೆ ಅಭಿವೃದ್ಧಿ ಮಾಡಲಾಗಿದ್ದ ರಸ್ತೆಗೆ ತಿರುಗಾ–ಮುರುಗಾ ಹೆಸರು ಬದಲಿಸಿ ಮತ್ತದೇ ಕಾಮಗಾರಿಗೆ ಅನುಮೋದನೆ ಪಡೆಯಲಾಗಿದೆ. ಅನುದಾನಕ್ಕಾಗಿಯೇ ಪಟ್ಟಿಯಲ್ಲಿ ಇಂತಹ ಕಾಮಗಾರಿಗಳನ್ನು ತೋರಲಾಗಿದೆ' ಎಂದು ಪಕ್ಷಭೇದ ಮರೆತು ಬಿಬಿಎಂಪಿಯ ಕೆಲವು ಮಾಜಿ ಸದಸ್ಯರು ಆರೋಪಿಸಿದರು. ಈ ಬಗ್ಗೆ ಪ್ರತಿಕ್ರಿಯೆಗೆ ಸಾಕಷ್ಟು ಬಾರಿ ಪ್ರಯತ್ನಿಸಿದರೂ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಪ್ರಹ್ಲಾದ್ ಪ್ರತಿಕ್ರಿಯಿಸಲಿಲ್ಲ.

ರೋಷನ್ ಬೇಗ್ ಅರ್ಜಿ–ಸಿಬಿಐಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐ ಮಾನಿಟರಿ ಅಡ್ವೈಸರಿ (ಐಎಂಎ) ಕಂಪನಿಯ ಬಹುಕೋಟಿ ವಂಚನೆ ಪ್ರಕರಣದ ಆರೋಪಿ ಮಾಜಿ ಸಚಿವ ಆರ್.ರೋಷನ್ ಬೇಗ್ ವಿರುದ್ಧದ ವಿಚಾರಣೆಗೆ ತಡೆ ಕೋರಿದ ಅರ್ಜಿಗೆ ಸಂಬಂಧಿಸಿದಂತೆ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ರೋಷನ್ ಬೇಗ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿ ಸಿಬಿಐ, ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆ ಅಧಿಕಾರಿ ಹಾಗೂ ದೂರುದಾರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿದೆ.

ಹಗರಣದಲ್ಲಿ ಬೇಗ್ ವಿರುದ್ಧ ಐಪಿಸಿ ಕಲಂ 406, 409 ಮತ್ತು 120 ಬಿ ಹಾಗೂ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆದಾರರ ಹಿತರಕ್ಷಣಾ (ಕೆಪಿಐಡಿಇಎಫ್) ಕಾಯ್ದೆ-2004ರ ಅನ್ವಯ 2019ರ ಅಕ್ಟೋಬರ್ ನಲ್ಲಿ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಈ ಸಂಬಂಧ ಸಿಟಿ ಸಿವಿಲ್ ಕೋರ್ಟ್ ನ ವಿಶೇಷ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಗೆ ತಡೆ ನೀಡಬೇಕು ಎಂದು ಬೇಗ್ ಕೋರಿದ್ದಾರೆ.

ಆರೋಪವೇನು?: ಪ್ರಕರಣಕ್ಕೆ ಸಂಬಂಧಿಸಿದಂತೆ ಇಶ್ತಿಯಾಕ್ ಎಂಬುವರು ಪೊಲೀಸರ ಮುಂದೆ ನೀಡಿದ್ದ ಸ್ವಯಂ ಹೇಳಿಕೆಯಲ್ಲಿ, 'ಮನ್ಸೂರ್ ಖಾನ್ ಅವರು ರೋಷನ್ ಬೇಗ್‌ಗೆ 2018ರ ವಿಧಾನಸಭೆ ಚುನಾವಣೆಯಲ್ಲಿ ₹ 2 ಕೋಟಿಗೂ ಹೆಚ್ಚು ಹಣ ನೀಡಿದ್ದಾರೆ ಎಂದು ತಿಳಿಸಿದ್ದಾರೆ. ಇದರ ಅನುಸಾರ ಅವರನ್ನು ಪ್ರಕರಣದ ಸಾಕ್ಷಿ ಎಂದು ಪರಿಗಣಿಸಲಾಗಿದೆ. ಹೀಗಾಗಿ, ಬೇಗ್ ಐಎಂಎ ಕಂಪೆನಿ ಪ್ರವರ್ತಕರಾಗಿ (ಪ್ರಮೋಟರ್) ಸಂಸ್ಥೆಯ ವಾಣಿಜ್ಯ ಚಟುವಟಿಕೆ ಫಲಾನುಭವಿ' ಎಂಬುದು ಸಿಬಿಐ ಅರೋಪ.

'ಬಾಗಿನ: ಮೈಸೂರು ರಾಜಮನೆತನದ ಪ್ರತಿನಿಧಿಯನ್ನು ಗೌರವಿಸಿ'

ದಿನೇಶ್ ಗೂಳಿಗೌಡ

ಮಂಡ್ಯ: 'ಕೆಆರ್‌ಎಸ್ ಜಲಾಶಯ ಭರ್ತಿಯಾಗಿದ್ದು, ಬಾಗಿನ ಅರ್ಪಿಸುವ ಸಂದರ್ಭದಲ್ಲಿ ಮೈಸೂರು ರಾಜಮನೆತನದ ಪ್ರತಿನಿಧಿಯನ್ನು ಸರ್ಕಾರದಿಂದ ಗೌರವಿಸಬೇಕು' ಎಂದು ಆಗ್ರಹಿಸಿ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

'ರಾಜ್ಯದಾದ್ಯಂತ ಉತ್ತಮ ಮಳೆಯಾಗುತ್ತಿದ್ದು, ಕೆಆರ್‌ಎಸ್ ಜಲಾಶಯ ಮೈದುಂಬಿಕೊಂಡಿದೆ. ಬಸವರಾಜ ಬೊಮ್ಮಾಯಿ ಅವರಿಗೆ ವರ್ಷದಲ್ಲಿ 2 ಬಾರಿ ಬಾಗಿನ ಅರ್ಪಿಸುವ ಅವಕಾಶ ಸಿಕ್ಕಿದೆ. ಜಲಾಶಯ ಭರ್ತಿಯಾದರೆ, ಅದನ್ನು ದೈವ ಸಂಕಲ್ಪ ಎಂದು ಭಾವಿಸಿ ಕಾವೇರಿ ಮಾತೆಯನ್ನು ಪೂಜಿಸುವ ಪದ್ಧತಿ ನಡೆದುಕೊಂಡು ಬಂದಿದೆ. ಜಿಲ್ಲೆಯಲ್ಲಿ 2.65 ಲಕ್ಷ ಎಕರೆಗೂ ಹೆಚ್ಚು ಪ್ರದೇಶದಲ್ಲಿ ಭತ್ತ, ಕಬ್ಬು, ರಾಗಿ ಹಾಗೂ ಇನ್ನಿತರ ವಾಣಿಜ್ಯ ಬೆಳೆಗೆ ಕೆಆರ್‌ಎಸ್ ಜಲಾಶಯ ನೀರೊದಗಿಸುತ್ತಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಮಂಡ್ಯ ಜಿಲ್ಲೆ ಸ್ಥಾಪಿಸುವ ಜೊತೆಗೆ ಕನ್ನಂಬಾಡಿ ಅಣೆಕಟ್ಟೆ ಕಟ್ಟಿದ್ದಾರೆ. ಮೈಷುಗರ್ ಸಕ್ಕರೆ ಕಾರ್ಖಾನೆ ಸ್ಥಾಪಿಸಿ ರೈತರಿಗೆ ನೆರವಾಗಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಯದುವಂಶದ ಕೊಡುಗೆಯಾಗಿರುವ ಕನ್ನಂಬಾಡಿ ಅಣೆಕಟ್ಟೆಗೆ ಬಾಗಿನ ಅರ್ಪಿಸುವ ಸಂದರ್ಭದಲ್ಲಿ ಯದುವಂಶದ ಪ್ರತಿನಿಧಿಗಳಾಗಿ ರಾಜವಂಶಸ್ಥರು ಮುಖ್ಯಮಂತ್ರಿ ಜೊತೆ ಹಾಜರಿರಬೇಕು ಎಂಬುದು ಕಾವೇರಿ ಕೊಳ್ಳದ ಜನರ ಬಹುದಿನಗಳ ಆಶಯವಾಗಿದೆ. ಮೈಸೂರು ರಾಜಮನೆತನದ ಪ್ರತಿನಿಧಿಯನ್ನು ಆಹ್ವಾನಿಸಿ, ಗೌರವಿಸಿದರೆ ಈ ಭಾಗದ ಜನರಿಗೆ ಸಂತಸವಾಗುತ್ತದೆ. ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕು. ಮೈಷುಗರ್ ಕಾರ್ಖಾನೆಯನ್ನು ಶೀಘ್ರದಲ್ಲಿ ಪ್ರಾರಂಭಿಸಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

ರಾಜ್ಯಸಭೆ: ಜಗ್ಗೇಶ್ ಮತ್ತೊಮ್ಮೆ ಪ್ರಮಾಣ ವಚನ ಸ್ವೀಕಾರ

ನವದೆಹಲಿ: ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದ ಜಗ್ಗೇಶ್ ಅವರು ರಾಜ್ಯಸಭೆಯಲ್ಲಿ ಸೋಮವಾರ ಮತ್ತೊಮ್ಮೆ ಪ್ರಮಾಣವಚನ ಸ್ವೀಕರಿಸಿದರು.

ಕರ್ನಾಟಕದಿಂದ ಆಯ್ಕೆಯಾದ ನಾಲ್ವರು ಸದಸ್ಯರು ಜುಲೈ 8ರಂದು ಪ್ರಮಾಣವಚನ ಸ್ವೀಕರಿಸಿದ್ದರು. ಜಗ್ಗೇಶ್ ಅವರು ಶ್ರೀ ರಾಘವೇಂದ್ರ ಸ್ವಾಮಿ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದರು. ಜಗ್ಗೇಶ್ ಪ್ರಮಾಣವಚನ ಕ್ರಮಬದ್ಧವಾಗಿದೆಯಾ ಎಂಬುದನ್ನು ಪರಿಶೀಲಿಸುವಂತೆ ರಾಜ್ಯಸಭೆಯ ಸಭಾಪತಿ ಎಂ. ವೆಂಕಯ್ಯ ನಾಯ್ಡು ಅವರು ಅಧಿಕಾರಿಗಳಿಗೆ ಸೂಚಿಸಿದ್ದರು. 'ಪ್ರಮಾಣವಚನ ಸ್ವೀಕರಿಸಿದ್ದು ಕ್ರಮಬದ್ಧವಾಗಿರಲಿಲ್ಲ. ಮತ್ತೊಮ್ಮೆ ಪ್ರಮಾಣವಚನ ಸ್ವೀಕರಿಸಬೇಕು ಎಂಬುದಾಗಿ ಅಧಿಕಾರಿಗಳು ಹೇಳಿದ್ದರು' ಎಂದು ರಾಜ್ಯಸಭೆಯ ಮೂಲಗಳು ಹೇಳಿವೆ.

ಹೀಗಾಗಿ, ಜಗ್ಗೇಶ್ ಅವರು ದೇವರ ಹೆಸರಿನಲ್ಲಿ ಕನ್ನಡದಲ್ಲಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು.

ವೆಂಕಯ್ಯ ನಾಯ್ಡು ಅವರು ಜಗ್ಗೇಶ್ ಅವರ ಹೆಸರನ್ನು ಉಲ್ಲೇಖಿಸದೆಯೇ, 'ಸದನದ ನಿಯಮಾವಳಿಗಳ ಪ್ರಕಾರವೇ ಸದಸ್ಯರು ಕಾರ್ಯನಿರ್ವಹಿಸಬೇಕು. ಪ್ರಮಾಣವಚನದ ವೇಳೆಯಲ್ಲಿ ಸಹ ನಿಯಮ ಪಾಲಿಸಬೇಕು' ಎಂದು ಕಿವಿಮಾತು ಹೇಳಿದರು.

ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಕಚೇರಿ ಆರಂಭ

ಬೆಂಗಳೂರು: ನಗರದ ಯೂನಿಟಿ ಬಿಲ್ಡಿಂಗ್‌ನ ಸಿಲ್ವರ್ ಜ್ಯೂಬಿಲಿ ಬ್ಲಾಕ್‌ನಲ್ಲಿ ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಕಚೇರಿ ಆರಂಭಿಸಲಾಗಿದ್ದು, ನಿಗಮದ ಅಧ್ಯಕ್ಷ ಕೃಷ್ಣಪ್ಪ ಸೋಮವಾರ ಕಚೇರಿ ಉದ್ಘಾಟಿಸಿದರು.

ಸಮುದಾಯದ ಅಭ್ಯುದಯಕ್ಕೆ ಬಜೆಟ್‌ನಲ್ಲಿ ₹ 500 ಕೋಟಿ ಘೋಷಿಸಲಾಗಿತ್ತು. ನಿಗಮವು ಸಮುದಾಯದ ಅಭಿವೃದ್ಧಿ ಹಾಗೂ ನಿರುದ್ಯೋಗಿ ಯುವಕ, ಯುವತಿಯರನ್ನು ಕೌಶಲರಾಗಿಸಲು ಶ್ರಮಿಸುತ್ತಿದೆ ಎಂದು ಕೃಷ್ಣಪ್ಪ ಹೇಳಿದರು.

ಸಮುದಾಯದ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಅವಕಾಶ ಕಲ್ಪಿಸಲು ಟೂರಿಸ್ಟ್ ಟ್ಯಾಕ್ಸಿ ವಾಹನ ಖರೀದಿಗೆ ಸಹಾಯಧನ ಯೋಜನೆ ರೂಪಿಸಿದೆ. ಸಮುದಾಯದ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲು ಗಂಗಾ ಕಲ್ಯಾಣ ನೀರಾವರಿ ಯೋಜನೆ ಹಮ್ಮಿಕೊಂಡಿದೆ. ಈ ಎಲ್ಲ ಯೋಜನೆಗಳ ಉಪಯೋಗ ಪಡೆಯಲು ನಿಗಮದ ಜಾಲತಾಣದಲ್ಲಿ https://kvcdc.karnataka.gov.in/kn ಮೂಲಕ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು.

'ಸಕಾರಣ ಇದ್ದಾಗ ದಂಡ ಸಲ್ಲ'

ಬೆಂಗಳೂರು: 'ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಕೋರಿದ ಮಾಹಿತಿ ನೀಡದೇ ಇರುವುದಕ್ಕೆ ಸಕಾರಣ ಇದ್ದಾಗ ಸಾರ್ವಜನಿಕ ಮಾಹಿತಿ ಅಧಿಕಾರಿಗೆ (ಪಿಐಒ) ದಂಡ ವಿಧಿಸುವುದು ತರವಲ್ಲ' ಎಂದು ಹೈಕೋರ್ಟ್ ಹೇಳಿದೆ.

ಮಾಹಿತಿ ನೀಡದೇ ಇದ್ದ ಕಾರಣ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ₹10 ಸಾವಿರ ದಂಡ ವಿಧಿಸಿದ್ದ ಕರ್ನಾಟಕ ಮಾಹಿತಿ ಆಯೋಗದ ಆದೇಶವನ್ನು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ಏಕಸದಸ್ಯ ನ್ಯಾಯಪೀಠ ರದ್ದುಗೊಳಿಸಿದೆ. ಈ ಸಂಬಂಧ ಡಿಸಿಎಫ್ ಅಂಬಾಡಿ ಮಾಧವ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠ ಮಾನ್ಯ ಮಾಡಿದೆ.

'ಸಕಾರಣಗಳಿಂದಾಗಿ ಮಾಹಿತಿ ನೀಡುವುದು ತಡವಾದರೆ ಅಂತಹ ವೇಳೆ ಪಿಐಒಗಳನ್ನು ದಂಡಿಸುವುದು ಸಮಂಜಸವಲ್ಲ'ಎಂದಿದೆ.

ಪಾರ್ಕಿಂಗ್ ಸಮಸ್ಯೆಗೆ ಸಿಗುವುದೇ ಮುಕ್ತಿ? • 5 ವರ್ಷಗಳ ಬಳಿಕ ಕಾಮಗಾರಿ ಪೂರ್ಣ

ವಾಹನ ನಿಲುಗಡೆ ಸಂಕೀರ್ಣ: ಬಳಕೆಗೆ ಕಾಲ ಸನ್ನಿಹಿತ

• ಆದಿತ್ಯ ಕೆ.ಎ.

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಗಾಂಧಿನಗರದ ಸ್ವಾತಂತ್ರ್ಯ ಉದ್ಯಾನದ ಬಳಿ (ಫ್ರೀಡಂ ಪಾರ್ಕ್) ನಿರ್ಮಿಸುತ್ತಿರುವ ಬಹುಮಹಡಿ ವಾಹನಗಳ ನಿಲುಗಡೆ ಸಂಕೀರ್ಣದ ಕಾಮಗಾರಿ ಪೂರ್ಣಗೊಂಡಿದ್ದು, ಸಾರ್ವಜನಿಕರ ಬಳಕೆಗೆ ಲಭಿಸುವ ಕಾಲ ಸನ್ನಿಹಿತವಾಗಿದೆ. ಆಗಸ್ಟ್ ಮೊದಲ ವಾರದಲ್ಲಿ ಈ ಸಂಕೀರ್ಣವನ್ನು ಉದ್ಘಾಟಿಸಲು ಬಿಬಿಎಂಪಿ ತಯಾರಿ ನಡೆಸುತ್ತಿದೆ.

ರಾಜಧಾನಿಯ ಗಾಂಧಿನಗರ ವ್ಯಾಪ್ತಿಯಲ್ಲಿ ದಿನದಿಂದ ದಿನಕ್ಕೆ ವಾಹನಗಳ ಸಂಚಾರ ಹೆಚ್ಚುತ್ತಿದ್ದು, ವಾಹನ ನಿಲುಗಡೆಯ ಸ್ಥಳಕ್ಕೆ ಚಾಲಕರು ಪರದಾಡುತ್ತಿದ್ದಾರೆ.

ಬಹುಮಹಡಿ ಕಟ್ಟಡವು ಸೇವೆಗೆ ಲಭ್ಯವಾದ ಮೇಲೆ ವಿಧಾನಸೌಧ, ಹೈಕೋರ್ಟ್, ಜಿಲ್ಲಾ ನ್ಯಾಯಾಲಯ ಹಾಗೂ ಸಿಟಿ ಸಿವಿಲ್ ಕೋರ್ಟ್, ನಗರ ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕ್ ವೃತ್ತ, ಆರ್‌ಬಿಐ, ಕಂದಾಯ ಭವನ, ಚಿಕ್ಕಪೇಟೆ, ಅರಮನೆ ರಸ್ತೆ, ಕಬ್ಬನ್ ಪಾರ್ಕ್‌ಗೆ ತೆರಳುವವರು ಇಲ್ಲಿ ವಾಹನ ನಿಲುಗಡೆ ಮಾಡಿ ಅವರ ಕೆಲಸಕ್ಕೆ ತೆರಳಬಹುದು. ಈ ವ್ಯಾಪ್ತಿಯಲ್ಲಿ ಪಾರ್ಕಿಂಗ್ ಸಮಸ್ಯೆಯೂ ತಕ್ಕಮಟ್ಟಿಗೆ ಸುಧಾರಣೆ ಕಾಣಬಹುದು ಎಂಬ ನಿರೀಕ್ಷೆ ಬಿಬಿಎಂಪಿ ಹಾಗೂ ಸಂಚಾರ ಪೊಲೀಸರದ್ದು.

ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತ ಬಹುತೇಕ ಸರ್ಕಾರಿ ಕಚೇರಿ ಹಾಗೂ ಕಾಲೇಜುಗಳಿವೆ. ವಾರಾಂತ್ಯ ಹೊರತುಪಡಿಸಿ ಈ ಭಾಗದಲ್ಲಿ ವಾಹನ ದಟ್ಟಣೆ ಹೆಚ್ಚಿರುತ್ತದೆ. ಅದರಲ್ಲೂ ಕೋವಿಡ್ ಬಳಿಕ ಸ್ವಂತ ವಾಹನಗಳಲ್ಲಿ ಸಂಚರಿಸುವವರ ಸಂಖ್ಯೆಯಲ್ಲಿ ಏರಿಕೆಯಾಗಿದ್ದು, ಸಂಚಾರ ವ್ಯವಸ್ಥೆಗೆ ಮತ್ತೊಂದು ರೀತಿಯಲ್ಲಿ ಸವಾಲಾಗಿದೆ. ನಿತ್ಯವೂ ಪ್ರಮುಖ ವೃತ್ತಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ.

ಬಿಬಿಎಂಪಿಯು ನಗರೋತ್ಥಾನ ಯೋಜನೆ ಅಡಿ ₹ 78 ಕೋಟಿ ಅನುದಾನದಲ್ಲಿ ಕಟ್ಟಡ ನಿರ್ಮಿಸಿದೆ. 2017ರಲ್ಲಿ ಕಾಮಗಾರಿ ಆರಂಭಗೊಂಡಿದ್ದು, 2021ರ ಡಿಸೆಂಬರ್‌ಗೆ ಮುಕ್ತಾಯಗೊಳ್ಳಬೇಕಿತ್ತು. ಆದರೆ ಕೋವಿಡ್‌ನಿಂದ ಹಾಗೂ ಕಾಮಗಾರಿ ಸ್ಥಳದಲ್ಲಿ ಬೃಹತ್ ಬಂಡೆ ಸಿಕ್ಕಿದ್ದರಿಂದ ಕಾಮಗಾರಿ ವಿಳಂಬವಾಗಿತ್ತು ಎಂದು ಅಧಿಕಾರಿಗಳು ಹೇಳಿದರು.

‘ಬಿಬಿಎಂಪಿಗೆ ಸೇರಿದ ನಾಲ್ಕನೇ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ ಇದಾಗಿದ್ದು, ಸೋಲಾರ್ ಪ್ಯಾನಲ್ ಅಳವಡಿಕೆ ಕಾಮಗಾರಿ ಮಾತ್ರ ಸ್ವಲ್ಪ ಬಾಕಿಯಿದೆ. ಕಟ್ಟಡದಲ್ಲಿ ಲಿಫ್ಟ್ ವ್ಯವಸ್ಥೆಯಿದೆ. ಸುತ್ತಲೂ ಕಾಂಪೌಂಡ್ ನಿರ್ಮಿಸಿ ಕಬ್ಬಿಣದ ಗ್ರಿಲ್ ಅಳವಡಿಸಲಾಗಿದೆ. ಇದರಿಂದ ವಾಹನಗಳಿಗೆ ಭದ್ರತೆಯೂ ಸಿಗಲಿದೆ. ಪ್ರತ್ಯೇಕ ಶೌಚಾಲಯ ನಿರ್ಮಿಸಲಾಗಿದ್ದು, ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆಗೆ ಬರುವವರು ಬಳಸಿಕೊಳ್ಳಬಹುದು’ ಎಂದು ಬಿಬಿಎಂಪಿಯ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

ಮಳೆ ನೀರು ಸಂಗ್ರಹ ವ್ಯವಸ್ಥೆ: ಕಟ್ಟಡದ ಒಳಭಾಗಕ್ಕೆ ನೈಸರ್ಗಿಕ ಬೆಳಕು ಬರುವಂತೆ ವಿನ್ಯಾಸಗೊಳಿಸಲಾಗಿದೆ. ಮಳೆ ನೀರು ಸಂಗ್ರಹಿಸಿ ಕಟ್ಟಡದ ನಿರ್ವಹಣೆಗೆ ಉಪಯೋಗಿಸುವ ವ್ಯವಸ್ಥೆ ಮಾಡಲಾಗಿದೆ. 1 ಲಕ್ಷ ಲೀಟರ್ ಮಳೆ ನೀರು ಸಂಗ್ರಹ ಸಾಮರ್ಥ್ಯದ ಟ್ಯಾಂಕ್ ವ್ಯವಸ್ಥೆಯಿದ್ದು, ಹೆಚ್ಚುವರಿ ನೀರನ್ನು ಅಗ್ನಿಶಾಮಕ ತುರ್ತು ಸೇವಾ ಇಲಾಖೆ ಅಥವಾ ಸಾರ್ವಜನಿಕರಿಗೆ ನೀಡುವ ಆಲೋಚನೆ ಇದೆ ಎಂದು ಮಾಹಿತಿ ನೀಡಿದರು.

ನಗರದ ಪ್ರಮುಖ ವೃತ್ತದ ಖಾಲಿ ಪ್ರದೇಶದಲ್ಲಿ ಇಂತಹ ಸಂಕೀರ್ಣಗಳನ್ನು ಬಿಬಿಎಂಪಿಯವರು ನಿರ್ಮಿಸಬೇಕು. ಸುಗಮ ವಾಹನ ಸಂಚಾರಕ್ಕೆ ಯೋಜನೆ ರೂಪಿಸುವಂತೆ ಪೊಲೀಸ್ ಇಲಾಖೆಗೂ ಮನವಿ ಮಾಡಲಾಗಿತ್ತು. ನಮ್ಮ ಸಲಹೆಗಳನ್ನು ಪೊಲೀಸರು ಜಾರಿಗೆ ತಂದಿಲ್ಲ. ಇನ್ನು ನಗರದ ಎಲ್ಲೆಂದರಲ್ಲಿ ನಾಲ್ಕೈದು ವರ್ಷಗಳಿಂದ ಹಳೇ ವಾಹನಗಳು ನಿಂತಿವೆ. ಅವುಗಳನ್ನೂ ವಿಲೇವಾರಿ ಮಾಡಬೇಕು ಎಂಬುದು ಆಸ್ಟಿನ್ ರಸ್ತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಒಕ್ಕೂಟದ ಸ್ಥಾಪಕ ಅಧ್ಯಕ್ಷ ಡಿ.ಆರ್. ಪ್ರಕಾಶ್ ಅವರ ಮನವಿ.

ಮುಖ್ಯಾಂಶಗಳು

- ಕಡಿಮೆ ಶುಲ್ಕ ನಿಗದಿಗೆ ಚಾಲಕರ ಮನವಿ
- ₹ 78 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣ
- ಮಳೆ ನೀರು ಸಂಗ್ರಹದ ವ್ಯವಸ್ಥೆ

ಎಷ್ಟು ವಾಹನಗಳು ನಿಲ್ಲಬಹುದು?

556 ಕಾರುಗಳು

445 ದ್ವಿಚಕ್ರವಾಹನಗಳು

ಗಾಂಧಿನಗರದಲ್ಲಿ ಬಿಬಿಎಂಪಿ ನಿರ್ಮಿಸಿರುವ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ.

ಕಟ್ಟಡದ ಒಳ ಆವರಣದ ದೃಶ್ಯ

ಹಣ ಪಾವತಿಸಿ ವಾಹನ ನಿಲುಗಡೆ ಮಾಡುವ ವ್ಯವಸ್ಥೆ ಇದು. ಶುಲ್ಕ ನಿಗದಿ ಸಂಬಂಧ ಟೆಂಡರ್ ಆಹ್ವಾನಿಸಲಾಗಿದೆ. ಬಳಿಕ ದರ ನಿಗದಿ ಪಡಿಸಲಾಗುವುದು.

ಲೋಕೇಶ್
ಮುಖ್ಯ ಎಂಜಿನಿಯರ್, ಬಿಬಿಎಂಪಿ

ವಿದ್ಯುತ್ ಉತ್ಪಾದನೆ

‘ಕಟ್ಟಡದ ಚಾವಣಿಯಲ್ಲಿ ಸೋಲಾರ್‌ನಿಂದ 500 ಕಿಲೋವಾಟ್ ವಿದ್ಯುತ್ ಉತ್ಪಾದಿಸಲಾಗುವುದು. ಲಿಫ್ಟ್ ಹಾಗೂ ಬೆಳಕಿನ ವ್ಯವಸ್ಥೆಗೆ ಇದೇ ವಿದ್ಯುತ್ ಬಳಸಿಕೊಳ್ಳುತ್ತೇವೆ. ಉಳಿದ ವಿದ್ಯುತ್ ಅನ್ನು ಗ್ರಿಡ್‌ಗೆ ಪೂರೈಸಲಾಗುವುದು’ ಎಂದು ಎಂಜಿನಿಯರ್ ಲೋಕೇಶ್ ಹೇಳಿದರು.

ಕಟ್ಟಡದ ಒಂದು ಭಾಗವನ್ನು ಸಾರ್ವಜನಿಕರ ಬಳಕೆಗೆ ನೀಡಬೇಕು. ಅಲ್ಲಿ ವಸ್ತು ಪ್ರದರ್ಶನ, ಸಭೆ ನಡೆಸಲು ಅನುಕೂಲ ಆಗಲಿದೆ. ಈ ಹಿಂದೆಯೇ ಬಿಬಿಎಂಪಿಗೆ ಮನವಿ ಸಲ್ಲಿಸಲಾಗಿತ್ತು.

ಡಿ.ಆರ್.ಪ್ರಕಾಶ್
ಸ್ಥಾಪಕ ಅಧ್ಯಕ್ಷ, ಆಸ್ಟಿನ್ ರಸ್ತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಒಕ್ಕೂಟ

ಭರದಿಂದ ನಡೆಯುತ್ತಿರುವ ಕಾಮಗಾರಿ

ಕೆಲಸದಲ್ಲಿ ಮಗ್ನರಾದ ಕಾರ್ಮಿಕರು

ಗಾಂಧಿನಗರದಲ್ಲಿ ವಾಹನ ಕಳ್ಳರ ಕಾಟ

ಗಾಂಧಿನಗರದ ಸುತ್ತಮುತ್ತ ನಕಲಿ ಕೀ ಬಳಸಿ ದ್ವಿಚಕ್ರ ವಾಹನ ಕಳವು ಮಾಡುವ ಪ್ರಕರಣಗಳು ನಡೆಯುತ್ತಿದ್ದವು. ಬೆಳಿಗ್ಗೆ ರಸ್ತೆಬದಿ ವಾಹನ ನಿಲುಗಡೆ ಮಾಡಿ ತೆರಳಿದ್ದರೆ, ಸಂಜೆ ಬಂದಾಗ ಸ್ಥಳದಲ್ಲಿ ಬೈಕ್‌ಗಳು ಇರುತ್ತಿರಲಿಲ್ಲ. ಪೊಲೀಸರಿಗೆ ದೂರು ನೀಡಿದರೂ ದ್ವಿಚಕ್ರ ವಾಹನಗಳು ಪತ್ತೆ ಆಗುವುದೇ ಅಪರೂಪವಾಗಿತ್ತು. ಮಾಲೀಕರು ನಷ್ಟಕ್ಕೆ ಒಳಗಾಗುತ್ತಿದ್ದರು. ಈ ಕಟ್ಟಡವು ವಾಹನ ಸವಾರರ ಬಳಕೆಗೆ ಲಭಿಸಿದ ಮೇಲೆ ವಾಹನಗಳು ಸುರಕ್ಷಿತವಾಗಿ ಇರಲಿವೆ.

ಸ್ವ–ನಿಧಿ ಮಹೋತ್ಸವ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶಯ

‘ಬೀದಿಬದಿ ವ್ಯಾಪಾರಿಗಳ ಕೈ ಆಕಾಶ ನೋಡದಿರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೀದಿಬದಿ ವ್ಯಾಪಾರಿಗಳ ಕೈ ಭೂಮಿಯನ್ನೇ ನೋಡಬೇಕು, ಆಕಾಶ ನೋಡಬಾರದು. ಇದೇ ನಮ್ಮ ಆಶಯ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಎಲ್ಲಿ ಆರ್ಥಿಕ ಸ್ವಾವಲಂಬನೆ ಇರುತ್ತದೆಯೋ ಅಲ್ಲಿ ಸ್ವಾಭಿಮಾನ ಇರುತ್ತದೆ. ಮೀಟರ್ ಬಡ್ಡಿ ತೆಗೆದುಕೊಳ್ಳದೆ ನೇರವಾಗಿ ಸರ್ಕಾರ ನೆರವು ನೀಡಿ, ಅವರು ಆರ್ಥಿಕ ಸ್ವಾವಲಂಬಿಗಳಾಗುವಂತೆ ಮಾಡಲು ಪ್ರಧಾನಮಂತ್ರಿ ನರೇಂದ್ರ ಮೋದಿ ಸ್ವನಿಧಿ ಯೋಜನೆ ಜಾರಿಗೆ ತಂದಿದ್ದಾರೆ’ ಎಂದರು.

ಬೀದಿಬದಿ ವ್ಯಾಪಾರಿಗಳಿಗೆ ಬಿಬಿಎಂಪಿ ಆಯೋಜಿಸಿದ್ದ ಸ್ವ–ನಿಧಿ ಮಹೋತ್ಸವ ಸಮಾರೋಪದಲ್ಲಿ ಸೋಮವಾರ ಮಾತನಾಡಿದ ಅವರು, ‘ಯುವಕರಿಗಾಗಿ ಮುದ್ರಾ, ಸ್ತ್ರೀಶಕ್ತಿ ಸಂಘಗಳಿಗೆ ನೇರವಾಗಿ ಹಣಕಾಸು ನೆರವನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಅದೇ ರೀತಿ ಬೀದಿಬದಿ ವ್ಯಾಪಾರಿಗಳಿಗೆ ನೆರವು ನೀಡಲು ಸ್ವನಿಧಿ ಜಾರಿಗೆ ತರಲಾಗಿದೆ’ ಎಂದರು.

‘ಬೀದಿ ವ್ಯಾಪಾರಿಗಳಿಗೆ ಮೂರು ಹಂತದಲ್ಲಿ ಹಣ ನೀಡಲಾಗುತ್ತದೆ. ಅವರಲ್ಲಿ ಸ್ವಾವಲಂಬನೆ ತರಲು ಈ ರೀತಿ ಹಂತವಾಗಿ ಹಣ ನೀಡಲಾಗುತ್ತದೆ. ಸಬ್ಸಿಡಿ ಕೂಡ ಸಿಗುತ್ತದೆ. ಸಾಹುಕಾರರು ಬಂಡವಾಳದಿಂದ ಬ್ಯಾಂಕ್‌ನಿಂದ ಸಾಲ ಪಡೆದು ಉದ್ದಿಮೆ ಸ್ಥಾಪಿಸುತ್ತಾರೆ. ಆದರೆ ನೀವು ಬಂಡವಾಳ ಇಲ್ಲದಿದ್ದರೂ ಹಗಲು–ರಾತ್ರಿ ದುಡಿದು ಆರ್ಥಿಕವಾಗಿ ಸಬಲರಾಗುತ್ತೀರಿ. ತೆರಿಗೆ ನೀಡುತ್ತೀರಿ. ನಿಮ್ಮಿಂದ ದೇಶ ಆರ್ಥಿಕವಾಗಿ ವೃದ್ಧಿಯಾಗುತ್ತಿದೆ‘ ಎಂದು ಹೊಗಳಿದರು.

‘ರಸ್ತೆ ಅಭಿವೃದ್ಧಿಗೆ ಹೆಚ್ಚು ಹಣ ನೀಡಿದರೆ, ಕೆಳ ಹಂತದಲ್ಲಿ ಡಾಂಬರು ಹಾಕುವವರು ಇರುತ್ತಾರಲ್ಲ ಅವರಿಗೆ ಅನುಕೂಲವಾಗುತ್ತದೆ’ ಎಂದರು.

‘1.86 ಲಕ್ಷ ಜನರಿಗೆ ಸ್ವ–ನಿಧಿ ಯೋಜನೆ ಜಾರಿಗೆಯಾಗಬೇಕು. 70 ಸಾವಿರ ಜನರಿಗೆ ನೀಡಿದ್ದೇವೆ. ಹೀಗಾಗಿ ಎಲ್ಲ ಕಡೆಗೆ ಹೋಗಿ ಅಧಿಕಾರಿಗಳು ಟೆಂಟ್ ಹಾಕಿಕೊಂಡು ಪ್ರಚಾರ ಮಾಡಿ, ಸಾಲ ಕೊಡಿ’ ಎಂದು ಸೂಚಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಪಿ.ಎಂ ಸ್ವ–ನಿಧಿ ಯೋಜನೆಯ ಕುರಿತು ಪ್ರಧಾನಿಯೇ ಸಂದೇಶ ಕಳುಹಿಸಿದ್ದರು. ಯೋಜನೆ ಪರಿಚಯಿಸುವ 40 ಬೋರ್ಡ್‌ಗಳಿದ್ದವು. ಅವುಗಳಲ್ಲಿ ಸಾಂಕೇತಿಕವಾಗಿ 9 ಅನ್ನು ಬೀದಿ ಬದಿ ವ್ಯಾಪಾರಿಗಳಿಗೆ ವಿತರಿಸಲಾಯಿತು.

ಸಾಲದ ಮೇಳ: ಸ್ವ–ನಿಧಿ ಮಹೋತ್ಸವದಲ್ಲಿ ಆಯೋಜಿಸಲಾಗಿದ್ದ ಸಾಲ ಮೇಳದಲ್ಲಿ 1,164 ಬೀದಿ ಬದಿ ವ್ಯಾಪಾರಿಗಳಿಂದ ಅರ್ಜಿ ಸ್ವೀಕರಿಸಲಾಗಿದ್ದು, ಮೊದಲನೇ ಕಂತಿನಲ್ಲಿ ತಲಾ ₹10 ಸಾವಿರ ಮಂಜೂರು ಮಾಡಲಾಗಿದೆ. ಸಂಸದ ಪಿ.ಸಿ. ಮೋಹನ್, ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇದ್ದರು.

ಸ್ವ–ನಿಧಿ ಮಹೋತ್ಸವದಲ್ಲಿ ಸೇರಿದ್ದ ಜನ ಪ್ರಜಾವಾಣಿ ಚಿತ್ರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹಬ್ಬದ ವಾತಾವರಣ

ಸ್ವ–ನಿಧಿ ಮಹೋತ್ಸವದಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಅವರ ಸೌಲಭ್ಯಗಳ ಮಾಹಿತಿ ಒದಗಿಸುವುದು ಒಂದೆಡೆಯಾದರೆ, ಅವರ ಕುಟುಂಬದವರಿಗೆ ಪ್ರತಿಭೆ ಅನಾವರಣಗೊಳಿಸುವ ವೇದಿಕೆ ಸೃಷ್ಟಿಯಾಗಿತ್ತು. ಹಾಡು, ನೃತ್ಯ, ಅಭಿನಯ, ರಂಗೋಲಿ... ಹೀಗೆ ಎಲ್ಲ ರೀತಿಯ ಪ್ರತಿಭೆ ಅನಾವರಣಕ್ಕೆ ಅವಕಾಶ ಇತ್ತು. ಜೊತೆಗೆ ಬಹುಮಾನವನ್ನೂ ನೀಡಲಾಯಿತು.

ಗಾಜಿನ ಮನೆ ವೇದಿಕೆ ಕಾರ್ಯಕ್ರಮ ಕಳೆಗಟ್ಟಿತ್ತು. ಅದರ ಎದುರಿನ ವಾಹನ ನಿಲುಗಡೆ ಪ್ರದೇಶ ಬೀದಿಬದಿ ವ್ಯಾಪಾರಿಗಳ ಆಹಾರೋತ್ಸವಕ್ಕೆ ಮೀಸಲಾಗಿತ್ತು. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಡೋಲು ಬಡಿದು ಕಾರ್ಯಕ್ರಮ ಉದ್ಘಾಟಿಸಿದರು. ಒಟ್ಟಾರೆ ಬಿಬಿಎಂಪಿ ಕೇಂದ್ರ ಕಚೇರಿಯ ಆವರಣದಲ್ಲಿ ಬೀದಿಬದಿ ವ್ಯಾಪಾರಿಗಳು ಹಿಂದೆಂದೂ ಕಾಣದ ಹಬ್ಬದ ಸಂಭ್ರಮದಲ್ಲಿ ಮುಳುಗಿದ್ದರು.

ಕನ್ನಡದ ನಮಸ್ಕಾರ

ಬೀದಿಬದಿ ವ್ಯಾಪಾರಿಗಳ ಸ್ವ–ನಿಧಿ ಮಹೋತ್ಸವದ ಸಮಾರೋಪದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ‘ಕನ್ನಡದ ನಮಸ್ಕಾರ’ ಮಾಡಿದರು.

ಸಮಾರೋಪ ಸಮಾರೋಪದಲ್ಲಿ ಭಾಷಣ ಆರಂಭಿಸಿದ ಮುಖ್ಯಮಂತ್ರಿ, ‘ಎಲ್ಲರಿಗೂ ನಮಸ್ಕಾರ’ ಎಂದರು. ಚಪ್ಪಾಳೆ ಶಬ್ದ ಅಷ್ಟಾಗಿ ಕೇಳಲಿಲ್ಲ. ಮುಂದುವರಿದ ಸಿ.ಎಂ, ‘ಎಲ್ಲರಿಗೂ ಕನ್ನಡದ ನಮಸ್ಕಾರ’ ಎಂದರು. ಆಗ ಚಪ್ಪಾಳೆ ಶಬ್ದ ಹೆಚ್ಚಾಯಿತು.

ನಗರದಲ್ಲಿ ಇಂದು

ಗಾಂಧಿ ಅಧ್ಯಯನ ಕೇಂದ್ರದ ಉದ್ಘಾಟನೆ: ಅತಿಥಿಗಳು: ವೂಡೇ.ಪಿ. ಕೃಷ್ಣ, ಎನ್. ಎಸ್. ಸತೀಶ್, ಅಧ್ಯಕ್ಷತೆ: ಜಿಯಾ ಉಲ್ಲಾ ಷರೀಫ್, ಆಯೋಜನೆ ಮತ್ತು ಸ್ಥಳ: ಅಬ್ಬಾಸ್ ಖಾನ್ ಪದವಿ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಓಟಿಸಿ ಅಡ್ಡರಸ್ತೆ, ಕಬ್ಬನ್‌ಪೇಟೆ, ಬೆಳಿಗ್ಗೆ 11.30

ಸರಿತಾ ಸುಂದರ್ ಅವರ ‘ಫ್ರಮ್ ದಿ ಫ್ರೂಗಲ್ ಟು ದಿ ಆರ್ನೇಟ್–ಎ ಸ್ಟೋರಿ ಆಫ್ ದಿ ಸೀಟ್ ಇನ್ ಇಂಡಿಯಾ’ ಪುಸ್ತಕ ಬಿಡುಗಡೆ: ಅತಿಥಿಗಳು: ವೃಂದಾ ಪಥಾರೆ, ಆಯೋಜನೆ: ಗಾದ್ರೇಜ್ ಆರ್ಕೈವ್ಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

‘ಸಂಗ್ರಹ ರಾಮಾಯಣ’ ಪ್ರವಚನ: ಪ್ರಸ್ತುತಿ: ಅಬ್ಬೂರು ಬದರಿ ಆಚಾರ್, ಭಜನೆ: ಬಸವೇಶ್ವರನಗರದ ಅಲಕಾನಂದ ಭಜನಾ ಮಂಡಳಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀರಾಮಚಂದ್ರ ಸ್ವಾಮಿ ದೇವಸ್ಥಾನ, 4ನೇ ಮುಖ್ಯರಸ್ತೆ, ಶ್ರೀರಾಮಪುರ, ಸಂಜೆ 6

ರಂಗ ಸಂಪನ್ನರಿಗೆ ರಂಗಗೌರವ: ಅತಿಥಿಗಳು: ಎಂ.ಎಸ್. ಸತ್ಯು, ‘ಅಮ್ಮಾವ್ರ ಗಂಡ’ ನಾಟಕ ಪ್ರದರ್ಶನ: ಟಿ.ಪಿ. ಕೈಲಾಸಂ, ನಿರ್ದೇಶನ: ಕೆ.ಪಿ. ಅಶ್ವತ್ಥನಾರಾಯಣ, ಆಯೋಜನೆ: ಎಂ.ಇ.ಎಸ್. ರಂಗಶಾಲೆ, ಸ್ಥಳ: ಎಂ.ಇ.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಭಾಂಗಣ, ಮಲ್ಲೇಶ್ವರ, ಸಂಜೆ 6

ಎಂ.ಎಸ್.ಸತ್ಯು

‘ಕಾಲೇಜಿನೆಡೆಗೆ ಕನ್ನಡ’ ಉಪನ್ಯಾಸ ಮಾಲೆ–32: ವಿಷಯ: ಸಾಹಿತ್ಯ ಮತ್ತು ಸಂಸ್ಕೃತಿ, ಸಂಪನ್ಮೂಲ ವ್ಯಕ್ತಿ: ಸುಬ್ರಮಣ್ಯಸ್ವಾಮಿ, ಅಧ್ಯಕ್ಷತೆ: ಎಸ್. ಹರೀಶ್, ಉಪಸ್ಥಿತಿ: ಎಂ. ನರಸಿಂಹ, ನಾ.ಗೀತಾಚಾರ್ಯ, ಆಯೋಜನೆ: ಉದಯಭಾನು ಕಲಾಸಂಘ, ವಿಜಯ ಸಂಜೆ ಕಾಲೇಜು, ಸ್ಥಳ: ವಿಜಯ ಸಂಜೆ ಕಾಲೇಜಿನ ಸಭಾಂಗಣ, ಬಸವನಗುಡಿ, ಸಂಜೆ 7

ರಂಗನಾಥ ಶರ್ಮಾ ಪ್ರಶಸ್ತಿಗೆ ರಾಮಸಿಂಗ್ ಆಯ್ಕೆ

ಬೆಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಹಾಗೂ ರಂಗನಾಥ ಶರ್ಮಾ ಪ್ರತಿಷ್ಠಾನದ ವತಿಯಿಂದ ನೀಡುವ ‘ರಂಗನಾಥ ಶರ್ಮಾ ಪ್ರಶಸ್ತಿ’ಗೆ ವಿಜಯಪುರದ ರಾಮಸಿಂಗ್ ರಜಪೂತ್ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದೆ.

ರಾಮಸಿಂಗ್ ರಜಪೂತ್ ಅವರಿಗೆ ಸಂಸ್ಕೃತ ಭಾಷೆಯ ಅಧ್ಯಯನ ಮತ್ತು ಕೊಡುಗೆಗಾಗಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಪತ್ರ ಮತ್ತು ಸರಸ್ವತಿ ಮೂರ್ತಿಯನ್ನು ಒಳಗೊಂಡಿರಲಿದೆ. ಇದೇ 24ರಂದು ವಿಜಯಪುರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಕಾರ್ಯದರ್ಶಿ ರಘುನಂದನ ಭಟ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಚಿತ್ರಾವಳಿ

ಅಮೆರಿಕದ ಫಿಲಡೆಲ್ಫಿಯಾದ ಥಾಮಸ್ ಜಫರ್ಸನ್ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿದ ಹಿನ್ನೆಲೆಯಲ್ಲಿ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಹಾಗೂ ಅವರ ಪತ್ನಿ ಆಶಾ ಅವರನ್ನು ಬೆಳಗಾವಿಯಲ್ಲಿ ಕೆಎಲ್‌ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ಕೆಹೆರ್) ವತಿಯಿಂದ ಸನ್ಮಾನಿಸಲಾಯಿತು

ಪೀಣ್ಯ ದಾಸರಹಳ್ಳಿ ಸಮೀಪದ ರಾಜಗೋಪಾಲನಗರ ವಾರ್ಡ್‌ನ ಜಿ.ಕೆ. ಡಬ್ಲ್ಯು ಬಡಾವಣೆಯಲ್ಲಿ ಸಹಾಯಹಸ್ತ ಸೇವಾ ಟ್ರಸ್ಟ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಅಧ್ಯಕ್ಷೆ ಭಾಗ್ಯಲಕ್ಷ್ಮಿ, ಜೆಡಿಎಸ್ ಮುಖಂಡರಾದ ಅಂದಾನಪ್ಪ, ರುದ್ರೇಗೌಡ, ಮುನೇಗೌಡ, ಗೋಪಾಲ್, ರೇಣುಕಾ ಪ್ರಸಾದ್ ಇದ್ದರು.

ಐಎಸ್‌ಐಗೆ ಮಾಹಿತಿ ಹಂಚಿಕೆ ಆರೋಪ: ಜಾಮೀನು ನಿರಾಕರಣೆ

ಬೆಂಗಳೂರು: ಪಾಕಿಸ್ತಾನದ ಐಎಸ್‌ಐ ಜೊತೆ ಭಾರತೀಯ ನೌಕಾದಳದ ಮಾಹಿತಿ ಹಂಚಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ಬಂಧನದಲ್ಲಿರುವ ಜಿತೇಂದರ್ ಸಿಂಗ್ ಎಂಬುವರಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಜಾಮೀನು ಕೋರಿ ನಗರದ ಕಾಟನ್ ಪೇಟೆಯ ಜೊಲ್ಲಿ ಮೊಹಲ್ಲಾದ ಜಿತೇಂದರ್ ಸಿಂಗ್ (24) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ‘ಇದು ದೇಶದ ಸಮಗ್ರತೆ ಹಾಗೂ ಸೌರ್ವಭೌಮತ್ವಕ್ಕೆ ಸಂಬಂಧಿಸಿದ ವಿಷಯವಾಗಿದೆ. ಜಾಮೀನು ನೀಡಿದರೆ ಇದರಿಂದ ದುಷ್ಪರಿಣಾಮವಾಗುವ ಸಾಧ್ಯತೆಯಿದೆ’ ಎಂದು ಅಭಿಪ್ರಾಯಪಟ್ಟಿದೆ.

ವಿಚಾರಣೆ ವೇಳೆ ಆರೋಪಿ ಪರ ವಕೀಲ ಗೋಪಾಲ ಸಿಂಗ್, 'ಸಿಂಗ್ ಅಮಾಯಕ. ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ. ಸಾಮಾಜಿಕ ಜಾಲತಾಣದ ಮೂಲಕ ಪಾಕಿಸ್ತಾನದ ಪೂಜಾ ಎಂಬಾಕೆಯೊಂದಿಗೆ ಕೇವಲ ಚಾಟ್ ಮಾಡಿದ್ದಾನೆ. ಆಕೆಯ ಪ್ರೀತಿ ಗಳಿಸಲು ಭಾರತೀಯ ಸೇನಾ ಸಮವಸ್ತ್ರ ಧರಿಸಿ ಸೈನಿಕ ಎಂದು ಬಿಂಬಿಸಿಕೊಂಡಿದ್ದಾನೆ. ಸಮವಸ್ತ್ರ ಮತ್ತು ಹಂಚಿಕೊಂಡ ಫೋಟೊ ಹೊರತುಪಡಿಸಿ ಆರೋಪವನ್ನು ಪುಷ್ಟೀಕರಿಸುವ ಬೇರಾವುದೇ ದಾಖಲೆಗಳಿಲ್ಲ. ಹಾಗಾಗಿ, ಜಾಮೀನು ನೀಡಬೇಕು' ಎಂದು ಕೋರಿದ್ದರು.

ಆದರೆ, ಇದನ್ನು ನಿರಾಕರಿಸಿರುವ ನ್ಯಾಯಪೀಠ, 'ಅರ್ಜಿದಾರ ಸಂಗ್ರಹಿಸಿ ಹಂಚಿಕೊಂಡಿರುವ ಮಾಹಿತಿ ಭಾರತದ ಸುರಕ್ಷತೆ ಮತ್ತು ಭದ್ರತೆ ದೃಷ್ಟಿಯಿಂದಲೂ ಅತ್ಯಂತ ಅಪಾಯಕಾರಿಯಾಗಿದೆ' ಎಂದು ಹೇಳಿದೆ. ರಾಜ್ಯ ಪ್ರಾಸಿಕ್ಯೂಷನ್ ಪರ ವಕೀಲೆ ರಶ್ಮಿ ಜಾಧವ್ ವಾದ ಮಂಡಿಸಿದರು.

ಪ್ರಕರಣವೇನು?: ‘ಜಿತೇಂದರ್ ಸಿಂಗ್ ಸೇನಾ ಸಮವಸ್ತ್ರ ಧರಿಸಿಕೊಂಡು ನೌಕಾ ದಳಕ್ಕೆ ಸಂಬಂಧಿಸಿದಂತೆ ಫೋಟೊ ಹಾಗೂ ಇತರೆ ಮುಖ್ಯ ಮಾಹಿತಿ ಸಂಗ್ರಹಿಸಿ ಪಾಕಿಸ್ತಾನದ ಐಎಸ್‌ಐಗೆ ರವಾನಿಸಿದ್ದಾರೆ’ ಎಂದು ಆರೋಪಿಸಿ ಸಿಸಿಬಿ ಪೊಲೀಸ್ ಇನ್‌ಸ್ಪೆಕ್ಟರ್ 2021ರ ಸೆಪ್ಟೆಂಬರ್ 19 ರಂದು ಕಾಟನ್ ಪೇಟೆ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಸಿಂಗ್ ಅವರನ್ನು 2021ರ ನವೆಂಬರ್ 19ರಂದು ಬಂಧಿಸಲಾಗಿತ್ತು.

पंजाब नैशनल बैंक ...भरोसे का प्रतीक !
punjab national bank ...the name you can BANK upon !

ಜೋನಲ್ ಶಸ್ತ್ರ ಸೆಂಟರ್, ಹೆಮ್ ಬರುವಾ ರೋಡ್, ಪಾನ್‌ಬಜಾರ್, ಗುವಾಹಟಿ, ಪಿನ್–781001, ಮೊಬೈಲ್ ನಂ. +91–9864017377, ಇ–ಮೇಲ್ ಐಡಿ: zs8346@pnb.co.in

ಸ್ಥಿರಾಸ್ತಿಗಳ ಮಾರಾಟ ಕುರಿತಾದ ಮಾರಾಟ ಪ್ರಕಟಣೆ

ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಅನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(6) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟ ಕುರಿತಾದ ಇ–ಹರಾಜು ಮಾರಾಟ ಪ್ರಕಟಣೆ.
ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ತಿಳಿಸುವುದು ಏನೆಂದರೆ, ಇಲ್ಲಿ ಕೆಳಗೆ ವಿವರಿಸಲಾಗಿರುವ ಸ್ಥಿರ ಸ್ವತ್ತು ಸೆಕ್ಯೂರ್ಡ್ ಕ್ರೆಡಿಟರ್‌ರವರಿಗೆ ಈಡು/ಅಡಮಾನ ನೀಡಲ್ಪಟ್ಟಿದ್ದು, ಬ್ಯಾಂಕ್‌ನ ಅಧಿಕೃತ ಅಧಿಕಾರಿ/ಸೆಕ್ಯೂರ್ಡ್ ಕ್ರೆಡಿಟರ್ ಇವರಿಂದ ಸದರಿ ಅಡಮಾನ ಸ್ವತ್ತನ್ನು ತಮ್ಮ ರಚನಾತ್ಮಕ/ಭೌತಿಕ/ಸಾಂಕೇತಿಕ ಸ್ವಾಧೀನತೆಗೆ ಪಡೆದುಕೊಳ್ಳಲಾಗಿದೆ ಮತ್ತು ಸಾಲಗಾರರು ಹಾಗೂ ಜಾಮೀನುದಾರರಿಂದ ಬ್ಯಾಂಕ್‌ಗೆ/ಸೆಕ್ಯೂರ್ಡ್ ಕ್ರೆಡಿಟರ್‌ಗೆ ಸಂದಾಯ ಆಗಬೇಕಿರುವ ಬಾಕಿಮೊತ್ತವನ್ನು ವಸೂಲಾತಿ ಮಾಡಿಕೊಳ್ಳಲೆಂದು, ಸದರಿ ಸ್ವಾಧೀನ ಸ್ವತ್ತನ್ನು "ಹೇಗಿದೆಯೊ ಎಲ್ಲಿದೆಯೊ", "ಹೇಗಿದೆಯೊ ಏನಿದೆಯೊ" ಮತ್ತು "ಅಲ್ಲಿ ಏನೇನಿದೆಯೊ" ಆಧಾರದಲ್ಲಿ ಕೆಳಗಿನ ಕೋಷ್ಟದಲ್ಲಿ ನಮೂದಿಸಿರುವ ದಿನಾಂಕದಂದು ಮಾರಾಟ ಮಾಡಲಾಗುತ್ತಿದೆ. ಮೀಸಲು ಬೆಲೆ ಮತ್ತು ಭದ್ರತಾ ಠೇವಣಿಮೊತ್ತದ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ಸ್ವತ್ತುಗಳ ಎದುರಿಗೆ ಅನುಕ್ರಮವಾಗಿ ಉಲ್ಲೇಖಿಸಲಾಗಿದೆ.

ಭದ್ರತಾ ಸ್ವತ್ತುಗಳ ಷೆಡ್ಯೂಲ್

ಲಾಟ್ ನಂ	ಶಾಖೆಯ ಹೆಸರು / ಅಕೌಂಟ್‌ನ ಹೆಸರು / ಸಾಲಗಾರ/ಜಾಮೀನುದಾರ ಖಾತೆಯ ಹೆಸರು ಮತ್ತು ವಿಳಾಸ	ಅಡಮಾನ ನೀಡಲ್ಪಟ್ಟಿರುವ ಸ್ಥಿರ ಸ್ವತ್ತುಗಳ ವಿವರ/ಮಾಲಿಕರ ಹೆಸರು (ಸ್ವತ್ತಿನ ಅಡಮಾನದಾರ)	ಎ) ಸರ್ಫಾಯಸಿ ಕಾಯ್ದೆ, 2002ರ ಸೆಕ್ಷನ್ 13(2) ಅಡಿಯಲ್ಲಿನ ಡಿಮಾಂಡ್ ನೋಟಿಸ್ ದಿನಾಂಕ ಬಿ) 31–10–2018ರಂತೆಗಿನ ಒಟ್ಟು ಬಾಕಿಮೊತ್ತ ಸಿ) ಸರ್ಫಾಯಸಿ ಕಾಯ್ದೆ, 2002ರ ಸೆಕ್ಷನ್ 13(4) ಅಡಿಯಲ್ಲಿ ಸ್ವಾಧೀನತಾ ದಿನಾಂಕ ಡಿ) ಸ್ವಾಧೀನತೆಯ ಸ್ವರೂಪ ಸಾಂಕೇತಿ/ಭೌತಿಕ/ರಚನಾತ್ಮಕ	ಎ) ಮೀಸಲು ಬೆಲೆ (ಲಕ್ಷ ರೂ.ಗಳಲ್ಲಿ) ಬಿ) ಇಎಂಡಿ (ಇಎಂಡಿ ಸಲ್ಲಿಸುವ ಕೊನೆಯ ದಿನಾಂಕ) ಸಿ) ಬಿಡ್ ಹೆಚ್ಚಳ ಮೊತ್ತ	ಇ–ಹರಾಜು ದಿನಾಂಕ ಮತ್ತು ಸಮಯ	ಸೆಕ್ಯೂರ್ಡ್ ಕ್ರೆಡಿರ್‌ಗೆ ತಿಳಿದಿರುವ ಋಣಭಾರಗಳ ವಿವರ
1	ಫ್ಯಾನ್ಸಿ ಬಜಾರ್, ಗುವಾಹಟಿ / ಮೆ. ನಾರ್ಥ್ ಈಸ್ಟ್ ರೀಜನ್ ಹೌಸಿಂಗ್ ಫೈನಾನ್ಸ್ ಕಂಪನಿ ಲಿಮಿಟೆಡ್ / ಕಾರ್ಪೊರೇಟ್ ಕಚೇರಿ: ಎಂ ಬ್ಲಾಕ್, ಪ್ಲಾಟ್ ನಂ.2, ನೆಲಮಹಡಿ, ಜಿಮ್ ಪ್ಲಾಜಾ, ಲೋಕಲ್ ಶಾಪಿಂಗ್ ಸೆಂಟರ್, ವಿಕಾಸಪುರಿ, ಕೇರಳ ಸ್ಕೂಲ್ ಎದುರು, ನವದೆಹಲಿ–110018. ನೋಂದಾಯಿತ ಕಚೇರಿ: ರೂಮ್ ನಂ.2ಬಿ, ಟಾಪ್ ಫ್ಲೋರ್, ಮಿಲ್ಲೇನಿಯಂ ಸೆಂಟರ್, ದಾವರಪುಯಿ, ಐಜ್ವಾಲ್, ಮಿಜೋರಾಮ್–796001.	ಶ್ರೀ. ಕೆಯಿಶಿಂಗ್ ಜೇಮ್ಸ್ ಬಿನ್ ಲೇಟ್ ಕೆ. ಲೂಯಿಸ್ ರವರ ಮಾಲಿಕತ್ವದಲ್ಲಿರುವ ಮತ್ತು ಪಾಮ್‌ಗ್ರೋವ್ ರೋಡ್, ವಾರ್ಡ್ ನಂ.76, ಬೆಂಗಳೂರು, ಕರ್ನಾಟಕ ವಿಳಾಸದಲ್ಲಿರುವ, ಮುನಿಸಿಪಲ್ ನಂ.5 (ಹಳೆಯ ನಂ.6) ಹೊಂದಿರುವ, ಪೂರ್ವ–ಪಶ್ಚಿಮ: 130 ಅಡಿ ಮತ್ತು ಉತ್ತರ–ದಕ್ಷಿಣ: 70 ಅಡಿ, ಒಟ್ಟಾರೆ 9100 ಚ.ಅ. ವಿಸ್ತೀರ್ಣದ ಸ್ವತ್ತಿನಲ್ಲಿ ನಿರ್ಮಿಸಲಾಗಿರುವ "ಸಲಾರ್‌ಪುರಿಯಾ ಲಾವಣ್ಯ ರೆಸಿಡೆನ್ಸಿ" ಎಂಬ ಅಪಾರ್ಟ್‌ಮೆಂಟ್ ಕಟ್ಟಡದ ಮೊದಲನೇ ಮಹಡಿಯಲ್ಲಿರುವ ನಂ.ಜಿ–1 ಹೊಂದಿರುವ ಮೂರು ಬೆಡ್‌ರೂಮ್‌ಗಳುಳ್ಳ, 2750 ಚ.ಅ. ಸೂಪರ್ ಬಿಲ್ಟಪ್ ಪ್ರದೇಶವುಳ್ಳ (ಇದರಲ್ಲಿ ಬಾಲ್ಕನಿಗಳು ಮತ್ತು ಕಾಮನ್ ಏರಿಯಾಗಳು ಕೂಡ ಸೇರಿರುತ್ತವೆ) ಅಪಾರ್ಟ್‌ಮೆಂಟ್ ಜೊತೆಗೆ 580 ಚ.ಅ. ಗಾರ್ಡನ್ ಏರಿಯಾ ಮತ್ತು ಬೇಸ್‌ಮೆಂಟ್‌ನಲ್ಲಿ ಒಂದು ಕಾರ್ ಸ್ಪೇಸ್ ಹಾಗೂ ಜಮೀನಿನಲ್ಲಿ 15% ಪಾಲು (1365 ಚ.ಅ.) ಅವಿಭಜಿತ ಪಾಲುದಾರಿಕೆ ಸಮೇತ, ಅಪಾರ್ಟ್‌ಮೆಂಟ್‌ನ ಎಲ್ಲಾ ಭೂಭಾಗಗಳ ಇಕ್ವಿಟೇಬಲ್ ಮಾರ್ಟ್‌ಗೇಜ್. (ದಿನಾಂಕ 26/09/2002ರ ನೋಂದಾಯಿತ ಸೇಲ್ ಡೀಡ್ ನಂ. 3091/2002 ಮೇರೆಗಿನ ವಿವರ) (ಪ್ರಾಪರ್ಟಿ ಐಡಿ– PUNBBPA01125736)	ಎ) 29–11–2018 ಬಿ) 31.10.2018ರಂತೆಗಿನ ರೂ.15,46,95,333.68 ಜೊತೆಗೆ 01.11.2018 ರಿಂದ ಅನ್ವಯಿಕ ಭವಿಷ್ಯದ ಬಡ್ಡಿ ಹಾಗೂ ಇನ್ನಿತರ ಶುಲ್ಕಗಳು. ಸಿ) 21.11.2019 ಡಿ) ಸಾಂಕೇತಿಕ ಸ್ವಾಧೀನತೆ	ಎ) ರೂ.250.10 ಲಕ್ಷ ಬಿ) ರೂ.25.01 ಲಕ್ಷ (24.08.2022 ರಂದು ಸಂಜೆ 4 ಗಂಟೆವರೆಗೆ) ಸಿ) ರೂ.0.50 ಲಕ್ಷ	ದಿನಾಂಕ: 25.08.2022 ರಂದು ಬೆಳಗ್ಗೆ 11:00 ರಿಂದ ಸಂಜೆ 04:00 ಗಂಟೆ	ತಿಳಿದಿರುವುದಿಲ್ಲ

ಷರತ್ತು ಮತ್ತು ನಿಬಂಧನೆಗಳು:
ಸದರಿ ಮಾರಾಟವು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರಲ್ಲಿ ವಿವರಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ಕೆಳಕಂಡ ಹೆಚ್ಚುವರಿ ಷರತ್ತುಗಳ ನಿಬಂಧನೆಗೆ ಒಳಪಡುತ್ತದೆ:
1. ಸ್ವತ್ತುಗಳನ್ನು "ಹೇಗಿದೆಯೊ ಎಲ್ಲಿದೆಯೊ ಆಧಾರದಲ್ಲಿ" ಮತ್ತು "ಹೇಗಿದೆಯೊ ಏನಿದೆಯೊ ಆಧಾರದಲ್ಲಿ" ಮತ್ತು "ಅಲ್ಲಿ ಏನೇನಿದೆಯೊ ಆಧಾರದಲ್ಲಿ" ಮಾರಾಟ ಮಾಡಲಾಗುತ್ತದೆ.
2. ಅಧಿಕೃತ ಅಧಿಕಾರಿಯ ಉತ್ತಮ ತಿಳುವಳಿಕೆಯ ಆಧಾರದ ಮೇರೆಗೆ ಮೇಲ್ಕಂಡ ಷೆಡ್ಯೂಲ್‌ನಲ್ಲಿ ಭದ್ರತಾ ಸ್ವತ್ತುಗಳ ಮಾಹಿತಿಯನ್ನು ವಿವರವಾಗಿ ಉಲ್ಲೇಖಿಸಲಾಗಿರುತ್ತದೆ. ಅದಾಗ್ಯೂ ಸದರಿ ಮಾಹಿತಿಯಲ್ಲಿ ಯಾವುದೇ ದೋಷ, ತಪ್ಪು ಅಥವಾ ನ್ಯೂನತೆಗಳು ಕಂಡುಬಂದಲ್ಲಿ, ಅವುಗಳಿಗೆ ಅಧಿಕೃತ ಅಧಿಕಾರಿಯು ಹೊಣೆಯಾಗಿರುವುದಿಲ್ಲ.
3. ದಿನಾಂಕ 25.08.2022 ರಂದು ಬೆಳಗ್ಗೆ 11:00 ಗಂಟೆಗೆ https://www.mstcecommerce.com ವೆಬ್‌ಸೈಟ್‌ನಲ್ಲಿರುವ ಇ–ಹರಾಜು ವೇದಿಕೆ ಮುಖಾಂತರ ಈ ಕೆಳಗೆ ಸಹಿ ಹಾಕಿರುವವರು ಸದರಿ ಮಾರಾಟವನ್ನು ಕೈಗೊಳ್ಳುತ್ತಾರೆ.
4. ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ಸಂದರ್ಶಿಸಿ https://www.ibapi.in, http://www.mstcecommerce.com, https://eprocure.gov.in/epublish/app&www.pnbindia.in

ದಿನಾಂಕ: 19–07–2022, ಸ್ಥಳ: ಗುವಾಹಟಿ
ಅಧಿಕೃತ ಅಧಿಕಾರಿ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಸೆಕ್ಯೂರ್ಡ್ ಕ್ರೆಡಿಟರ್

ಕ್ಷೇಮ ಕುಶಲ

EXAM DH ಪ್ರಜಾವಾಣಿ MASTERMIND
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಓ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಕಾಯಿಲೆಯ ಭೀತಿಯೂ ಕಾಯಿಲೆಯೇ!

ಡಾ. ಕಿರಣ್ ವಿ. ಎಸ್.

'ಕಾಯಿಲೆ ಬೀಳುವುದಷ್ಟೇ ಅನಾರೋಗ್ಯವಲ್ಲ; ಕಾಯಿಲೆ ಬೀಳುತ್ತೇವೆಂಬ ಅಸಹಜ ಭೀತಿಯೂ ಒಂದು ವಿಧದ ವ್ಯಾಧಿ' ಎಂದು ವೈದ್ಯಕೀಯದಲ್ಲಿ ಮಾತಿದೆ.

ಜಗತ್ತಿನಲ್ಲಿ ಕಾಯಿಲೆ ಇರುವವರು ಒಂದು ವಿಧದವರಾದರೆ, ದೈಹಿಕವಾಗಿ ಆರೋಗ್ಯವಾಗಿದ್ದರೂ ಯಾವುದೋ ಘೋರ ಕಾಯಿಲೆ ಬಂದೇಬಿಟ್ಟಿದೆಯೆಂಬ ಅತಾರ್ಕಿಕ ಭಯಯಲ್ಲಿ ಬದುಕುವವರು ಮತ್ತೊಂದು ಬಗೆ. ಕೋವಿಡ್-19 ಜಾಗತಿಕ ವಿಪತ್ತಿನ ವೇಳೆ ಈ ಭೀತಿ ತಾರಕಕ್ಕೆ ಏರಿತ್ತು. ಜನಸಾಮಾನ್ಯರಿಂದ ಈ ಭಯವನ್ನು ಕಳೆಯಲು ವೈದ್ಯಕೀಯ ಜಗತ್ತು ಪ್ರಾಯಶಃ ಕೋವಿಡ್ ರೋಗಿಗಳ ಚಿಕಿತ್ಸೆಯಲ್ಲಿ ವ್ಯಯಿಸಿದ್ದಕ್ಕಿಂತ ಹೆಚ್ಚಿನ ಸಮಯ, ಶ್ರಮ ವಹಿಸಿದೆ.

ಪ್ರಸ್ತುತ ಜಾಗತಿಕವಾಗಿ ಕಾಣುತ್ತಿರುವ ಮತ್ತೊಂದು ಸಮಸ್ಯೆ ಎಂದರೆ ತಮ್ಮ ಪ್ರತಿಯೊಂದು ಆರೋಗ್ಯ ಸಮಸ್ಯೆಯನ್ನೂ ಗೂಗಲ್ ಜಾಲತಾಣದಲ್ಲಿ ಹುಡುಕುವುದು. ಅದರಲ್ಲಿ ಬರುವ ಸಾವಿರಾರು ಪುಟಗಳ ಪೈಕಿ ಮೊದಲ ಕೆಲವನ್ನು ಮಾತ್ರ ಓದಿ, ಮತ್ತಷ್ಟು ಗೊಂದಲವಾಗಿ, 'ತನಗೆ ಯಾವುದೋ ಕೆಟ್ಟ ಕಾಯಿಲೆ ಬಂದಿದೆ' ಎಂದು ಭ್ರಮಿಸಿ ಗಾಬರಿಗೊಳ್ಳುವುದು. ಅದರ ಪರಿಹಾರಕ್ಕೆ ಹಲವರು ವೈದ್ಯರನ್ನು ಸಂಪರ್ಕಿಸಿ, ತಾವು ಓದಿದ್ದನ್ನೆಲ್ಲಾ ಅವರ ಬಳಿ ಹೇಳುತ್ತಾ, ಅವರ ಯಾವುದೇ ಪರಿಹಾರವನ್ನೂ ಒಪ್ಪದೇ ಆತಂಕಕ್ಕೆ ಒಳಗಾಗುವುದು. ಇದನ್ನು 'ಸೈಬರ್-ಕಾಂಡ್ರಿಯಾ' ಎಂದು ಕರೆಯುತ್ತಾರೆ.

ವೈದ್ಯಕೀಯ ವ್ಯಾಸಂಗದ ವೇಳೆ ಕಾಯಿಲೆಗಳ ಕುರಿತಾದ ರೋಗಲಕ್ಷಣಗಳನ್ನು ವೈದ್ಯಕೀಯ ಪಠ್ಯಗಳಲ್ಲಿ ಓದುವಾಗ 'ಈ ಕಾಯಿಲೆ ತನಗೇ ಇದೆ' ಎಂದು ಭ್ರಮಿಸುವುದು ಬಹುತೇಕ ವೈದ್ಯಕೀಯ ವಿದ್ಯಾರ್ಥಿಗಳ ಸಾಮಾನ್ಯ ಸಮಸ್ಯೆ. ಇದರಿಂದ ಮಾನಸಿಕವಾಗಿ ವಿಚಲಿತರಾಗಿ, ತಮ್ಮ ಆಸ್ಪತ್ರೆಗಳ ಹಿರಿಯ ವೈದ್ಯರನ್ನು ಎಡತಾಕುವವರು ಹಲವರು.



ಕಾಯಿಲೆಗಳ ಅಸಹಜ ಭೀತಿಗೆ ಹಲವಾರು ಆಯಾಮಗಳಿವೆ. ತಮಗೆ ಪರಿಚಯವಿರುವ ಯಾರಿಗೋ ಕ್ಯಾನ್ಸರ್ ಇದೆ ಎಂದು ಅರಿತವರೊಬ್ಬರು, ತಮಗೆ ತಲೆನೋವು ಬಂದ ಕೂಡಲೇ 'ಇದು ಮಿದುಳಿನ ಕ್ಯಾನ್ಸರ್ ಇರಬಹುದು' ಎಂದು ಭ್ರಮಿಸಿ ಚಿಂತೆಗೊಳಗಾವುದು. ಅದು ನಿದ್ರಾಹೀನತೆಯಿಂದಲೋ, ಸೈನಸ್ ಸಮಸ್ಯೆಯಿಂದಲೋ, ಅಥವಾ ದೃಷ್ಟಿದೋಷದಿಂದಲೋ ಆದ ಸರಳ ತಲೆನೋವಿರಬಹುದು. ಆದರೆ, ತಾವು ಸಂಪರ್ಕಿಸುವ ವೈದ್ಯರ ಮೇಲೆ ನಂಬಿಕೆ ಇಲ್ಲದಿದ್ದರೆ, ಹಲವಾರು ಅನಗತ್ಯ ಪರೀಕ್ಷೆಗಳನ್ನು ಮಾಡಿಸಿಕೊಂಡು, ತಮಗೆ ತಿಳಿದ, ತಿಳಿಯದ ತಜ್ಞವೈದ್ಯರ ಬಳಿಗೆ ಹೋಗಿ ಚಿಂತಿತರಾಗುವವರು ಎಷ್ಟೋ ಮಂದಿ. ಯಾವುದೇ ತಜ್ಞವೈದ್ಯರನ್ನು ಸುಲಭವಾಗಿ, ಸೋವಿಯಾಗಿ ಸಂಪರ್ಕಿಸಲು ಸಾಧ್ಯವಿರುವ ನಮ್ಮಂತಹ ದೇಶಗಳಲ್ಲಿ ಇಂತಹ ಪ್ರಸಂಗಗಳು ಹೆಚ್ಚು. ಕೆಲವು ಮುಂದುವರೆದ ದೇಶಗಳಲ್ಲಿ ಹೀಗೆ ನೇರವಾಗಿ ತಜ್ಞವೈದ್ಯರನ್ನು ಸಂಪರ್ಕಿಸುವ ಅವಕಾಶ ಇರುವುದಿಲ್ಲ. ಮೊದಲು ಪ್ರಾಥಮಿಕ ಹಂತದ ವೈದ್ಯರನ್ನು ಕಂಡು, ತಮ್ಮ ಸಮಸ್ಯೆಯನ್ನು ಅವರಲ್ಲಿ ಚರ್ಚಿಸಬೇಕು. ಪ್ರಾಥಮಿಕ ವೈದ್ಯರು ಶಿಫಾರಸು ಮಾಡಿದರೆ ಮಾತ್ರ ತಜ್ಞವೈದ್ಯರನ್ನು ಕಾಣಬಹುದು. ಇಂತಹ ಸಂದರ್ಭದಲ್ಲಿ ಆತಂಕಕ್ಕೆ ಒಳಗಾದ ರೋಗಿಗಳು ಒಂದರ ಹಿಂದೊಂದರಂತೆ ಹಲವಾರು ಪ್ರಾಥಮಿಕ ವೈದ್ಯರನ್ನು ಕಂಡು, ತಮ್ಮನ್ನು ತಜ್ಞವೈದ್ಯರಿಗೆ ಶೀಘ್ರವಾಗಿ ಶಿಫಾರಸು ಮಾಡುವಂತೆ ಗೋಗರೆಯುವುದು ಸಾಮಾನ್ಯ. ಇದರ ನಂತರವೂ ತಜ್ಞವೈದ್ಯರ ಸಲಹೆಗೆ ಕೆಲವು ವಾರಗಳಿಂದ ಕೆಲವು ತಿಂಗಳುಗಳು ಕಾಯಬೇಕು. ಈ ಅವಧಿಯಲ್ಲಿ ಅಸಹಜ ಭೀತಿಯ ರೋಗಿಗಳ ಮನಃಸ್ಥಿತಿ ತೀರಾ ನಾಜೂಕಿನದು.

ಹತಾಶೆಯಿಂದ ಅವೈಜ್ಞಾನಿಕ ಪರಿಹಾರಗಳಿಗೆ ಶರಣುಹೋದವರಿದ್ದಾರೆ. ಇದರಿಂದ ಯಾತನೆ ಮತ್ತಷ್ಟು ತೀವ್ರವಾಗುತ್ತದೆ. ಇನ್ನು ಕೆಲವರಿಗೆ ವೈದ್ಯರ ಬಳಿಗೆ ಹೋಗಲು ಭಯ. ಆದರೆ ತಮ್ಮ ಸಮಸ್ಯೆಗಳನ್ನು ಇತರರ ಬಳಿ ಸುಲಭವಾಗಿ ಚರ್ಚಿಸುತ್ತಾರೆ. ಅದರಲ್ಲಿ ಕೆಲವರು ತಮ್ಮ ಪರಿಚಿತರಿಗೆ ಆದ ತೀವ್ರವಾದ ಕಾಯಿಲೆಗಳ ಉದಾಹರಣೆಯನ್ನು ನೀಡುತ್ತಾರೆ. ಅದನ್ನು ಕೇಳಿದಾಕ್ಷಣ 'ತನಗೂ ಅಂತಹ ಕಾಯಿಲೆಯೇ ಇದ್ದಿರಬಹುದು' ಎನ್ನುವ ಗುಮಾನಿ ಶುರುವಾಗುತ್ತದೆ. ಹೆಚ್ಚಿನ ಜನರ ಬಳಿ ಮಾತನಾಡಿದಷ್ಟೂ ಈ ಸಮಸ್ಯೆಗೆ ರೆಕ್ಕೆಪುಕ್ಕಗಳು ಸೇರುತ್ತಾ ಹೋಗುತ್ತವೆ. ಕಡೆಗೊಂದು ದಿನ ಧೈರ್ಯ ಮಾಡಿ ವೈದ್ಯರ ಬಳಿ ಹೋದಾಗ, ತಮಗೆ ವಾಸ್ತವದಲ್ಲಿ ಇದ್ದ ರೋಗಲಕ್ಷಣಗಳಿಗಿಂತಲೂ ತಾವು ಭ್ರಮೆಗೆ ಸಿಲುಕಿದ ಸಮಸ್ಯೆಗಳನ್ನೇ ಚರ್ಚಿಸುತ್ತಾರೆ. ಇದರಿಂದ ಅವರ ರೋಗನಿರ್ಧಾರವಾಗುವುದು ಗೋಜಲಾಗುತ್ತದೆ; ಅನಗತ್ಯ ಪರೀಕ್ಷೆಗಳಿಗೆ ದಾರಿಯಾಗುತ್ತದೆ.

ಜಗತ್ತಿನಲ್ಲಿ ಕಾಯಿಲೆ ಇರುವವರು ಒಂದು ವಿಧದವರಾದರೆ, ದೈಹಿಕವಾಗಿ ಆರೋಗ್ಯವಾಗಿದ್ದರೂ ಯಾವುದೋ ಘೋರ ಕಾಯಿಲೆ ಬಂದೇಬಿಟ್ಟಿದೆಯೆಂಬ ಅತಾರ್ಕಿಕ ಭಯಯಲ್ಲಿ ಬದುಕುವವರು ಮತ್ತೊಂದು ಬಗೆ.

ಮತ್ತೂ ಹಲವರು ತಮ್ಮ ಕುಟುಂಬದ, ಸ್ನೇಹಿತರ, ಪರಿಚಿತರ ಕಾಯಿಲೆಗಳ ವಿವರಗಳನ್ನು ಅರಿತಾಗ ತಮಗೂ ಅವರಿಗೂ ಇರುವ ಸಾಮ್ಯಗಳನ್ನು ಲೆಕ್ಕ ಹಾಕುತ್ತಾರೆ. ವಯಸ್ಸು, ಆರ್ಥಿಕ ಸ್ಥಿತಿ, ಮನೆಯ ಪರಿಸ್ಥಿತಿ, ಉದ್ಯೋಗ, ಚಟಗಳು, ಚಟುವಟಿಕೆಗಳು, ಹವ್ಯಾಸ ಮೊದಲಾದ ವಿವರಗಳನ್ನು ತಾಳೆ ಮಾಡುತ್ತಾ, ಅವರಿಗೆ ಬಂದದ್ದು ತನಗೂ ಬರಬಹುದು ಅಥವಾ ಈಗಾಗಲೇ ಬಂದುಬಿಟ್ಟಿದೆ ಎಂಬ ಭಯಕ್ಕೆ ಒಳಗಾಗುತ್ತಾರೆ. ಅದರಲ್ಲೂ ಆಪ್ತರೋ ಪರಿಚಿತರೋ ಆಸ್ಪತ್ರೆಗೆ ಸೇರಿದರೆ, ಅಥವಾ ಅಂತಹ ಯಾರದ್ದೋ ಮರಣವಾದರೆ ಭೀತಿ ಮತ್ತಷ್ಟು ಉಲ್ಬಣಿಸುತ್ತದೆ. ಆ ಸಮಯದಲ್ಲಿ ವಿವೇಚನೆ ಕೆಲಸ ಮಾಡುವುದಿಲ್ಲ; ಅತಾರ್ಕಿಕ ಚಿಂತೆಗಳಿಗೆ ದಾರಿಯಾಗುತ್ತದೆ. ವೈದ್ಯರ ಬಳಿಗೆ ಬಂದು, ತಮಗೆ ತಲೆಯಿಂದ ಹಿಡಿದು ಕಾಲಿನವರೆಗೆ ಎಲ್ಲಾ ಪರೀಕ್ಷೆಗಳನ್ನೂ ಮಾಡುವಂತೆ ಆಗ್ರಹ ಮಾಡುತ್ತಾರೆ. ಅಂತಹವರ ಭೀತಿಯನ್ನು ನಗದಿಗೆ ಪರಿವರ್ತಿಸುವ 'ಮಾಸ್ಟರ್ ಹೆಲ್ತ್ ಚೆಕ್ ಅಪ್' ಎನ್ನುವ ಯೋಜನೆಗಳೂ ಇವೆ! ಇಂತಹ ಪರೀಕ್ಷೆಗಳಲ್ಲಿ ಯಾವುದೋ ಒಂದು ಅಂಶ ಏರಿಳಿತವಾಗಿದೆ ಎಂದರೆ, ಅದನ್ನು ಹಿಡಿದು ಆತಂಕಿತರಾಗುತ್ತಾರೆ. ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳೇ ತುಂಬಿಕೊಳ್ಳುತ್ತವೆ. ಇದರಿಂದ ಸಹಜವಾಗಿಯೇ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

ಇದಕ್ಕೆ ಪರಿಹಾರವೇನು? ಮೊದಲನೆಯದಾಗಿ ಪ್ರತಿಯೊಬ್ಬರೂ ತಮ್ಮ ನಂಬಿಕೆಯ ಕುಟುಂಬ ವೈದ್ಯರನ್ನು ಆಯ್ದುಕೊಳ್ಳಬೇಕು. ನೂರಕ್ಕೆ ಎಂಬತ್ತು ಅನಾರೋಗ್ಯಗಳನ್ನು ಅವರು ಸರಿಪಡಿಸಬಲ್ಲರು. ಉಳಿದವಕ್ಕೆ ಯಾರನ್ನು ಕಾಣಬೇಕೆಂಬ ಸರಿಯಾದ ಸಲಹೆ ನೀಡಬಲ್ಲರು. ಜೊತೆಗೆ ಯಾವುದೇ ಅನಗತ್ಯ ಆತಂಕ ಕಾಡದಂತೆ ಧೈರ್ಯ ತುಂಬಿ ಪರಿಸ್ಥಿತಿಯನ್ನು ನಿರ್ವಹಿಸಬಲ್ಲರು. ಇದೊಂದು ರೀತಿ ಅರಿಯದ ಜಾಡಿನಲ್ಲಿ ಪ್ರಯಾಣ ಮಾಡುವಾಗ ದಾರಿಯನ್ನು ಚೆನ್ನಾಗಿ ಬಲ್ಲ ಮಾರ್ಗದರ್ಶಿ ಜೊತೆಗಿದ್ದಂತೆ. ಅಂತಹವರು ತಮ್ಮ ಬೆಂಬಲಕ್ಕೆ ಇದ್ದಾರೆಂಬ ಭಾವನೆಯೇ ಮನಸ್ಸನ್ನು ಹಗುರ ಮಾಡುತ್ತದೆ. ಚಿತ್ತವೆಂಬುದು ಸ್ತಿಮಿತದಲ್ಲಿ ಇರುವಾಗ ತಪ್ಪು ನಿರ್ಧಾರಗಳ ಸಾಧ್ಯತೆ ಕಡಿಮೆ.

ಎರಡನೆಯದಾಗಿ, ಆರೋಗ್ಯಕ್ಕೆ ಸಂಬಂಧಿಸಿದ ಜಾಲತಾಣಗಳನ್ನು ನೋಡುವಾಗ ಬಹಳ ಎಚ್ಚರ ವಹಿಸಬೇಕು. ಸಾಮಾನ್ಯವಾಗಿ ಗೂಗಲ್ ಜಾಲತಾಣದಲ್ಲಿ ಹುಡುಕುವಾಗ ಬಹುತೇಕ ಮಂದಿ ಒಂದೆರಡು ಪುಟಗಳಿಗಿಂತ ಹೆಚ್ಚು ಮುಂದೆ ಹೋಗುವುದಿಲ್ಲ. ಅನೇಕ ಬಾರಿ ಸರಿಯಾಗಿ ಹುಡುಕಲು ಬಾರದಿದ್ದಾಗ ಸಮಂಜಸ ಮಾಹಿತಿ ನೀಡುವ ಪುಟಗಳು ಮೊದಲು ಕಾಣುವುದಿಲ್ಲ. ಹೀಗಾಗಿ, ತಪ್ಪು ಮಾಹಿತಿಗೆ ಆಹಾರವಾಗುವ ಸಾಧ್ಯತೆಗಳೇ ಹೆಚ್ಚು. ಬಹುತೇಕ ವೈದ್ಯರು ವೈದ್ಯಕೀಯ ಜಾಲತಾಣಗಳ ಬಗ್ಗೆ ಚೆನ್ನಾಗಿ ತಿಳಿದಿರುತ್ತಾರೆ. ರೋಗಿಯ ಆಯಾ ಕಾಯಿಲೆಗೆ ನಿಖರ ಮಾಹಿತಿ ನೀಡಬಲ್ಲ ಜಾಲತಾಣಗಳನ್ನು ಅವರೇ ಸೂಚಿಸಬಲ್ಲರು. ಹೀಗಾಗಿ, ಗೂಗಲ್ ಮಾಡುವುದಕ್ಕಿಂತ ಮೊದಲು ವೈದ್ಯರನ್ನು ಕಾಣುವುದು ಸೂಕ್ತ.

ಒಮ್ಮೆ ಕಾಯಿಲೆಯ ಅಸಹಜ ಭೀತಿ ಗೀಳಿನ ಸ್ವರೂಪ ಪಡೆದರೆ, ಆಗ ಮನೋವೈದ್ಯರ ಸಲಹೆ ಬೇಕಾಗಬಹುದು. ಇದನ್ನು ಕೂಡ ಮುಕ್ತ ಮನಸ್ಸಿನಿಂದಲೇ ಸ್ವೀಕರಿಸಬೇಕು. ಈ ನಿಟ್ಟಿನಲ್ಲಿ ರೋಗಿಗಿಂತಲೂ ಹೆಚ್ಚಾಗಿ ಅವರ ಕುಟುಂಬ ಅಥವಾ ಗೆಳೆಯರು ನಿರ್ಧಾರ ತೆಗೆದುಕೊಳ್ಳಬೇಕು. ಈ ಗೀಳನ್ನು ಯಶಸ್ವಿಯಾಗಿ ಗುಣಪಡಿಸಬಲ್ಲ ವಿಧಾನಗಳಿವೆ.

ಆರೋಗ್ಯರಕ್ಷಣೆ ನಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಜವಾಬ್ದಾರಿ. ಆದರೆ, ಅದು ಅಗತ್ಯಕ್ಕಿಂತ ವಿಪರೀತವೂ ಆಗಬಾರದು. ಜೀವನದ ಇತರ ವಿಷಯಗಳಂತೆ ಇದರಲ್ಲೂ ಒಂದು ಸುವರ್ಣ ಮಧ್ಯಮಾರ್ಗವನ್ನೇ ಅನುಸರಿಸಬೇಕು.

ಆರೋಗ್ಯವಿಲ್ಲದ ನಾಲಿಗೆ...

ಡಾ. ವಿನಯ ಶ್ರೀನಿವಾಸ್



'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಎಂದರು ಪುರಂದರ ದಾಸರು. ನಾವು ಆಡುವ ಮಾತಿನಲ್ಲಿ ನಾಲಿಗೆಯ ಪಾತ್ರ ಹಾಗೂ ಪ್ರಾಮುಖ್ಯವನ್ನು ಹೇಳುವ ಸಾಲುಗಳು ಅವು. ಅದೇ ನಾಲಿಗೆಯು ನಮ್ಮ ಶರೀರದ ಹಲವಾರು ಅನಾರೋಗ್ಯ ಸ್ಥಿತಿಗಳಿಗೂ ಕೈಗನ್ನಡಿಯಾಗಬಲ್ಲದು ಎಂಬುದನ್ನು ಪ್ರತಿಯೊಬ್ಬರೂ ಅರಿತಿದ್ದರೆ ಶಮನ ಸುಲಭ. ಕನ್ನಡಿಯಲ್ಲಿ ಮುಖವನ್ನು ನೋಡುವಾಗ ಒಮ್ಮೆ ಬಾಯಿ ತೆರೆದು ನಾಲಿಗೆಯನ್ನೂ ಹೊರ ಚಾಚಿ ನೋಡಿಕೊಂಡರೆ ನಮ್ಮ ಆರೋಗ್ಯಸ್ಥಿತಿಯನ್ನು ತಿಳಿಯುವುದು ಸಾಧ್ಯ.

ಬಹಳಷ್ಟು ಮಂದಿ ಪ್ರತಿದಿನ ಹಲ್ಲುಗಳ ಜೊತೆ ನಾಲಿಗೆಯನ್ನೂ ಸ್ವಚ್ಛಗೊಳಿಸಿಕೊಳ್ಳಬೇಕು ಎನ್ನುವುದನ್ನು ಕಡೆಗಣಿಸುತ್ತಾರೆ. ಬಾಯಿಯ ಆರೋಗ್ಯ ಸಂರಕ್ಷಣೆಗೆ ನಾಲಿಗೆಯ ಸ್ವಚ್ಛತೆಯೂ ಮುಖ್ಯ. ಹಾಗಾಗಿಯೇ ದಿನವೂ ಹಲ್ಲುಜ್ಜುವ ಸಮಯದಲ್ಲಿ ನಾಲಿಗೆಯನ್ನೂ ಕಡ್ಡಾಯವಾಗಿ ಸ್ವಚ್ಛಗೊಳಿಸಿಕೊಳ್ಳಬೇಕು. ಇತ್ತೀಚಿಗೆ ಮಾರುಕಟ್ಟೆಗೆ ಬರುತ್ತಿರುವ ಹಲ್ಲುಜ್ಜುವ ಬ್ರಷ್‌ಗಳ ಹಿಂಭಾಗವನ್ನು ಅದಕ್ಕಾಗಿಯೇ ವಿನ್ಯಾಸಗೊಳಿಸಿರುತ್ತಾರೆ.

ಸಾಮಾನ್ಯವಾಗಿ ನಾಲಿಗೆಯು ಗುಲಾಬಿ ಬಣ್ಣದ್ದಾಗಿದ್ದು ಮೇಲ್ಮೈನಲ್ಲಿ ಸಣ್ಣ ಸಣ್ಣ ಉಬ್ಬುಗಳಿರುತ್ತವೆ. ದೇಹದ ಹಲವು ಆಂತರಿಕ ಸಮಸ್ಯೆಗಳಲ್ಲಿ ನಾಲಿಗೆಯ ಬಣ್ಣ ಮತ್ತು ಮೇಲ್ಮೈನಲ್ಲಿ ವ್ಯತ್ಯಾಸ ಕಂಡು ಬರುವುದರಿಂದ ಆಗಾಗ್ಗೆ ನಾಲಿಗೆಯನ್ನು ಸೂಕ್ಷ್ಮವಾಗಿ ಗಮನಿಸುವುದು ಬಹಳವೇ ಮುಖ್ಯ.

ನಾಲಿಗೆಯ ಮೇಲ್ಮೈನಲ್ಲಿ ಬಿಳಿ ಬಣ್ಣದ, ಮೊಸರಿನಂತಹ ತೇಪೆಗಳಾಗುವುದು ಅನೇಕ ಕಾರಣಗಳಿಂದಾಗಿ. ನಾಲಿಗೆಯನ್ನು ಸರಿಯಾಗಿ ಸ್ವಚ್ಛಗೊಳಿಸದಿರುವುದು ಮುಖ್ಯ ಕಾರಣವಾದರೆ, ಶಿಲೀಂಧ್ರದ ಸೋಂಕು, ದೀರ್ಘಕಾಲದವರೆಗೆ ಆ್ಯಂಟಿಬಯೋಟಿಕ್ ಬಳಕೆ, ಬಾಯಿಯ ಸ್ನೇಹಪರ ಸೂಕ್ಷ್ಮಾಣುಗಳಲ್ಲಿನ ಅಸಮತೋಲನ ಮೊದಲಾದುವು ಇತರ ಕಾರಣಗಳು. ಶರೀರದ ರಕ್ಷಣಾವ್ಯವಸ್ಥೆಯ ದೋಷದಿಂದ ಉಂಟಾಗುವ ಮುಖ್ಯವಾಗಿ ಚರ್ಮವನ್ನು ಬಾಧಿಸುವ ಲೈಕನ್ ಪ್ಲೇನಸ್ ಎಂಬ ಕಾಯಿಲೆಯಲ್ಲಿಯೂ ಒಮ್ಮೊಮ್ಮೆ ಬಿಳಿ ಮೊಸರಿನಂತಹ ತೇಪೆಗಳು ನಾಲಿಗೆಯ ಮೇಲೆ ಕಾಣಿಸಿಕೊಳ್ಳಬಹುದು. ಕೆಲವು ವೈರಾಣುಗಳ ಸೋಂಕಿನಲ್ಲಿ. ಉದಾಹರಣೆಗೆ, 'ಎಪ್ಸ್ಟಿನ್ ಬಾರ್ ವೈರಸ್' ಅಥವಾ 'ಎಚ್. ಐ. ವಿ.' ಸೋಂಕಿನಲ್ಲಿ ನಾಲಿಗೆಯು ಕಪ್ಪು ಅಥವಾ ಕಂದುಬಣ್ಣಕ್ಕೆ ತಿರುಗಿ ಮೇಲ್ಮೈನಲ್ಲಿ ಸಣ್ಣ ರೋಮಗಳು ಇರುವಂತೆ ತೋರಬಹುದು. ಈ ರೋಮಗಳಲ್ಲಿ ಮುಖ್ಯವಾಗಿ ಪ್ರೊಟೀನ್ ಅಂಶವಿದ್ದು, ಅದರ ಮೇಲೆ ಸೂಕ್ಷ್ಮಾಣುಗಳು ಹಾಗೂ ಆಹಾರಕಣಗಳು ಕುಳಿತಾಗ ಅವು ಎದ್ದುಕಾಣುತ್ತವೆ. ವೈರಾಣು ಸೋಂಕು ನಿಯಂತ್ರಣದೊಂದಿಗೆ ನಾಲಿಗೆಯೂ ಸಾಮಾನ್ಯ ಬಣ್ಣಕ್ಕೆ ತಿರುಗುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಹುಳಿತೇಗು ಮತ್ತು ಎದೆ ಉರಿ (ಗ್ಯಾಸ್ಟ್ರೈಟಿಸ್ ಸಮಸ್ಯೆ) ಶಮನಕ್ಕಾಗಿ ಸೇವಿಸುವ ಔಷಧದಲ್ಲಿ ಬಳಸುವ 'ಬಿಸ್‌ಮತ್' ಎಂಬ ರಾಸಾಯನಿಕ ವಸ್ತುವು ಜೊಲ್ಲು ರಸದೊಂದಿಗೆ ಬೆರೆತಾಗಲೂ ನಾಲಿಗೆ ಕಪ್ಪುಬಣ್ಣಕ್ಕೆ ತಿರುಗಬಹುದು. ಔಷಧದ ಬಳಕೆಯನ್ನು ನಿಲ್ಲಿಸುತ್ತಲೂ ನಾಲಿಗೆ ಮೊದಲಿನಂತಾಗುವುದು.

ನಾಲಿಗೆಯ ಆರೋಗ್ಯಕ್ಕಾಗಿ

- ದಿನವೂ ನಾಲಿಗೆಯನ್ನು ಸ್ವಚ್ಛಗೊಳಿಸಿಕೊಳ್ಳಿ.
- ಎಲೆ-ಅಡಿಕೆ-ತಂಬಾಕು ಮತ್ತು ಧೂಮಪಾನವನ್ನು ತ್ಯಜಿಸಿ.
- ದಿನವೂ ಪೌಷ್ಟಿಕ ಆಹಾರವನ್ನು ಸೇವಿಸಿ.
- ಮಧುಮೇಹಿಗಳು ರಕ್ತದ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿಡಿ.
- ನಿತ್ಯವೂ ಮೂರರಿಂದ ನಾಲ್ಕು ಲೀಟರ್ ನೀರು ಕುಡಿಯಿರಿ
- ಸಿಹಿ ಪದಾರ್ಥಗಳ ಬಳಕೆ ಮಿತಿಯಲ್ಲಿರಲಿ.
- ಮಕ್ಕಳಿಗೆ ಆದಷ್ಟು ಸೀಶೆಯಲ್ಲಿ ಹಾಲುಣಿಸುವುದನ್ನು ತಪ್ಪಿಸಿ.



ನಾವು ಸೇವಿಸುವ ಆಹಾರದಲ್ಲಿ ವಿಟಮಿನ್ ಬಿ3 (ನಿಯಾಸಿನ್) ಕೊರತೆಯಾದಾಗ ವ್ಯಕ್ತಿಯ ನಾಲಿಗೆಯು ಕಡು ಗುಲಾಬಿಬಣ್ಣಕ್ಕೆ ತಿರುಗಿ ವಿಪರೀತ ನುಣುಪಾಗುವುದು. ಜೊತೆಯಲ್ಲಿ ನಾಲಿಗೆಯಲ್ಲಿ ನೋವು ಕಾಣಿಸಿಕೊಳ್ಳುವುದಲ್ಲದೆ, ಯಾವುದೇ ಪದಾರ್ಥದ ಸಂಪರ್ಕ ಬಂದಾಗಲೂ (ಉದಾಹರಣೆಗೆ: ಟೂತ್ ಪೇಸ್ಟ್, ಅನಾನಸ್ ಹಣ್ಣು, ಖಾರ ಹಾಗೂ ಮಸಾಲೆ ಪದಾರ್ಥಗಳು) ಉರಿ ಹೆಚ್ಚಾಗಬಹುದು. ನಿಯಾಸಿನ್ ಹೇರಳವಾಗಿರುವ ಆಹಾರಪದಾರ್ಥಗಳನ್ನು ನಿಯಮಿತವಾಗಿ ಸೇವಿಸುವುದೇ ಇದಕ್ಕೆ ಪರಿಹಾರ. ಹಸಿರುಬಟಾಣಿ, ಗೋಧಿ, ಶೇಂಗಾಬೀಜ, ಕೆಂಪುಅಕ್ಕಿ, ಬೆಣ್ಣೆಹಣ್ಣು, ಕೋಳಿಮಾಂಸದಲ್ಲಿ ನಿಯಾಸಿನ್ ಇರುತ್ತದೆ.

ಆಹಾರದಲ್ಲಿ ವಿಟಮಿನ್ ಬಿ-12, ಫೋಲಿಕ್ ಆ್ಯಸಿಡ್ ಮತ್ತು ಕಬ್ಬಿಣಾಂಶದ ಕೊರತೆಯಾದಾಗ ನಾಲಿಗೆಯ ಸಾಮಾನ್ಯ ಉಬ್ಬುಗಳು ಮರೆಯಾಗಿ ನಾಲಿಗೆಯು ಕಡು ಕೆಂಪಗಾಗಿ ಹೊಳೆಯಬಹುದು (ಗ್ಲ್ಯಾಸಿ ಟಂಗ್). ಪೂರಕ ಔಷಧಗಳನ್ನು ಮತ್ತು ಆಹಾರದಲ್ಲಿ ಯಥೇಚ್ಛವಾಗಿ ಸತ್ವಯುತ ಆಹಾರ ಪದಾರ್ಥಗಳಾದ ಸೇಬು, ಪಾಲಕ್ ಸೊಪ್ಪು, ದಾಳಿಂಬೆಹಣ್ಣು, ಹಾಲು, ಮೊಟ್ಟೆ, ಮಾಂಸ, ಒಣದ್ರಾಕ್ಷಿ ಮೊದಲಾದುವುದನ್ನು ನಿಯಮಿತವಾಗಿ ಸೇವಿಸಿದಾಗ ಸಮಸ್ಯೆ ನಿವಾರಣೆಯಾಗುವುದು.

ಭೌಗೋಳಿಕ ನಾಲಿಗೆ ಎಂದೇ ಕರೆಯಲ್ಪಡುವ ಈ ಸ್ಥಿತಿಯಲ್ಲಿ ಉಬ್ಬುಗಳ ಮಧ್ಯೆ ನುಣುಪಾದ ವಿವಿಧ ಆಕಾರದ ತೇಪೆಗಳು ಮತ್ತು ಕಲೆಗಳು ಕಾಣಿಸಿಕೊಂಡು ನಾಲಿಗೆಯು ವಿಶ್ವದ ಭೂಪಟದಂತೆ ತೋರುವುದು. ಇದು 'ಲೈಕನ್ ಪ್ಲೇನಸ್' ಎಂಬ ಚರ್ಮರೋಗದಲ್ಲಿ ಕಾಣಬಹುದು. ನಾಲಿಗೆಯ ಉಬ್ಬುಗಳು ಉರಿಯೂತಕ್ಕೊಳಗಾದಾಗ ಅತಿ ನೋವಿನಿಂದ ಕೂಡಿದ ಒಂದೇ ಒಂದು ಕೆಂಪುಬಣ್ಣದ ಗುಳ್ಳೆಯು ನಾಲಿಗೆಯ ತುದಿಯ ಕೆಳಭಾಗದಲ್ಲಿ ಕಂಡು ಬರುವುದು. ಇದು ವ್ಯಕ್ತಿಗೆ ಆಹಾರ ಸೇವಿಸುವಾಗ, ಅಗಿಯುವಾಗ ಮತ್ತು ನುಂಗುವಾಗ ನೋವನ್ನು ಉಂಟುಮಾಡಬಲ್ಲದು. ನೋವು ನಿವಾರಕ ಮುಲಾಮುಗಳ ಬಳಕೆಯಿಂದ ಇದು ಕಡಿಮೆಯಾಗುತ್ತದೆ.

ಬಾಯಿಯ ಅಳತೆಗೆ ಸರಿಹೊಂದದ ಗಾತ್ರದಲ್ಲಿ ಸಾಮಾನ್ಯಕ್ಕಿಂತಲೂ ದೊಡ್ಡದಾದ ನಾಲಿಗೆಯನ್ನು ಅಲರ್ಜಿ, ಥೈರಾಯ್ಡ್ ಸಮಸ್ಯೆ ಮತ್ತು ಡೌನ್ಸ್ ಸಿಂಡ್ರೋಮ್ ಎಂಬ ವರ್ಣತಂತುಗಳ ದೋಷದ ಕಾಯಿಲೆಯಲ್ಲಿ ನೋಡಬಹುದು. ಅಲರ್ಜಿಗೆ ಸೂಕ್ತವಾದ ಔಷಧದ ಬಳಕೆಯಿಂದ ನಾಲಿಗೆ ಸಾಮಾನ್ಯ ಸ್ಥಿತಿಗೆ ಮರುಳುವುದು ಸಾಧ್ಯ. ನಾಲಿಗೆಯ ಮೇಲ್ಮೈಯಲ್ಲಿ ಸಣ್ಣ ತೋಡುಗಳಂತಾಗುವುದನ್ನು 'ಸೋರಿಯಾಸಿಸ್' ಎಂಬ ಚರ್ಮದ ಸಮಸ್ಯೆಯಲ್ಲಿ ಕಾಣಬಹುದು. ಮೂಲಕಾಯಿಲೆಗೆ ಸೂಕ್ತ ಚಿಕಿತ್ಸೆಯೇ ಇದಕ್ಕೆ ಪರಿಹಾರ.

ದೇಹದ ಇತರ ಅಂಗಗಳಂತೆ ನಾಲಿಗೆಗೂ ಕ್ಯಾನ್ಸರ್ ತಗುಲಬಹುದು. ನಾಲಿಗೆಯ ಯಾವುದೇ ಭಾಗದಲ್ಲಿ ನೋವಿಲ್ಲದ ಬಿಳಿ ಅಥವಾ ಕೆಂಪುಬಣ್ಣದ ಕಲೆ, ತೇಪೆ, ಗಡ್ಡೆ ಅಥವಾ ಗಾಯ ಕಂಡು ಬಂದಾಗ ಅದನ್ನು ನಿರ್ಲಕ್ಷಿಸಬಾರದು. ಏಕೆಂದರೆ ಅದು ಬಾಯಿಯ ಕ್ಯಾನ್ಸರ್‌ನ ಲಕ್ಷಣವಿರಬಹುದು. ಆರಂಭಿಕ ಹಂತಗಳಲ್ಲಿಯೇ ಜೀವಾಂಶ (ಬಯಾಪ್ಸಿ) ತೆಗೆದು ಪ್ರಯೋಗಾಲಯದಲ್ಲಿ ಪರೀಕ್ಷೆಯನ್ನು ಮಾಡಿಸುವುದರಿಂದ ಕ್ಯಾನ್ಸರ್ ಹೌದೋ ಅಲ್ಲವೋ ಎಂಬುದನ್ನು ತಿಳಿಯುವುದು ಸಾಧ್ಯ. ಪ್ರಯೋಗಾಲಯದ ವರದಿಯ ಆಧಾರದ ಮೇಲೆ ಮುಂದಿನ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾಗುತ್ತದೆ.

ಹ್ಣಾಂ ಹ್ಣೂಂ ಔಚ್‌ಗಳಿಂದ ಬಿಡುಗಡೆ

ಗಂಟುಗಳಲ್ಲಿ ಉತ್ಪನ್ನವಾಗುವ ಊತವು ಗಂಟುಗಳ ಚಲನೆಯನ್ನು ಸ್ಥಗಿತಗೊಳಿಸುತ್ತದೆ. ನಡೆಯುವಾಗ, ನಿಲ್ಲುವಾಗ, ಕುಳಿತಾಗ, ಕುಳಿತವರು ನಿಲ್ಲುವಾಗ ಅಸಾಧ್ಯವಾದ ನೋವು ಕಾಣಿಸಿಕೊಳ್ಳುತ್ತದೆ...

ಡಾ. ವಿಜಯಲಕ್ಷ್ಮಿ ಪಿ.

ಬುದ್ಧನೇನಾದರೂ ಈ ಕಾಲದಲ್ಲಿ ಇದ್ದಿದ್ದರೆ, 'ಗಂಟುನೋವಿಲ್ಲದ ಮನೆಯಿಂದ ಸಾಸಿವೆ ತಾ' ಎಂದು ಹೇಳಿದಿದ್ದರೆ, ತರಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲವೇನೋ! ಅಷ್ಟರಮಟ್ಟಿಗೆ ಪ್ರತಿಮನೆಯಲ್ಲೂ ಒಬ್ಬರಲ್ಲಾ ಒಬ್ಬರು ಗಂಟುನೋವಿನಿಂದ ಬಳಲುತ್ತಿರುತ್ತಾರೆ. ಕಾರಣ 'ಮೂಳೆಗಳ ಸವೆತ' ಎಂದು ಒಂದೇ ಮಾತಿನಲ್ಲಿ ಹೇಳುತ್ತಾರೆ. ಇಂದು ಚಿಕ್ಕ ಮಕ್ಕಳಿಂದ ಮುದುಕರವರೆಗೂ ಗಂಟುಗಳಲ್ಲಿ ಊತ, ನೋವು, ಉರಿ, ಕಾಲು ಮಡಿಸಲು ಆಗದಂತಹ ಕಾಠಿಣ್ಯ – ಹೀಗೆ ಅನೇಕ ಲಕ್ಷಣಗಳು ಇರುತ್ತವೆ. ಇದಕ್ಕೆ ಪ್ರಮುಖ ಕಾರಣ ಇಂದಿನ ನಮ್ಮ ಜೀವನಶೈಲಿ ಮತ್ತು ಆಹಾರಕ್ರಮ.

ಚಟುವಟಿಕೆಗಳಲ್ಲಿ ಆಗುವ ಏರುಪೇರಿನಿಂದಾಗಿ ಅಥವಾ ಯಾವುದಾದರೂ ಅಪಘಾತ ಅಥವಾ ಅಭಿಘಾತ(ಪೆಟ್ಟು)ಗಳಿಂದ ಗಂಟುನೋವು ಬರುತ್ತದೆ ಎಂಬುದು ಸಾಮಾನ್ಯ ನಂಬಿಕೆ. ಅಪಘಾತ ಅಥವಾ ಅಭಿಘಾತಗಳಿಂದಾದ ನೋವನ್ನು ಸರಿಯಾದ ಚಿಕಿತ್ಸೆಯ ನಂತರ ದೇಹ ತನ್ನಿಂದ ತಾನೇ ಉಪಶಮನಗೊಳಿಸಿಕೊಳ್ಳುತ್ತದೆ. ಆದರೆ ಆಹಾರ ಮತ್ತು ವಿಹಾರ, ಎಂದರೆ ನಮ್ಮ ಚಟುವಟಿಕೆ ಅಥವಾ ವ್ಯಾಯಾಮಗಳ ಹೆಚ್ಚು, ಕಡಿಮೆ ಅಥವಾ ತಪ್ಪಾಗಿ ಮಾಡುವುದರಿಂದ ಉಂಟಾಗುವ ನೋವನ್ನು ಸರಿಪಡಿಸಲು ಹರಸಾಹಸವನ್ನೇ ಪಡಬೇಕು. ಸಾಮಾನ್ಯವಾಗಿ ಗಂಟುಗಳಲ್ಲಿ ಉತ್ಪನ್ನವಾಗುವ ಊತವು ಗಂಟುಗಳ ಚಲನೆಯನ್ನು ಸ್ಥಗಿತಗೊಳಿಸುತ್ತದೆ. ಆದರಿಂದ ನಡೆಯುವಾಗ, ನಿಲ್ಲುವಾಗ, ಕುಳಿತಾಗ, ಕುಳಿತವರು ನಿಲ್ಲುವಾಗ, ಅಸಾಧ್ಯವಾದ ನೋವು ಕಾಣಿಸಿಕೊಳ್ಳುತ್ತದೆ ಮತ್ತು ಕಾಲುಗಳ ಚಲನೆಯು ಕಷ್ಟಕರವಾಗುತ್ತದೆ.

ಊತಕ್ಕೆ ಪ್ರಮುಖ ಕಾರಣಗಳು:

- ಸಕಾಲದಲ್ಲಿ ಸಂಪೂರ್ಣವಾಗಿ ಜೀರ್ಣವಾಗದಿರುವ ಆಹಾರ. ಹೀಗಾಗಲು ಸಕಾಲದಲ್ಲಿ ಆಹಾರ ಸೇವಿಸದಿರುವುದು, ಅತಿಯಾಗಿ, ಪದೇಪದೇ, ಕೊಬ್ಬು ಹೆಚ್ಚಾಗಿರುವ ಆಹಾರಗಳ ಸೇವನೆ.
- ಓಡಾಡುತ್ತಾ ಅಥವಾ ವಾಹನ ಚಲಾಯಿಸುತ್ತಾ, ಅಥವಾ ಗಬಗಬನೆ ಆಹಾರ ಸೇವಿಸುವುದು, ಆಹಾರ ಸೇವಿಸುತ್ತಾ ಅಥವಾ ಸೇವಿಸಿದ ಕೂಡಲೆ ಒಂದೇ ಉಸಿರಿಗೆ ಓಡುವುದು ಅಥವಾ ನಡೆಯುವುದು.
- ತಿಂದ ಆಹಾರ ಜೀರ್ಣಿಸುವ ಮೊದಲೇ ವ್ಯಾಯಾಮ ಮಾಡುವುದು; ವ್ಯಾಯಾಮ ಮಾಡುವಾಗ ನಡುನಡುವೆ ನೀರು ಕುಡಿಯುವುದು. ನೀರು ಕುಡಿದರೆ ಒಳ್ಳೆಯದು ಎಂದು ಹಸಿವಾದಾಗಲೂ, ಬಾಯಾರಿಕೆ ಇಲ್ಲದಿದ್ದಾಗಲೂ ಅತಿಯಾಗಿ ನೀರು ಅಥವಾ ದ್ರವಪದಾರ್ಥಗಳನ್ನು ಸೇವಿಸುವುದು. ವ್ಯಾಯಾಮ ಮಾಡಿದ ಕೂಡಲೇ ಅತಿ ತಂಪಾದ ನೀರು ಅಥವಾ ಇತರ ದ್ರವ ಪದಾರ್ಥಗಳ ಸೇವನೆ.
- ವಿರುದ್ಧಾಹಾರಗಳಾದ ಹಾಲು + ಹಣ್ಣು (ಮಿಲ್ಕ್ ಶೇಕ್, ಅಥವಾ ಹಣ್ಣಿನ ರಸಾಯನಕ್ಕೆ ಹಾಲು ಸೇರಿಸಿ ಸೇವಿಸುವುದು, ನಿತ್ಯ ಪಂಚಾಮೃತ ಸೇವನೆ), ಹಾಲು + ಮೊಸರು ಅಥವಾ ಮಜ್ಜಿಗೆ, ಹಾಲು + ಮೊಟ್ಟೆ ಅಥವಾ ಮಾಂಸ ಅಥವಾ ಮೀನಿನ ಸೇವನೆ, ಹಾಲು + ಉಪ್ಪು ಅಥವಾ ಹುಳಿ ಬೆರೆಸಿ ಆಹಾರಸೇವನೆ.
- ಅರೆ ಮೊಸರು, ಎಂದರೆ ಬೆಳಗ್ಗೆ ಹೆಪ್ಪಿಟ್ಟು ಮಧ್ಯಾಹ್ನ ಅಥವಾ ಮಧ್ಯಾಹ್ನ ಹೆಪ್ಪಿಟ್ಟು ರಾತ್ರಿ ಸೇವಿಸುವುದು. ಪೂರ್ಣ ಹೆಪ್ಪಾಗದ ಮೊಸರನ್ನು ಸೇವಿಸುವುದು.
- ತಂಗಳು, 'ತಂಪುಪೆಟ್ಟಿಗೆ'ಯಲ್ಲಿ ಇಟ್ಟು, ಹೊರತೆಗೆದು, ಮತ್ತೆ ಬಿಸಿ ಮಾಡಿ ಸೇವಿಸುವ ಆಹಾರಗಳು.

ಹೀಗೆ ತಿಳಿದೋ ಅಥವಾ ಅನುಕೂಲಕ್ಕಾಗಿಯೋ ಮಾಡುವ ಆಹಾರಕ್ರಮದ ವಿಕೃತಿಗಳ ನಿರಂತರ ಸೇವನೆಯು ಕಾಲಾಂತರದಲ್ಲಿ ಗಂಟುಗಳ ಊತಕ್ಕೆ, ಸಂಧಿಗಳ ಚಲನಸಾಮರ್ಥ್ಯಗಳ ಕುಂಠಿತಕ್ಕೆ ಕಾರಣವಾಗುತ್ತದೆ.

ಇನ್ನು ಕೆಲವರಿಗೆ ಗಂಟುಗಳಲ್ಲಿ ಊತದ ಜೊತೆಗೆ ಗಂಟುಗಳು ಬಿಸಿಯಾಗುವುದು, ಕೆಂಪಾಗುವಿಕೆ ಉಂಟಾಗುತ್ತವೆ; ನೋವು ಕೂಡ ಇರುತ್ತದೆ. ಇದಕ್ಕೆ ಮೇಲಿನ ಕಾರಣಗಳ ಜೊತೆಗೆ:

- ಆಹಾರದೊಡನೆ ಅಥವಾ ಪದೇ ಪದೇ ತಂಪಾದ ಪಾನೀಯಗಳ ಸೇವನೆ. ಅತಿಯಾದ ಮದ್ಯಪಾನ. ಮದ್ಯಪಾನದೊಡನೆ ಅಥವಾ ಪದೇ ಪದೇ ಕರಿದ ಪದಾರ್ಥಗಳ ಸೇವನೆ.
- ಹಸಿವಾದಾಗಲೂ ಆಹಾರವನ್ನು ಸೇವಿಸದೆ, ಪದೇ ಪದೇ ಕಾಫಿ ಅಥವಾ ಚಹಾದ ಸೇವನೆ.
- ಅತಿ ಖಾರ, ಹುಳಿ, ಹೆಚ್ಚು ಮಸಾಲೆ ಇರುವ ಕರಿದ ಪಾದಾರ್ಥಗಳು, ಅಜಿನೋಮೋಟೋ, ಅಸಿಟಿಕ್ ಅಮ್ಲ ಹಾಕಿ ತಯಾರಿಸಿರುವ ಆಹಾರಗಳ ನಿರಂತರ ಸೇವನೆ.
- ಹುಳಿ ಬರಿಸಿದ ಪದಾರ್ಥಗಳಾದ ದೋಸೆ, ಇಡ್ಲಿ, ಮುಂತಾದವುಗಳು, ಬ್ರೆಡ್, ಇತರೆ ಬೇಕರಿ ಪದಾರ್ಥಗಳು, ಚೀಸ್ ಪನ್ನೀರ್ ಹಾಕಿ ತಯಾರಿಸಿರುವ ಪಿಡ್ಜ, ಬರ್ಗರ್ ರೀತಿಯ ಪದಾರ್ಥಗಳ ನಿತ್ಯ ನಿರಂತರ ಸೇವನೆ.
- ವ್ಯಾಯಾಮವೇ ಇಲ್ಲದಿರುವ ಜೀವನಶೈಲಿ.
- ಡಯಟ್ ಎನ್ನುವ ಹೆಸರಿನಲ್ಲಿ ಕೇವಲ ಮೊಳಕೆಕಾಳು, ತರಕಾರಿ, ಹಣ್ಣುಗಳ ಸೇವನೆ.
- ಆಹಾರದ ನಂತರ ಖಾರದ ಕಡ್ಲೇಕಾಯಿ, ಪುರಿ, ಅಥವಾ ಅವಲಕ್ಕಿ, ಕರಿದ ಪದಾರ್ಥಗಳ ಸೇವನೆ – ಇವೂ ಗಂಟುನೋವಿಗೆ ಕಾರಣವಾಗುತ್ತವೆ.

ಇನ್ನು ಕೆಲವರಿಗೆ ಸಂದುಗಳಲ್ಲಿ ಶಬ್ದ ಬರುವುದು, ಸಂದು ಜಾರುವುದು, ಚಲನೆ ಸಾಧ್ಯವಾಗದಿರುವುದು, ಸಂದುಗಳು ಒಣಗಿದಂತಾಗುವುದು – ಈ ಸಮಸ್ಯೆಗಳು ಎದುರಾಗುತ್ತವೆ. ಇವರಿಗೆ ಸಂದುಗಳಲ್ಲಿರುವ ಜಿಡ್ಡಿನಂಶ ಒಣಗಿ ಮೂಳೆ, ಸ್ನಾಯುಗಳು ಒಂದಕ್ಕೊಂದು ಉಜ್ಜಿ ನೋವಾಗುತ್ತಿರುತ್ತದೆ. ಕೆಲವೊಮ್ಮೆ ಮಾಂಸಖಂಡ ಅಥವಾ ಸ್ನಾಯುಗಳ ಊತ, ಸೆಳೆತವೂ ಸಂದುಗಳ ನೋವು, ಚಲನೆ ಕುಂಠಿತವಾಗುವುದಕ್ಕೆ ಕಾರಣವಾಗುತ್ತವೆ.

- ಅತಿಯಾದ ಉಪವಾಸ, ಅಕಾಲದಲ್ಲಿ ಆಹಾರಸೇವನೆ, ಅಲ್ಪಾಹಾರಸೇವನೆ, ರಾತ್ರಿ ತಡವಾಗಿ ಊಟ ರಾತ್ರಿ 'ಗುರು ಆಹಾರ'ವನ್ನೂ (heavy food), ಹಗಲು 'ಲಘು ಆಹಾರವ'ನ್ನೂ (light food) ಸೇವಿಸುವುದು.
- ಜಿಡ್ಡಿನ ಪದಾರ್ಥಗಳನ್ನು ಸಂಪೂರ್ಣವಾಗಿ ವರ್ಜಿಸುವುದು.
- ಅಕಾಲದಲ್ಲಿ ಅತಿಯಾಗಿ ವ್ಯಾಯಾಮ ಮಾಡುವುದು. ಕೆಲವು ದಿನ ವ್ಯಾಯಮ, ಕೆಲವು ದಿನ ಅವ್ಯಾಯಮ; ಅತಿ ತಂಪಾದ ವಾತಾವರಣದಲ್ಲಿ, ಅಥವಾ ಫ್ಯಾನ್ ಹಾಕಿಕೊಂಡು ವ್ಯಾಯಾಮ ಮಾಡುವುದು. ವ್ಯಾಯಾಮ ಮಾಡಿದ ತಕ್ಷಣ ತಂಪು ಪಾನೀಯ ಅಥವಾ ಅತಿ ತಂಪಾದ ನೀರಿನ ಸೇವನೆ. ಅಥವಾ ವ್ಯಾಯಾಮ ಮಾಡಿದ ಕೂಡಲೆ ತಂಪಾದ ನೀರಿನಲ್ಲಿ ಸ್ನಾನ ಮಾಡುವುದು.
- ಮೈಗೆ ಎಣ್ಣೆ ಹಚ್ಚದೆ ಇರುವುದು. ಎಣ್ಣೆ ಹಚ್ಚದೆ ಅತಿ ಬಿಸಿ ನೀರಿನಲ್ಲಿ ಸ್ನಾನ, ಬಿಸಿಲಿನಲ್ಲಿ ಹೆಚ್ಚಾಗಿ ತಿರುಗುವುದು, ಆಹಾರ ಸೇವಿಸದೆ ಬಿಸಿಲಿನಲ್ಲಿ ತಿರುಗುವುದು.
- ಹೊಟ್ಟೆಯಲ್ಲಿ ಆಹಾರ ಜೀರ್ಣವಾಗುವ ಮೊದಲೇ ಸ್ನಾನ ಅಥವಾ ವ್ಯಾಯಾಮ ಮಾಡುವುದು.
- ರಾತ್ರಿ ನಿದ್ರೆಗೆಡುವುದು. ಹಗಲು ತಡವಾಗಿ ಏಳುವುದು.

ಈ ಮೇಲಿನ ಯಾವ ಕಾರಣದಿಂದ ನೋವುಂಟಾಗುತ್ತಿದೆ ಎಂಬುದನ್ನು ಗಮನಿಸಿ ಆ ಕಾರಣಗಳ ತ್ಯಾಗವೇ ಮೊದಲನೆಯ ಚಿಕಿತ್ಸೆ. ಬೆಳಗ್ಗೆ ಸೂರ್ಯೋದಯದ ಮೊದಲೇ ಏಳುವುದು, ಬೆವರು ಬರುವಷ್ಟು ವ್ಯಾಯಾಮ, ನಿತ್ಯ ಅಭ್ಯಂಗ, ಹದವಾದ ಬಿಸಿನೀರಿನಲ್ಲಿ ಸ್ನಾನ ಬೆಳಗಿನ ಆಹಾರಸೇವನೆಗೆ ಮೊದಲೇ ಸ್ನಾನ ಮಾಡುವುದು. ಸಕಾಲದಲ್ಲಿ ಬಿಸಿಯಾದ, ಬೇಯಿಸಿದ ಆಹಾರ, ಬಿಸಿನೀರನ್ನು ಸೇವಿಸುವುದರಿಂದ ಸಂದುನೋವನ್ನು ತಡೆಗಟ್ಟಬಹುದು. ವಿಪರೀತ ನೋವಿದ್ದವರು ಜೀರಿಗೆ, ಇಂಗು, ಕರ್ಪೂರಗಳನ್ನು ಹಾಕಿ ಬಿಸಿಮಾಡಿದ ಎಣ್ಣೆಯನ್ನು ಸಂದುಗಳಿಗೆ ಸವರುವುದರಿಂದ ಸ್ವಲ್ಪಮಟ್ಟಿಗೆ ನೋವನ್ನು ತಡೆಗಟ್ಟಬಹುದು.

ಹೀಗೆ ನಮ್ಮ ದಿನಚರಿಯಲ್ಲಿಯ ಆಹಾರ ವ್ಯತ್ಯಾಸಗಳಿಂದ ದೇಹಧಾತುಗಳ ಪೋಷಣೆಯು ವ್ಯತ್ಯಾಸವಾಗಿ, ರಕ್ತದಲ್ಲಿ ಅನೇಕ ವಿಕೃತಿಗಳು ಉತ್ಪತ್ತಿಯಾಗಿ ಸಂದುಗಳ ವಿಕೃತಿಗೆ ಕಾರಣವಾಗುತ್ತವೆ. ಇನ್ನು ಕೆಲವೊಮ್ಮೆ ಇತರೆ ರೋಗಗಳ ಪ್ರಭಾವದಿಂದ, ಎಂದರೆ ಮಧುಮೇಹ, ಹೆಂಗಸರಲ್ಲಿ ಮುಟ್ಟು ನಿಲ್ಲುವಾಗ – ಹೀಗೆ ಬೇರೆ ಬೇರೆ ರೋಗಗಳ ಕಾರಣದಿಂದ ಸಂದುನೋವು ಬರಬಹುದು. ಆಯಾಯ ರೋಗಗಳ ಚಿಕಿತ್ಸೆ ಸರಿಯಾಗಿ ಆದರೆ ಸಂದುನೋವು ಗುಣವಾಗುತ್ತದೆ.

‘ಆರ್‌ಎಸ್‌ಎಸ್ ಆಳ ಮತ್ತು ಅಗಲ’: 16 ದಿನಗಳಲ್ಲಿ 84 ಸಾವಿರ ಪ್ರತಿ ಮುದ್ರಣ!



• ಕೆ. ನರಸಿಂಹಮೂರ್ತಿ

ಮೈಸೂರು: 16 ದಿನದ ಹಿಂದೆ ಪ್ರಕಟವಾಗಿ ರಾಜ್ಯವ್ಯಾಪಿ ಸಂಚಲನ ಮೂಡಿಸಿರುವ ದೇವನೂರ ಮಹಾದೇವ ಅವರ ‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಕೃತಿಯು 84 ಸಾವಿರ ಪ್ರತಿಗಳ ಮುದ್ರಣ ಕಂಡಿದೆ. ಮಾರಾಟಕ್ಕೆ ಸಿದ್ಧವಾಗುತ್ತಿರುವ ಕೃತಿಗಳನ್ನೂ ಸೇರಿಸಿದರೆ ಒಂದು ಲಕ್ಷ ದಾಟಲಿದೆ.

72 ಪುಟಗಳ ಕೃತಿ ಪ್ರಕಟಣೆಯ ಹಕ್ಕುಸ್ವಾಮ್ಯವನ್ನು ಮುಕ್ತವಾಗಿಟ್ಟಿರುವುದರಿಂದ, ವೃತ್ತಿಪರ ಪ್ರಕಾಶಕರಷ್ಟೇ ಅಲ್ಲದೆ, ವಿವಿಧ ಸಂಘಟನೆಗಳು ಕೂಡ ಪುಸ್ತಕವನ್ನು ಪ್ರಕಟಿಸುತ್ತಿವೆ.

> **ಕೃತಿಯನ್ನು ರಾಜ್ಯದಾದ್ಯಂತ ಮುದ್ರಿಸಿ ಮಾರಾಟ ಮಾಡುತ್ತಿರುವುದು ಸರಿಯಾಗಿದೆ. ಆದರೆ ಪ್ರತಿಷ್ಠಿತ ಪ್ರಕಾಶಕರು ತಮ್ಮ ಲಾಭಾಂಶದಲ್ಲಿ ಲೇಖಕರಿಗೆ ಆರ್ಥಿಕ ಸಹಾಯ ನೀಡುವ ಕಡೆಗೂ ಯೋಚಿಸಬೇಕು**
> **ಬಂಗವಾದಿ ನಾರಾಯಣಪ್ಪ**
> ಓದುಗ, ಮೈಸೂರು

ಮೊದಲಿಗೆ ಅಭಿರುಚಿ ಪ್ರಕಾಶನ, ಗೌರಿ ಮೀಡಿಯಾ ಟ್ರಸ್ಟ್, ಚಿಕ್ಕನಾಯಕನಹಳ್ಳಿಯ ನಡೆ- ನುಡಿ, ತಿಪಟೂರಿನ ಜನಸ್ಪಂದನ ಟ್ರಸ್ಟ್, ಮಾನವ ಬಂಧುತ್ವ ವೇದಿಕೆ ಹಾಗೂ ಭಾರತೀಯ ಪರಿವರ್ತನ ಸಂಘಕ್ಕೆ ಒಟ್ಟು 9 ಸಾವಿರ ಪ್ರತಿಗಳನ್ನು ಮುದ್ರಿಸುವ ಅವಕಾಶ ನೀಡಲಾಗಿತ್ತು. ಗೌರಿ ಮೀಡಿಯಾ ಟ್ರಸ್ಟ್ ಎರಡೇ ದಿನಗಳಲ್ಲಿ 2 ಸಾವಿರ ಪ್ರತಿಗಳನ್ನು ಮಾರಾಟ ಮಾಡಿತ್ತು.

ನಂತರದ ದಿನಗಳಲ್ಲಿ ಸಾವಿರಾರು ಪ್ರತಿಗಳನ್ನು ಮುದ್ರಿಸಲಾಗಿದೆ. ಕೃತಿಯ ಮುಖಬೆಲೆ ₹ 40 ಇದ್ದು, ಕೆಲವೆಡೆ ₹ 25ಕ್ಕೂ ಮಾರಾಟ ಮಾಡಲಾಗುತ್ತಿದೆ. ಕೆಲವರು ಕೃತಿಯನ್ನು ಖರೀದಿಸಿ ಉಚಿತವಾಗಿಯೂ ವಿತರಿಸುತ್ತಿದ್ದಾರೆ. ಕೋಲಾರದ ಆದಿಮ ಪ್ರಕಾಶನ 1 ಸಾವಿರ ಪ್ರತಿಗಳನ್ನು ಮುದ್ರಿಸಿ, ₹ 25ಕ್ಕೆ ಮಾರಾಟ ಮಾಡುತ್ತಿದೆ.

ಸಂಭಾವನೆ ವಿಚಾರ: ‘ಕೃತಿಯ ಮುದ್ರಿತ ಪ್ರತಿಗಳು ಲಕ್ಷ ಮುಟ್ಟುತ್ತಿರುವ ವೇಳೆಯಲ್ಲೇ ಲೇಖಕರಿಗೆ ಪ್ರಕಾಶಕರು ಸಂಭಾವನೆ ನೀಡಬೇಕು’ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಆದಿಮ ಪ್ರಕಾಶನದ ಎಚ್.ಎಂ.ರಾಮಚಂದ್ರ, ‘ಪುಸ್ತಕ ಪ್ರಕಟಿಸಿದ ಬಳಿಕ ಲೇಖಕರಿಗೆ ಸಂಭಾವನೆ ನೀಡುವುದು ಪ್ರಕಾಶಕರ ಪ್ರಾಥಮಿಕ ಜವಾಬ್ದಾರಿ. ಹೀಗಾಗಿ ನಮ್ಮ ಪ್ರಕಾಶನದ ವತಿಯಿಂದ ₹ 2 ಸಾವಿರ ಸಂಭಾವನೆಯನ್ನು ಅವರಿಗೆ ಸ್ವಯಂಸ್ಫೂರ್ತಿಯಿಂದ ನೀಡಿದೆವು’ ಎಂದು ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ದೇವನೂರ ಮಹಾದೇವ, ‘ಕೃತಿಯ ಬೆಲೆಯನ್ನು ₹ 40ಕ್ಕಿಂತ ಹೆಚ್ಚಿಗೆ ನಿಗದಿ ಮಾಡಿದರೆ ಮಾತ್ರ ಸಂಭಾವನೆ ಕೊಡಬೇಕು ಎಂದು ಮೊದಲೇ ಹೇಳಿದ್ದೆ. ಈಗ ಅಷ್ಟೇ ದರವಿರುವುದರಿಂದ ಸಂಭಾವನೆ ನಿರೀಕ್ಷಿಸುವುದಿಲ್ಲ. ಇಂಗ್ಲಿಷ್‌ಗೆ ಕೃತಿ ಮುದ್ರಣಗೊಂಡರೆ ಈ ದರಕ್ಕಿಂತ ಹೆಚ್ಚಿರುವುದರಿಂದ ಅವರು ಕೊಡಬೇಕಾಗುತ್ತದೆ’ ಎಂದು ಹೇಳಿದರು. ‘ಎಲ್ಲ ಪ್ರಕಾಶಕರನ್ನು ಸಂಪರ್ಕಿಸಿ, ಮುದ್ರಣಕ್ಕೆ ಸಿದ್ಧಗೊಂಡ ಪ್ರತಿಗಳ ಅಂಕಿ ಅಂಶವನ್ನು ಸಂಗ್ರಹಿಸಬೇಕಿದೆ’ ಎಂದು ತಿಳಿಸಿದರು.

ದೇವನೂರರಿಗೆ ಪೊಲೀಸ್ ಭದ್ರತೆ

ಮೈಸೂರು: ದೇವನೂರ ಮಹಾದೇವ ಅವರಿಗೆ ಪೊಲೀಸ್ ಇಲಾಖೆಯು ಭದ್ರತೆ ಕಲ್ಪಿಸಿದೆ. ಕುವೆಂಪುನಗರದಲ್ಲಿರುವ ಅವರ ಮನೆಯ ಬಳಿ ಎರಡು ದಿನಗಳಿಂದ ಪೊಲೀಸರು ದಿನದ 24 ಗಂಟೆಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ನಿವಾಸದ ಸುತ್ತಮುತ್ತಲಿನ ಚಲನವಲನಗಳ ಬಗ್ಗೆ ಕಣ್ಣಿಟ್ಟಿದ್ದಾರೆ. ‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಕೃತಿ ರಚನೆ ನಂತರ ಮಹಾದೇವ ಬಹಳ ಚರ್ಚೆಯಲ್ಲಿದ್ದಾರೆ. ಪರ-ವಿರೋಧ ಹೇಳಿಕೆಗಳು ಬರುತ್ತಿವೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಪ್ರದೀಪ್ ಗುಂಟಿ, ‘ಮುಂಜಾಗ್ರತಾ ಕ್ರಮವಾಗಿ ದೇವನೂರರಿಗೆ ಭದ್ರತೆ ನೀಡಲಾಗಿದೆ. ಗರುಡ ಪೊಲೀಸರೂ ಎಂದಿನಂತೆ ಗಸ್ತು ನಿರ್ವಹಿಸುತ್ತಾರೆ’ ಎಂದರು.

ಚಿಕ್ಕಮಗಳೂರಿನ ಕೊಗ್ರೆ ಬಳಿ ಸೇತುವೆ ಕುಸಿತ, ಸಂಚಾರ ಬಂದ್; ತೀರ್ಥಹಳ್ಳಿಯಲ್ಲಿ ಇಬ್ಬರ ಸಾವು

ಮಳೆ ಬಿಡುವು: ತಗ್ಗಿದ ನದಿಗಳ ನೀರಿನ ಮಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೋಮವಾರ ಮಳೆ ಬಿಡುವು ನೀಡಿದೆ. ಜಲಾಶಯಗಳ ಒಳ ಹರಿವು ಸಹ ಕಡಿಮೆ ಆಗಿದೆ. ಮಳೆ ಸಂಬಂಧಿ ಅವಘಡಗಳಿಂದಾಗಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಕೊಗ್ರೆ ಬಳಿ ಸೇತುವೆ ಕುಸಿದಿದ್ದು, ಶೃಂಗೇರಿ- ಹೊರನಾಡು ಮಾರ್ಗದಲ್ಲಿ ಸಂಚಾರ ಬಂದ್ ಆಗಿದೆ. ಮೆಣಸಿನಹಾಡ್ಯ- ಬಲಿಗೆ ಪರ್ಯಾಯ ಮಾರ್ಗದಲ್ಲಿ ವಾಹನಗಳು ಸಂಚರಿಸುತ್ತಿವೆ. ಚಿಕ್ಕಮಾಗರವಳ್ಳಿ ಗ್ರಾಮದ ತೋಟವೊಂದರಲ್ಲಿ ಮಣ್ಣು ಕುಸಿದು ಕೆಲವು ಅಡಿಕೆ, ಕಾಫಿ ಗಿಡಗಳು ನಾಶವಾಗಿವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಭಾನುವಾರ ರಾತ್ರಿಯಿಡೀ ಆರ್ಭಟಿಸಿದ್ದ ಮಳೆ, ಸೋಮವಾರ ಬಿಡುವು ನೀಡಿತು. 20 ದಿನಗಳ ನಂತರ ಬಿಸಿಲು ಕಾಣಿಸಿಕೊಂಡಿದೆ. ತುಂಗಾ, ಭದ್ರಾ, ಲಿಂಗನಮಕ್ಕಿ ಜಲಾಶಯಗಳ ಒಳಹರಿವು ಸಹ ಕಡಿಮೆ ಆಗಿದೆ.

ಮಳೆಯಿಂದಾಗಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ತಾಲ್ಲೂಕಿನ ಮೇಲಿನಕುರುವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಳುಗೋಡು ಗ್ರಾಮದ ಬಾಳೆಹಿತ್ಲು ಗ್ರಾಮದ ಹೊರವಲಯದ ಹಳ್ಳದಲ್ಲಿ ಭಾನುವಾರ ಕೊಚ್ಚಿಕೊಂಡು ಹೋಗಿದ್ದ ರೈತ ಮಹಿಳೆ ಭವಾನಿ ಶಂಕರನಾರಾಯಣ (52) ಅವರ ಶವ ತಡರಾತ್ರಿ ಪತ್ತೆಯಾಗಿದೆ.

ತೂದೂರಿನ ಕೂಲಿ ಕಾರ್ಮಿಕ ಅನ್ವರ್ (48) ಶನಿವಾರ ಗ್ರಾಮದ ಸಮೀಪ ತುಂಗಾ ನದಿಯಲ್ಲಿ ನೆರೆ ಪರಿಸ್ಥಿತಿ ವೀಕ್ಷಣೆಗೆ ಹೋದಾಗ ಕಾಲು ಜಾರಿ ನದಿಗೆ ಬಿದ್ದಿದ್ದರು. ಅವರ ಶವ ಸೋಮವಾರ ತೂದೂರು ಬಳಿಯೇ ಪತ್ತೆಯಾಗಿದೆ.

ಬೆಳಗಾವಿ ಜಿಲ್ಲೆಯಲ್ಲೂ ಮಳೆ ಬಿಡುವು ನೀಡಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲೂ ಮಳೆ ಕಡಿಮೆಯಾಗಿದ್ದು, ಜಿಲ್ಲೆಯ ನದಿಗಳ ನೀರಿನ ಮಟ್ಟದಲ್ಲೂ ಇಳಿಕೆಯಾಗಿದೆ.

ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಸೇತುವೆ ಬಳಿ ಕೃಷ್ಣಾ ನದಿಗೆ 1.26 ಲಕ್ಷ ಕ್ಯುಸೆಕ್ ನೀರು ಹರಿದುಬರುತ್ತಿದೆ. ಮಲಪ್ರಭಾ ಹರಿವು 13,423 ಕ್ಯುಸೆಕ್ ಇದೆ. ಘಟಪ್ರಭಾ ನದಿಯಲ್ಲೂ 27,683 ಕ್ಯುಸೆಕ್‌ಗೆ ಇಳಿದಿದೆ. ಆದರೂ ಖಾನಾಪುರ, ನಿಪ್ಪಾಣಿ, ಗೋಕಾಕ, ಚಿಕ್ಕೋಡಿ ತಾಲ್ಲೂಕುಗಳ ಇನ್ನೂ 35 ಸೇತುವೆಗಳ ಮೇಲೆ ನೀರು ಹರಿಯುತ್ತಿದ್ದು, ಸಂಚಾರಕ್ಕೆ ತೆರೆದುಕೊಂಡಿಲ್ಲ.

ಕೊಡಗು ಜಿಲ್ಲೆಯ ಕೆಲವೆಡೆ ತುಂತುರು ಮಳೆಯಾಗಿದೆ. ಶೀತ ಹೆಚ್ಚಾಗಿ ಕಾಫಿ, ಮೆಣಸು, ಅಡಿಕೆ ಬೆಳೆಗಳು ಕೊಳೆಯುತ್ತಿವೆ. ಇಲ್ಲಿನ ಚೆಟ್ಟಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಾಳಜಿ ಕೇಂದ್ರದಲ್ಲಿರುವ 7 ಕುಟುಂಬಗಳ 28 ಮಂದಿ, ಮನೆ ಕೊಡುವವರೆಗೂ ಕೇಂದ್ರ ಬಿಟ್ಟು ತೆರಳುವುದಿಲ್ಲ ಎಂದು ಹಟ ಹಿಡಿದಿದ್ದಾರೆ. ಅವರ ಮನವೊಲಿಕೆ ಕಾರ್ಯ ನಡೆದಿದೆ. ಇನ್ನೂ 602 ಮಂದಿ ಕೇಂದ್ರಗಳಲ್ಲಿದ್ದಾರೆ.

ಕರಾವಳಿ, ದಕ್ಷಿಣ ಒಳನಾಡಿನಲ್ಲಿ ಸಾಧಾರಣ ಮಳೆ (ಬೆಂಗಳೂರು ವರದಿ): ರಾಜ್ಯದಲ್ಲಿ ಮಳೆಯ ಅಬ್ಬರ ತಗ್ಗಲಿದ್ದು, ಕರಾವಳಿ, ದಕ್ಷಿಣ ಒಳನಾಡಿನ, ಉತ್ತರ ಒಳನಾಡಿನ ಅಲ್ಲಲ್ಲಿ ಮಂಗಳವಾರ ಸಾಧಾರಣ ಮಳೆ ಸುರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ಚಿಕ್ಕಮಗಳೂರಿನ ಕೊಪ್ಪ ತಾಲ್ಲೂಕಿನ ಕೊಗ್ರೆಯಲ್ಲಿ ಸೇತುವೆ ಕುಸಿದಿದೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.52	73,800	53,935
ಹಾರಂಗಿ	2,859	2,854.93	11,080	12,000
ಕಬಿನಿ	2,284	2282.51	30,463	29,000
ಹೇಮಾವತಿ	2,922	2,920.10	26,099	28,285
ಲಿಂಗನಮಕ್ಕಿ	1819	1,795.60	41,604	4,799.17
ಸೂಪಾ(ಮೀ)	564	539.90	26,396	-
ಮಾಣಿ	595	582.92	5,152	-
ತುಂಗಭದ್ರಾ	1,633	1,630.73	1,64,978	1,55,474
ಮಲಪ್ರಭಾ	2,079.50	2,066.50	13,423	194
ಘಟಪ್ರಭಾ	2,175	2,145.167	27,683	13
ಭದ್ರಾ	186	182.3	33,891	33,301
ಆಲಮಟ್ಟಿ (ಮೀ)	519.60	517.06	1,32,835	1,50,000
ನಾರಾಯಣಪುರ (ಮೀ)	492.25	491.07	1,40,000	1,38,658

* ನೆಲಮಟ್ಟದಿಂದ

ಕೆಆರ್‌ಎಸ್: 2ನೇ ಬಾರಿಗೆ ಬಾಗಿನ ಅರ್ಪಿಸಲಿರುವ ಸಿ.ಎಂ

ಮೈಸೂರು/ಮಂಡ್ಯ: ಕೆಆರ್‌ಎಸ್ ಜಲಾಶಯ 10 ತಿಂಗಳ ಅಂತರದಲ್ಲಿ 2ನೇ ಬಾರಿ ಭರ್ತಿಯಾಗುತ್ತಿದ್ದು, ಜುಲೈ 20ರಂದು ಮಧ್ಯಾಹ್ನ 12.10ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಾಗಿನ ಅರ್ಪಿಸಲಿದ್ದಾರೆ.

ಬೊಮ್ಮಾಯಿ ಅವರು ಮೊದಲ ಬಾರಿಗೆ ಕಳೆದ ವರ್ಷ ನ.2ರಂದು ಬಾಗಿನ ಅರ್ಪಿಸಿದ್ದರು, ಈಗ 2ನೇ ಬಾರಿಗೆ ಅವಕಾಶ ಬಂದಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಜಲಾಶಯ ಗರಿಷ್ಠ ಮಟ್ಟ (124.80) ತಲುಪುತ್ತಿದೆ. ಸದ್ಯ ಜಲಾಶಯದ ನೀರಿನ ಮಟ್ಟ 123.52 ಅಡಿಗೆ ತಲುಪಿದ್ದು 73,800 ಕ್ಯುಸೆಕ್ ಒಳಹರಿವು, 53,935 ಕ್ಯುಸೆಕ್ ಹೊರಹರಿವು ಇದೆ. ಇದಕ್ಕೂ ಮುನ್ನ, ಮುಖ್ಯಮಂತ್ರಿಯು ಚಾಮುಂಡೇಶ್ವರಿ ವರ್ಧಂತಿ ಅಂಗವಾಗಿ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಬೆಳಿಗ್ಗೆ 11ಕ್ಕೆ ಎಚ್.ಡಿ. ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸಲಿದ್ದಾರೆ.

ಕೊಡಗು ಡಿ.ಸಿ ಕಚೇರಿ ತಡೆಗೋಡೆ ಪರಿಶೀಲನೆ

ಮಡಿಕೇರಿ: ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆ ಸ್ಲ್ಯಾಬ್‌ಗಳು ಹೊರಚಾಚಿರುವ ಸ್ಥಳಕ್ಕೆ ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಗೋವಿಂದರಾಜು ಹಾಗೂ ಹಾಸನದ ಸೂಪರಿಂಟೆಂಡೆಂಟ್ ಎಂಜಿನಿಯರ್ ರವಿಕುಮಾರ್ ಸೋಮವಾರ ಭೇಟಿ ನೀಡಿ ಪರಿಶೀಲನೆ ಆರಂಭಿಸಿದ್ದು, ಮಂಗಳವಾರ ವರದಿ ಸಲ್ಲಿಸಲಿದ್ದಾರೆ.

ಬದಲಿ ಮಾರ್ಗದಲ್ಲಿ ಬಿರುಕು- ಆತಂಕ: ಮಡಿಕೇರಿ: ಇಲ್ಲಿನ ಕೊಡಗು ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆ ಸ್ಲ್ಯಾಬ್‌ಗಳು ಹೊರಚಾಚಿರುವುದರಿಂದ ಮಂಗಳೂರಿನ ಪ್ರಯಾಣಕ್ಕಾಗಿ ಪರ್ಯಾಯ ವ್ಯವಸ್ಥೆ ಮಾಡಲಾಗಿರುವ ಮೇಕೇರಿ ರಸ್ತೆಯಲ್ಲಿ ಸೋಮವಾರ ರಾತ್ರಿ ಬಿರುಕುಗಳು ಕಾಣಿಸಿಕೊಂಡು ಆತಂಕ ಮೂಡಿಸಿವೆ.

ಬಿರುಕುಗಳ ಜತೆಗೆ ರಸ್ತೆಯ ಒಂದು ಬದಿ ಕಿತ್ತು ಬಂದಿದೆ. ಸ್ಥಳಕ್ಕೆ ಧಾವಿಸಿದ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿ ಒಂದು ಬದಿಯಲ್ಲಿ ಮಾತ್ರ ಸಂಚಾರಕ್ಕೆ ಅವಕಾಶ ನೀಡಿದ್ದಾರೆ.

ಭಾರಿ ವಾಹನ ಸಂಚಾರ ನಿಷೇಧ: ಮಡಿಕೇರಿ-ಮಂಗಳೂರು ರಸ್ತೆಯಲ್ಲಿ ಭಾರಿ ವಾಹನ ಸಂಚಾರವನ್ನು ಪೊಲೀಸರು ಸೋಮವಾರ ರಾತ್ರಿಯಿಂದಲೇ ತಡೆದಿದ್ದಾರೆ. ಸದ್ಯ, ಕೆಎಸ್‌ಆರ್‌ಟಿಸಿಗೆ ಸೇರಿದ ಐರಾವತ ಬಸ್ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಶಾಲೆ, ಮದರಸಾಗಳಲ್ಲಿ ರಾಷ್ಟ್ರ ಧ್ವಜಾರೋಹಣ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಎಲ್ಲ ಶಾಲೆ, ಪದವಿಪೂರ್ವ ಕಾಲೇಜುಗಳು ಮತ್ತು ಮದರಸಾಗಳಲ್ಲಿ ರಾಷ್ಟ್ರ ಧ್ವಜಾರೋಹಣ ಅಭಿಯಾನ ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ.

ಆಗಸ್ಟ್ 11 ರಿಂದ 17ರವರೆಗೆ ಈ ಅಭಿಯಾನ ಕೈಗೊಳ್ಳುವಂತೆ ಶಿಕ್ಷಣ ಇಲಾಖೆ ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳು ಮತ್ತು ಎಲ್ಲ ಮದರಸಾಗಳಿಗೆ ನಿರ್ದೇಶನ ನೀಡಲಾಗಿದೆ.

ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ತಮ್ಮ ಮನೆಗಳ ಮೇಲೆ ರಾಷ್ಟ್ರ ಧ್ವಜಾರೋಹಣ ಮಾಡಬೇಕು ಎಂದು ಸೂಚಿಸಲಾಗಿದೆ.

‘ಅಮೃತ ಮಹೋತ್ಸವ ಆಚರಣೆಯು 2021ರ ಮಾರ್ಚ್ 12ರಿಂದ ಆರಂಭವಾಗಿದ್ದು, 75ನೇ ಸ್ವಾತಂತ್ರ್ಯ ದಿನಾಚರಣೆ ಒಳಗೊಂಡಂತೆ 75 ವಾರಗಳ ಕಾಲ ನಡೆಯುತ್ತಿದೆ. 2023ರ ಆಗಸ್ಟ್ 15ರ ನಂತರ ಮಹೋತ್ಸವ ಆಚರಣೆ ಮುಕ್ತಾಯಗೊಳ್ಳಲಿದೆ’ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ತಿಳಿಸಿದ್ದಾರೆ.

‘ಈ ಕಾರ್ಯಕ್ರಮದ ಅಂಗವಾಗಿ, ಎಲ್ಲ ಶಾಲಾ ಕಾಲೇಜುಗಳು ಮತ್ತು ಮದರಸಾಗಳಲ್ಲಿ ರಾಷ್ಟ್ರಭಕ್ತಿ ಮೂಡಿಸುವ ಸ್ವಾತಂತ್ರ್ಯದ ತ್ಯಾಗ, ಬಲಿದಾನ ಮೆಲುಕು ಹಾಕುವ ಗೀತ ಗಾಯನ, ರಸಪ್ರಶ್ನೆ, ಪ್ರಬಂಧ ಬರೆಯುವ ಸ್ಪರ್ಧೆ, ಸ್ವಾತಂತ್ರ್ಯ ಹೋರಾಟಗಾರರ ಚಿತ್ರ ಬಿಡಿಸುವ ಸ್ಪರ್ಧೆಗಳನ್ನು ಆಯೋಜಿಸಲು ಕ್ರಮ ಕೈಗೊಳ್ಳಬೇಕು’ ಎಂದು ಅವರು ಸೂಚಿಸಿದ್ದಾರೆ.

‘ಅಮೃತ ಮಹೋತ್ಸವದ ಭಾಗವಾಗಿ ಪ್ರತಿ ಮನೆಯಲ್ಲೂ ಧ್ವಜಾರೋಹಣ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮನೆಮನೆಗಳಲ್ಲಿ ರಾಷ್ಟ್ರಧ್ವಜ ಹಾರಿಸುವ ಮೂಲಕ ನಮ್ಮ ಹಿರಿಯರ ತ್ಯಾಗ, ಬಲಿದಾನವನ್ನು ನೆನೆಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ’ ಎಂದು ತಿಳಿಸಿದ್ದಾರೆ.

Deccan International School

CONGRATULATIONS & BEST WISHES TO OUR SCHOOL TOPPERS

ICSE RESULTS 2021-22



ಜಯದೇವ ಆಸ್ಪತ್ರೆ: ಡಾ. ಮಂಜುನಾಥ್ ಅವಧಿ ವಿಸ್ತರಣೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರ ಅಧಿಕಾರ ಅವಧಿಯನ್ನು 2023ರ ಜುಲೈ 19ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಸೋಮವಾರ ಅಧಿಸೂಚನೆ ಹೊರಡಿಸಿದೆ.

ಡಾ.ಸಿ.ಎನ್. ಮಂಜುನಾಥ್

ಮಂಜುನಾಥ್ ಅವರ ಅಧಿಕಾರ ಅವಧಿ ಮಂಗಳವಾರ (ಜುಲೈ 19) ಮುಕ್ತಾಯಗೊಳ್ಳಬೇಕಿತ್ತು. ಆದರೆ, ಸಂಸ್ಥೆಯ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಪಡೆಯುವ ಷರತ್ತು ವಿಧಿಸಿ ಅವರ ಅವಧಿಯನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಇನ್ನೂ ಒಂದು ವರ್ಷ ಮುಂದುವರಿಸಿದೆ.

ಡಾ.ಸಿ.ಎನ್. ಮಂಜುನಾಥ್ ಅವರನ್ನೇ ನಿರ್ದೇಶಕ ಹುದ್ದೆಯಲ್ಲಿ ಮುಂದುವರಿಸಬೇಕು ಎಂದು ಸಂಸ್ಥೆಯ ವೈದ್ಯರು ಮತ್ತು ಸಿಬ್ಬಂದಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದರು. ಅಲ್ಲದೆ, ಅವರನ್ನು ಮುಂದುವರಿಸುವಂತೆ ಒತ್ತಾಯಿಸಿ ಮಂಗಳವಾರ ಪ್ರತಿಭಟನೆ ನಡೆಸಲು ಸಿಬ್ಬಂದಿ ನಿರ್ಧರಿಸಿದ್ದರು.

ಹೈಕೋರ್ಟ್ ಆದೇಶಕ್ಕೆ ತಡೆ

ಒಂದನೇ ಪುಟದಿಂದ...

‘ಸ್ವಯಂ ಎಸಿಬಿಯೇ ಅತಿದೊಡ್ಡ ಭ್ರಷ್ಟರ ಕೂಪವಾಗಿದೆ ಎಂಬ ಹೇಳಿಕೆ ನೀಡಿದ ಕಾರಣಕ್ಕೆ ವರ್ಗಾವಣೆ ಬೆದರಿಕೆ ಬಂದಿದೆ’ ಎಂದು ಎಚ್.ಪಿ.ಸಂದೇಶ್ ಹೇಳಿದ್ದರು. ಮೇಲ್ಮನವಿಯ ವಿಚಾರಣೆಯ ವೇಳೆ ಈ ಬಗ್ಗೆ ಪ್ರತಿಕ್ರಿಯಿಸಿದ ತ್ರಿಸದಸ್ಯ ಪೀಠವು, ‘ವರ್ಗಾವಣೆ ಬೆದರಿಕೆ ಪ್ರಕರಣ ಪ್ರತ್ಯೇಕವಾಗಿದ್ದು, ನ್ಯಾಯಪೀಠವು ಒಂದು ಗುಂಪಿಗೆ ಬೆಂಬಲ ನೀಡುತ್ತಿದೆ ಎಂದು ಜನರಿಗೆ ಭಾವನೆ ಮೂಡಿಸಲಾಗದು’ ಎಂದು ಹೇಳಿತು.



ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಹಿರಿಯ ವಕೀಲರಾದ ಮುಕುಲ್ ರೊಹಟಗಿ, ಎಸ್.ನಾಗಮುತ್ತು, ಸಂಜಯ್ ಎಂ.ನುಲಿ ಅವರ ವಾದಗಳನ್ನು ಆಲಿಸಿದ ನ್ಯಾಯಪೀಠವು, ‘ಹೈಕೋರ್ಟ್ ನ್ಯಾಯಮೂರ್ತಿ ಅವರು ಜಾಮೀನು ಅರ್ಜಿ ವಿಚಾರಣೆಗೆ ಸಂಬಂಧಿಸದ ವಿಚಾರಗಳ ಬಗ್ಗೆ ಹೇಳಿಕೆ ನೀಡಿದ್ದಾರೆ’ ಎಂದು ಅಭಿಪ್ರಾಯ ವ್ಯಕ್ತಪಡಿಸಿತು.

2016ರಿಂದ ಎಲ್ಲ ಪ್ರಕರಣಗಳಲ್ಲಿ ಎಸಿಬಿ ಸಲ್ಲಿಸಿದ ಅಂತಿಮ ವರದಿಯ ವಿವರಗಳನ್ನು ಸಲ್ಲಿಸುವಂತೆ ಹೈಕೋರ್ಟ್ ನೀಡಿದ್ದ ಆದೇಶಗಳನ್ನು ಪೀಠ ಅಮಾನತುಗೊಳಿಸಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಕರ್ನಾಟಕ ಸರ್ಕಾರ ಹಾಗೂ ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ನ್ಯಾಯಪೀಠ ಮೂರು ವಾರಗಳ ಕಾಲ ಮುಂದೂಡಿದೆ.

ಜಾಮೀನು ಅರ್ಜಿಯ ವಿಚಾರಣೆಯ ವೇಳೆ ನ್ಯಾಯಮೂರ್ತಿ ಎಚ್.ಪಿ ಸಂದೇಶ್ ಅವರು ತಮ್ಮ ಕಾರ್ಯವೈಖರಿ ವಿರುದ್ಧ ಟೀಕಿಸಿದ್ದನ್ನು ಪ್ರಶ್ನಿಸಿ ಸೀಮಾಂತ್ ಕುಮಾರ್ ಸಿಂಗ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಜೆ.ಮಂಜುನಾಥ್ ಸಹ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

‘ಭಿಕ್ಷಾಟನೆ ನಿಷೇಧ ಕಾಯ್ದೆ ಜಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ರಾಜ್ಯದಲ್ಲಿ ಸಂಪೂರ್ಣವಾಗಿ ಜಾರಿಗೆ ತರಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್, ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಜೊತೆ ಭಿಕ್ಷಾಟನೆ ನಿರ್ಮೂಲನೆ ಕುರಿತಂತೆ ಸೋಮವಾರ ಸಭೆ ನಡೆಸಿದ ಬಳಿಕ ಅವರು ಮಾತನಾಡಿದರು.

‘ಅಮಲೇರಿಸುವ ನಿಷೇಧಿತ ಮದ್ದನ್ನು ಮಕ್ಕಳಿಗೆ ನೀಡಿ, ಅಂಗವಿಕಲರನ್ನಾಗಿ ಮಾಡಿ ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವುದು ಕಂಡುಬಂದಿದೆ. ಅದನ್ನು ಸಂಪೂರ್ಣ ನಿಯಂತ್ರಿಸಲು ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗುವುದು’ ಎಂದರು.

‘ಭಿಕ್ಷಾಟನೆ ಮಾಫಿಯಾ ನಿಯಂತ್ರಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಭಿಕ್ಷಾಟನೆಯಲ್ಲಿ ತೊಡಗಿದವರನ್ನು ರಕ್ಷಿಸಿ, ಬಾಲಗೃಹ, ಸರ್ಕಾರೇತರ ಸಂಸ್ಥೆಗಳು, ವಸತಿ ಮಂದಿರಗಳಲ್ಲಿ ಪುನರ್ವಸತಿ ಕಲ್ಪಿಸಲು ನಿರ್ಧರಿಸಲಾಗಿದೆ.

ಬೆಂಗಳೂರಿನಲ್ಲಿ 50ರಿಂದ 70 ಕಡೆಗಳಲ್ಲಿ ಭಿಕ್ಷಾಟನೆ ನಡೆಯುತ್ತಿರುವುದನ್ನು ಗುರುತಿಸಲಾಗಿದೆ. ಭಿಕ್ಷಾಟನೆಯಲ್ಲಿ ತೊಡಗಿದ್ದ 101 ಮಕ್ಕಳನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯದ ಮೂಲಕ ವಶಕ್ಕೆ ಪಡೆದು ಪುನರ್ವಸತಿ ಕಲ್ಪಿಸಲಾಗಿದೆ. 720 ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವ ಬಗ್ಗೆ ಕಾನೂನು ಸೇವಾ ಪ್ರಾಧಿಕಾರ ವರದಿ ನೀಡಿದೆ’ ಎಂದು ಸಚಿವರು ತಿಳಿಸಿದರು.

‘ಭಿಕ್ಷಾಟನೆ ನಿಯಂತ್ರಿಸಲು ಬೆಂಗಳೂರಿನ ಎಂಟು ಪೊಲೀಸ್ ವಿಭಾಗಗಳಲ್ಲಿ ತಂಡಗಳನ್ನು ರಚಿಸಿ ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ. ಮಕ್ಕಳನ್ನು ಭಿಕ್ಷಾಟನೆಗಾಗಿ ಬೀದಿಗೆ ಬಿಡುವವರ ವಿರುದ್ಧವೂ ಪ್ರಕರಣ ದಾಖಲಿಸಲಾಗುವುದು. ಅಲ್ಲದೆ, ವಶಕ್ಕೆ ಪಡೆದ ಮಕ್ಕಳು ಹಾಗೂ ತಾಯದಿರಿಗೆ ಪುನರ್ವಸತಿ ಕಲ್ಪಿಸಲು ಇಲಾಖೆಯಿಂದ ಪ್ರತ್ಯೇಕವಾಗಿ ಕಟ್ಟಡದ ವ್ಯವಸ್ಥೆ ಮಾಡಲಾಗುವುದು. ಇದಕ್ಕೆ ಹಣಕಾಸಿನ ಕೊರತೆ ಇಲ್ಲ’ ಎಂದರು.

‘ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಈಗಾಗಲೇ 'ಈ ಗುರುತು' ಎಂಬ ಮೊಬೈಲ್ ಆ್ಯಪ್ ಬಿಡುಗಡೆ ಮಾಡಲಾಗಿದೆ. ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವುದು ಕಾಣಿಸಿದರೆ ತಕ್ಷಣ 1098 ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬೇಕು’ ಎಂದೂ ತಿಳಿಸಿದರು.

ನಿಧನ ವಾರ್ತೆ

ಎಂ.ಡಿ.ರಮೇಶ್ ರಾಜು

ಮಂಡ್ಯ: ವಿಧಾನ ಪರಿಷತ್ ಮಾಜಿ ಸದಸ್ಯ, ಕಾಂಗ್ರೆಸ್ ಮುಖಂಡ ಎಂ.ಡಿ.ರಮೇಶ್ ರಾಜು (80) ಅನಾರೋಗ್ಯದಿಂದ ಸೋಮವಾರ ನಿಧನರಾದರು.

ಮಾಜಿ ಶಾಸಕ ಜೆ.ದೇವಯ್ಯ ಅವರ ಪುತ್ರರಾಗಿದ್ದ ರಮೇಶ್ ರಾಜು ಕೆರಗೋಡು ವಿಧಾನಸಭಾ ಕ್ಷೇತ್ರ ಅಸ್ತಿತ್ವದಲ್ಲಿದ್ದಾಗ ಸ್ಪರ್ಧಿಸಿ ಸೋಲು ಕಂಡಿದ್ದರು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡಲಾಗಿತ್ತು.

ನಗರದ ಮೈಷುಗರ್ ಕಾರ್ಖಾನೆ ಅಧ್ಯಕ್ಷರಾಗಿದ್ದರು. ಹಲವು ವರ್ಷಗಳ ಕಾಲ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದರು. ಅರಕೇಶ್ವರ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಅವರಿಗೆ ಪತ್ನಿ, ಪುತ್ರಿ, ಪುತ್ರ ಇದ್ದಾರೆ.

ಸೋಮವಾರ ಸಂಜೆ ಹೊಳಲು ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಸಂಕ್ಷಿಪ್ತ ಸುದ್ದಿ

ಪರಿಷತ್‌ನ ಒಂದು ಸ್ಥಾನಕ್ಕೆ ಆ.11ರಂದು ಉಪಚುನಾವಣೆ

ಬೆಂಗಳೂರು: ಸಿ.ಎಂ.ಇಬ್ರಾಹಿಂ ರಾಜೀನಾಮೆಯಿಂದ ತೆರವಾಗಿದ್ದ ವಿಧಾನಪರಿಷತ್‌ನ ಒಂದು ಸ್ಥಾನಕ್ಕೆ ಆಗಸ್ಟ್ 11 ರಂದು ಉಪಚುನಾವಣೆ ನಡೆಯಲಿದೆ.

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯುವ ಈ ಉಪಚುನಾವಣೆಗೆ ಸಂಬಂಧಿಸಿದಂತೆ ಇದೇ 25 ರಂದು ಅಧಿಸೂಚನೆ ಹೊರಡಿಸಲಾಗುವುದು. ನಾಮಪತ್ರ ಸಲ್ಲಿಸಲು ಆಗಸ್ಟ್ 1 ಕೊನೆಯ ದಿನವಾಗಿದೆ. ಆ.2 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಆ.4 ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆಯ ದಿನವಾಗಿದೆ. ಆ.11ರಂದು ಮತದಾನ ಮತ್ತು ಅದೇ ದಿನ ಸಂಜೆ ಮತಗಳ ಎಣಿಕೆ ನಡೆಯಲಿದೆ.

ಕಾಂಗ್ರೆಸ್‌ನಿಂದ ವಿಧಾನಪರಿಷತ್ ಸದಸ್ಯರಾಗಿದ್ದ ಇಬ್ರಾಹಿಂ ಅವರು ತಮಗೆ ವಿಧಾನಪರಿಷತ್ ವಿರೋಧಪಕ್ಷದ ನಾಯಕನ ಸ್ಥಾನ ನೀಡಲಿಲ್ಲ ಎಂಬ ಕಾರಣಕ್ಕೆ ಮುನಿಸಿಕೊಂಡು ಕಾಂಗ್ರೆಸ್‌ಗೆ ಮತ್ತು ಪರಿಷತ್‌ನ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಬಳಿಕ ಅವರು ಜೆಡಿಎಸ್ ಸೇರಿದರು. ಚುನಾಯಿತರಾಗುವ ಸದಸ್ಯರ ಅವಧಿ 2024ರ ಜೂನ್ 17ರವರೆಗೆ ಇರಲಿದೆ.

‘ಅರ್ಚಕರ ರಾಜ್ಯಮಟ್ಟದ ಸಮಾವೇಶ’

ಬೆಂಗಳೂರು: ‘ಮುಜರಾಯಿ ಇಲಾಖೆಯ ಅಧೀನದಲ್ಲಿರುವ ಎಲ್ಲ ದೇವಸ್ಥಾನಗಳ ಅರ್ಚಕರ ರಾಜ್ಯಮಟ್ಟದ ಸಮಾವೇಶವನ್ನು ಸೆಪ್ಟೆಂಬರ್ ಕೊನೆಯ ವಾರದಲ್ಲಿ ಆಯೋಜಿಸಲಾಗುವುದು’ ಎಂದು ಮುಜರಾಯಿ ಸಚಿವರಾದ ಶಶಿಕಲಾ ಜೊಲ್ಲೆ ತಿಳಿಸಿದರು.

ರಾಜ್ಯ ಧಾರ್ಮಿಕ ಪರಿಷತ್ತಿನ 16ನೇ ಸಭೆ ವಿಕಾಸಸೌಧದಲ್ಲಿ ಸೋಮವಾರ ನಡೆಯಿತು. ಈ ಸಭೆಯಲ್ಲಿ ಹಲವು ಧಾರ್ಮಿಕ ವಿಷಯಗಳ ಕುರಿತು ಚರ್ಚೆ ನಡೆಯಿತು.

‘ತಸ್ತೀಕ್ ಹಣ ಹೆಚ್ಚಳ, ವಿಮಾ ಸೌಲಭ್ಯ ಸೇರಿದಂತೆ ಅರ್ಚಕರ ಹಲವು ಬೇಡಿಕೆಗಳನ್ನು ಈಗಾಗಲೇ ಈಡೇರಿಸಲಾಗಿದೆ. ಮುಜರಾಯಿ ಇಲಾಖೆ ವತಿಯಿಂದ ಅರ್ಚಕರ ಸಮಾವೇಶ ಏರ್ಪಡಿಸುವಂತೆಯೂ ಸದಸ್ಯರು ಕೋರಿಕೆ ಸಲ್ಲಿಸಿದ್ದರು’ ಎಂದು ಜೊಲ್ಲೆ ತಿಳಿಸಿದರು.

‘ತೆರವಾಗಿರುವ ರಾಜ್ಯ ಧಾರ್ಮಿಕ ಪರಿಷತ್ತಿನ ನ್ಯಾಯಿಕ ಸದಸ್ಯರ ಸ್ಥಾನವನ್ನು ಶೀಘ್ರವಾಗಿ ತುಂಬುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಇಲಾಖೆಯಲ್ಲಿ ಶೇಕಡ 60ರಷ್ಟು ಹುದ್ದೆಗಳು ಖಾಲಿ ಇವೆ. ನೇಮಕಾತಿಗೆ ಅವಕಾಶ ನೀಡುವಂತೆ ಆರ್ಥಿಕ ಇಲಾಖೆಗೆ ಪತ್ರ ಬರೆಯಲಾಗಿದೆ’ ಎಂದರು.

ಹುಬ್ಬಳ್ಳಿ ಗಲಭೆ ಪ್ರಕರಣ ಬೆಂಗಳೂರು ವಿಶೇಷ ಕೋರ್ಟ್‌ಗೆ ಹಸ್ತಾಂತರ

ಹುಬ್ಬಳ್ಳಿ: ಹಳೇ ಹುಬ್ಬಳ್ಳಿ ಗಲಭೆಗೆ ಸಂಬಂಧಿಸಿ ದಾಖಲಾದ 12 ಪ್ರಕರಣಗಳಲ್ಲಿ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ ದಾಖಲಾದ ಒಂದು ಪ್ರಕರಣ(63/2022)ದ ವಿಚಾರಣೆಯನ್ನು ಬೆಂಗಳೂರಿನ ವಿಶೇಷ ಕೋರ್ಟ್‌ಗೆ ವರ್ಗಾಯಿಸುವಂತೆ ವಿಶೇಷ ಕೋರ್ಟ್ ನೀಡಿದ ನಿರ್ದೇಶನ ಹಿನ್ನೆಲೆಯಲ್ಲಿ, ಸೋಮವಾರ ಇಲ್ಲಿನ ನಾಲ್ಕನೇ ಜೆಎಂಎಫ್ ಕೋರ್ಟ್ ಅಲ್ಲಿಗೆ ವರ್ಗಾಯಿಸಿ ಆದೇಶವನ್ನು ನೀಡಿದೆ.

ಜುಲೈ 15ರಂದು ಕೋರ್ಟ್ ನೀಡಿದ್ದ ತೀರ್ಪಿನ ಪ್ರತಿಯನ್ನು ಸರ್ಕಾರಿ ವಿಶೇಷ ಅಭಿಯೋಜಕ ವಿ.ಎಂ. ಶೀಲವಂತ ಇಲ್ಲಿನ ಕೋರ್ಟ್‌ಗೆ ಸಲ್ಲಿಕೆ ಮಾಡಿದ್ದರು. ಪ್ರಕರಣಕ್ಕೆ ಸಂಬಂಧಿಸಿ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾದ 12 ಪ್ರಕರಣಗಳಲ್ಲಿ 11ನ್ನು ತಿರಸ್ಕರಿಸಬೇಕು ಎಂದು ಆರೋಪಿಗಳ ಪರ ವಕೀಲರು ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಕೋರ್ಟ್ ವಿಶೇಷ ನ್ಯಾಯಾಲಯದ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಕರಣ ವರ್ಗಾಯಿಸಿದೆ.

‘ಬೌದ್ಧ ಸ್ತೂಪ ಅಭಿವೃದ್ಧಿಗೆ ಕೇಂದ್ರ ಬದ್ಧ’

ಕಲಬುರಗಿ: ‘ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸನ್ನತಿ ಹಾಗೂ ಕನಗನಹಳ್ಳಿ ಗ್ರಾಮಗಳ ಬೌದ್ಧ ಸ್ತೂಪ ಇರುವ ಪರಿಸರವನ್ನು ಅಭಿವೃದ್ಧಿ ಮಾಡಲು ಕೇಂದ್ರ ಸರ್ಕಾರ ಬದ್ಧವಿದೆ. ಈಗಾಗಲೇ ಸಂರಕ್ಷಣಾ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ’ ಎಂದು ಕೇಂದ್ರ ಸಂಸ್ಕೃತಿ, ಪ್ರವಾಸೋದ್ಯಮ ಹಾಗೂ ಈಶಾನ್ಯ ರಾಜ್ಯಗಳ ಅಭಿವೃದ್ಧಿ ಸಚಿವ ಜಿ. ಕಿಶನ್ ರೆಡ್ಡಿ ತಿಳಿಸಿದ್ದಾರೆ.

ಸೋಮವಾರ ಸಂಸತ್ ಅಧಿವೇಶನದಲ್ಲಿ ಸಂಸದ ಡಾ. ಉಮೇಶ ಜಾಧವ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಸಚಿವ ರೆಡ್ಡಿ, ‘ಕನಗನಹಳ್ಳಿಯಲ್ಲಿರುವ ಬೌದ್ಧ ಸ್ತೂಪವು ಸಾಂಚಿನ ಸ್ತೂಪದ ಕಾಲಮಾನವನ್ನು ಹೊಂದಿದ್ದು, ಮೌರ್ಯ ರಾಜಮನೆತನದ ಸಾಮ್ರಾಟ್ ಅಶೋಕನ ಏಕೈಕ ಮೂರ್ತಿ ದೊರೆತ ಸ್ಥಳವಾಗಿದೆ. ಬೌದ್ಧ ಧರ್ಮಕ್ಕೆ ಸಂಬಂಧಿಸಿದ ವಸ್ತುಗಳು ಬೆನಗುತ್ತಿ, ಹಸರಗುಂಡಗಿ, ಕನಗನಹಳ್ಳಿ ಹಾಗೂ ರಣಮಂಡಲದಲ್ಲಿ ದೊರೆತಿವೆ. ಐತಿಹಾಸಿಕ ಮಹತ್ವವನ್ನು ಹೊಂದಿದ ಈ ಸ್ಥಳವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಈಗಾಗಲೇ ಸಂರಕ್ಷಣೆಗೆ ಮುಂದಾಗಿದೆ’ ಎಂದು ತಿಳಿಸಿದ್ದಾರೆ.

‘ಪ್ರಜಾವಾಣಿ’ ಶ್ಲಾಘಿಸಿದ ಜಾಧವ: ಕೇಂದ್ರ ಸಂಸ್ಕೃತಿ ಸಚಿವರ ಗಮನ ಸೆಳೆಯಲು ಪ್ರಜಾವಾಣಿ ಪ್ರಕಟಿಸಿದ ಲೇಖನ ಹಾಗೂ ಬೌದ್ಧ ಸ್ತೂಪದ ಮಹತ್ವದ ಬಗ್ಗೆ ತಯಾರಿಸಿದ ವಿಡಿಯೊ ಡಾಕ್ಯುಮೆಂಟರಿ ಸ್ಫೂರ್ತಿಯಾಯಿತು ಎಂದು ಸಂಸದ ಡಾ. ಉಮೇಶ ಜಾಧವ ತಿಳಿಸಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಪತ್ರಿಕಾ ಪ್ರಕಟಣೆ

ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ **ಸಹಾಯಕ ಇಂಜಿನಿಯರ್ (ವಿದ್ಯುತ್/ಸಿವಿಲ್), ಕಿರಿಯ ಇಂಜಿನಿಯರ್ (ವಿದ್ಯುತ್/ಸಿವಿಲ್) ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ** ದಿನಾಂಕ **23.07.2022, 24.07.2022 ಮತ್ತು 07.08.2022** ರಂದು ಆಪ್ಟಿಟ್ಯೂಡ್ ಪರೀಕ್ಷೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲಾಗುತ್ತಿದೆ.

ಈ ಸಂಬಂಧ ದಿನಾಂಕ **14.07.2022** ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಸಹಾಯಕ ಇಂಜಿನಿಯರ್ (ವಿದ್ಯುತ್/ಸಿವಿಲ್), ಕಿರಿಯ ಇಂಜಿನಿಯರ್ (ವಿದ್ಯುತ್/ಸಿವಿಲ್) ಹುದ್ದೆಗಳಿಗೆ ಆಪ್ಟಿಟ್ಯೂಡ್ ಪರೀಕ್ಷೆಯ ಆನ್ ಲೈನ್ ಪ್ರವೇಶ ಪತ್ರಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಕೆಲವು ಅಭ್ಯರ್ಥಿಗಳು ಸದರಿ ಹುದ್ದೆಗಳಿಗೆ ತಾವು ಅರ್ಜಿ ಶುಲ್ಕವನ್ನು ಪಾವತಿಸಿ ಅರ್ಜಿ ಸಲ್ಲಿಸಿದ್ದಾಗ್ಯೂ, ತಮ್ಮ ಅರ್ಜಿಗಳನ್ನು ಡೌನ್ ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ ಮತ್ತು ತಮಗೆ ಪ್ರವೇಶ ಪತ್ರಗಳು ಲಭ್ಯವಾಗುತ್ತಿಲ್ಲ ಎಂದು ತಿಳಿಸುತ್ತಾ ಇ-ಮೇಲ್, ದೂರವಾಣಿ, ಪತ್ರಗಳು ಮತ್ತು ಮಾಧ್ಯಮಗಳ ಮುಖಾಂತರ ಆಕ್ಷೇಪ ವ್ಯಕ್ತಪಡಿಸುತ್ತಿರುವುದು ಕವಿಪ್ರನಿನಿಯ ಗಮನಕ್ಕೆ ಬಂದಿರುತ್ತದೆ.

ಕವಿಪ್ರನಿನಿಯ ಉದ್ಯೋಗ ಪ್ರಕಟಣೆ ಸಂಖ್ಯೆ: **ಕವಿಪ್ರನಿನಿ/ಬಿ16/21723/2021-22, ದಿನಾಂಕ 01.02.2022** ರ ಅನುಸಾರ ಸದರಿ ಹುದ್ದೆಗಳಿಗೆ ಆನ್-ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ದಿನಾಂಕ **07.03.2022** ರವರೆಗೆ ಅವಕಾಶವನ್ನು ಕಲ್ಪಿಸಲಾಗಿತ್ತು. ಆನ್-ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣ ಪತ್ರ ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಅಪ್-ಲೋಡ್ ಮಾಡುವಂತೆ ಸದರಿ ಉದ್ಯೋಗ ಪ್ರಕಟಣೆಯಲ್ಲಿ ನಿರ್ದಿಷ್ಟವಾಗಿ ತಿಳಿಸಲಾಗಿರುತ್ತದೆ ಮತ್ತು ಆನ್-ಲೈನ್ ಅರ್ಜಿಯಲ್ಲಿ ಇವುಗಳನ್ನು ಅಪ್-ಲೋಡ್ ಮಾಡಲು ಪ್ರತ್ಯೇಕ ಲಿಂಕ್ ಸಹ ನೀಡಲಾಗಿರುತ್ತದೆ. ನೇಮಕಾತಿ ಕೋರಿ ಸುಮಾರು 3.78 ಲಕ್ಷಗಳಷ್ಟು ಪೂರ್ಣ ಮಾಹಿತಿಯುಳ್ಳ ಅರ್ಹ ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ ಸುಮಾರು 3.59 ಲಕ್ಷಗಳಷ್ಟು ಅರ್ಜಿಗಳಲ್ಲಿ ಅಭ್ಯರ್ಥಿಗಳು ಜಾತಿ ಮೀಸಲಾತಿ ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶ ಮೀಸಲಾತಿ ಪ್ರಮಾಣ ಪತ್ರಗಳನ್ನು ಅಪ್-ಲೋಡ್ ಮಾಡಿರುತ್ತಾರೆ. ಆದಾಗ್ಯೂ, ಹಲವಾರು ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶ ಪ್ರಮಾಣ ಪತ್ರಗಳನ್ನು ಅಪ್-ಲೋಡ್ ಮಾಡದೆ ಅರ್ಜಿ ಶುಲ್ಕವನ್ನು ಪಾವತಿಸಿರುತ್ತಾರೆ. ಆದ್ದರಿಂದ ಇವರ ಅರ್ಜಿಗಳು ಅಪೂರ್ಣಗೊಂಡಿರುತ್ತವೆ ಮತ್ತು ನಿಗಮದ ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ: 7(X) ರಲ್ಲಿ ಇಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಆದುದರಿಂದ ಸದರಿ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯ ಮುಂದಿನ ಹಂತಕ್ಕೆ ಪರಿಗಣಿಸಲು ಸಾಧ್ಯವಿರುವುದಿಲ್ಲವೆಂಬ ಮಾಹಿತಿಯನ್ನು ಸಂಬಂಧಪಟ್ಟ ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶ ಪ್ರಮಾಣ ಪತ್ರಗಳನ್ನು ಸೂಚನೆಗಳನುಸಾರ ಅಪ್-ಲೋಡ್ ಮಾಡದೆ ಇರುವುದರಿಂದ ಇವರ ಅರ್ಜಿಗಳು ಅಪೂರ್ಣವಾಗಿ ತಿರಸ್ಕೃತಗೊಂಡಿರುತ್ತವೆ. ಕವಿಪ್ರನಿನಿ ವತಿಯಿಂದ ಯಾವುದೇ ತಾಂತ್ರಿಕ ದೋಷ ಉಂಟಾಗಿರುವುದಿಲ್ಲ.

ಸಹಿ/-
ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

'ಜಿಎಸ್‌ಟಿ ಹೆಚ್ಚಳ ಏಕಪಕ್ಷೀಯವಲ್ಲ'

ಬೆಂಗಳೂರು: 'ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ಹೆಚ್ಚಳ ಮಾಡಿರುವುದು ಕೇಂದ್ರದ ಏಕಪಕ್ಷೀಯ ತೀರ್ಮಾನವಲ್ಲ. ಎಲ್ಲ ರಾಜ್ಯಗಳ ಪ್ರತಿನಿಧಿಗಳನ್ನೊಳಗೊಂಡ ಜಿಎಸ್‌ಟಿ ಮಂಡಳಿಯೇ ನಿರ್ಧಾರ ಕೈಗೊಂಡಿರುವುದು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ತೆರಿಗೆ ಹೊರೆಯಾಗಿದೆ ಎನಿಸಿದರೆ ಕಡಿಮೆ ಮಾಡುವ ಅವಕಾಶವಿದೆ. ಮಂಡಳಿಯಲ್ಲೇ ಚರ್ಚಿಸಿ ತೀರ್ಮಾನ ಕೈಗೊಳ್ಳಬಹುದು. ದೇಶದಲ್ಲಿ ಈಗ ತುರ್ತು ಪರಿಸ್ಥಿತಿ ಜಾರಿಯಲ್ಲಿಲ್ಲ. ಯಾವುದೇ ತಪ್ಪುಗಳಾಗಿದ್ದರೆ ಅವನ್ನು ಸರಿಪಡಿಸಲು ಸಾಧ್ಯವಿದೆ' ಎಂದೂ ಅವರು ಹೇಳಿದರು.

ವರ್ಷದಲ್ಲಿ 46 ದಿನಗಳು ಮಾತ್ರ ನೀಡಲು ಹಣಕಾಸು ಇಲಾಖೆ ಅನುಮೋದನೆ

ಮೊಟ್ಟೆ ವಿತರಣೆ: ರಾಜ್ಯದಾದ್ಯಂತ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1ರಿಂದ 8ನೇ ತರಗತಿಯ ಮಕ್ಕಳಿಗೆ ಮೊಟ್ಟೆ, ಚಿಕ್ಕಿ, ಬಾಳೆಹಣ್ಣು ನೀಡುವ ಯೋಜನೆಗೆ ಹಣಕಾಸು ಇಲಾಖೆ ಒಪ್ಪಿಗೆ ಸೂಚಿಸಿದೆ.

ಆದರೆ, ವರ್ಷದ 46 ದಿನಗಳು ಮಾತ್ರ ವಿತರಿಸಲು ಇಲಾಖೆ ಅನುಮೋದನೆ ನೀಡಿದೆ. ಕನಿಷ್ಠ 100 ದಿನಗಳ ಕಾಲ ವಿತರಿಸಲು ಅನುಮೋದನೆ ನೀಡುವಂತೆ ಶಿಕ್ಷಣ ಇಲಾಖೆ ಸಲ್ಲಿಸಿದ್ದ ಪ್ರಸ್ತಾವಕ್ಕೆ ಹಣಕಾಸು ಇಲಾಖೆ ಒಪ್ಪಿಗೆ ಸೂಚಿಸಿಲ್ಲ.

ರಾಜ್ಯದಲ್ಲಿ 1ರಿಂದ 8ನೇ ತರಗತಿಯಲ್ಲಿನ ಅಂದಾಜು 49 ಲಕ್ಷ ಶಾಲಾ ಮಕ್ಕಳಿಗೆ 100 ದಿನಗಳ ಕಾಲ ಮೊಟ್ಟೆ ಅಥವಾ ಚಿಕ್ಕಿ ವಿತರಿಸಲು ಸುಮಾರು ₹350 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಿ ಆರ್ಥಿಕ ಇಲಾಖೆಯ ಅನುಮತಿ ಕೋರಿ ಪ್ರಸ್ತಾವ ಸಲ್ಲಿಸಲಾಗಿತ್ತು.

ಈ ಬಗ್ಗೆ ಜುಲೈ 13ರಂದು ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಗೆ ಅಭಿಪ್ರಾಯ ತಿಳಿಸಿದ್ದಾರೆ.

46 ದಿನಗಳು ಅಂದರೆ ವಾರದಲ್ಲಿ ಎರಡು ದಿನ ಮಾತ್ರ ಮೊಟ್ಟೆ ನೀಡಬಹುದು. ಸದ್ಯ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮಾತ್ರ ಈ ಯೋಜನೆ ಜಾರಿಯಲ್ಲಿದೆ. ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆ ಅಡಿ ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಕೊಪ್ಪಳ ಜಿಲ್ಲೆಗಳಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಒಂದರಿಂದ ಎಂಟನೇ ತರಗತಿಯ ಅಂದಾಜು 15.29 ಲಕ್ಷ ಮಕ್ಕಳಿಗೆ ಬೇಯಿಸಿದ ಮೊಟ್ಟೆ ಅಥವಾ ಬಾಳೆಹಣ್ಣು ವಿತರಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲು ವಾರದಲ್ಲಿ ಮೂರು ದಿನ ಮಾತ್ರ ಮಕ್ಕಳಿಗೆ ಮೊಟ್ಟೆ ಅಥವಾ ಬಾಳೆಹಣ್ಣು ನೀಡಲಾಗುತ್ತಿತ್ತು. ಈಗ ಎರಡು ದಿನಕ್ಕೊಮ್ಮೆ ನೀಡಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಯೋಜನೆಗೆ ಅನುದಾನ ಒದಗಿಸುತ್ತವೆ. ಈಗ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸುತ್ತಿರುವುದರಿಂದ ರಾಜ್ಯ ಸರ್ಕಾರವೇ ಖರ್ಚು ಭರಿಸಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಾದ್ಯಂತ ಈ ಯೋಜನೆ ವಿಸ್ತರಿಸುವ ಬಗ್ಗೆ ಕಳೆದ ಎರಡು ತಿಂಗಳಿಂದ ಈ ಪ್ರಕ್ರಿಯೆ ನಡೆಯುತ್ತಿತ್ತು. ಹಣಕಾಸು ಇಲಾಖೆಯ ಒಪ್ಪಿಗೆಗಾಗಿ ಕಾಯಲಾಗುತ್ತಿತ್ತು ಎಂದು ತಿಳಿಸಿದ್ದಾರೆ.

'ಆಹಾರ ಸೇವನೆ ಮಕ್ಕಳ ಆಯ್ಕೆ'

'ಎಲ್ಲ ಜಿಲ್ಲೆಗಳಲ್ಲಿ ವರ್ಷದಲ್ಲಿ 46 ದಿನಗಳ ಕಾಲ ಶಾಲಾ ಮಕ್ಕಳಿಗೆ ಮೊಟ್ಟೆ ಅಥವಾ ಬಾಳೆಹಣ್ಣು ಅಥವಾ ಚಿಕ್ಕಿ ವಿತರಿಸಲಾಗುವುದು. ಯಾವುದನ್ನು ಸೇವಿಸಬೇಕು ಎನ್ನುವುದು ಮಕ್ಕಳ 'ಇಚ್ಛೆ'. ಯಾರನ್ನೂ ಬಲವಂತ ಮಾಡುವುದಿಲ್ಲ. ಯಾವುದು ಸೇವಿಸಬೇಕು ಎನ್ನುವುದು ಮಕ್ಕಳ ಆಯ್ಕೆ' ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಸ್ಪಷ್ಟಪಡಿಸಿದ್ದಾರೆ.

'ಶೀಘ್ರದಲ್ಲೇ ಈ ಯೋಜನೆ ರಾಜ್ಯದಾದ್ಯಂತ ವಿಸ್ತರಣೆಯಾಗಲಿದೆ. ಈಗ ಹೆಚ್ಚುವರಿಯಾಗಿ ಸುಮಾರು ₹200 ಕೋಟಿ ವೆಚ್ಚವಾಗಬಹುದು. ಶಾಲಾ ಅಭಿವೃದ್ಧಿ ಸಮಿತಿಗಳೇ (ಎಸ್‌ಡಿಎಂಸಿ) ಎಲ್ಲವನ್ನೂ ಖರೀದಿ ಮಾಡಿ ಮಕ್ಕಳಿಗೆ ವಿತರಿಸುತ್ತವೆ' ಎಂದು ತಿಳಿಸಿದರು.



ಬಿ.ಸಿ. ನಾಗೇಶ್

ಪ್ರಜಾವಾಣಿ DH DECCAN HERALD
ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ
ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಮಧುಸೂದನ್ ಆರ್**, ನಂ. 73,ಆರ್‌ಎಂಎಸ್ ಕಾಲೊನಿ, ಸಂಜಯ್ ನಗರ, ಬೆಂಗಳೂರು	25,025
2	**ಡಾ.ಎಚ್. ಹನುಮಂತಪ್ಪ**, ವಿಜಯನಗರ ಒಂದನೇ ಹಂತ, ಮೈಸೂರು	10,500
3	**ಗುಪ್ತಾ ಎಸ್.ಎ.ಎಲ್**, ಮಲ್ಲೇಶ್ವರ ವೃತ್ತ, ಬೆಂಗಳೂರು	10,000
4	**ಅಂಬೇಕರ್ ಸರ್ವೋತ್ತಮ್ ವೈ**, ಜಯನಗರ, ಧಾರವಾಡ	10,000
5	**ಎ.ಆರ್. ನರಸಿಂಹಸ್ವಾಮಿ**, 372/373, 5ನೇ ಮೇನ್, ವಿಜಯ ಬ್ಯಾಂಕ್ ಲೇಔಟ್, ಬೆಂಗಳೂರು	10,000
6	**ಸಿ. ಸಿದ್ಧ ಶಾಂತಮೂರ್ತಿ**, ಪಾರ್ವತಿ ನಿಲಯ, ಸಿರುಗುಪ್ಪ	5,111
7	**ರೇವಪ್ಪ ನಾಯ್ಕ್**, ಬಿಟಿಎಂ ಲೇಔಟ್ ಮೊದಲನೇ ಹಂತ, ಬೆಂಗಳೂರು	5,005
8	**ಆನಂದ ದೊಡ್ಡಮನಿ**, ಪರಶುರಾಮ ಅಪಾರ್ಟ್‌ಮೆಂಟ್, ಮಂಗಳೂರು	5,001
9	**ಟಿ.ಎಸ್. ಶಿವನಾಗಪ್ಪ, ಎಂ.ಪಿ ರಾಜಲಕ್ಷ್ಮಿ**, 1012, 24ನೇ ಮೇನ್, ಬನಶಂಕರಿ 2ನೇ ಹಂತ, ಬೆಂಗಳೂರು	5,000
10	**ವಿ.ರತ್ನಮ್ಮ**, ಲಗ್ಗೆರೆ, ಬೆಂಗಳೂರು	5,000
11	**ಗೋವಿಂದರಾಜ್ ಎನ್.**, ನಂ. 231/12, 14ನೇ ಮೇನ್, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು	3,500
12	**ಕೆ.ನಾಗರತ್ನ**, ಮಂದಹಾಸ, 18ನೇ ಬಿ ಕ್ರಾಸ್, ಲಕ್ಷ್ಮೀಪುರ, ಹಲಸೂರು, ಬೆಂಗಳೂರು	2,001
13	**ಗಿಂಡಿಮನೆ ಮೃತ್ಯುಂಜಯ**, 7047, ಪ್ರೆಸ್ಟೀಜ್ ಬಾಗ್ಮನೆ ಟೆಂಪಲ್ ಬೆಲ್ಸ್, ಬೆಂಗಳೂರು	2,000
14	**ಗೀತಾ**, 516, 27ನೇ ಕ್ರಾಸ್, ಐಎಚ್ ಬಡಾವಣೆ, ರಾಜರಾಜೇಶ್ವರಿನಗರ, ಬೆಂಗಳೂರು	2,000
15	**ಚೆನ್ನಕೇಶವ ಕೆ.ಎಂ**, ಕಮ್ಮನಹಳ್ಳಿ, ಬೆಂಗಳೂರು	2,000
16	**ದೀಪಾ ಜಿ.ಬಿ.**, 698, 7ನೇ ಕ್ರಾಸ್, ವಿದ್ಯಾರಣ್ಯಪುರ, ಬೆಂಗಳೂರು	2,000
17	**ಪಿ.ವಿ ಶೆಣೈ**, 203, ಬ್ಲೂಬೆಲ್ಸ್, ಕರಂಗಲಪಾಡಿ, ಮಂಗಳೂರು	2,000
18	**ಈರಣ್ಣ ಎಲಿ**, ಗುಪ್ತಾ ಹೈಸ್ಕೂಲ್ ಸಮೀಪ, ರಾಣೆಬೆನ್ನೂರು	1,000
19	**ಶ್ರೀನಿವಾಸ**, ನಂ.101, 8ನೇ ಕ್ರಾಸ್, ಚಂದ್ರಾ ಲೇಔಟ್, ಬೆಂಗಳೂರು	1,000
20	**ನಾಗರತ್ನ ತಿಲಗುಳ**, 2487, ಸಹಕಾರನಗರ, ಬೆಂಗಳೂರು	1,000
	ಒಟ್ಟು	6,82,989

'ದೇಶವನ್ನು ಶೋಚನೀಯ ಸ್ಥಿತಿಗೆ ತಳ್ಳಲು ಮೋದಿ ಕರಾಮತ್ತು'

ನವದೆಹಲಿ (ಪಿಟಿಐ): ಮೊಸರು, ಲಸ್ಸಿ ಸೇರಿದಂತೆ ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹೇರಿಕೆ ಮಾಡಿರುವ ಕೇಂದ್ರದ ನಿಲುವಿಗೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದು, 'ದೇಶವನ್ನು ಶೋಚನೀಯ ಸ್ಥಿತಿಗೆ ತಳ್ಳಲು ಪ್ರಧಾನಿ ನರೇಂದ್ರ ಮೋದಿ ಮಾಡಿರುವ ಕರಾಮತ್ತು ಇದು' ಎಂದು ವಿರೋಧ ಪಕ್ಷಗಳು ಕಿಡಿಕಾರಿವೆ.

ಮೋದಿ ಸರ್ಕಾರದ ನಡೆಗೆ ಸ್ವಪಕ್ಷೀಯರಿಂದಲೂ ವಿರೋಧ ವ್ಯಕ್ತವಾಗಿದೆ.

'ಕೇಂದ್ರದ ನಿಲುವು, ಈಗಾಗಲೇ ನಿರುದ್ಯೋಗ ಸಮಸ್ಯೆಯಿಂದ ತತ್ತರಿಸಿರುವ ನಾಗರಿಕರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಲಿದೆ' ಎಂದು ಬಿಜೆಪಿ ಸಂಸದ ವರುಣ್ ಗಾಂಧಿ ಹೇಳಿದ್ದಾರೆ.

ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾ, 'ಮೊದಲು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಹೆಚ್ಚಳ ಮಾಡಲಾಗಿತ್ತು. ಇನ್ನು ಮೊಸರು, ಹಿಟ್ಟು ಹಾಗೂ ಧಾನ್ಯಗಳ ಬೆಲೆಯೂ ಗಗನಮುಖಿಯಾಗಲಿದೆ. ಮೋದಿ ಜೀ ತಮ್ಮ ಕೋಟ್ಯಧಿಪತಿ ಗೆಳೆಯರ ಬೊಕ್ಕಸ ತುಂಬಿಸಲು ಮಧ್ಯಮ ವರ್ಗದವರ ಗಾಯದ ಮೇಲೆ ಬರೆ ಎಳೆಯುತ್ತಿದ್ದಾರೆ. ವಿದ್ಯುತ್ ದರ ಹೆಚ್ಚಳವೂ ಸನ್ನಿಹಿತವಾಗಿದೆ' ಎಂದು ದೂರಿದ್ದಾರೆ.

'ಅಗತ್ಯವಸ್ತುಗಳ ದರ ಏರಿಸಿ, ನಾಗರಿಕರ ಮೇಲೆ ನಡೆಸುತ್ತಿರುವ ಕ್ರಿಮಿನಲ್ ಆಕ್ರಮಣ ನಿಲ್ಲಿಸಲಿ' ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಟ್ವೀಟ್ ಮಾಡಿದ್ದಾರೆ.

25 ಕೆ.ಜಿಗಿಂತ ಕಡಿಮೆಗಷ್ಟೇ ಜಿಎಸ್‌ಟಿ

ಒಂದನೇ ಪುಟದಿಂದ

ಸೋಮವಾರಕ್ಕೂ ಮೊದಲು, ಬ್ರ್ಯಾಂಡ್ ಇರುವ ಆಹಾರ ಧಾನ್ಯಗಳಿಗೆ ಮಾತ್ರವೇ ಜಿಎಸ್‌ಟಿ ಅನ್ವಯ ಆಗುತ್ತಿತ್ತು. ಪ್ಯಾಕ್ ಆಗಿರುವ ಮತ್ತು ಲೇಬಲ್ ಇರುವ ಆಹಾರ ಧಾನ್ಯಗಳಿಗೂ ತೆರಿಗೆ ಪಾವತಿಸುವ ನಿಯಮ ಸೋಮವಾರದಿಂದ (ಜುಲೈ 18) ಜಾರಿಗೆ ಬಂದಿದೆ.

ಮೊಸರು, ಲಸ್ಸಿ, ಮಜ್ಜಿಗೆ, ಮಂಡಕ್ಕಿಗೆ ಈ ಮೊದಲು ತೆರಿಗೆ ಇರಲಿಲ್ಲ. ಪ್ಯಾಕ್ ಮಾಡಿರುವ, ಲೇಬಲ್ ಇರುವ ಈ ಉತ್ಪನ್ನಗಳು ಸೋಮವಾರದಿಂದ ಶೇ 5ರ ತೆರಿಗೆ ವ್ಯಾಪ್ತಿಗೆ ಹೊಸದಾಗಿ ಸೇರಿವೆ.

ತಲಾ 10 ಕೆ.ಜಿ ತೂಕದ 10 ಪ್ಯಾಕ್ ಆಹಾರ ಧಾನ್ಯಗಳನ್ನು ಖರೀದಿಸುವುದಾದರೆ ಅದಕ್ಕೆ ಜಿಎಸ್‌ಟಿ ಕೊಡಬೇಕು. ಆದರೆ, 50 ಕೆ.ಜಿ. ತೂಕದ ಒಂದು ಪ್ಯಾಕ್ ಆಹಾರ ಧಾನ್ಯ ಅಥವಾ ಆಹಾರ ಉತ್ಪನ್ನ ಖರೀದಿಸುವುದಾದಲ್ಲಿ ಅದಕ್ಕೆ ತೆರಿಗೆ ಅನ್ವಯಿಸುವುದಿಲ್ಲ ಎಂದು ಸಚಿವಾಲಯವು ಸ್ಪಷ್ಟಪಡಿಸಿದೆ.

ಕಿರಾಣಿ ಅಂಗಡಿಯ ಮಾಲೀಕರು, ತಯಾರಕರು ಅಥವಾ ವಿತರಕರಿಂದ 25 ಕೆ.ಜಿ. ತೂಕದ ಅಕ್ಕಿ ಪ್ಯಾಕ್ ಖರೀದಿಸಿ, ಅದನ್ನು ಗ್ರಾಹಕರಿಗೆ ಕೆ.ಜಿ.ಯ ಲೆಕ್ಕದಲ್ಲಿ ಅಥವಾ ಗ್ರಾಂ ಲೆಕ್ಕದಲ್ಲಿ ಬಿಡಿ ಬಿಡಿಯಾಗಿ ಮಾರಾಟ ಮಾಡುವಾಗ, ಗ್ರಾಹಕರಿಂದ ತೆರಿಗೆ ವಸೂಲು ಮಾಡುವಂತಿಲ್ಲ.

ಆಹಾರ ಉತ್ಪನ್ನದ ಒಂದು ಪ್ಯಾಕ್‌ನ ಪ್ರಮಾಣವು 25 ಕೆ.ಜಿ ಅಥವಾ 25 ಲೀಟರ್‌ಗಿಂತ ಹೆಚ್ಚು ಇದ್ದರೆ ಅದಕ್ಕೆ ಜಿಎಸ್‌ಟಿ ಅನ್ವಯಿಸುವುದಿಲ್ಲ ಎಂದು ತಿಳಿಸಿದೆ.

ಆಹಾರ ಧಾನ್ಯಗಳ ಮೇಲೆ ಜಿಎಸ್‌ಟಿ ವಿಧಿಸಿರುವುದು ಆಹಾರ ಉತ್ಪನ್ನಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಲಿದೆ ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಹಿರಿಯ ಪಾಲುದಾರ ರಜತ್ ಮೋಹನ್ ಹೇಳಿದ್ದಾರೆ.

ಕೆಎಂಎಫ್ ಉತ್ಪನ್ನಗಳ ಪರಿಷ್ಕೃತ ದರಗಳು

ಉತ್ಪನ್ನ	ಪ್ಯಾಕ್	ಪ್ರಮಾಣ	ಹಿಂದಿನ ದರ	ಜುಲೈ 18ರ ದರ	ಪರಿಷ್ಕೃತ ದರ (₹ಗಳಲ್ಲಿ)
ಮೊಸರು	ಸ್ಯಾಷೆ	200ಗ್ರಾಂ	10	12	10.50
		500ಗ್ರಾಂ	22	24	23
		1000ಗ್ರಾಂ	43	46	45
ಮಜ್ಜಿಗೆ	ಸ್ಯಾಷೆ	200ಮಿ.ಲೀ.	7	8	7.50
	ಟೆಟ್ರಾಪ್ಯಾಕ್		10	11	10.50
	ಪೆಟ್ ಬಾಟಲ್		12	13	12.50
ಲಸ್ಸಿ	ಸ್ಯಾಷೆ	200 ಮಿ.ಲೀ	10	11	10.50
	ಟೆಟ್ರಾ ಪ್ಯಾಕ್ ಸಾದ		20	21	21
	ಟೆಟ್ರಾ ಪ್ಯಾಕ್ ಮ್ಯಾಂಗೋ		25	27	26.50
	ಪೆಟ್ ಬಾಟಲ್ ಸಾದ		15	16	16
	ಪೆಟ್ ಬಾಟಲ್ ಮ್ಯಾಂಗೊ		20	21	21

ಪ್ಯಾಕ್ ಮಾಡಿರುವ ಉತ್ಪನ್ನ ಎಂದರೇನು?

ನಿರ್ದಿಷ್ಟ ಆಹಾರ ಧಾನ್ಯವನ್ನು, ಆಹಾರ ಪದಾರ್ಥವನ್ನು ಗ್ರಾಹಕ ಬರುವುದಕ್ಕೂ ಮೊದಲೇ ಪೂರ್ವ ನಿರ್ಧರಿತ ಪ್ರಮಾಣದಲ್ಲಿ ಪ್ಯಾಕ್ ಮಾಡಿ ಇಟ್ಟಿದ್ದರೆ ಅದನ್ನು ಜಿಎಸ್‌ಟಿ ಪರಿಭಾಷೆಯಲ್ಲಿ 'ಪ್ಯಾಕ್ ಮಾಡಿರುವ' ಎಂದು ಕರೆಯಲಾಗುತ್ತದೆ. ಆ ಪ್ಯಾಕ್ ಸೀಲ್ ಆಗಿರಲೇಬೇಕು ಎಂದೇನೂ ಇಲ್ಲ. ಇಂತಹ ಉತ್ಪನ್ನಗಳಿಗೆ ತೆರಿಗೆ ಅನ್ವಯ ಆಗುತ್ತದೆ. ಗ್ರಾಹಕರ ಸಮ್ಮುಖದಲ್ಲಿಯೇ ಆಹಾರ ಪದಾರ್ಥವನ್ನು ಪ್ಯಾಕ್ ಮಾಡಿದರೆ ಅದಕ್ಕೆ ತೆರಿಗೆ ಅನ್ವಯಿಸುವುದಿಲ್ಲ.

ಮಂಗಳೂರು ವಿಮಾನನಿಲ್ದಾಣದ ಮೂಲಕ ಪ್ರಯಾಣಿಸಿದ್ದ ಮಂಕಿಪಾಕ್ಸ್ ಸೋಂಕಿತ

ಒಂದನೇ ಪುಟದಿಂದ

'ಇವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 15, ಉಡುಪಿ ಜಿಲ್ಲೆಯ 6, ಕಾಸರಗೋಡು ಜಿಲ್ಲೆಯ 13, ಕಣ್ಣೂರಿನ ಒಬ್ಬರು ಸೇರಿದ್ದಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಯಾಣಿಕರು ರಾಜ್ಯದ ಆರೋಗ್ಯ ಇಲಾಖೆಯ ನಿರಂತರ ಸಂಪರ್ಕದಲ್ಲಿದ್ದಾರೆ. ಅವರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ. ಸದ್ಯಕ್ಕೆ ಯಾರಲ್ಲೂ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿಲ್ಲ' ಎಂದು ಅವರು ಮಾಹಿತಿ ನೀಡಿದರು.

ಮಂಗಳೂರು ವಿಮಾನ ನಿಲ್ದಾಣದ ವಲಸೆ ಅಧಿಕಾರಿಗೂ ಪ್ರತ್ಯೇಕ ವಾಸಕ್ಕೆ ಒಳಗಾಗುವಂತೆ ಆರೋಗ್ಯ ಇಲಾಖೆ ಸೂಚನೆ ನೀಡಿದೆ.

'ಸೋಂಕಿತರ ಸಂಪರ್ಕಕ್ಕೆ ಬಂದವರಲ್ಲಿ 21 ದಿನಗಳಲ್ಲಿ ಮಂಕಿ ಪಾಕ್ಸ್‌ನ ಯಾವುದೇ ಲಕ್ಷಣ ಕಾಣಿಸಿಕೊಳ್ಳದಿದ್ದರೆ, ಅವರಿಂದ ಇತರರಿಗೆ ಅಪಾಯ ಇಲ್ಲ' ಎಂದು ಡಾ.ಜಗದೀಶ್ ಅವರು ಸ್ಪಷ್ಟಪಡಿಸಿದರು.

'ಮಂಕಿಪಾಕ್ಸ್ ವೈರಸ್ ಮೂಲಕ ಹರಡುವ ರೋಗ. ಇದು ಸೋಂಕಿತ ವ್ಯಕ್ತಿಯ ನೇರ ಸಂಪರ್ಕಕ್ಕೆ ಬಂದಾಗ ಹರಡುವ ಸಾಧ್ಯತೆ ಜಾಸ್ತಿ. ಅವರು ಮುಟ್ಟಿದ ವಸ್ತುಗಳನ್ನು ಬೇರೆಯವರು ಮುಟ್ಟಿದಾಗ ಅಥವಾ ಅವರು ಕೆಮ್ಮಿದಾಗ ವೈರಾಣು ಇತರರ ಸಂಪರ್ಕಕ್ಕೂ ಬರಬಹುದು. ಕೋವಿಡ್ ಹರಡದಂತೆ ಏನೆಲ್ಲ ಮುನ್ನೆಚ್ಚರಿಕೆ ವಹಿಸಲಾಗುತ್ತಿತ್ತೋ, ಅಂತಹದ್ದೇ ಮುನ್ನೆಚ್ಚರಿಕೆಯನ್ನು ಈ ರೋಗ ನಿಯಂತ್ರಣಕ್ಕಾಗಿ ವಹಿಸಬೇಕು' ಎಂದರು.

'ಅಗತ್ಯ ಚಿಕಿತ್ಸೆಗಾಗಿ ವೆನ್ಲಾಕ್ ಆಸ್ಪತ್ರೆಯಲ್ಲಿ ಹತ್ತು ಹಾಸಿಗೆಗಳನ್ನು ಮೀಸಲಾಗಿಡಲಾಗಿದೆ' ಎಂದು ಡಾ. ಜಗದೀಶ್ ಅವರು ಮಾಹಿತಿ ನೀಡಿದ್ದಾರೆ.

'ರಾಜ್ಯದಲ್ಲಿ ಮಂಕಿಪಾಕ್ಸ್ ಕಂಡು ಬಂದಿಲ್ಲ'

ಬೆಂಗಳೂರು: 'ರಾಜ್ಯದಲ್ಲಿ ಮಂಕಿ ಪಾಕ್ಸ್ ಪ್ರಕರಣ ಕಂಡುಬಂದಿಲ್ಲ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

'ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ಕಟ್ಟೆಚ್ಚರ ವಹಿಸಿದ್ದು, ಮಾರ್ಗಸೂಚಿ ಪಾಲಿಸಲಾಗುತ್ತಿದೆ. ಮಂಕಿ ಪಾಕ್ಸ್ ಬೇಕಾದ ಚಿಕಿತ್ಸೆಗೆ ಸಿದ್ಧತೆ ಕೂಡ ಮಾಡಿಕೊಳ್ಳಲಾಗಿದೆ. ರಾಜ್ಯದ ಒಳಗೆ ಈ ಸೋಂಕು ನುಸುಳದಂತೆ ಕ್ರಮ ವಹಿಸಲಾಗಿದೆ' ಎಂದು ತಿಳಿಸಿದ್ದಾರೆ.

ಜೋಡು ರಥೋತ್ಸವ

ಸೇಡಂ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮಳಖೇಡದ ಉತ್ತರಾಧಿಮಠದಲ್ಲಿ ಜಯತೀರ್ಥರ ಆರಾಧನಾ ಮಹೋತ್ಸವ ನಿಮಿತ್ತ ಸೋಮವಾರ ಜೋಡು ರಥೋತ್ಸವ ಜರುಗಿತು.

ತಿರುಪತಿಯ ವೆಂಕಟರಮಣನಿಗೆ ಉಡಿಸಿರುವ ವಸ್ತ್ರವನ್ನು ಮಠಕ್ಕೆ ತಂದು ಮೆರವಣಿಗೆ ನಡೆಸಲಾಯಿತು. ಸತ್ಯಾತ್ಮತೀರ್ಥ ಸ್ವಾಮೀಜಿ ಮಠದ ಸನ್ನಿಧಾನಕ್ಕೆ ಉಡಿಸಿದರು. ಬಳಿಕ ಸ್ವಾಮೀಜಿ ಅವರು ಭಕ್ತರಿಗೆ ತಪ್ತ ಮುದ್ರಾಧಾರಣೆ ಮಾಡಿದರು.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಸ್ಥಳ ನಿರೀಕ್ಷಣೆಯಲ್ಲಿದ್ದ ಕೆ.ಶ್ರೀನಿವಾಸ್ ಅವರನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿ ರಾಜ್ಯ ಸರ್ಕಾರ ಸೋಮವಾರ ವರ್ಗಾವಣೆ ಮಾಡಿದೆ.

ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಜೆ. ಮಂಜುನಾಥ್ ಅವರನ್ನು ಲಂಚ ಪ್ರಕರಣದಲ್ಲಿ ಜುಲೈ 1ರಂದು ಅಮಾನತುಗೊಳಿಸಿದ್ದ ರಾಜ್ಯ ಸರ್ಕಾರ, ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಗಪ್ಪ ಅವರಿಗೆ ಜಿಲ್ಲಾಧಿಕಾರಿ ಹುದ್ದೆಯನ್ನು ಪ್ರಭಾರವಾಗಿ ನೀಡಿತ್ತು.

ಬಿಬಿಎಂಪಿ ವಿಶೇಷ ಆಯುಕ್ತರಾದ (ಆರ್ಥಿಕ) ತುಳಸಿ ಮದ್ದಿನೇನಿ ಅವರನ್ನು ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಅವರನ್ನು ಬೆಂಗಳೂರು ಸ್ಮಾರ್ಟ್ ಸಿಟಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾಯಿಸಲಾಗಿದೆ. ಸ್ಥಳ ನಿರೀಕ್ಷೆಯಲ್ಲಿದ್ದ ಮಹಾಂತೇಶ ಬೀಳಗಿ ಅವರಿಗೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಹುದ್ದೆ ನೀಡಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಯಾಗಿ ಕರ್ನಾಟಕ ವೈದ್ಯಕೀಯ ಪೂರೈಕೆಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎನ್.ಎಂ. ನಾಗರಾಜ್, ಕೊಪ್ಪಳ ಜಿಲ್ಲಾಧಿಕಾರಿಯಾಗಿ ಎಂ. ಸುಂದರೇಶಬಾಬು ಅವರನ್ನು ವರ್ಗಾಯಿಸಲಾಗಿದೆ. ಗದಗ ಜಿಲ್ಲಾಧಿಕಾರಿಯಾಗಿದ್ದ ಎಂ. ಸುಂದರೇಶ ಬಾಬು ಅವರನ್ನು ಜುಲೈ 11ರ ಆದೇಶ ದಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿತ್ತು.

ಕೃಷ್ಣಾ ಮೇಲ್ದಂಡೆ ಯೋಜನೆಯ (ಯುಕೆಪಿ) ಪರಿಹಾರ, ಪುನರ್ವಸತಿ ಮತ್ತು ಭೂಸ್ವಾಧೀನದ ಪ್ರಧಾನ ವ್ಯವಸ್ಥಾಪಕರಾಗಿ ರಾಹುಲ್ ರತ್ನಂ ಪಾಂಡೆ ಅವರನ್ನು ನೇಮಿಸಲಾಗಿದೆ.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಕೊಪ್ಪಳ.
(ಪಿನ್: 583231) ದೂ. ಸಂ: 08539–221811
ಸಂಖ್ಯೆ : ಡಿಹೆಚ್‌ಎಸ್/ಡಿಪಿಎಂಯು/ಕೊ/90/ಎನ್‌ಹೆಚ್‌ಎಂ/2022–23 ದಿನಾಂಕ: 14/07/2022
ಇ–ಟೆಂಡರ್ ಪ್ರಕಟಣೆ
ವಿಷಯ: ಎನ್.ಹೆಚ್.ಎಂ ಯೋಜನೆಯಡಿ ಕೊಪ್ಪಳ ಜಿಲ್ಲೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಸ್ಥೆಯನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅರ್ಜಿ ಅಹ್ವಾನಿಸಿದ ಬಗ್ಗೆ.
ಮೇಲ್ಕಾಣಿಸಿದ ವಿಷಯದನ್ವಯದಂತೆ ಕೊಪ್ಪಳ ಜಿಲ್ಲೆಯ ಆರೋಗ್ಯ ಇಲಾಖೆಯ ಎನ್.ಹೆಚ್.ಎಂ ಯೋಜನೆಯಡಿಯಲ್ಲಿ 2022–23ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಸ್ಥೆಯನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅರ್ಜಿ ಅಹ್ವಾನಿಸಿದ್ದು ಇರುತ್ತದೆ.
1) ಇ–ಟೆಂಡರ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಪ್ರಾರಂಭಿಕ ದಿನಾಂಕ : **14/07/2022.** 2) ಇ–ಟೆಂಡರ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ : **13/08/2022 ಸಮಯ 5.30 ರೊಳಗಡೆ.** 3) ಇ–ಟೆಂಡರ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **16/08/2022.** 4) ಇ–ಟೆಂಡರ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : **18/08/2022.**
ಸಹಿ/– **ಉಪಾಧ್ಯಕ್ಷರು**
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಕೊಪ್ಪಳ.
ವಾ.ಸಾ.ಇ./ಕೊಪ್ಪಳ/238/2022–23/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ನಂ.8, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್ : mdkrdcl@gmail.com ವೆಬ್‌ಸೈಟ್ : www.krdcl.in
ಸಂ. ಕೆಆರ್‌ಡಿಸಿಎಲ್/ಐಎಫ್‌ಬಿ/2022–23/10 ದಿನಾಂಕ : 18–07–2022
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಆಧಾರದ ಮೇಲೆ)
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು, "ಹೈಬ್ರಿಡ್ ಆನ್ಯುಯಿಟಿ ಮೋಡ್ (ಹೆಚ್‌ಎಎಂ) ಅಡಿಯಲ್ಲಿ ಕೆಳಕಂಡ ರಸ್ತೆಗಳಿಗಾಗಿ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚಕರು" ಇದಕ್ಕಾಗಿ ಹೆಸರಾಂತ ಸಮಾಲೋಚಕರಿಂದ ಬಿಡ್‌ಗಳನ್ನು ಆಹ್ವಾನಿಸಿದೆ. ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ ಪ್ರಕ್ರಿಯೆ (ಕ್ಯುಸಿಬಿಎಸ್) ಆಧಾರದ ಮೇಲೆ ಆಯ್ಕೆಯನ್ನು ಮಾಡಲಾಗುತ್ತದೆ.
ಪ್ಯಾಕೇಜ್ : ಪ್ಯಾಕೇಜ್–1. (1) ಲಿಂಗಸುಗೂರು – ಮುದಗಲ್ – ಕುಷ್ಟಗಿ ವರೆಗಿನ ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 66 ಕಿ.ಮೀ. (2) ಮುಧೋಳ – ಲೋಕಾಪುರ – ಬಾಗಲಕೋಟೆ – ಗುಳೇದಗುಡ – ಹುನಗುಂದ – ಮುದಗಲ್ ವರೆಗಿನ ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 163 ಕಿ.ಮೀ. (3) ಯರಗಟ್ಟಿ – ಮುನವಳ್ಳಿ – ನರಗುಂದ ವರೆಗಿನ ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 52 ಕಿ.ಮೀ. **ಪ್ಯಾಕೇಜ್** : ಪ್ಯಾಕೇಜ್–2. (1) ದುಡ್ಡ ಕ್ರಾಸ್ – ಅರಸೀಕೆರೆ – ಬೆಳಗೂರು – ಹೊಸದುರ್ಗ ವರೆಗಿನ ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 97 ಕಿ.ಮೀ. (2) ಹಾಸನ – ಸಾಲಗಾಮೆ – ಹಳೇಬೀಡು – ಬೇಲೂರು ವರೆಗಿನ ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 48 ಕಿ.ಮೀ. **ಪ್ಯಾಕೇಜ್** : ಪ್ಯಾಕೇಜ್–3. (1) ಹುಣಸೂರು ತಾಲ್ಲೂಕು ಯಶೋದಾಪುರದಿಂದ (ರಾಹೆ–275 ಜಂಕ್ಷನ್) ಕೇರಳಾ ಗಡಿವರೆಗಿನ (ತಿತಿಮತಿ – ಗೋಣಿಕೊಪ್ಪ – ಬೀತಂಗಾಳ – ಮಕುಟ ಮೂಲಕ) ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 104 ಕಿ.ಮೀ. (2) ಮಡಿಕೇರಿ ಯಿಂದ ಕುಟ್ಟ (ಸಿದ್ದಾಪುರ – ಪಳ್ಳಿಬೆಟ್ಟ – ಗೋಣಿಕೊಪ್ಪ – ಶ್ರೀಮಂಗಳ ಮೂಲಕ) ವರೆಗಿನ ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 85 ಕಿ.ಮೀ. (3) ಹನೂರು – ಮಲೆಮಹದೇಶ್ವರ ಬೆಟ್ಟ – ತಮಿಳು ನಾಡು ಗಡಿವರೆಗಿನ ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 67 ಕಿ.ಮೀ. **ಪ್ಯಾಕೇಜ್** : ಪ್ಯಾಕೇಜ್–4. (1) ಕೋಟಾಪಲ್ಲಿಯಿಂದ ಮಾಸ್ತಿ (ತಡಿಗೋಳ ಕ್ರಾಸ್, ಶ್ರೀನಿವಾಸಪುರ, ಕೋಲಾರದಿಂದ ಆಂಧ್ರ ಪ್ರದೇಶ ಗಡಿ)ವರೆಗಿನ ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 110 ಕಿ.ಮೀ. (2) ಬಾಗೇಪಲ್ಲಿಯಿಂದ (ರಾಹೆ–7) – ಆಂಧ್ರ ಪ್ರದೇಶ ಗಡಿವರೆಗಿನ (ಚೇಳೂರು – ಚಿಂತಾಮಣಿ – ಕೋಲಾರ – ಬಂಗಾರಪೇಟೆ ಮೂಲಕ) ರಸ್ತೆಯ ಅಭಿವೃದ್ಧಿಯ ಕಾಮಗಾರಿಗಾಗಿ ವಿವರವಾದ ಯೋಜನಾ ವರದಿಯ (ಡಿಪಿಆರ್) ತಯಾರಿಕೆಗಾಗಿ ಸಮಾಲೋಚನಾ ಸೇವೆಗಳು. **ಅಂದಾಜು ಉದ್ದ** – 153 ಕಿ.ಮೀ.
ಪ್ರತಿ ಪ್ಯಾಕೇಜ್‌ಗಾಗಿ ಇ.ಎಂ.ಡಿ. ಮೊತ್ತ : ರೂ. 1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ.
2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಸಂಪೂರ್ಣ ಟೆಂಡರ್ ದಾಖಲೆಯನ್ನು ಆಸಕ್ತ ಅರ್ಜಿದಾರರು ವೀಕ್ಷಿಸಬಹುದು ಮತ್ತು ಡೌನ್‌ಲೋಡ್ ಮಾಡಬಹುದು.
3) ದಾಖಲೆಯಲ್ಲಿ ಸೂಚಿಸಿದಂತೆ ಬಿಡ್ ಠೇವಣಿಯನ್ನು (ಇಎಂಡಿ) ಪಾವತಿಸಬೇಕು.
4) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರವೇ ಆನ್‌ಲೈನ್‌ನಲ್ಲಿ ಬಿಡ್‌ಗಳನ್ನು ದಿನಾಂಕ : **25–08–2022 ರಂದು 17:00 ಗಂಟೆಗಳವರೆಗೆ** ಸಲ್ಲಿಸಬೇಕು
5) ಬಿಡ್ ಪೂರ್ವ (Pre-bid) ವಿಚಾರಣೆಗಳನ್ನು, ಇದ್ದಲ್ಲಿ, ಇ–ಪೋರ್ಟಲ್ / ಇ–ಮೇಲ್ cekrdcl@gmail.com ಗೆ ದಿನಾಂಕ : **07–08–2022**ರಂದು **17.00 ಗಂಟೆಗೆ** ಮುಂಚಿತವಾಗಿ ಸಲ್ಲಿಸಬೇಕು.
6) ಬಿಡ್–ಪೂರ್ವ (Pre-bid) ಸಭೆಯನ್ನು ಕೆಆರ್‌ಡಿಸಿಎಲ್ ಕಛೇರಿಯಲ್ಲಿ ದಿನಾಂಕ : **08–08–2022 ರಂದು 15.30 ಗಂಟೆ**ಗೆ ನಡೆಸಲಾಗುವುದು.
7) ತಾಂತ್ರಿಕ ಬಿಡ್‌ಗಳನ್ನು ದಿನಾಂಕ : **29–08–2022 ರಂದು 11:30 ಗಂಟೆಗೆ** ತೆರೆಯಲಾಗುವುದು.
8) ದಯವಿಟ್ಟು ಗಮನಿಸಿ, ಯಾವುದೇ ಕಾರಣಗಳನ್ನು ತಿಳಿಸದೇ ಯಾವುದೇ ಬಿಡ್‌ಗಳನ್ನು ಅಂಗೀಕರಿಸುವ ಅಥವಾ ಸ್ವೀಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿದೆ.
9) ಮುಂದೆ, ಬಿಡ್ ದಾಖಲೆಗಳಿಗೆ ಸಂಬಂಧಿಸಿದಂತೆ ಯಾವುದೇ ಸೇರ್ಪಡೆಗಳು / ಸ್ಪಷ್ಟೀಕರಣಗಳು / ವೇಳಾಪಟ್ಟಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮತ್ತು ಕೆಆರ್‌ಡಿಸಿಎಲ್ ವೆಬ್‌ಸೈಟ್ http://www.krdcl.in ನಲ್ಲಿ ಮಾತ್ರವೇ ಪ್ರಕಟಿಸಲಾಗುತ್ತದೆ / ಅಪ್‌ಲೋಡ್ ಮಾಡಲಾಗುತ್ತದೆ.
ದಯವಿಟ್ಟು ಗಮನಿಸಿ, ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳು ಇದ್ದರೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಮತ್ತು ಮುಂದಿನ ಬದಲಾವಣೆಗಳನ್ನು ಇ–ಪೋರ್ಟಲ್ / ಕೆಆರ್‌ಡಿಸಿಎಲ್ ವೆಬ್‌ಸೈಟ್‌ನಲ್ಲಿ ಮಾತ್ರವೇ ಅಪ್‌ಡೇಟ್ ಮಾಡಲಾಗುತ್ತದೆ.
ಸಹಿ/– ಮುಖ್ಯ ಇಂಜಿನಿಯರ್,
ಕೆಆರ್‌ಡಿಸಿಎಲ್, ಬೆಂಗಳೂರು.
ವಾಸಾಸಂಇ/ವಾ.ಪ್ರ/1426/ಶ್ರೇಷ್ಠ/2022–23
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಚಿಂಚೋಳಿ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಸಂಖ್ಯೆ:ಶಿಅಯೋಚಿ/ಮಮಅಇ/ಐಸಿಡಿಎಸ್/ಮೊಟ್ಟೆ/ಟೆಂಡರ್/2022–23 ದಿನಾಂಕ:18–07–2022
:: ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::
ಸರ್ಕಾರದ ಆದೇಶ ಸಂಖ್ಯೆ : ಮಮಇ 169 ಐಸಿಡಿ 2021, ದಿನಾಂಕ : 22.03.2022 ರಂತೆ ಚಿಂಚೋಳಿ ತಾಲೂಕಿನ ಅಂಗನವಾಡಿ ಕೇಂದ್ರದ ಫಲಾನುಭವಿಗಳಾದ 06 ತಿಂಗಳಿಂದ 06 ವರ್ಷದೊಳಗಿನ ಮಕ್ಕಳಿಗೆ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ವಿತರಿಸಲು ಅಗತ್ಯವಿರುವ ಕೋಳಿ ಮೊಟ್ಟೆಗಳ ಸರಬರಾಜು ಮಾಡಲು ದ್ವಿ–ಲಕೋಟೆ ಪದ್ಧತಿ ಪ್ರಕಾರ ನಿಬಂಧನೆಗಳಿಗೆ ಒಳಪಟ್ಟು ಅನುಬಂಧ–2ರಲ್ಲಿ ನಿಗಧಿಪಡಿಸಿರುವ ವೇಳಾಪಟ್ಟಿಯಂತೆ ಕರ್ನಾಟಕ ಸರ್ಕಾರದ e-Procurement Portal ಪದ್ಧತಿಯಂತೆ http//eproc.karnataka.gov.in Online ಮುಖಾಂತರ ಅನುಬಂಧ–1ರಲ್ಲಿ ತಿಳಿಸಿದಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಅನುಬಂಧ–1
1) ವಸ್ತುಗಳು / ಸರಕುಗಳು : ಮೊಟ್ಟೆಗಳು, ಸಾರಿಗೆ ಸಹಿತ, 2) ಪ್ರಮಾಣ : ಮಾಸಿಕ 2,72,533/–, ವಾರ್ಷಿಕ 32,70,400/–, 3) ಘಟಕ : ಸಂಖ್ಯೆಗಳು, 4) ವರ್ಷಕ್ಕೆ ಅಂದಾಜು ವೆಚ್ಚ (ರೂ.) : 1,96,22,400/–, 5) EMD (ರೂ.) : 3,00,000/–, 6) ವಿತರಣಾ ವೇಳಾಪಟ್ಟಿ : 5ನೇ, 15ನೇ ಮತ್ತು 25ನೇ ದಿನ
ಅನುಬಂಧ–2 (ಟೆಂಡರ್ ವೇಳಾಪಟ್ಟಿ)
1) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ : **ಪ್ರಾರಂಭ ದಿನಾಂಕ:19.07.2022,** 2) ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: **30.07.2022, 11:00 AM** ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಚಿಂಚೋಳಿ. 3) ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **08.08.2022** ರಿಂದ **05:30 PM** ಒಳಗೆ, 4) ಇ–ಟೆಂಡರ್ ಅನ್ನು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **18.08.2022** ರಿಂದ **05:30 PM** ಒಳಗೆ, 5) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: **20.08.2022, 11:00 AM,** 6) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **22.08.2022 11:00 AM,** 7) ಟೆಂಡರ್‌ಗಳನ್ನು ತೆರೆಯುವ ಸ್ಥಳ: ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್, 8) ಸಂವಹನಕ್ಕಾಗಿ ವಿಳಾಸ : ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಚಿಂಚೋಳಿ, Mobile No-9902878603.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಚಿಂಚೋಳಿ
ವಾ.ಸಾ.ಸಂ.ಇ/ಕಲಬುರಗಿ/382/ಎಂ.ಸಿ.&ಎ/2022–23

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029.
ದೂ.: 080–29753350, ಇ–ಮೇಲ್: karbuildworkerswelfare@gmail.com
No.: KBOCWWB/NOTIFICATIONS/CR-01/2022-23 Dated: 16.07.2022
ಇ–ಟೆಂಡರ್ ಪ್ರಕಟಣೆ
ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಎರಡು (ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಹಾಗೂ ಮೂರು ಹಂತದ ಇ–ಟೆಂಡರನ್ನು (ಪೂರ್ವ ಅರ್ಹತಾ, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಈ ಕೆಳಗಿನ ಸೇವೆಗಳಿಗೆ ಮತ್ತು ನಿಗದಿಪಡಿಸಿದ ಅವಧಿಗಾಗಿ ಅರ್ಹ ಏಜನ್ಸಿಗಳಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಸೇವೆಯ ವಿವರಗಳು	ಅವಧಿ	ಮುಂಗಡ ಠೇವಣಿ ಹಣ (ಇಎಂಡಿ)
1	KBOCWWB/MHC/CR-12/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಉಪವಿಭಾಗ–2 ಬೆಳಗಾವಿ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಯೋಗಿಕವಾಗಿ 03 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 5,31,000/–
2	KBOCWWB/MHC/CR-29/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಬೀದರ್ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಯೋಗಿಕವಾಗಿ 03 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 5,31,000/–
3	KBOCWWB/MHC/CR-19/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಹಾಸನ ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಯೋಗಿಕವಾಗಿ 03 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 5,31,000/–
4	KBOCWWB/MHC/CR-20/2022-23	ಮಂಡಳಿಯ ನೋಂದಾಯಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಕಾರ್ಮಿಕ ಅಧಿಕಾರಿ, ಚಿಕ್ಕಮಗಳೂರು ಇವರ ವ್ಯಾಪ್ತಿಯಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಒದಗಿಸಲು ಪ್ರಯೋಗಿಕವಾಗಿ 03 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಸ್ಥಾಪಿಸಿ ನಿರ್ವಹಣೆ ಮಾಡುವ ಕಾರ್ಯನಿರ್ವಹಿಸುವುದಕ್ಕಾಗಿ ಸಂಸ್ಥೆಯ ಆಯ್ಕೆ.	02 ವರ್ಷ	ರೂ. 5,31,000/–
5	KBOCWWB/ADMIN/VEHICLES/CR-01/2022-23	ಮಂಡಳಿಗಾಗಿ ಹೊರಗುತ್ತಿಗೆ ಮೂಲಕ ಮಾಸಿಕ ಆಧಾರದ ಮೇಲೆ A/C ಮತ್ತು Non-A/C ವಾಹನಗಳನ್ನು ಒದಗಿಸಲು ಏಜೆನ್ಸಿಗಳ ಎಂಪನೆಲ್ಮೆಂಟ್.	01 ವರ್ಷ	ರೂ. 1,80,000/–

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಏಜನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ https://eproc.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕ್ರಮ ಸಂಖ್ಯೆ 01 ರಿಂದ 04ರ ಇ–ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **16.08.2022**ರಂದು **ಸಂಜೆ 5:30 ಗಂಟೆ**ಯವರೆಗೆ ಇರುತ್ತದೆ ಹಾಗೂ ಕ್ರಮ ಸಂಖ್ಯೆ 5ರ ಇ–ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **05.08.2022**ರಂದು **ಸಂಜೆ 5:30 ಗಂಟೆ**ಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–
ಜಂಟಿ ಕಾರ್ಯದರ್ಶಿಗಳು, ಕ.ಕ.&ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ವಾಪ್ರ/ಎಲ್‌ಸಿ/1413/2022–23
ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕೃಷಿ ಇಲಾಖೆ
ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560001.
ಸಂಖ್ಯೆ: SFS-5/Seed Tender/RS/2022-23 ದಿನಾಂಕ: 01.07.2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ
2022–23ರ ಹಿಂಗಾರು/ಬೇಸಿಗೆ ಹಂಗಾಮಿಗೆ ಇಲಾಖಾ ಕಾರ್ಯಕ್ರಮಗಳಿಗೆ ಅವಶ್ಯವಿರುವ ಭತ್ತ, ಜೋಳ, ಮುಸುಕಿನ ಜೋಳ, ರಾಗಿ, ಗೋಧಿ, ಕಡಲೆ, ಅಲಸಂದೆ, ಹೆಸರು, ಉದ್ದು, ನೆಲಗಡಲೆ, ಕುಸುಬ, ತೃಣ ಧಾನ್ಯಗಳು ಮತ್ತು ಸೂರ್ಯಕಾಂತಿ ಬೆಳೆಗಳ ಪ್ರಮಾಣಿತ/ನಿಜಚೀಟಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು ಬಿತ್ತನೆ ಬೀಜ ಉತ್ಪಾದನಾ ಸಂಸ್ಥೆಗಳಿಂದ ಅಥವಾ ಅವರ ನಿಯೋಜಿತ ವಿತರಕರುಗಳಿಂದ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ್ನು ಕನಸೈನ್‌ಮೆಂಟ್ (Consignment) ಆಧಾರದ ಮೇಲೆ ಬೇಡಿಕೆ ಇರುವ ಬಿತ್ತನೆ ಬೀಜಗಳ ಮೂಲವನ್ನು ಗುರುತಿಸಲು ಕರೆಯಲಾಗಿದೆ.
ಇಚ್ಛೆಯುಳ್ಳ ಸರಬರಾಜುದಾರರು ಟೆಂಡರ್ ಅರ್ಜಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಅಂತರ್‌ಜಾಲದಿಂದ ಉಚಿತವಾಗಿ ಪಡೆಯಬಹುದಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲಿಚ್ಚಿಸುವ ಟೆಂಡರ್‌ದಾರರು ಇ–ಆಡಳಿತ ಕೇಂದ್ರ, ಮೊದಲನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು–01 ರವರಲ್ಲಿ ನೊಂದಣಿ ಮಾಡಿಸಿ DSC Key ಅಥವಾ ಇ–ಟೋಕನ್ ಪಡೆಯಬೇಕಾಗಿದೆ. ಟೆಂಡರ್ ಅರ್ಜಿಗಳು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲ: https://eproc.karnataka.gov.inನಲ್ಲಿ ದಿನಾಂಕ: 15–07–2022 ರಿಂದ ಲಭ್ಯವಾಗುತ್ತದೆ. ಟೆಂಡರ್‌ನ್ನು ಅಂತರ್‌ಜಾಲದ (online) ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 18–08–2022, ಸಮಯಃ ಸಂಜೆ 5.00 ಗಂಟೆ.
ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 22–08–2022 ರಂದು ಬೆಳಿಗ್ಗೆ:11.00 ಗಂಟೆಗೆ ಸಂಭ್ರಮ ಸಭಾಂಗಣ, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–01 ಇಲ್ಲಿ ತೆರೆಯಲಾಗುವುದು.
ಸಹಿ/–
ಕೃಷಿ ನಿರ್ದೇಶಕರು
DIPR/CP/1422/Zenkar/2022-23

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ–1:ಟೆಂಡರ್–13/2022–23
ದಿನಾಂಕ: 08.07.2022
ಟೆಂಡರ್ ಪ್ರಕಟಣೆ ಸಂಖ್ಯೆ.13/2022–23 ದಿನಾಂಕ: 08.07.2022
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 13/2022–23:ದಿನಾಂಕ 08–07–2022ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054– ಎಸ್.ಸಿ.ಪಿ ಮತ್ತು 5054– ಟಿ.ಎಸ್.ಪಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 06 ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.46.57 ಲಕ್ಷಗಳು, ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.165.02 ಲಕ್ಷಗಳು, ಇ.ಎಂ.ಡಿ ಕನಿಷ್ಠ ಮೊತ್ತ ರೂ.93,200/–, ಇ.ಎಂ.ಡಿ ಗರಿಷ್ಠ ಮೊತ್ತ ರೂ.2,47,600/–, ಅರ್ಹ ಗುತ್ತಿಗೆದಾರರು : 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 03 ರಿಂದ 04 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **03.08.2022** ರ 16.00 ಗಂಟೆಗೆ, ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **18.07.2022** ರಿಂದ **05.08.2022**ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **05.08.2022** ರ ಸಂಜೆ 16.00 ಗಂಟೆವರೆಗೆ, ರೂ.50.00 ಲಕ್ಷಕ್ಕಿಂತ ಮೇಲ್ಪಟ್ಟ ಟೆಂಡರ್‌ಗಿಟ್ಟ ಮೊತ್ತದ ಕಾಮಗಾರಿಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **06.08.2022** ರ ಸಂಜೆ 16.30 ಗಂಟೆಗೆ, ರೂ.50.00 ಲಕ್ಷಕ್ಕಿಂತ ಕಡಿಮೆ ಟೆಂಡರ್‌ಗಿಟ್ಟ ಮೊತ್ತದ ಕಾಮಗಾರಿಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **06.08.2022** ರ ಸಂಜೆ 16.30 ಗಂಟೆಗೆ, ರೂ.50.00 ಲಕ್ಷಕ್ಕಿಂತ ಮೇಲ್ಪಟ್ಟ ಟೆಂಡರ್‌ಗಿಟ್ಟ ಮೊತ್ತದ ಕಾಮಗಾರಿಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **10.08.2022** ರ ಸಂಜೆ 16.30 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. **ಸೂಚನೆ:** ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/305/MCA/2022-23

ಕಲ್ಲಕುರಿಚಿ ಹಿಂಸಾಚಾರದಲ್ಲಿ ಭಾಗಿಯಾಗಿದ್ದ 300 ಮಂದಿ ಬಂಧನ

ವಿದ್ಯಾರ್ಥಿನಿ ಸಾವು: ಶಿಕ್ಷಕರ ಸೆರೆ

ಕಲ್ಲಕುರಿಚಿ (ತಮಿಳುನಾಡು) (ಪಿಟಿಐ): ಇಲ್ಲಿನ ಚಿನ್ನಸೇಲಂನಲ್ಲಿರುವ ಖಾಸಗಿ ವಸತಿ ಶಾಲೆಯೊಂದರ ವಿದ್ಯಾರ್ಥಿನಿ ಅನುಮಾನಾಸ್ಪದವಾಗಿ ಸಾವಿಗೀಡಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಶಿಕ್ಷಕರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ವಿದ್ಯಾರ್ಥಿನಿ ಸಾವಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿ ಭಾನುವಾರ ನಡೆದಿದ್ದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿತ್ತು. ಪ್ರತಿಭಟನಕಾರರು ಶಾಲಾ ಬಸ್‌ಗಳಿಗೆ ಬೆಂಕಿ ಹಚ್ಚಿ, ಶಾಲೆಗೆ ಹಾನಿ ಮಾಡಿದ್ದರು. ಈ ಸಂಬಂಧ 300 ಮಂದಿಯನ್ನು ಬಂಧಿಸಲಾಗಿದೆ.

ಗಣಿತ ಮತ್ತು ರಸಾಯನ ವಿಜ್ಞಾನ ಕಲಿಸುತ್ತಿದ್ದ ಇಬ್ಬರು ಶಿಕ್ಷಕರು ಕಲಿಕೆಯ ವಿಚಾರವಾಗಿ ವಿದ್ಯಾರ್ಥಿನಿಗೆ ಕಿರುಕುಳ ನೀಡಿದ್ದರು ಎಂದು ಆಕೆಯ ಪೋಷಕರು ಆರೋಪಿಸಿದ್ದರು.

ಮುಖ್ಯಾಂಶಗಳು

- ನ್ಯಾಯಕ್ಕಾಗಿ ಆಗ್ರಹಿಸಿ ನಡೆದಿದ್ದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು
- ಗಣಿತ ಮತ್ತು ರಸಾಯನ ವಿಜ್ಞಾನ ಶಿಕ್ಷಕರಿಂದ ವಿದ್ಯಾರ್ಥಿನಿಗೆ ಕಿರುಕುಳ

ಶಾಲೆಯ ಆಡಳಿತ ಮಂಡಳಿಯ ಉನ್ನತ ಹುದ್ದೆಯಲ್ಲಿರುವ ಇಬ್ಬರು ಪುರುಷರು ಮತ್ತು ಮಹಿಳೆಯನ್ನು ಭಾನುವಾರ ಬಂಧಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಖಾಸಗಿ ಶಾಲೆಯ ಹಾಸ್ಟೆಲ್‌ನ ಮೂರನೇ ಮಹಡಿಯ ಕೊಠಡಿಯೊಂದರಲ್ಲಿ ವಾಸವಾಗಿದ್ದ 17 ವರ್ಷದ ವಿದ್ಯಾರ್ಥಿನಿ, ಮೇಲಿನಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಶಂಕಿಸಲಾಗಿದೆ. ಬಾಲಕಿಯು ಸಾಯುವ ಮುನ್ನ ಆಕೆಯ ದೇಹದಲ್ಲಿ ಗಾಯಗಳಾಗಿದ್ದವು ಎಂದು ಮರಣೋತ್ತರ ಪರೀಕ್ಷೆಯಲ್ಲಿ ತಿಳಿದು ಬಂದಿತ್ತು. ಬಳಿಕ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ಬಾಲಕಿಯ ಸಾವಿಗೆ ನ್ಯಾಯ ದೊರೆಯಬೇಕೆಂದು ಆಗ್ರಹಿಸಿ ಆಕೆಯ ಪೋಷಕರು, ಸಂಬಂಧಿಕರು ಮತ್ತು ಗ್ರಾಮಸ್ಥರು ನಿರಂತರವಾಗಿ ಪ್ರತಿಭಟನೆ ನಡೆಸಿದ್ದರು. ಇದಕ್ಕೆ ರಾಜಕೀಯ ಸಂಘಟನೆಗಳು ಹಾಗೂ ಎಡ ಪಕ್ಷದ ಯುವ ಘಟಕಗಳೂ ಬೆಂಬಲ ನೀಡಿದ್ದವು.

ಎಸ್‌ಐಟಿ ರಚನೆಗೆ ಹೈಕೋರ್ಟ್ ನಿರ್ದೇಶನ

ಕಲ್ಲಕುರಿಚಿಯಲ್ಲಿ ನಡೆದಿರುವ ಹಿಂಸಾಚಾರಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಮದ್ರಾಸ್ ಹೈಕೋರ್ಟ್, ಹಿಂಸಾಚಾರದಲ್ಲಿ ಭಾಗಿಯಾದವರ ಪತ್ತೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಡಿಜಿಪಿಗೆ ನಿರ್ದೇಶನ ನೀಡಿದೆ.

ಎಸ್‌ಐಟಿ ತನಿಖೆಯ ನಂತರ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಮೂರ್ತಿ ಎನ್. ಸತೀಶ್ ಕುಮಾರ್ ಹೇಳಿದ್ದಾರೆ. ಬಾಲಕಿಯ ಮೃತದೇಹವನ್ನು ಮರು ಮರಣೋತ್ತರ ಪರೀಕ್ಷೆ ನಡೆಸಬೇಕು ಎಂದೂ ಆದೇಶಿಸಿದ್ದಾರೆ.

ಪ್ರಕರಣದ ಕುರಿತು ಸಿಬಿ–ಸಿಐಡಿ ತನಿಖೆ ನಡೆಯಬೇಕೆಂದು ಆಗ್ರಹಿಸಿ ವಿದ್ಯಾರ್ಥಿನಿಯ ಪೋಷಕರು ಹೈಕೋರ್ಟ್ ಮೊರೆ ಹೋಗಿದ್ದರು.

ಜುಬೈರ್ ವಿರುದ್ಧ ತ್ವರಿತ ಕ್ರಮ ಸಲ್ಲ: ‘ಸುಪ್ರೀಂ’

ನವದೆಹಲಿ (ಪಿಟಿಐ): ಆಲ್ಟ್ ನ್ಯೂಸ್ ಸಹಸಂಸ್ಥಾಪಕ ಮೊಹಮ್ಮದ್ ಜುಬೈರ್ ವಿರುದ್ಧ ದಾಖಲಾಗಿರುವ ಐದು ಎಫ್‌ಐಆರ್‌ಗಳಿಗೆ ಸಂಬಂಧಿಸಿದಂತೆ ಬುಧವಾರದವರೆಗೆ (ಜುಲೈ 20) ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಉತ್ತರಪ್ರದೇಶದ ಪೊಲೀಸರಿಗೆ ಸುಪ್ರೀಂಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರಿದ್ದ ಪೀಠವು, ‘ಒಂದು ಪ್ರಕರಣದಲ್ಲಿ ಜಾಮೀನು ಪಡೆದ ಬೆನ್ನಲ್ಲೇ ಮತ್ತೊಂದು ಪ್ರಕರಣದಲ್ಲಿ ಜುಬೈರ್ ಅವರನ್ನು ಬಂಧಿಸಲಾಗುತ್ತಿದೆ. ಎಲ್ಲ ಎಫ್‌ಐಆರ್‌ಗಳು ಒಂದೇ ಗುರಿ ಹೊಂದಿರುವಂತೆ ತೋರುತ್ತದೆ. ಇದೊಂದು ವಿಷವರ್ತುಲದಂತೆ ಗೋಚರಿಸುತ್ತಿದೆ’ ಎಂದೂ ಹೇಳಿದೆ.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳನ್ನು ರದ್ದುಗೊಳಿಸುವಂತೆ ಕೋರಿ ಜುಬೈರ್ ಅವರು ಅರ್ಜಿ ಸಲ್ಲಿಸಿದ್ದು, ಅವರ ಪರ ವಕೀಲೆ ವೃಂದಾ ಗ್ರೋವರ್ ಅವರ ಮನವಿಯ ಮೇರೆಗೆ ತುರ್ತಾಗಿ ಅರ್ಜಿಯನ್ನು ನ್ಯಾಯಪೀಠವು ಕೈಗೆತ್ತಿಕೊಂಡಿತು.

ನಕ್ಸಲ್ ದಾಳಿ: ಖುಲಾಸೆಗೊಂಡರೂ ಸೆರೆವಾಸ ಮುಂದುವರಿಕೆ

ಛತ್ತೀಸಗಡ (ಪಿಟಿಐ): 2017ರ ಬುರ್ಕಾಪಾಲ್ ನಕ್ಸಲ್ ದಾಳಿ ಪ್ರಕರಣದಲ್ಲಿ ಛತ್ತೀಸಗಡದ ದಾಂತೇವಾಡ ನ್ಯಾಯಾಲಯದಿಂದ ಇತ್ತೀಚೆಗೆ ಖುಲಾಸೆಗೊಂಡ 121 ಆದಿವಾಸಿಗಳ ಪೈಕಿ 8 ಮಂದಿ ಇತರೆ ಪ್ರಕರಣಗಳಲ್ಲಿ ಆರೋಪಿಗಳಾಗಿರುವುದರಿಂದ ಇನ್ನೂ ಜೈಲಿನಲ್ಲಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಸ್ತಾರ್ ಪ್ರದೇಶದ ಆದಿವಾಸಿಗಳ ಪಾಲಿನ ‘ಘೋರ ಅನ್ಯಾಯ’ಕ್ಕೆ ಬುರ್ಕಾಪಾಲ್ ಪ್ರಕರಣ ಉದಾಹರಣೆಯಾಗಿದೆ ಎಂದು ಮಾನವ ಹಕ್ಕುಗಳ ಕಾರ್ಯಕರ್ತರೊಬ್ಬರು ಹೇಳಿದ್ದಾರೆ.

ಸುಕ್ಮಾ ಜಿಲ್ಲೆಯ ಬುರ್ಕಾಪಾಲ್ ಹಳ್ಳಿಯಲ್ಲಿ ನಕ್ಸಲರು ನಡೆಸಿದ ದಾಳಿಯಲ್ಲಿ ಕೇಂದ್ರೀಯ ಮೀಸಲು ಪಡೆಯ 25 ಸಿಬ್ಬಂದಿ ಹತ್ಯೆಗೀಡಾಗಿದ್ದರು.

ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನ್ಯಾಯಾಲಯದ ವಿಶೇಷ ನ್ಯಾಯಾಧೀಶ ದೀಪಕ್ ಕುಮಾರ್ ದೇಶ್ಲೈ ಅವರು ಶುಕ್ರವಾರ 121 ಆರೋಪಿಗಳನ್ನು ಖುಲಾಸೆಗೊಳಿಸಿ, ಅಪರಾಧದಲ್ಲಿ ಅವರ ಪಾಲ್ಗೊಳ್ಳುವಿಕೆ ಮತ್ತು ನಕ್ಸಲ್‌ರೊಂದಿಗೆ ಸಂಪರ್ಕ ಇರುವುದನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೇಳಿದ್ದರು.

‘ನ್ಯಾಯಾಲಯದ ಆದೇಶದಂತೆ ಜಗದಲ್‌ಪುರ ಕೇಂದ್ರ ಕಾರಾಗೃಹದಿಂದ 110 ಮಂದಿ ಮತ್ತು ದಾಂತೇವಾಡ ಜಿಲ್ಲಾ ಕಾರಾಗೃಹದಿಂದ ಮೂವರು ಶನಿವಾರ ಬಿಡುಗಡೆಗೊಂಡಿದ್ದಾರೆ. ಇತರೆ ಪ್ರಕರಣಗಳಲ್ಲಿ ಭಾಗಿಯಾಗಿರುವುದರಿಂದ ಎಂಟು ಮಂದಿಯನ್ನು ಬಿಡುಗಡೆ ಮಾಡಿಲ್ಲ’ ಎಂದು ಬಸ್ತಾರ್ ಪ್ರದೇಶದ ಐಜಿಪಿ ಪಿ.ಸುಂದರ್ ರಾಜ್ ತಿಳಿಸಿದ್ದಾರೆ. ತೀರ್ಪಿನ ದಾಖಲೆ ಪರಿಶೀಲಿಸಿದ ನಂತರ ಪ್ರಕರಣದ ಮುಂದಿನ ಕ್ರಮ ನಿರ್ಧರಿಸಲಾಗುವುದು ಎಂದು ಹೇಳಿದ್ದಾರೆ.

‘ತಾವೊಬ್ಬರೆ ದುಡಿಯುತ್ತಿದ್ದ ಕಾರಣ ನಮ್ಮನ್ನು ನೆಚ್ಚಿಕೊಂಡಿದ್ದ ಕುಟುಂಬಗಳು ಬೀದಿಗೆ ಬಂದಿವೆ’ ಎಂದು ಜೈಲಿನಿಂದ ಹೊರಬಂದ 113 ಆದಿವಾಸಿಗಳಲ್ಲಿ ಕೆಲವರು ಆರೋಪಿಸಿದ್ದಾರೆ.

‘ಮಾಡದ ಅಪರಾಧಕ್ಕೆ 5 ವರ್ಷ ಜೈಲಿನಲ್ಲಿದ್ದೆ. ಬಂಧನಕ್ಕೆ ಕೆಲ ದಿನಗಳ ಹಿಂದೆ ಮದುವೆಯಾಗಿದ್ದೆ. ಆಗಿನಿಂದ ಪತ್ನಿಯನ್ನು ನೋಡಿಲ್ಲ’ ಎಂದು ಜಾಗರಗುಂದ ಗ್ರಾಮದ ಹೇಮಲ ಹೇಳಿದರು.

‘ಕೋವಿಡ್ ಸಂತ್ರಸ್ತ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡಿ’

ನವದೆಹಲಿ (ಪಿಟಿಐ): ಕೋವಿಡ್ ಸಂತ್ರಸ್ತರ ಕುಟುಂಬಗಳಿಗೆ ತಕ್ಷಣವೇ ಪರಿಹಾರ ನೀಡಬೇಕು ಎಂದು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

‘ಪರಿಹಾರ ದೊರೆಯದಿರುವ ಬಗ್ಗೆ ದೂರುಗಳಿದ್ದಲ್ಲಿ ಕುಂದು ಕೊರತೆ ನಿವಾರಣಾ ಸಮಿತಿಗೆ ನೀಡಬಹುದು. ಈಗಾಗಲೇ ದೂರುಗಳು ಬಂದಿದ್ದಲ್ಲಿ ಇನ್ನು ನಾಲ್ಕು ವಾರಗಳಲ್ಲಿ ಅವುಗಳನ್ನು ಇತ್ಯರ್ಥ ಪಡಿಸಬೇಕು’ ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಬಿ.ವಿ ನಾಗರತ್ನ ಅವರಿದ್ದ ಪೀಠ ಹೇಳಿದೆ.

ರಾಜ್ಯ ವಿಪತ್ತು ಸ್ಪಂದನಾ ಪಡೆಯ (ಎಸ್‌ಡಿಆರ್‌ಎಫ್) ನಿಧಿಯಿಂದ ವೈಯಕ್ತಿಕ ಖಾತೆಗಳಿಗೆ ಹಣ ವರ್ಗಾವಣೆ ಮಾಡಲು ಆಂಧ್ರಪ್ರದೇಶ ಸರ್ಕಾರಕ್ಕೆ ಸೂಚಿಸಬೇಕು ಎಂದು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ನಡೆಸಿತು. ಇನ್ನು ಎರಡು ದಿನದಲ್ಲಿ ಎಸ್‌ಡಿಆರ್‌ಎಫ್ ನಿಧಿಗೆ ಹಣ ವರ್ಗಾವಣೆ ಮಾಡಬೇಕು ಎಂದು ಆಂಧ್ರ ಪ್ರದೇಶ ಸರ್ಕಾರಕ್ಕೆ ನಿರ್ದೇಶಿಸಿತು.

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಸೊಪ್ಪುಗುಡ್ಡೆ, ತೀರ್ಥಹಳ್ಳಿ

ದೂರವಾಣಿ : 08181–295940 g-mail : cdpotth@gmail.com

ಸಂ.ಶಿಅಯೋತೀ/ಅಂ.ಕೆ.ಕೋ.ಮೊ/ಟೆಂಡರ್ ಪ್ರಕಟಣೆ/22–23 ದಿ:15–07–2022

ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನಾ ಕಛೇರಿ ತೀರ್ಥಹಳ್ಳಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ 300 ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆ ಖರೀದಿ ಮಾಡಲು ಮಾಡಲು ಇ–ಪೋರ್ಟಲ್ ಮೂಲಕ http://eproc.karnataka.gov.in ಟೆಂಡರ್ ಆಹ್ವಾನಿಸಲಾಗಿದೆ. ಅಂದಾಜು ಮೊತ್ತ ರೂ. 45.99 ಲಕ್ಷ.

ಟೆಂಡರ್ ಅರ್ಜಿಗಳನ್ನು ದಿನಾಂಕ 20–7–2022 ರಿಂದ 29–07–2022 ರ ಸಂಜೆ 5.00 ಗಂಟೆಯೊಳಗೆ ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿದೆ. ದಿನಾಂಕ 01–08–2022 ರ ಬೆಳಿಗ್ಗೆ 11–00 ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ನಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ ತಿಳಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಸೊಪ್ಪುಗುಡ್ಡೆ, ತೀರ್ಥಹಳ್ಳಿ, ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ–08181–295940

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತೀರ್ಥಹಳ್ಳಿ

ವಾ.ಸಾ.ಸಂ.ಇ/ಎಂಸಿಎ/ಶಿ/105/07/22–23/607

ಕರ್ನಾಟಕ ಸರ್ಕಾರ

ಉಪನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ–577 501.

ಸರ್ಕಾರಿ ವಸತಿ ಪಾಠಶಾಲೆ ಕಟ್ಟಡ, ಸರ್ಕಾರಿ ವಿಜ್ಞಾನ ಕಾಲೇಜು ಎದುರು, ಚಿತ್ರದುರ್ಗ.

Ph: 08194-225954 E-mail: dswoctadst434@gmail.com

ಸಂ:ಉನಿ/ಸಕಇ/ಚಿದು/ಟೆಂಡರ್/ವ.ಶಾ/ಸಿಆರ್–2/2022–23 ದಿನಾಂಕ: 15.07.2022

ಟೆಂಡರ್ ಪ್ರಕಟಣೆ

2022–23ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಬರುವ ಚಿತ್ರದುರ್ಗ ಜಿಲ್ಲೆಯ ವಸತಿ ಶಾಲೆ/ಕಾಲೇಜುಗಳಿಗೆ ಮೂಲಭೂತ ಸಾಮಗ್ರಿಗಳಾದ ಹಾಸಿಗೆಗಳು (ರಬ್ಬರೈಸಡ್ ಬೆಡ್), ಬೆಡ್‌ಶೀಟ್ & ಬೆಡ್‌ಸ್ಪ್ರೆಡ್ಸ್ ಮತ್ತು ದಿಂಬುಗಳನ್ನು ಸರಬರಾಜು ಮಾಡಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ಮಾಹಿತಿಯು ಈ ಕೆಳಕಂಡಂತಿದೆ.

1) Tender Number: SWD/2022-23/IND1816 Date: 15.07.2022. 2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ: 1,60,34,270/–. 3) ಟೆಂಡರ್ ಪ್ರಕಟಣೆ ದಿನಾಂಕ: 15.07.2022. 4) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 15.07.2022. 5) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 22.07.2022ರ ಸಂಜೆ 04:00 ಗಂಟೆ. 6) ಸ್ಯಾಂಪಲ್ ಮಾದರಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 22.07.2022ರ ಸಂಜೆ 04:00 ಗಂಟೆ. 7) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ: 25.07.2022ರ ಬೆಳಿಗ್ಗೆ 11:00 ಗಂಟೆ. 8) ಆರ್ಥಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ: 26.07.2022ರ ಬೆಳಿಗ್ಗೆ 11:00 ಗಂಟೆ. 9) ಇ.ಎಂ.ಡಿ ಮೊತ್ತ: ರೂ. 3,20,685/–.

ಸಹಿ/– ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ

RO No. 356: DIPR/CTA/MCA/2022-23

GOVERNMENT OF KARNATAKA

Rural Drinking Water & Sanitation Department

Office of the Executive Engineer, Rural Drinking Water & Sanitation Division, Karwar. Po:Habbuwada, Karwar, Uttara Kannada Dist.-581 306.

Phone: 08382-229735 E-mail : eerdwsd.uk@gmail.com

NO.: EE/RDWSD/KWR/VASARAKUDRIGE/MVS/DBOT/2022-23/1002 DATE: 16.07.2022

TENDER NOTIFICATION

On behalf of Governor of Karnataka Executive Engineer, Rural Drinking Water & Sanitation Division, Karwar has invited tenders from the eligible bidders through E-procurement for the following work in Two cover system under DBOT. The tender procedure as per rule 28 of the KTTP Act and Standard Tender Document KW-IV shall be followed. The tenders are required to submit through E-procurement portal **https://www.eproc.karnataka.gov.in** as follows:

(1)Downloading of document through e-proc portal starts from: **18.07.2022** (2) Time & date of Pre-Bid Conference: **21.07.2022 Time : 11.00 Hrs**. Venue: Office of The Chief Engineer, Rural Drinking Water & Sanitation Dept. 1st Floor, E Block, KHB, Complex, Cauveri Bhavan, K.G. Road, Bangalore -560 009. (3) Last Date & Time for Receipt of Bids **: 16-08-2022, Time: 16.30 Hrs.** (4) Date & Time of Technical Bid Opening **: 17-08-2022, Time: 11:00 Hrs.** (5) Date & Time of Financial Bid Opening : Will be opened after approval of Technical Bid.

Name of the Work: Part A- Design, Build, Testing and Commissioning (1) MULTI VILLAGE WATER SUPPLY SCHEME FOR VASARKUDRIGE & OTHER 22 VILLAGES OF ANKOLA TALUK, UTTAR KANNADA DISTRICT ON DBOT BASIS **(INDENT40384/CALL-2)**, EMD: **Rs.21.50 Lakh***Tender processing fee As per e-procurement portal, Time for Completion (including Rainy season): 18 months Class of Contractor: Class-I (KPWD/CPWD or any other Government organization) And foreign companies having office in India -having requisite qualification

Part B – Operation & Maintenance: (2) Operation & maintenance of the facilities created under Part A for a period of 5 years & subsequently transfer the same at the end of tenure in working condition. Time for Completion (including Rainy season): 60 months after completion of Part A

The Tenders must be accompanied by Earnest Money Deposit (EMD) of **Rs. 21,50,000.00/- (**Rupees Twenty One Lakh Fifty Thousand only), shall be paid online through e - Procurement Portal using any of the Payment Modes viz., Credit Card, Direct Debit, National Electronic Fund Transfer (NEFT), Over the Counter (OTC).

More details can be had from the office of the undersigned **(Phone: 08382-229735 E-mail: eerdwsd.uk@gmail.com)** and also through website **https://www.eproc.karnataka.gov.in** by clicking list of Tenders which will link to all dept works list.

Sd/- Executive Engineer, RDW&S Division,
Karwar, Uttara Kannada District

DIPR/ADK/MCA/212/22-23 dt.16.7.2021

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.

(ಜಿಲ್ಲಾ ನಗರಾಭಿವೃದ್ಧಿ ಕೋಶ)

ದೂ.ಸಂ.: 08194–225713 ಇ–ಮೇಲ್: dudc_ctg@yahoo.co.in

ನಂ.ಜಿ.ನ.ಕೋ/ನಗರೋತ್ಥಾನ ಹಂತ 04/ಟಿ.ಎಸ್ 05/2022–23 ದಿ: 15.07.2022

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ ಇವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4)ರಡಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರಸಭೆಯ ಕಾಮಗಾರಿಗಳಿಗೆ ದ್ವಿ ಲಕೋಟೆಯಲ್ಲಿ ಕೆಡಬ್ಲ್ಯೂ–4 ಟೆಂಡರ್ ದಾಸ್ತವೇಜುನಂತೆ, ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ (ಸಿವಿಲ್) 1ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ: ಹಿರಿಯೂರು ನಗರಸಭೆ: (1) **ಪ್ಯಾಕೇಜ್ ನಂ. 01:** ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರಡಿ ಹಿರಿಯೂರು ನಗರಸಭಾ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳ ಇಂಡೆಂಟ್ No. DMA/2022-23/RD/ WORK_INDENT 133412. **ಅಂದಾಜು ಮೊತ್ತ:** ರೂ. 1617.29 ಲಕ್ಷಗಳು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ):** ರೂ. 1374.77 ಲಕ್ಷಗಳು. **ಇಎಂಡಿ ಮೊತ್ತ:** ರೂ. 15.00 ಲಕ್ಷ. **ಕಾಮಗಾರಿಯ ಅವಧಿ (ಮಳೆಗಾಲ ಸೇರಿ):** 18 ತಿಂಗಳು.

ಆಸಕ್ತರು ಗುತ್ತಿಗೆದಾರರು ಹೆಚ್ಚಿನ ಮಾಹಿತಿ, ಟೆಂಡರ್ ದಾಖಲೆಗಳು ಮತ್ತು ಇತರೆ ಸೂಚನೆಗಳನ್ನು (http://eproc.karnataka.gov.in) ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಹಾಗೂ ತೇವಣಿ ಮತ್ತು ಟೆಂಡರ್ ಫೀಗಳನ್ನು ಆನ್‌ಲೈನ್‌ನಲ್ಲಿ http://eproc.karnataka.gov.in ಪಾವತಿಸತಕ್ಕದ್ದು.

ಟೆಂಡರ್ ವೇಳಾಪಟ್ಟಿ: (1) ಪೂರ್ವಭಾವಿ ಸಭೆ ದಿನಾಂಕ: 02.08.2022 ಬೆಳಿಗ್ಗೆ 11:00. (2) ಪ್ರಶ್ನೆ/ಮಾಹಿತಿಗಾಗಿ ಸಲ್ಲಿಸುವ ಕೊನೆಯ ದಿನಾಂಕ: 18.08.2022 ಸಂಜೆ 05:30 ಗಂಟೆ. (3) ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಲು ಕೊನೆಯ ದಿನಾಂಕ: 26.08.2022ರಂದು 05:30 ಗಂಟೆ. (4) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 26.08.2022ರಂದು 05:30 ಗಂಟೆ. (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29.08.2022ರಂದು 05:30 ಗಂಟೆ. (6) ಹಣಕಾಸು ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಟೆಂಡರ್ ನಿಬಂಧನೆಗಳ ಬಗ್ಗೆ ಏನಾದರೂ ಬದಲಾವಣೆಯದರೂ ಆಡಳಿತಾತ್ಮಕ ಸಮಸ್ಯೆ ಬಂದಲ್ಲಿ ಅಥವಾ ದಿನಾಂಕ ಮುಂದೂಡಿದರೂ ಸಹ ಈ ಬಗ್ಗೆ ಮಾಹಿತಿಯನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿಕೋಶ, ಚಿತ್ರದುರ್ಗ.

RO No. 349: DIPR/CTA/MCA/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಅಥಣಿ–591304, ಕಾರ್ಯಾಲಯ, ತಾ:ಅಥಣಿ ಜಿ:ಬೆಳಗಾವಿ (ಕರ್ನಾಟಕ)

ಅಧಿಸೂಚನೆ ಸಂ.ಕಾಇಂ/ಕನೀನಿನಿ/ಪುಪುವಿ/ಯೋಶಾ/ಟೆಂಡರ/ರಸ್ತೆ ಕಾಮಗಾರಿ/2022–23/554 ದಿನಾಂಕ:16–07–2022

ಅಲ್ಪಾವಧಿ ಟೆಂಡರ ಅಧಿಸೂಚನೆ
(ಇ–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಆರ್ & ಆರ್ ವಿಭಾಗ ಅಥಣಿ, ಇವರು ಇ–ಪ್ರೊಕ್ಯೂರಮೆಂಟ ಪೋರ್ಟಾಲ್ ಮುಖಾಂತರ ನೊಂದಾಯಿತ Class–I in KPWD/Category–III & above Enrolled in KNNL ಗುತ್ತಿಗೆದಾರರಿಂದ Improvements to the Roads of I)Yankanchi Village to Muslyankodi Road (0.77Km) II) Halalli Village to Savalagi-Avojikar Board To Murchandi Mahalingeshwar Temple(1.39Km)& III) Zunjurwad-Tungal Road Road (1.77Km) in Athani Taluk. Belgaum District” (I.No.33453) ಕಾಮಗಾರಿಗೆ ಶೇಕಡಾವಾರು ಟೆಂಡರನ್ನು ಅಹ್ವಾನಿಸಿರುತ್ತಾರೆ.

ಗುತ್ತಿಗೆದಾರರು ಎರಡು ಕವರ್ ಬಿಡ್ ಸಲ್ಲಿಕೆ ವಿಧಾನವನ್ನು ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಭರ್ತಿಮಾಡಿದ ಟೆಂಡರನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸುವುದು.

ಟೆಂಡರಿಗಿಟ್ಟ ಅಂದಾಜು ಮೊತ್ತ **ರೂ.191.98 ಲಕ್ಷಗಳು** ಇರುತ್ತವೆ. ಟೆಂಡರ ಅವಧಿ 06 ತಿಂಗಳು (ಮಳೆಗಾಲ ಸಹಿತ)

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:16–07–2022 ರಿಂದ ದಿನಾಂಕ 25–07–2022 ರ 4.00 ಘಂಟೆಯವರೆಗೆ. 2:ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ:22–07–2022 ರ 4.00 ಘಂಟೆಯವರೆಗೆ. 3:ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:25–07–2022 ರ 4.00 ಘಂಟೆಯವರೆಗೆ. 4:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:27–07–2022 ರ 11.00 ಘಂಟೆ, 5:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:30–07–2022 ರ 11:ಘಂಟೆ ಅಥವಾ ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ದೂರವಾಣಿ ಸಂಖ್ಯೆ:08289–285031 ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–(ಆರ್.ಜಿ ರಾಠೋಡ)
ಕಾರ್ಯನಿರ್ವಾಹಕ ಅಭಿಯಂತರರು, ಪುವ ಮತ್ತು ಪುನಿ ವಿಭಾಗ, ಅಥಣಿ

DIPR/BGM/RO-NO-540/MCA/2022-23

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)

ನಂ.605, 6ನೇ ಮಹಡಿ, 1ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001 ದೂರವಾಣಿ: 080–22381075/22032659, ಇ–ಮೇಲ್: deparardeputysecretary@gmail.com, dsdparar@karnataka.gov.in

ಸಂಖ್ಯೆ: ಸಿಆಸುಇ (ಆಸು) 25 ಆರ್‌ಟಿಐ 2022 ದಿನಾಂಕ: 18.07.2022

ಜಾಹೀರಾತು ಪ್ರಕಟಣೆ

ಪೀಠಿಕೆ: ಕರ್ನಾಟಕ ಮಾಹಿತಿ ಅಯೋಗದ ಬೆಳಗಾವಿ ಪೀಠದಲ್ಲಿ ದಿನಾಂಕ: 08.04.2022 ರಿಂದ ಒಂದು ಮಾಹಿತಿ ಆಯುಕ್ತರ ಹುದ್ದೆ ಖಾಲಿಯಿರುತ್ತದೆ. ಅದ್ದರಿಂದ ಕರ್ನಾಟಕ ಮಾಹಿತಿ ಅಯೋಗದ ಬೆಳಗಾವಿ ಪೀಠಕ್ಕೆ, ಮಾಹಿತಿ ಆಯುಕ್ತರನ್ನು ನೇಮಿಸಲು ಉದ್ದೇಶಿಸಲಾಗಿದೆ.

ಅರ್ಹತೆಗಳು: ಮಾಹಿತಿ ಹಕ್ಕು ಕಾಯ್ದೆಯನ್ವಯ ಅಭ್ಯರ್ಥಿಗಳು ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ ನಿರ್ವಹಣೆ (ಮ್ಯಾನೇಜ್‌ಮೆಂಟ್), ಪತ್ರಿಕೋದ್ಯಮ, ಸಮೂಹ ಮಾಧ್ಯಮ ಮತ್ತು ಆಡಳಿತ (ಅಡ್ಮಿನಿಸ್ಟ್ರೇಷನ್ ಮತ್ತು ಗವರ್ನೆನ್ಸ್) ನಲ್ಲಿ ವಿಶಾಲ ತಿಳುವಳಿಕೆ ಮತ್ತು ಅನುಭವ ಹೊಂದಿರುವ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳು.

ಅಭ್ಯರ್ಥಿಗಳು ಸಂಸತ್ ಸದಸ್ಯರಾಗಲೀ ಅಥವಾ ಯಾವುದೇ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಮಂಡಲದ ಸದಸ್ಯರಾಗಿರತಕ್ಕದಲ್ಲ ಅಥವಾ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರತಕ್ಕದಲ್ಲ ಅಥವಾ ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಪರ್ಕ ಹೊಂದಿರತಕ್ಕದಲ್ಲ ಅಥವಾ ಯಾವುದೇ ವ್ಯಾಪರ ವ್ಯವಹಾರವನ್ನಾಗಲಿ ಅಥವಾ ಯಾವುದೇ ವೃತ್ತಿಯನ್ನು ಮಾಡತಕ್ಕದಲ್ಲ.

ಮಾಹಿತಿ ಆಯುಕ್ತರಾಗಿ ನೇಮಕಾತಿ ಹೊಂದಲು ಮೇಲಿನ ಮಾನದಂಡಗಳನ್ನು ಪೂರೈಸಿರುವವರು ಮತ್ತು ನೇಮಕಗೊಳ್ಳಲು ಆಸಕ್ತರಾದವರು ತಮ್ಮ ವ್ಯಕ್ತಿಗತ ವಿವರಗಳನ್ನು ಕೆಳಗಿನ ನಮೂನೆಯಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಆಡಳಿತ ಸುಧಾರಣೆ), 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001, ಇವರಿಗೆ **ದಿನಾಂಕ: 18.08.2022ರ ಸಂಜೆ 5.30 ಗಂಟೆಯೊಳಗೆ** ಸಲ್ಲಿಸಬಹುದಾಗಿದೆ. ರಾಜ್ಯ/ಕೇಂದ್ರ ಸರ್ಕಾರದಲ್ಲಿ ಅಥವಾ ಯಾವುದೇ ಇತರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರು ತಮ್ಮ ವಿವರಗಳನ್ನು ಸಮುಚಿತ ಮಾರ್ಗದ ಮೂಲಕ ಸಲ್ಲಿಸಬಹುದಾಗಿದೆ.

ಕರ್ನಾಟಕ ಮಾಹಿತಿ ಆಯೋಗ, ಬೆಳಗಾವಿ ಪೀಠ ಇಲ್ಲಿ ಮಾಹಿತಿ ಆಯುಕ್ತರ ನೇಮಕಾತಿಗಾಗಿ ಅರ್ಜಿ ನಮೂನೆ

1. ಹೆಸರು :
2. ಹುಟ್ಟಿದ ದಿನಾಂಕ:
3. ಲಿಂಗ (ಸ್ತ್ರೀ/ಪುರುಷ):
4. ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರೇ:
5. ಅಂಚೆ ವಿಳಾಸ:
6. ಕನ್ನಡ ಭಾಷೆಯ ನೈಪುಣ್ಯತೆ (ಓದಲು, ಬರೆಯಲು ಮತ್ತು ಮಾತನಾಡಲು):
7. ದೂರವಾಣಿ ಸಂಖ್ಯೆ, ಮೊಬೈಲ್ ಸಂಖ್ಯೆ, ಫ್ಯಾಕ್ಸ್ ಸಂಖ್ಯೆ:
8. ಇ–ಮೇಲ್ ವಿಳಾಸ:
9. ಶೈಕ್ಷಣಿಕ ಅರ್ಹತೆ:
10. ಪರಿಣಿತಿ ಹೊಂದಿರುವ ಕ್ಷೇತ್ರ:
11. ಪ್ರಸ್ತುತ ಉದ್ಯೋಗ:
12. ಸಾಧನೆಗಳು/ಉದ್ಯೋಗದ ಅನುಭವ (ಒಂದು ಪುಟಕ್ಕೆ ಮೀರದಂತೆ):

ಸ್ವಯಂ ದೃಢೀಕರಿಸಿದ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸುವುದು.

ಸಹಿ/–

ದಿನಾಂಕ:

ಸ್ಥಳ:

ವಾಸಾಸಂಇ/ವಾಪ್ರ/ಅಡ್ವಿಟ್/1419/2022–23

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/2022–23/52 ದಿ:–16/07/2022

ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಗೆ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಈ ಕೆಳಗಿನ ಕಾಮಗಾರಿಗಳ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರಾಕ್ಯೂರ್‌ಮೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು, ಹೆಚ್ಚಿನ ವಿವರಗಳಿಗೆ ಸದರಿ ಕಚೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂ:08399–240143 ರಿಂದ ಮಾಹಿತಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, **ಹೊಸಪೇಟೆ, ವಿಜಯನಗರ ಜಿಲ್ಲೆ** ಕಾರ್ಯಾಲಯ ಇ–ಮೇಲ್ eepwdhosapete@gmail.com ಮೂಲಕ ಅಥವಾ ಖುದ್ದಾಗಿ ಕಚೇರಿಯಲ್ಲಿ ತಾಂತ್ರಿಕ ಸಹಾಯಕರು ಹಾಗೂ ಲೆಕ್ಕ ಅಧೀಕ್ಷಕರು ಇವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
THESE WORKS ARE RESERVE FOR SC CATOGERY					
1	KPWD/2022-23/BD/WORK_INDENT153795	25.00	2	KPWD/2022-23/ RD/WORK_INDENT154129	24.38
THIS WORKS IS RESERVE FOR ST CATOGERY					
3	KPWD/2022-23/RD/WORK_INDENT153777	15.00			
GENERAL WORKS					
4	KPWD/2022-23/BD/WORK_INDENT153794	13.25	15	KPWD/2022-23/RD/WORK_INDENT153950	200.00
5	KPWD/2022-23/BD/WORK_INDENT153796	12.00	16	KPWD/2022-23/RD/WORK_INDENT153951	400.00
6	KPWD/2022-23/ RD/WORK_INDENT154128	16.35	17	KPWD/2022-23/RD/WORK_INDENT153952	500.00
7	KPWD/2022-23/BD/WORK_INDENT153807	20.00	18	KPWD/2022-23/BD/WORK_INDENT154158	204.00
8	KPWD/2022-23/BD/WORK_INDENT153399	100.00	19	KPWD/2022-23/ RD/WORK_INDENT154121	170.00
9	KPWD/2022-23/RD/WORK_INDENT152298	100.00	20	KPWD/2022-23/ RD/WORK_INDENT154122	94.95
10	KPWD/2022-23/RD/WORK_INDENT151680	110.00	21	KPWD/2022-23/ RD/WORK_INDENT154123	160.00
11	KPWD/2022-23/RD/WORK_INDENT152553	60.00	22	KPWD/2022-23/ RD/WORK_INDENT154124	180.83
12	KPWD/2022-23/RD/WORK_INDENT152299	150.00	23	KPWD/2022-23/ RD/WORK_INDENT154126	121.38
13	KPWD/2022-23/RD/WORK_INDENT151681	80.00	24	KPWD/2022-23/ RD/WORK_INDENT154127	175.00
14	KPWD/2022-23/RD/WORK_INDENT152490	250.00	25	KPWD/2022-23/BD/WORK_INDENT154536	525.00

ಅ) ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **29/07/2022 (16.00 ಗಂಟೆಗೆ)**. ಆ) ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ: **30/07/2022 (16.00 ಗಂಟೆಗೆ)**. ಇ) ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **01/08/2022 (16.30 ಗಂಟೆಗೆ)**. ಈ) ಅರ್ಥಿಕ ಬಿಡ್ ತೆರೆಯುವ ದಿನಾಂಕ: **ನಂತರ ತಿಳಿಸುವುದು.**

NOTE: 1. From Sl No: 1 to 24, 12.00% GST will be added to the contract amount & for Sl.No 25th Work Considering GST only for Civil Items 2. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು E-procurement Portal ನಲ್ಲಿ ನೊಡಿಕೊಳ್ಳಬಹುದು

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ಡಿಐಪಿಆರ್/ಬಳ್ಳಾರಿ/34/ಎಂಸಿಎ/2022–23

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಚಾಪ್ಟರ್ ಕಟ್ಟಡ, ನಂ16/ಜೆ, 1ನೇ ಮಹಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052. ದೂರವಾಣಿ : 080–299093994

ಸಹಾಯವಾಣಿ 8867537799 (ಬೆ. 10.30 ರಿಂದ ಸ. 5.00ರವರೆಗೆ ಮಾತ್ರ)

ವೆಬ್‌ಸೈಟ್: https://kmcdc.karnataka.gov.in ಇ–ಮೇಲ್: mdmarathanigama@gmail.com

ಸಂಖ್ಯೆ: ಕಮಸನಿನಿ/ಪತ್ರಿಕಾ ಪ್ರಕಟಣೆ/ಸಿಆರ್–06/2022–23 ದಿನಾಂಕ: 19.07.2022

ಪ್ರಕಟಣೆ

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ (ನಿ.) ದ ವತಿಯಿಂದ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002 ರಲ್ಲಿನ **ಪ್ರವರ್ಗ–3–ಬಿ ಅಡಿಯಲ್ಲಿ 2(ಎ) ಯಿಂದ 2(ಎಫ್)ವರೆಗೆ** ಬರುವ(ಎ) ಮರಾಠ, ಮರಾಠ, (ಬಿ) ಅರೆ ಕ್ಷತ್ರಿ, ಅರೆ ಮರಾಠ, ಆರ್‍ಯಮರಾಠ (ಸಿ) ಆರ್ಯ, ಆರ್ಯರು (ಡಿ) ಕೊಂಕಣ ಮರಾಠ (ಇ) ಕ್ಷತ್ರಿಯ ಮರಾಠ/ಕ್ಷತ್ರಿಯ ಮರಾಠ (ಎಫ್) ಕುಳವಾಡಿ ಜನರ ಆರ್ಥಿಕ ಅಭಿವೃದ್ಧಿಗಾಗಿ 2022–23 ಅನುಷ್ಠಾನಗೊಳಿಸಲಾಗುತ್ತಿರುವ ಈ ಕೆಳಕಂಡ ಯೋಜನೆಗಳಡಿ ಸೌಲಭ್ಯ ಪಡೆಯ ಬಯಸುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯೋಜನೆಗಳು ಮತ್ತು ಸೌಲಭ್ಯಗಳು:

1) ಶ್ರೀ ಶಹಜೀರಾಜೇ ಸಮೃದ್ಧಿ ಯೋಜನೆ (ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ ಯೋಜನೆ):

ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗೆ ಅನುಸಾರ ಈ ಕೆಳಕಂಡಂತೆ ಸೌಲಭ್ಯ ಒದಗಿಸಲಾಗುವುದು:–

- **ಘಟಕ ವೆಚ್ಚ :** ರೂ. 50,000/–ವರೆಗೆ– ಶೇ. 20 ರಷ್ಟು ಸಹಾಯಧನ; (ಗರಿಷ್ಟ ರೂ. 10,000/–); ಶೇಕಡ 80ರಷ್ಟು, ಸಾಲವನ್ನು ಶೇ.4 ರಷ್ಟು ಬಡ್ಡಿದರದಲ್ಲಿ ಒದಗಿಸಲಾಗುವುದು.
- **ಘಟಕ ವೆಚ್ಚ :** ರೂ. 50,001/– ರಿಂದ 1,00,000/– ವರೆಗೆ– ಶೇ. 20 ರಷ್ಟು ಸಹಾಯಧನ; (ಗರಿಷ್ಟ ರೂ. 20,000/–); ಶೇ.80,000/– ಸಾಲವನ್ನು ಶೇ.4 ರಷ್ಟು ಬಡ್ಡಿದರದಲ್ಲಿ ಒದಗಿಸಲಾಗುವುದು.
- **ಘಟಕ ವೆಚ್ಚ :** ರೂ. 1,000,001/– ರಿಂದ ರೂ.2,00,000/– ವರೆಗೆ ಶೇ. 15 ರಷ್ಟು ಸಹಾಯಧನ (ಗರಿಷ್ಟ 30,000/–); ಶೇ. 85 ರಷ್ಟು ಸಾಲವನ್ನು ಶೇ.4 ರಷ್ಟು ಬಡ್ಡಿದರದಲ್ಲಿ ಒದಗಿಸಲಾಗುವುದು.

ಈ ಯೋಜನೆಗೆ ಆನ್‌ಲೈನ್ ಮೂಲಕ “ಸುವಿಧಾ” (https://suvidha.karnataka.gov.in) ಪೋರ್ಟಲ್ ನಲ್ಲಿ ಅರ್ಜಿಗಳನ್ನು ಸಲ್ಲಿಸುವುದು.

2) ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆ

ಮರಾಠ ಸಮುದಾಯದ ಯುವಜನತೆಯನ್ನು ಕೌಶಲ್ಯ ಅಭಿವೃದ್ಧಿಪಡಿಸಿ ಉದ್ಯೋಗಮುಖಿಗಳನ್ನಾಗಿಸಲು ಸರ್ಕಾರದ ಸಂಸ್ಥೆಗಳಾದ ITIS , GTTC, KGTTI ಇತ್ಯಾದಿಗಳಲ್ಲಿ ಅಲ್ಪಾವಧಿ ಕೋರ್ಸ್‌ಗಳ ಮೂಲಕ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ಕೌಶಲ್ಯ ಕರ್ನಾಟಕ ತಂತ್ರಾಂಶದ ಮೂಲಕ ಅರ್ಜಿಗಳನ್ನು ಅಹ್ವಾನಿಸಿದೆ.

ಅರ್ಹತೆಗಳು

- ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 25 ವರ್ಷಗಳ ಮಿತಿಯೊಳಗಿರಬೇಕು. ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿರಬೇಕು.
- ಈ ಸೌಲಭ್ಯವನ್ನು ಪಡೆಯುವ ಫಲಾನುಭವಿಯ ವಾರ್ಷಿಕ ವರಮಾನ ರೂ.8,00,000/–ದ ಒಳಗಿರಬೇಕು (ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು)
- ಯೋಜನೆಗೆ ಆನ್‌ಲೈನ್ ಮೂಲಕ “ಕೌಶಲ್ಯ ಕರ್ನಾಟಕ ಪೋರ್ಟಲ್” **https://www.kaushalkar.com** ತಂತ್ರಾಂಶದ ಮೂಲಕ ಅರ್ಜಿಗಳನ್ನು ಸಲ್ಲಿಸುವುದು.

ವಿಶೇಷ ಸೂಚನೆ:
ಅರ್ಜಿದಾರರ ಆಧಾರ್ ಸಂಖ್ಯೆಯು ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ಜೋಡಣೆಯೊಂದಿಗೆ ಸೀಡ್ ಆಗಿರಬೇಕು.

ಮೇಲ್ಕಂಡ ಯೋಜನೆಗಳಿಗೆ ದಿನಾಂಕ: **19.07.2022 ರಿಂದ 19.08.2022 ರೊಳಗೆ** ಆನ್‌ಲೈನ್‌ನಲ್ಲಿ ಉಲ್ಲೇಖಿಸಲಾಗಿರುವ ತಂತ್ರಾಂಶಗಳ ಮುಖಾಂತರ ಅರ್ಜಿಗಳನ್ನು ಸಲ್ಲಿಸುವುದು ಕಡೇ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಂಬಂಧ ಪಟ್ಟ ಜಿಲ್ಲೆಗಳಲ್ಲಿರುವ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ/ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯನ್ನು/ನಿಗಮದ ಜಾಲತಾಣ https://kmcdc.karnataka.gov.in ಸಂಪರ್ಕಿಸುವುದು.

ಸಹಿ/–
(ಡಾ: ಪ್ರಕಾಶ್ ಆರ್. ಪಾಗೋಜಿ)
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/1415/2022–23

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ನಾನು ಪಡೆದ ಯಶಸ್ಸನ್ನು ಆಧರಿಸಿ ನನ್ನ ಬಗ್ಗೆ ನಿರ್ಣಯಕ್ಕೆ ಬರಬೇಡಿ. ಎಷ್ಟು ಬಾರಿ ಕೆಳಗೆ ಬಿದ್ದೆ ಮತ್ತು ಹೇಗೆ ಅದನ್ನು ಹಿಮ್ಮೆಟ್ಟಿಸಿ ಎದ್ದು ನಿಂತೆ ಎಂಬುದನ್ನು ಆಧರಿಸಿ ನನ್ನ ಬಗ್ಗೆ ತೀರ್ಮಾನಕ್ಕೆ ಬನ್ನಿ. -ನೆಲ್ಸನ್ ಮಂಡೇಲಾ

ಜನಸಂಖ್ಯೆ ಹೆಚ್ಚಳದ ಸವಾಲು ರಾಜಕೀಯ ಅಸ್ತ್ರವಾಗಿ ಬಳಕೆ ಬೇಡ

ಭಾರತವು ಚೀನಾವನ್ನು ಹಿಂದಿಕ್ಕಿ ಅತಿ ಹೆಚ್ಚು ಜನಸಂಖ್ಯೆ ಇರುವ ದೇಶವಾಗಿ 2023ರಲ್ಲಿಯೇ ಹೊರಹೊಮ್ಮಲಿದೆ ಎಂದು ವಿಶ್ವಸಂಸ್ಥೆಯ ಜನಸಂಖ್ಯೆ ವಿಭಾಗವು ಅಂದಾಜಿಸಿದೆ. ಈ ಮೊದಲಿನ ಅಂದಾಜಿಗಿಂತ ನಾಲ್ಕು ವರ್ಷ ಮೊದಲೇ ಭಾರತವು ಗರಿಷ್ಠ ಜನಸಂಖ್ಯೆಯ ದೇಶವಾಗಲಿದೆ ಎಂದು ವರದಿ ಹೇಳಿದೆ. ಇದು, ದೇಶದ ಜನಸಂಖ್ಯೆ ಹೆಚ್ಚಳದ ಸವಾಲಿನ ಮೇಲೆ ಗಮನ ಕೇಂದ್ರೀಕರಣವಾಗುವಂತೆ ಮಾಡಿದೆ. ಭಾರತದ ಜನಸಂಖ್ಯೆಯು ಮುಂದಿನ ವರ್ಷ 142.9 ಕೋಟಿ ಆಗಲಿದ್ದು, ಚೀನಾದ ಜನಸಂಖ್ಯೆಯು 142.6 ಕೋಟಿ ಇರಲಿದೆ ಎಂದು ಅಂದಾಜಿಸಲಾಗಿದೆ. ಜನಸಂಖ್ಯೆಯಲ್ಲಿ ಚೀನಾವನ್ನು ಭಾರತವು ಹಿಂದಿಕ್ಕಲು ಭಾರತದ ಜನಸಂಖ್ಯೆಯಲ್ಲಿ ಆಗಲಿರುವ ಭಾರಿ ಏರಿಕೆಯೇನೂ ಕಾರಣವಲ್ಲ. ಚೀನಾದ ಜನಸಂಖ್ಯೆ ಗಣನೀಯವಾಗಿ ಇಳಿಕೆ ಆಗಿರುವುದು ಅದಕ್ಕೆ ಕಾರಣ. 2050ರವರೆಗೂ ಭಾರತದ ಜನಸಂಖ್ಯೆ ಏರುಗತಿಯಲ್ಲೇ ಇರಲಿದೆ. ಆ ಹೊತ್ತಿಗೆ ಭಾರತದ ಜನಸಂಖ್ಯೆಯು 166.8 ಕೋಟಿಗೆ ತಲುಪಲಿದೆ. ಆ ಸಂದರ್ಭದಲ್ಲಿ ಚೀನಾದ ಜನಸಂಖ್ಯೆಯು 131.7 ಕೋಟಿಯಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ಜಗತ್ತಿನ ಜನಸಂಖ್ಯೆಯು ಏರಿಕೆಯಾಗಿದೆ. ಜಗತ್ತಿನ ಒಟ್ಟು ಜನಸಂಖ್ಯೆಯು ಈ ವರ್ಷದ ನವೆಂಬರ್ ಹೊತ್ತಿಗೆ 800 ಕೋಟಿಗೆ ಏರಲಿದೆ.

ಹೆಚ್ಚಿನ ಜನಸಂಖ್ಯೆಯಿಂದ ದೊರೆಯಬಹುದಾದ ಅನುಕೂಲಗಳನ್ನು, ಆ ಅವಕಾಶಗಳು ಮರೆಯಾಗುವ ಮುನ್ನವೇ ಪಡೆದುಕೊಳ್ಳುವುದು ಈಗ ನಮ್ಮ ಮುಂದಿರುವ ಸವಾಲು

ಮಕ್ಕಳನ್ನು ಪಡೆಯುವ ಒಟ್ಟು ಫಲವಂತಿಕೆ ದರವನ್ನು (ಟಿಎಫ್‌ಆರ್) ಇಳಿಕೆ ಮಾಡಿರುವುದಕ್ಕೆ ವಿಶ್ವಸಂಸ್ಥೆಯ ಜನಸಂಖ್ಯಾ ವಿಭಾಗವು ಭಾರತವನ್ನು ಶ್ಲಾಘಿಸಿದೆ. ಒಟ್ಟು ಫಲವಂತಿಕೆ ದರವು ಸಂತಾನೋತ್ಪತ್ತಿ ವಯೋಮಾನದ ಪ್ರತಿಯೊಬ್ಬ ಮಹಿಳೆಯು ಮಕ್ಕಳನ್ನು ಪಡೆಯುವ ಸರಾಸರಿ ಸಾಮರ್ಥ್ಯದ ಸೂಚ್ಯಂಕ. ಜನಸಂಖ್ಯೆಯನ್ನು ಈಗ ಇರುವ ಸ್ಥಿತಿಯಲ್ಲಿಯೇ ಉಳಿಸಿಕೊಳ್ಳಲು ಬೇಕಾದ ಟಿಎಫ್‌ಆರ್ 2.1 ಆಗಿದೆ. ಆದರೆ, ಭಾರತದ ಈಗಿನ ಟಿಎಫ್‌ಆರ್ 2.0 ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್) ಇತ್ತೀಚಿನ ವರದಿ ಹೇಳಿದೆ. 1950ರ ದಶಕದಲ್ಲಿ ಭಾರತದಲ್ಲಿನ ಒಟ್ಟು ಫಲವಂತಿಕೆ ದರವು 6ರಷ್ಟು ಇತ್ತು. ಯಾವುದೇ ಬಲವಂತದ ಕ್ರಮಗಳನ್ನು ಜನರ ಮೇಲೆ ಹೇರದೆಯೇ ಈ ದರವನ್ನು ಈಗಿನ 2ಕ್ಕೆ ಇಳಿಸಲಾಗಿದೆ. ಕೆಲವು ರಾಜ್ಯಗಳಲ್ಲಿನ ಫಲವಂತಿಕೆಯ ಸರಾಸರಿ ದರವನ್ನು ಕೆಳಕ್ಕೆ ತರಬೇಕಾಗಿದೆ. ಆ ರಾಜ್ಯಗಳೆಂದರೆ ಉತ್ತರಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶ. ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯಗಳಲ್ಲಿ ಈ ಮೂರು ರಾಜ್ಯಗಳೂ ಸೇರಿವೆ. ಜನರಿಗೆ ಶಿಕ್ಷಣ, ಪೌಷ್ಟಿಕತೆ, ಆರೋಗ್ಯ ಸೇವೆ, ವಸತಿ, ಉದ್ಯೋಗ ಒದಗಿಸುವುದೇ ಫಲವಂತಿಕೆಯ ಸರಾಸರಿ ದರವನ್ನು ಕಡಿಮೆ ಮಾಡುವುದಕ್ಕೆ ಇರುವ ಮಾರ್ಗ ಎಂಬುದನ್ನು ಭಾರತದ ಅನುಭವವೇ ತೋರಿಸಿಕೊಟ್ಟಿದೆ. ಅತ್ಯುತ್ತಮ ಫಲಿತಾಂಶ ಪಡೆಯುವುದಕ್ಕಾಗಿ ಈ ಎಲ್ಲ ಸೌಲಭ್ಯಗಳನ್ನು ಒದಗಿಸುವಾಗ ಮಹಿಳೆಯರು ಮತ್ತು ಮಕ್ಕಳ ಮೇಲೆ ಗಮನ ಕೇಂದ್ರೀಕರಿಸಬೇಕು. ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯಗಳಲ್ಲಿ ಆರ್ಥಿಕ ಪ್ರಗತಿ ದರ ಕಡಿಮೆ ಇದೆ ಎಂಬುದು ಕೂಡ ಗಮನಾರ್ಹ. ಜನಸಂಖ್ಯೆ ಹೆಚ್ಚಳವು ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಪ್ರಗತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯಿಂದಾಗಿ ಜನಸಂಖ್ಯೆಯು ತನ್ನಿಂತಾನೇ ಕುಗ್ಗುತ್ತದೆ ಎಂಬುದನ್ನು ಗಮನದಲ್ಲಿ ಇರಿಸಿಕೊಳ್ಳಬೇಕು.

ಜನಸಂಖ್ಯೆ ಬೆಳವಣಿಗೆಯನ್ನು ಸಮಾಜದ ಕೆಲವು ವರ್ಗಗಳ ವಿರುದ್ಧ ರಾಜಕೀಯ ಅಸ್ತ್ರವಾಗಿ ಬಳಸಲು ಯತ್ನಿಸಿರುವುದು ದುರದೃಷ್ಟಕರ. ಕೆಲವು ಸಮುದಾಯಗಳ ಜನಸಂಖ್ಯೆಯ ಹೆಚ್ಚಳವು 'ಜನಸಂಖ್ಯಾ ಅಸಮತೋಲನ'ಕ್ಕೆ ಕಾರಣವಾಗಬಹುದು ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಇತ್ತೀಚೆಗೆ ಹೇಳಿದ್ದಾರೆ. ಜನಸಂಖ್ಯಾ ಹೆಚ್ಚಳವನ್ನು ಕೆಲವು ವರ್ಗಗಳ ವಿರುದ್ಧ ಬಳಸಿಕೊಳ್ಳುವ ಪ್ರಯತ್ನವಾಗಿ ಇದನ್ನು ನೋಡಬಹುದು. ಜನಸಂಖ್ಯೆ ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು, ಜನಸಂಖ್ಯಾ ಸ್ಫೋಟಕ್ಕೆ ಪರಿಹಾರ ಕಂಡುಕೊಳ್ಳಬೇಕು ಎಂದು ಬಿಜೆಪಿ ಮುಖಂಡ, ಕೇಂದ್ರದ ಮಾಜಿ ಸಚಿವ ಮುಕ್ತಾರ್ ಅಬ್ಬಾಸ್ ನಖ್ವಿ ಹೇಳಿದ್ದಾರೆ. ದೇಶದಲ್ಲಿ ಜನಸಂಖ್ಯಾ ಸ್ಫೋಟವಾಗಲೀ ಜನಸಂಖ್ಯಾ ಅಸಮತೋಲನವಾಗಲೀ ಇಲ್ಲ. ಇಲ್ಲಿ ಇರುವುದು ರಾಜ್ಯಗಳ ನಡುವೆ ಅಸಮತೋಲನ ಮಾತ್ರ. ಮುಸ್ಲಿಂ ಸಮುದಾಯದ ಮಹಿಳೆಯರ ಫಲವಂತಿಕೆಯ ಸರಾಸರಿ ದರವು ಇತರ ಸಮುದಾಯಗಳಿಗೆ ಹೋಲಿಸಿದರೆ ಕಳೆದ ಎರಡು ದಶಕಗಳಲ್ಲಿ ಗಮನಾರ್ಹವಾಗಿ ತಗ್ಗಿದೆ. ಆದರೆ, ಸಾಮಾನ್ಯವಾಗಿ ಇದಕ್ಕೆ ವ್ಯತಿರಿಕ್ತವಾದ ಗ್ರಹಿಕೆ ಜನರಲ್ಲಿ ಇದೆ. ಮುಸ್ಲಿಮರ ಫಲವಂತಿಕೆಯ ಸರಾಸರಿ ದರವು 1992-93ರಲ್ಲಿ 4.4ರಷ್ಟು ಇತ್ತು. ಇದು 2019-20ರಲ್ಲಿ 2.3ಕ್ಕೆ ಇಳಿದಿತ್ತು. ಆರೋಗ್ಯ, ಶಿಕ್ಷಣ ಮತ್ತು ಅಭಿವೃದ್ಧಿ ಅವಕಾಶಗಳನ್ನು ಎಲ್ಲ ಸಮುದಾಯಗಳಿಗೆ ಒದಗಿಸುವುದು ಈಗಿನ ಅಗತ್ಯವಾಗಿದೆ. ಹೆಚ್ಚಿನ ಜನಸಂಖ್ಯೆಯಿಂದ ದೊರೆಯಬಹುದಾದ ಅನುಕೂಲಗಳನ್ನು, ಆ ಅವಕಾಶಗಳು ಮರೆಯಾಗುವ ಮುನ್ನ ಪಡೆದುಕೊಳ್ಳುವುದೇ ಈಗ ನಮ್ಮ ಮುಂದೆ ಇರುವ ಸವಾಲಾಗಿದೆ.

ಮಕ್ಕಳೆದುರು ಸತ್ಯ ಮರೆಮಾಚುವುದರಿಂದ ಆಗುವ ದುಷ್ಪರಿಣಾಮವು ಹಿರಿಯರಿಗೆ ತಿಳಿದಿರಬೇಕು

ಪಠ್ಯಪುಸ್ತಕ: ತಪ್ಪು ಸಂದೇಶ ಸಲ್ಲ

ವಿಶ್ಲೇಷಣೆ

ಎಸ್.ಆರ್.ವಿಜಯಶಂಕರ

ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ದೊಡ್ಡವರ ಗಲಾಟೆಯ ನಡುವೆ, ಪಿಳಿಪಿಳಿ ಕಣ್ಣು ಬಿಟ್ಟುಕೊಂಡು ಪುಸ್ತಕಗಳಿಗಾಗಿ ಕಾಯುತ್ತಾ ಕುಳಿತಿವೆ ನಮ್ಮ ನಾಡಿನ ಮಕ್ಕಳು. ಇದಕ್ಕೆ ಕಾರಣ ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದ ಗೊಂದಲ. ಈ ಸಂದರ್ಭದಲ್ಲಿ ಕನ್ನಡ ಪಠ್ಯಪುಸ್ತಕಗಳ ಬೆಳವಣಿಗೆಯ ಹೆಜ್ಜೆಗುರುತುಗಳನ್ನು ತಡಕುತ್ತಾ ಹೋದರೆ ಕುತೂಹಲದ ಸಂಗತಿಗಳು ತೆರೆದುಕೊಳ್ಳುತ್ತವೆ.

ಸುಮಾರು ಎರಡು ಶತಮಾನಗಳಿಂದ ಬೆಳೆದುಬಂದ, 150 ವರ್ಷಗಳಿಗೂ ಹೆಚ್ಚಿನ ಸ್ಪಷ್ಟ ಚರಿತ್ರೆ ಇರುವ ಕನ್ನಡ ಪಠ್ಯಪುಸ್ತಕಗಳ ಪರಿಷ್ಕರಣೆಯು ದೊಡ್ಡ ವಿದ್ವಾಂಸರೊಬ್ಬರ ಅಧ್ಯಕ್ಷತೆಯಲ್ಲಿ ನಡೆದಿದ್ದರೆ ಅದಕ್ಕೊಂದು ಅರ್ಥ ಇರುತ್ತಿತ್ತು. ಬಲಪಂಥೀಯರೇ ಬೇಕೆಂದಾದರೆ, ಉನ್ನತ ಚಿಂತನೆಯುಳ್ಳ ವಿದ್ವಾಂಸರೂ ಶೈಕ್ಷಣಿಕ ಅನುಭವವುಳ್ಳ ನಿವೃತ್ತರೂ ಪ್ರೊಫೆಸರ್‌ಗಳೂ ಕರ್ನಾಟಕದಲ್ಲಿ ಇದ್ದಾರೆ. ಟ್ಯುಟೋರಿಯಲ್ ಅನುಭವದ ಆಧಾರದಲ್ಲಿ ಪಠ್ಯ ಪರಿಷ್ಕರಣೆ ಮಾಡಿದರೆ, ಪಠ್ಯವು ತನ್ನ ಘನತೆಯನ್ನು ಕಳೆದುಕೊಳ್ಳುತ್ತದೆ. ಅಷ್ಟಲ್ಲದೆ ಈ ಪರಿಷ್ಕೃತ ಪಾಠಗಳ ಆಯ್ಕೆಯಲ್ಲಿ, ಎರಡು ಶತಮಾನಗಳಿಂದ ಬೆಳೆದುಬಂದ ತಾತ್ವಿಕತೆ ಹಾಗೂ ಸಿದ್ಧಾಂತಗಳ ನೆರಳು ಕೂಡಾ ಮೇಲ್ನೋಟಕ್ಕೆ ಗೋಚರಿಸುವುದಿಲ್ಲ.

ಕನ್ನಡ ಪಠ್ಯಪುಸ್ತಕಗಳ ಬೆಳವಣಿಗೆಯು ಬಾಲಗೀತೆಗಳ ಮೂಲದಿಂದ ಆರಂಭವಾಗಿದೆ. ಕನ್ನಡದಲ್ಲಿ ಬಾಲಸಾಹಿತ್ಯ ಪ್ರಕಟಣೆಗೆ ತೊಡಗಿದ ಮೊದಲಿಗರು ಬಾಸೆಲ್ ಮಿಷನ್‌ನವರು. ಅವರಲ್ಲಿ ರೈಸ್ ಎಂಬುವರು 1840ರಲ್ಲೇ ಮಕ್ಕಳಿಗಾಗಿ ಪುಸ್ತಕಗಳನ್ನು ಪ್ರಕಟಿಸಿದರು. ಜಿ.ಬ್ರಿಗೆಲ್ ಎಂಬುವರು 1866ರಲ್ಲಿ 'ಕನ್ನಡ ಕಾವ್ಯ ಭಾಗ' ಕೃತಿ ಪ್ರಕಟಣೆಗೆ ಮುನ್ನ ಮಕ್ಕಳ ಸಾಹಿತ್ಯದ ಕುರಿತು ಹೇಳಿದ ಮಾತುಗಳು 'ಕನ್ನಡ ಬಾಲಗೀತೆಗಳ ಪ್ರಾರಂಭದ ನಿರ್ದೇಶಕ ವಾಕ್ಯ'ಗಳಂತೆ ಕೆಲಸ ಮಾಡಿದವು. ಬಾಲಸಾಹಿತ್ಯವು ಕ್ಲಿಷ್ಟ ಸಮಾಸ, ಕಷ್ಟವಾದ ಸಂಸ್ಕೃತ ಪದಪುಂಜಗಳು, ಸಂದಿಗ್ಧ ಪ್ರಯೋಗಗಳಂತಹವು ಇಲ್ಲದೆ, ಆಡುಮಾತಿನ ಸಹಜ ಲಯದಲ್ಲಿ ಸ್ಪಷ್ಟವಾಗಿ ಇರಬೇಕೆಂದು ಬ್ರಿಗೆಲ್ ಸಲಹೆ ಕೊಟ್ಟಿದ್ದರು.

ಮಕ್ಕಳ ಮೊದಲ ಐದು ವರ್ಷಗಳ ಕಲಿಕೆಗೆ ಇಂದಿಗೂ ಬಾಲಗೀತೆಗಳೇ ಸಹಕಾರಿ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಓದಿದಾಗ, 19ನೇ ಶತಮಾನದಲ್ಲಿ ಐಗಳ ಪಾಠಕ್ರಮದಿಂದ ಆರಂಭವಾಗಿ ಆಧುನಿಕ ವಿದ್ಯಾಭ್ಯಾಸ ಕ್ರಮಕ್ಕೆ ಮಲೆನಾಡಿನಲ್ಲಿ ಮಕ್ಕಳು ಕ್ರಮೇಣ ಬದಲಾದ ಚಿತ್ರವೊಂದನ್ನು ಊಹಿಸಿಕೊಳ್ಳಬಹುದು. ಇತ್ತೀಚಿನ ಪರಿಷ್ಕರಣೆ ಸಂದರ್ಭದಲ್ಲಿ 'ಶ್ರೇಷ್ಠ ಭಾರತೀಯ ಚಿಂತನೆಗಳು' ಎಂಬ ಲೇಖನಕ್ಕೂ ವಿರೋಧ ವ್ಯಕ್ತವಾಗಿ ಕಷ್ಟಕರ ಭಾಷೆ ಬಗೆಗೆ ರಕ್ಷಣಾತ್ಮಕವಾಗಿ ವಾದ ಮಂಡನೆಯಾದಾಗ, ಪಠ್ಯದ ಭಾಷೆ ಬಗ್ಗೆ ಪರಿಷ್ಕರಣಾ ಸಮಿತಿ ಗಮನಹರಿಸಿದಂತಿಲ್ಲ ಅನಿಸಿತು.

ಪ್ರೊ. ಹಿರಿಯಣ್ಣ ಅವರ ಬರಹಗಳ ಕೆಲವು ಕನ್ನಡ ಅನುವಾದಗಳು ಹಾಗೂ ಭಾರತೀಯ ಚಿಂತನೆಗಳ ಬಗೆಗೆ ಡಿವಿಜಿ ಅವರು ಬರೆದಿರುವ ಇನ್ನಿತರ ಬರಹಗಳನ್ನು ಅವಲೋಕಿಸಿದರೆ, ನಾನು ಹೇಳುವ ವಿಚಾರವೇನು ಎಂಬುದು ಸ್ಪಷ್ಟವಾದೀತು. ಪಠ್ಯಪುಸ್ತಕಗಳು ತಮಗೆ ಪ್ರಿಯವಾದ ಲೇಖಕನ ಬರಹವನ್ನು ತುರುಕುವುದಕ್ಕಾಗಲಿ, ಬಹುದೊಡ್ಡ ರಾಜಕೀಯ ಸಿದ್ಧಾಂತವನ್ನು ಹೇರುವುದಕ್ಕಾಗಲಿ ಇರುವುದಲ್ಲ. ಬದಲಾಗಿ ಅವು ಕಲಿಕೆಗೆ, ಚಿಂತನೆಗೆ ಪೂರಕವಾಗಿ ಇರಬೇಕಾಗುತ್ತದೆ. ವಿದ್ಯಾರ್ಥಿಗಳಲ್ಲಿ ಸ್ವತಂತ್ರ ಚಿಂತನೆ, ಅಧ್ಯಯನಶೀಲತೆ ಅಲ್ಲಿಂದ ಕವಲೊಡೆಯಬೇಕು.

ನಮ್ಮ ಬಹುತೇಕ ಶಾಲೆಗಳಲ್ಲಿ ಹರ್ಬರ್ಟ್‌ನ ಪಂಚ ಸೋಪಾನಗಳ ಆಧಾರದಲ್ಲಿ ಬೋಧನೆ ನಡೆಯುತ್ತದೆ. ಜರ್ಮನಿಯ 19ನೇ ಶತಮಾನದ ಈ ಶಿಕ್ಷಣ ತಜ್ಞನ ಮಾದರಿಯನ್ನು ಜಗತ್ತಿನಾದ್ಯಂತ ಹಲವು ದೇಶಗಳು ಅನುಸರಿಸುತ್ತವೆ. ಜೀವಮಾನವಿಡೀ ಶಿಕ್ಷಕರಾಗಿ ದುಡಿದ ಅನೇಕ ಕನ್ನಡ ಬರಹಗಾರರು, ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಆ ಪಂಚಸೋಪಾನಗಳ ಮಾದರಿಯನ್ನು ಹೇಗೆ ಬದಲಾಯಿಸಬಹುದು ಎಂಬ ಮಾಹಿತಿಯನ್ನು ಸ್ವ ಅನುಭವದಿಂದ ನೀಡಿದ್ದಾರೆ (ಅಂತಹವರಲ್ಲಿ ಒಬ್ಬರು ಕವಿ ಸುಬ್ರಾಯ ಚೊಕ್ಕಾಡಿ). ಪಠ್ಯಪುಸ್ತಕಗಳನ್ನು ಹೊಸದಾಗಿ ರೂಪಿಸುವ ಅಥವಾ ಪರಿಷ್ಕರಿಸುವ ತಜ್ಞರು ಶಾಲೆಯ ಅಂತಹ ಪಾಠ ವಿಧಾನಗಳಿಗೆ ಅನುಕೂಲವಾಗುವ ಪಠ್ಯಗಳನ್ನು ಇರಿಸಬೇಕು ಅಥವಾ ಪಾಠ ವಿಧಾನಗಳಲ್ಲಿ ಆಗಬೇಕಾದ ಬದಲಾವಣೆಗಳನ್ನು ಸೂಚಿಸಬೇಕು. ಶೈಕ್ಷಣಿಕ ಸಿದ್ಧಾಂತಗಳನ್ನು ಕಡೆಗಣಿಸಿ, ತಮ್ಮ ತತ್ವಗಳಿಗೆ ಅನುಗುಣವಾಗಿ ಪರಿಷ್ಕರಿಸಿದರೆ, ಜ್ಞಾನದ ಕ್ಷೇತ್ರದಲ್ಲಿ ಅಜ್ಞಾನದ ದಾಂದಲೆಯಾದೀತೇ ವಿನಾ ಸಾಧನೆ ಆಗದು.

ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಎಂಬುದೊಂದು ಪಾಠ ನಮ್ಮ ಎಂಟನೇ ತರಗತಿಯ ಚರಿತ್ರೆಯ ಪುಸ್ತಕದಲ್ಲಿ ಇತ್ತು. 52 ವರ್ಷಗಳ ಹಿಂದೆ ವಿಟ್ಲದ ನಮ್ಮ ಶಾಲೆಯ ಮೇಷ್ಟ್ರು ಮಹಾಬಲ ರೈ ಅವರು ಮಾಡಿದ ಆ ಪಾಠ ನನಗಿನ್ನೂ ನೆನಪಿದೆ. '1857ರಲ್ಲಿ ಅಂದಿನ ಬ್ರಿಟಿಷ್ ಆಡಳಿತದ ವಿರುದ್ಧ ಭಾರತದ ಸೈನಿಕರು ಪ್ರತಿಭಟನೆ ನಡೆಸಿದರು. ಇಂತಿಂತಹ ಕಾರಣಗಳಿಂದ ಭಾರತೀಯ ಹಿಂದೂ ಮತ್ತು ಮುಸ್ಲಿಂ ಸೈನಿಕರು ಆ ಸಶಸ್ತ್ರ ಬಂಡಾಯದಲ್ಲಿ ಒಂದಾಗಿದ್ದರು. ಬ್ರಿಟಿಷ್ ಆಡಳಿತ ಅದನ್ನು ಸಿಪಾಯಿಗಳ ದಂಗೆ ಎಂದು ಕರೆದು ಶಿಕ್ಷಿಸಿತು. ಬ್ರಿಟಿಷರಿಂದ ಭಿನ್ನವಾಗಿ ಸ್ವತಂತ್ರ ಚಿಂತನೆ ಮಾಡತೊಡಗಿದ್ದ ಭಾರತೀಯರಿಗೆ ಅದೊಂದು ಸಾಮಾನ್ಯ ದಂಗೆಯಲ್ಲ. ಅಂದು ನಡೆದುದು ಬ್ರಿಟಿಷ್ ಆಡಳಿತದ ವಿರುದ್ಧದ ಸಶಸ್ತ್ರ ಪ್ರತಿಭಟನೆ, ಅದುವೇ ನಮ್ಮ ಮೊದಲ ಸ್ವಾತಂತ್ರ್ಯ ಸಂಗ್ರಾಮ' ಎಂದು ಹೇಳಿದರು.



ವಿದ್ಯಾರ್ಥಿಗಳ ಮನಸ್ಸನ್ನು ಹೀಗೆ ವಿಶ್ಲೇಷಣೆಯ ಮೂಲಕ ವಿಚಾರಪ್ರಚೋದಕವಾಗಿ ಬೆಳೆಸುವುದು ಪಠ್ಯ ಮತ್ತು ಪಾಠಗಳ ಉದ್ದೇಶ. ನಾರಾಯಣ ಗುರುಗಳಿಗೆ ಸಂಬಂಧಿಸಿದ ಪಾಠವನ್ನು ಸಮಾಜವಿಜ್ಞಾನದ ಪಠ್ಯದಿಂದ ತೆಗೆದು ಕನ್ನಡ ಭಾಷಾ ಪಠ್ಯಕ್ಕೆ ಹಾಕಿದ್ದೇವೆ ಎಂಬ ಮಾತುಗಳನ್ನು ಕೇಳುವಾಗ, ಕನ್ನಡ ಮತ್ತು ಸಮಾಜ ಪಾಠಗಳ ಹಿಂದಿನ ಬೋಧನಾ ತತ್ವಗಳ ಬಗೆಗೆ ನಿಜವಾದ ಚಿಂತನೆ ನಡೆದಿದೆಯೇ ಎಂಬ ಅನುಮಾನ ಬರುತ್ತದೆ.

ಪಂಜೆ ಮಂಗೇಶರಾಯರು ಮಕ್ಕಳ ಸಾಹಿತ್ಯದಲ್ಲಿ ಪ್ರಸಿದ್ಧರು. 1935ರ ಅಕ್ಟೋಬರ್ 29ರಂದು ಪಂಜೆ ಅವರು ಹೈದರಾಬಾದಿನಲ್ಲಿ ಮಾಡಿದ ನಾಡಹಬ್ಬದ ಭಾಷಣದಲ್ಲಿ, ಮಕ್ಕಳ ಸಾಹಿತ್ಯ ಹಾಗೂ ಅಧ್ಯಯನ ಪಠ್ಯಗಳು ಹೇಗಿರಬೇಕು ಎಂಬುದಕ್ಕೆ ಎಂಟು ಸೂತ್ರಗಳನ್ನು ಹೇಳುತ್ತಾರೆ. ಬರೀ ಬುದ್ಧಿವಾದ ಹೇಳುವುದಕ್ಕಾಗಿ ಇರುವ ಬರಹವು ಮಕ್ಕಳನ್ನು ಹೆಚ್ಚು ಆಕರ್ಷಿಸುವುದಿಲ್ಲ. ನೇರವಾದ, ವಾಚ್ಯವಾದ ಧರ್ಮಬೋಧನೆ ಹಾಗೂ ನೀತಿ ಬೋಧನೆಯು ಮಕ್ಕಳಿಗೆ ರುಚಿಸುವುದಿಲ್ಲ. ಅವು ಕತೆಗಳ ಅಂತರಂಗದಲ್ಲಿ ಅಡಗಿರಬೇಕು ಎಂಬುದು ಈ ಸೂತ್ರಗಳಲ್ಲಿ ಒಂದು.

ಬಹಳಷ್ಟು ಬಾಲ ಸಾಹಿತ್ಯವನ್ನು ರಚಿಸಿರುವ ಕಯ್ಯಾರ ಕಿಂಞಣ್ಣ ರೈ ಅವರ 'ನಮ್ಮ ಬಾವುಟ' ಪದ್ಯವು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಯಾವ ದ್ವೇಷದ ಭಾವವನ್ನೂ ಬಿತ್ತದೆ, ಅಂತರಂಗದಲ್ಲಿ ಅಡಗಿರುವ ದೇಶಭಕ್ತಿಯನ್ನು ಪ್ರಚೋದಿಸುವಂತಿದೆ. ಇಂತಹವು ಸರ್ವಜನಾಂಗದ ಶಾಂತಿಯ ತೋಟವನ್ನು ಉಳಿಸಿಕೊಳ್ಳುವುದಕ್ಕೆ ಬೇಕಾದ ಪಠ್ಯಗಳ ಚಿಂತನಾ ಕ್ರಮಗಳು. ನಮ್ಮ ಪಠ್ಯಪುಸ್ತಕಗಳ ತಳಹದಿಯಲ್ಲಿ ಇರಬೇಕಾದ ವೈಚಾರಿಕತೆಯು ಸರ್ವ ಸಮಾನತೆ, ಸ್ವಾತಂತ್ರ್ಯ, ಸಂವಿಧಾನಾತ್ಮಕ ಮೌಲ್ಯಗಳನ್ನು ಒಳಗೊಂಡಿರಬೇಕು. ಅದು ಒಬ್ಬರ ಬಗೆಗಿನ ಪರಿಚಯದಲ್ಲಿ ನಾಲ್ಕು ವಾಕ್ಯ ಆ ಕಡೆ ಈ ಕಡೆ ಮಾಡಬಹುದಾದಷ್ಟು ಸರಳವಾದ ಕೆಲಸವಲ್ಲ.

ಮಕ್ಕಳ ಎಳೆ ಮನಸ್ಸಿನಲ್ಲಿ ಸತ್ಯದ ಕಲ್ಪನೆಯನ್ನು ಸ್ಪಷ್ಟವಾಗಿ ಮೂಡಿಸಬೇಕು. ಆಗಮಾತ್ರ ಋತದ ಗೆಲುವು. ಹೆಡಗೇವಾರ್ ಅವರ ಬರಹ ಬೇಕಾದರೆ, ಯಾವುದೋ ಒಂದು ಉದ್ದೇಶಕ್ಕಾಗಿ 'ಭಗವಾಧ್ವಜ' ಎಂದಿರುವುದನ್ನು 'ಧ್ವಜ' ಎಂದು ಬದಲಾಯಿಸಬಾರದು. ಹಾಗೆ ಬದಲಾಯಿಸಿದರೆ, ಒಂದು ಟಿಪ್ಪಣಿ ಕೊಟ್ಟು, ಯಾಕೆ ಬದಲಾಯಿಸಲಾಗಿದೆ ಎಂಬುದನ್ನು ಹೇಳಬೇಕು. ಅದರ ಬಗ್ಗೆ ಬರಬಹುದಾದ ಪ್ರತಿಕ್ರಿಯೆಗಳನ್ನು ನೇರವಾಗಿ ಎದುರಿಸಬೇಕು. ಹಾಗೆ ಆಗದೇ ಇದ್ದಾಗ, ಸ್ವಕಾರ್ಯ ಲಾಭಕ್ಕಾಗಿ ಸತ್ಯವನ್ನು ಮರೆಮಾಚುವುದು ಹಾಗೂ ಸುಳ್ಳಾಗಿ ತಿರುಚುವುದು ತಪ್ಪಲ್ಲ ಎಂಬ ತಪ್ಪು ಸಂದೇಶ ಮಕ್ಕಳಿಗೆ ಹೋಗುತ್ತದೆ. ಅದು ಸುನೀತಿ ಅಲ್ಲ. ಮಕ್ಕಳಿಗೆ ಅನೀತಿಯನ್ನು ಕಲಿಸುವುದು ತಪ್ಪು.

ಮಕ್ಕಳೆದುರು ಒಂದೆರಡು ಸಲ ಜಾಣತನದಿಂದ ಸತ್ಯವನ್ನು ಮರೆಮಾಚಲು ಸಾಧ್ಯವಾಗಬಹುದು. ಆದರೆ ಮುಂದೊಂದು ದಿನ ಅವರಿಗೆ ಸತ್ಯ ತಿಳಿದೇ ತಿಳಿಯುತ್ತದೆ. ಅದರ ದುಷ್ಪರಿಣಾಮವು ಹಿರಿಯರಿಗೆ, ಶಿಕ್ಷಣ ತಜ್ಞರು ಅನಿಸಿಕೊಂಡವರಿಗೆ ತಿಳಿದಿರಬೇಕು.

ಚುರುಮುರಿ



ಪದಕೋಶ ಪೀಡನೆ

• ಲಿಂಗರಾಜು ಡಿ.ಎಸ್.

'ಅಲ್ಲಾ ಕಣ್ರೆ ಸಾ, ರಾಜಕಾರಣಿಗಳಿಗೆ ಯಂಗಂಗೆಲ್ಲಾ ಬೈಯ್ಯಂಗಿಲ್ಲ ಅಂತ ಸರ್ಕಾರ ಪರ್ಮಾನು ಹೊಂಡುಸದೆ! ಇನ್ನು ಮುಂದೆ ಹಟ್ಟಿತಾವ್ಲೂ ಚಮಚ ಅಂತ ಅನ್ನಂಗಿಲ್ಲ!' ಅಂತಂದೆ.

'ಜನಸೇವೆ ಮಾಡಿರ್ಲಾ ಅಂತ ಸಾಸೇವಿಕ್ಕಿ ಕಳಿಸಿದರೆ, ಇಲ್ಲ ನಾವು ಸುಟ್ಟು ಬೊಟ್ಟಿಟ್ಟುಕ್ಯ ತೀವಿ ಅಂತ ಕುಣಿತವೆ. ಇವುಕ್ಕೆ ಬೈಯ್ಯದೇ ಲಲ್ಲೆ ಮಾಡಕಾದದ? ನಮ್ಮ ಬಾಯಿ, ನಮ್ಮ ಬೋಗುಳ. ಹೊಟ್ಟುರಿದಾಗ ಯಂಗನ್ನ ಬೈಕತ್ತೀವಿ' ಅಂತು ಯಂಟಪ್ಪಣ್ಣ.

'ಬೀಜದ ಹೋರಿಯಂಗಿರೋ ಇವುನ್ನ ಸಾಕಿ ಗ್ವಾಕೆ ಮುರಿದದ್ದು ಅಷ್ಟರಗೇ ಅದೆ. ಖಾಲಿ ಕಯ್ಯಗೆ ಬಂದು ಊರೆಲ್ಲಾ ಬೇನಾಮಿ ಆಸ್ತಿಗೆ ಪಾಲಾಕ್ಯಂಡಿರತವೆ. ಇಂತವುನ್ನ ಏನಂತ ಬೈಯ್ಯದು?' ತುರೇಮಣೆ ಯೋಚನೆಗೆ ಬಿದ್ದರು.

'ಶರಾಪು ಏರಿಸಿಗ್ಯಂಡು ಸರೋತ್ತಲ್ಲಿ ತೂರಾಡ್ತಾ ಬತ್ತಿದ್ದ ನಮ್ಮಪ್ಪನಿಗೆ ನಮ್ಮಜ್ಜಿ 'ಸೀಬಿಯಂಗೆ ಬಂದ ನೋಡು. ಅಲಾಲಟೋಪಿ, ಗುಂಡ್ರಗೋವಿ, ನಿನ್ನ ಮನೆ ಕಾಯೋಗ, ನಿನ್ನ ಸೊಲ್ಲಡಗಾ, ನಿನಗೆ ಅಪತ್ತು ಬಂದು ಚಾಪೆ ಸುತ್ಕೊಂಡೋಗ, ನಿನಗೆ ಹಾವು ಕಚ್ಚ, ಚೇಳು ಕುಕ್ಕ' ಅಂತ ಸ್ವಾಟೆ ತಿಮಿಯೋಳು' ಅಂತು ಯಂಟಪ್ಪಣ್ಣ.

'ಹ್ಞೂಂಕನೇಳಿ, ಬೋಗುಳ ಅನ್ನದು ನಮಗೆ ಜೋಗುಳ ಆಗಿತ್ತು. ನಾನು ಇಸ್ಕೋಲಿಗೆ ಹೋಗದೇ ಕಳ್ಳಾಟ ಆಡ್ತಿದ್ರೆ 'ಬ್ಯಾರೇರ ಮಕ್ಕಳು ಸಿಡಿದು ಸೀಗೆಕಾಯಿ ಆಯ್ತಾವ್ರೆ. ನೀನು ಬೆಪ್ಪುತಕ್ಕಡಿ ಆಯ್ತಿದ್ದೀಯಲ್ಲೋ ಶನಿಗೇಡಿ, ಶನ್ಯೇಸಿ ನನ ಆಟುಗಳ್ಳ' ಅಂತೆಲ್ಲಾ ಬೈಯ್ಯೋಳು ನಮ್ಮವ್ವ!' ಅಂದ ಚಂದ್ರು.

'ಬೆಳಗಾಗುತ್ತೇ ನಮ್ಮಪ್ಪ 'ಅಡ್ಡಿ-ಸಡ್ಡೆ ಇಲ್ಲದೆ ಬಿತ್ತಿ ಗಡ್ಡೆ ಸಮೇತ ನಾಸ ಮಾಡೋ ಏನಾತಿ ಬಡ್ಡೇತ್ತುದ್ದು' ಅಂತ ನನ್ನ ಬೈಯ್ಯೋನು. ಕಂಡೋರನೆಲ್ಲ ಬೈಯ್ಯದು ನಮ್ಮ ವಂಸದೋರ ತೆವಲು ಕನೋ!' ಅಂದ್ರು ತುರೇಮಣೆ.

'ಸಾ, ನಾಳಾಕೆ ಬೈಯ್ಯಕ್ಕೂ ಜಿಎಸ್‌ಟಿ ಬರಂಗದೆ. ಹಂಗಾದ್ರೆ ಇನ್ನು ಮುಂದ್ಕೆ ಬೈಯ್ಯದೂ ಸರ್ವೀಸು ಅಂತ ನೀವು ಅಡ್ವಾನ್ಸು ಟ್ಯಾಕ್ಸು ಕಟ್ಟಬೇಕಾಯ್ತದೆ' ಅಂದೇಟ್ಗೆ ತುರೇಮಣೆ ಮಂಗನಂತಾದರು.

ದಿನದ ಟ್ವೀಟ್

ಚುನಾವಣೆ ಮತ್ತು ಹಾಜರಾತಿ

ರಾಷ್ಟ್ರಪತಿ ಚುನಾವಣೆಗೆ ಸಂಸತ್ತಿನಲ್ಲಿ ಶೇ 99.18ರಷ್ಟು ಮತದಾನ ಆಗಿದೆ. ಆಗಿಂದಾಗ್ಗೆ ನಮಗೆ ಇಂತಹ ಚುನಾವಣೆಗಳ ಅಗತ್ಯ ಇದೆ ಅನಿಸುತ್ತದೆ! ಸಂಸದರ ಹೆಚ್ಚಿನ ಹಾಜರಾತಿಯನ್ನು ಇದು ಖಾತರಿಪಡಿಸುತ್ತದೆ: ಏಕೆಂದರೆ, ಗೈರುಹಾಜರಿಯಿಂದ, ಅದರಲ್ಲೂ ಊಟದ ವಿರಾಮದ ಬಳಿಕ ಕೋರಂಗಾಗಿ ಸಹ ಹರಸಾಹಸಪಡಬೇಕಾದ ಸ್ಥಿತಿ ಇದೆ! 17ನೇ ಲೋಕಸಭೆಯಲ್ಲಿ 143 ಸಂಸದರು ಶೇ 90ಕ್ಕಿಂತ ಹೆಚ್ಚು ಹಾಜರಾತಿ ಹೊಂದಿದ್ದಾರೆ. 93 ಸಂಸದರದು ಶೇ 50ಕ್ಕಿಂತ ಕಡಿಮೆ ಹಾಜರಾತಿ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ತೆರಿಗೆಗಳು? ಹೆಚ್ಚಿನ ಪ್ರಮಾಣದಲ್ಲಿ ಇವೆ ಸರ್! ಉದ್ಯೋಗಗಳು? ಇಲ್ಲ ಸರ್! ಹಿಟ್ಟು, ಅಕ್ಕಿ, ಬೇಳೆಕಾಳು ಸೇರಿದಂತೆ ಜನಸಾಮಾನ್ಯರ ಅಡುಗೆ ಮನೆಗೆ ಅಗತ್ಯವಾದ ಆಹಾರ ಪದಾರ್ಥಗಳು ತುಟ್ಟಿಯಾಗಿವೆ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕವು ಕುಸಿಯುತ್ತಿದೆ, ಆದರೆ ಆಹಾರ ಪದಾರ್ಥಗಳ ಮೇಲಿನ ಜಿಎಸ್‌ಟಿ ಮಾತ್ರ ಹೆಚ್ಚಾಗುತ್ತಲೇ ಇದೆ.

ಶರತ್ ಪಟ್ನಾಯಕ್, ಅಧ್ಯಕ್ಷ, ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿ

25 ವರ್ಷಗಳ ಹಿಂದೆ

ಶನಿವಾರ, 19-7-1997

• **'ನನ್ನ ಕೈ ಕಟ್ಟಿದೆ' ಗುಜ್ರಾಲ್ ಅಳಲು**

ನವದೆಹಲಿ, ಜುಲೈ 18 (ಯುಎನ್‌ಐ)- ಆರೋಪಪಟ್ಟಿ ಸಲ್ಲಿಸಿದ್ದರೂ ರಾಜೀನಾಮೆ ನೀಡದ ರಾಜಕಾರಣಿಗಳ ವಿರುದ್ಧ, ರಾಷ್ಟ್ರಪತಿ ಆಳ್ವಿಕೆ ಜಾರಿಯೂ ಸೇರಿದಂತೆ ಕೇಂದ್ರ ಸರ್ಕಾರಕ್ಕೆ ಕ್ರಮ ಕೈಗೊಳ್ಳುವ ಅಗಾಧ ಅಧಿಕಾರವಿದ್ದರೂ ತಾವೇನೂ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದು ಪ್ರಧಾನಿ ಐ.ಕೆ.ಗುಜ್ರಾಲ್ ಹೇಳಿದರು.

ಮಹಿಳಾ ಮೀಸಲಾತಿ ಮಸೂದೆ ಹಾಗೂ ಚುನಾವಣಾ ಸುಧಾರಣೆ ಕುರಿತ ವಿಚಾರ ಗೋಷ್ಠಿಯಲ್ಲಿ ಮಾತನಾಡಿದ ಅವರು, ಲಾಲೂ ಪ್ರಸಾದ್ ಯಾದವ್ ಅವರ ಹೆಸರನ್ನು ಹೇಳದೆ, 'ಮೊಕದ್ದಮೆ ಎದುರಿಸುತ್ತಿರುವ ರಾಜಕಾರಣಿಗಳು ಬಹಿರಂಗ ಮನವಿ ಮಾಡಿಕೊಂಡರೂ ಪದತ್ಯಾಗಕ್ಕೆ ಒಪ್ಪದಿರುವ ಈ ಸನ್ನಿವೇಶದಲ್ಲಿ ಏನು ಮಾಡಲು ಸಾಧ್ಯ' ಎಂದು ಪ್ರಶ್ನಿಸಿದರು.

'ನನ್ನನ್ನು ಆಗಾಗ ದುರ್ಬಲ ಪ್ರಧಾನಿ, ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ' ಎಂದು ಹೀಯಾಳಿಸುವುದುಂಟು. ಆದರೆ ಕಾನೂನು ನನ್ನ ಕೈ ಕಟ್ಟಿದೆ. ನಿನ್ನೆ ನಡೆದ ಅಂತರ ರಾಜ್ಯ ಮಂಡಳಿ ಸಭೆಯಲ್ಲಿ ಮುಖ್ಯಮಂತ್ರಿಗಳೆಲ್ಲಾ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ಅಧಿಕಾರ ನೀಡುವ 356ನೇ ವಿಧಿಯನ್ನು ಬಳಸಬಾರದೆಂದು ಹೇಳಿದರು. ಈ ಪರಿಸ್ಥಿತಿಯಲ್ಲಿ ಏನು ಮಾಡುವುದು?' ಎಂದರು.

ರಾಜಕಾರಣದಲ್ಲಿ ನೈತಿಕತೆ ಹಾಗೂ ಮೌಲ್ಯಗಳು ಕುಸಿಯುತ್ತಿದ್ದು, ಎಲ್ಲ ಪಕ್ಷಗಳೂ ದ್ವಂದ್ವ ನೀತಿ ಅನುಸರಿಸುತ್ತಿವೆ. ತಮ್ಮ ಕಡೆಗಿದ್ದರೆ ಗೂಂಡಾ ಆದರೂ ಒಳ್ಳೆಯವನು, ತಮ್ಮನ್ನು ವಿರೋಧಿಸುವ ಗೂಂಡಾ ಕೆಟ್ಟವನು ಎನ್ನುತ್ತವೆ ಎಂದರು.

50 ವರ್ಷಗಳ ಹಿಂದೆ

ಬುಧವಾರ, 19-7-1972

• **ಮೈಸೂರು ಮಹಾರಾಜರ ಖಾಸಗಿ ಸ್ವತ್ತು: ಕೇಂದ್ರ ಸರ್ಕಾರದ ಸ್ಪಷ್ಟನೆ**

ಬೆಂಗಳೂರು, ಜುಲೈ 18 – 1950ರ ಪ್ರಭುತ್ವ ವರ್ಗಾವಣೆ ಸಮಯದಲ್ಲಿ ತಯಾರಾದ ಆಸ್ತಿ ಪಟ್ಟಿಯ ಪ್ರಕಾರ, ಮೈಸೂರು, ಬೆಂಗಳೂರು ಮತ್ತು ಉದಕಮಂಡಲಗಳಲ್ಲಿರುವ ಅರಮನೆಗಳು ಮೈಸೂರು ಮಹಾರಾಜರ ಖಾಸಗಿ ಸ್ವತ್ತೆಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಸ್ಪಷ್ಟಪಡಿಸಿದೆ.

• **ಹಿಂದುಳಿದ ವರ್ಗಗಳ ಆಯೋಗ ರಚನೆ**

ಬೆಂಗಳೂರು, ಜುಲೈ 18- ರಾಜ್ಯ ಸರ್ಕಾರವು ಶ್ರೀ ಎಲ್.ಜಿ.ಹಾವನೂರ್ ಅವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿದೆ.

ಹಿಂದುಳಿದ ವರ್ಗಗಳ ದೀರ್ಘಕಾಲದ ಬೇಡಿಕೆಯಾದ ಈ ಆಯೋಗ ರಚನೆಯನ್ನು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ವಿಧಾನಸಭೆಯಲ್ಲಿ ಇಂದು ಪ್ರಕಟಿಸಿದರು. ವೈ.ರಾಮಚಂದ್ರ, ಕೆ.ಆರ್.ಎಸ್. ನಾಯ್ಡು, ಕೆ.ಎಂ.ನಾಗಣ್ಣ, ಧರ್ಮಸಿಂಗ್ (ಎಲ್ಲರೂ ಶಾಸಕರು), ಎಸ್.ಆರ್.ಮಸಣಶೆಟ್ಟಿ, ಪಿ.ಟಿ. ಹಬೀಬ್ ಅವರು ಆಯೋಗದ ಸದಸ್ಯರು.

ಸಂಗತ

ವ್ಯಕ್ತಿ ಸ್ವಾತಂತ್ರ್ಯ ಮತ್ತು ಜುಬೈರ್ ಪ್ರಕರಣ

ಕೋರ್ಟ್‌ಗಳು ನೀಡಿರುವ ಮಹತ್ವದ ತೀರ್ಪುಗಳ ಹಿನ್ನೆಲೆಯಲ್ಲಿ, ಸದ್ಯ ಜೈಲಿನಲ್ಲಿರುವ ಆಲ್ಟ್‌ನ್ಯೂಸ್ ಸಹಸಂಸ್ಥಾಪಕ ಜುಬೈರ್ ಅವರ ಸ್ಥಿತಿಯನ್ನು ವಿಶ್ಲೇಷಿಸಬೇಕಾಗುತ್ತದೆ

• ಸಿ.ಎನ್.ರಾಮಚಂದ್ರನ್

ಮೊದಲಿಗೆ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್ ನೀಡಿರುವ ಇತ್ತೀಚಿನ ತೀರ್ಪುಗಳನ್ನು ನೋಡೋಣ:

1. ಧಾರ್ಮಿಕ ಭಾವನೆಗಳಿಗೆ ಅಪಮಾನ: 'ಭಾರತವು 130 ಕೋಟಿಯನ್ನೂ ಮೀರಿದ ಜನಸಂಖ್ಯೆಯ ದೇಶವಾಗಿದೆ ಮತ್ತು ಯಾವುದೇ ವಿಷಯವಾದರೂ ಅದರ ಬಗ್ಗೆ 130 ಕೋಟಿ ವಿಚಾರಗಳು ಹಾಗೂ ಗ್ರಹಿಕೆ ಸಾಧ್ಯ. ವ್ಯಕ್ತಿಯೊಬ್ಬನ 'ನೋವಿನ ಭಾವನೆ' ಇಡೀ ಗುಂಪಿನ ಅಥವಾ ಸಮುದಾಯದ ಭಾವನೆಗಳನ್ನು ಪ್ರತಿನಿಧಿಸುತ್ತದೆ ಎಂದು ಹೇಳಲಾಗುವುದಿಲ್ಲ' (ದೆಹಲಿ ಹೈಕೋರ್ಟ್, 21.5.22, ಪ್ರೊ. ರತನ್‌ಲಾಲ್ ಮೊಕದ್ದಮೆ. ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದ ಒಂದು ಕಿರು ಲೇಖನಕ್ಕೆ ಸಂಬಂಧಿಸಿದಂತೆ).

2. ಸರ್ಕಾರದ ನೀತಿ-ಕಾರ್ಯಗಳ ಟೀಕೆ: 'ಸರ್ಕಾರದ ವಿರುದ್ಧದ ಟೀಕೆಯು ದಂಡನೆಗೆ ಆಧಾರವಾಗಲು ಸಾಧ್ಯವಿಲ್ಲ. ಸರ್ಕಾರದ ಕಾರ್ಯಗಳನ್ನು ವಿಮರ್ಶಿಸುವ ಅಥವಾ ಅವುಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಮಂಡಿಸುವ ಹಕ್ಕು ಎಲ್ಲಾ ಪ್ರಜೆಗಳಿಗೂ ಇದೆ' (ಸುಪ್ರೀಂ ಕೋರ್ಟ್, 3.6.2021: ಪತ್ರಕರ್ತ ವಿನೋದ್ ದುವಾ ಅವರು ಯುಟ್ಯೂಬ್‌ನಲ್ಲಿ ದಾಖಲಿಸಿದ ಅಭಿಪ್ರಾಯಗಳ ಬಗ್ಗೆ).

3. ಒಂದೇ ಆಪಾದನೆಯ ಬಗ್ಗೆ ಬೇರೆ ಬೇರೆ ರಾಜ್ಯಗಳಲ್ಲಿ ದೂರು ಸಲ್ಲಿಕೆ: 'ಸರ್ಕಾರವನ್ನು ಟೀಕಿಸುವ ಒಂದು ಸಾಮಾಜಿಕ ಮಾಧ್ಯಮದ ಬರಹಕ್ಕಾಗಿ, ಭಾರತದ ಪ್ರಜೆಗಳನ್ನು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಅಲೆದಾಡಿಸುವುದನ್ನು ನಾವು ಸಹಿಸಲು ಸಾಧ್ಯವಿಲ್ಲ. ಭಾರತವು ಒಂದು ಮುಕ್ತ ದೇಶವಾಗಿಯೇ ಉಳಿಯಲಿ. ಸುಪ್ರೀಂ ಕೋರ್ಟ್‌ನಲ್ಲಿ ನಾವಿರುವುದು ಎಲ್ಲಾ ಪ್ರಜೆಗಳ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಲು' (ಸುಪ್ರೀಂ ಕೋರ್ಟ್, 28.10.2020; ರೋಶ್ನಿ ಬಿಶ್ವಾಸ್ ಮೊಕದ್ದಮೆ: ಫೇಸ್‌ಬುಕ್‌ನಲ್ಲಿ ದಾಖಲಿಸಿದ ಒಂದು ಬರಹದ ಬಗ್ಗೆ).

4. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ರಾಜಕೀಯ ಪಕ್ಷಗಳ ಬಗ್ಗೆ ಟೀಕೆ: 'ಭಾರತೀಯ ಪ್ರಜಾಪ್ರಭುತ್ವ ಮತ್ತು ರಾಜಕೀಯ ಪಕ್ಷಗಳು ಟೀಕೆ-ಟಿಪ್ಪಣಿಗಳಿಗೆ ಹೊರತಾಗಿಲ್ಲ. ಇದರ ಅರ್ಥ, ಯಾವುದೇ ಪಕ್ಷದ ವಿರುದ್ಧದ ಟೀಕೆ ಆ ವ್ಯಕ್ತಿಯನ್ನು ಶಿಕ್ಷಿಸಲು ಆಧಾರವಾಗುವುದಿಲ್ಲ' (ದೆಹಲಿ ಹೈಕೋರ್ಟ್, 15.7.2022; ಮಹಮ್ಮದ್ ಜುಬೈರ್ ಅವರಿಗೆ ಜಾಮೀನು ಕೊಡುವಾಗ. ಆಪಾದನೆ: ಜುಬೈರ್ ಅವರ 2018ರ ಟ್ವೀಟ್‌ವೊಂದು ಹಿಂದೂಗಳ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತರುತ್ತದೆ).

ಈ ಮಹತ್ವದ ತೀರ್ಪುಗಳ ಹಿನ್ನೆಲೆಯಲ್ಲಿ, ಸದ್ಯ ದೆಹಲಿಯ ತಿಹಾರ್ ಜೈಲಿನಲ್ಲಿರುವ ಜುಬೈರ್ ಅವರ ಸ್ಥಿತಿಯನ್ನು ನೋಡಿದರೆ ಕೇವಲ ಆಶ್ಚರ್ಯವಲ್ಲ, ಪರಮಾಶ್ಚರ್ಯವಾಗುತ್ತದೆ.

ಆಲ್ಟ್‌ನ್ಯೂಸ್ ಸಂಸ್ಥೆಯ ಸಹಸಂಸ್ಥಾಪಕ ಜುಬೈರ್ (ಮತ್ತೊಬ್ಬ ಸಂಸ್ಥಾಪಕ ಸಾಫ್ಟ್‌ವೇರ್ ಪರಿಣತ ಪ್ರತೀಕ್ ಸಿನ್ಹಾ) 2017ರಲ್ಲಿ 'ಆಲ್ಟ್‌ನ್ಯೂಸ್' ಎಂಬ ಪೋರ್ಟಲ್ ಆರಂಭಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಬರುವ 'ಸುಳ್ಳು ಸುದ್ದಿ'ಗಳನ್ನು ಅಪಾರ ಶ್ರಮದಿಂದ ಪರೀಕ್ಷಿಸಿ, ಅವುಗಳ ಅಡಿಯಲ್ಲಿರುವ ಸತ್ಯವನ್ನು ಆ ಮೂಲಕ ಬಯಲು ಮಾಡುತ್ತಿದ್ದಾರೆ. ಆ ಸತ್ಯವನ್ನು ಅನೇಕ ಪತ್ರಿಕೆಗಳು ಹಾಗೂ ಸುದ್ದಿವಾಹಿನಿಗಳು ಪ್ರಸಾರ ಮಾಡುತ್ತಿವೆ.

'2018ರಲ್ಲಿ ಅವರು ಮಾಡಿದ ಟ್ವೀಟ್, ಹಿಂದೂಗಳ ಧಾರ್ಮಿಕ ನಂಬಿಕೆಗಳಿಗೆ ನೋವುಂಟುಮಾಡುತ್ತದೆ' ಎಂಬ ಕಾರಣದಿಂದ ಅವರ ಮೇಲೆ ದಾಖಲಿಸಿದ ಎಫ್‌ಐಆರ್ ಆಧರಿಸಿ, ಇದ್ದಕ್ಕಿದ್ದಂತೆಯೇ ಕಳೆದ ತಿಂಗಳ 27ರಂದು ದೆಹಲಿಯಲ್ಲಿ ಅವರನ್ನು ಬಂಧಿಸಲಾಯಿತು. ಅದಾಗಲೇ ಅವರ ಮೇಲೆ 2020ರ ಆಗಸ್ಟ್‌ನಲ್ಲಿ ಎನ್‌ಸಿಪಿಸಿಆರ್ (ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇರುವ ಸಂಸ್ಥೆ) ಬೇರೊಂದು ಬಗೆಯ ಆಪಾದನೆ ಮಾಡಿ ಮೊಕದ್ದಮೆಯನ್ನು ಹೂಡಿತ್ತು. ಆದರೆ, ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ಜುಬೈರ್ ಅವರನ್ನು ಬಂಧಿಸಬಾರದೆಂದು ದೆಹಲಿ ಹೈಕೋರ್ಟ್ ಹೇಳಿತ್ತು. ಅನಂತರ 2021ರ ಫೆಬ್ರುವರಿಯಲ್ಲಿ 'ಜುಬೈರ್ ಮಾಡಿದ ಟ್ವೀಟ್ ಯಾವುದೇ ಕಾಗ್ನಿಜಬಲ್ (ಸಂಜ್ಞೇಯ) ಅಪರಾಧವಾಗುವುದಿಲ್ಲ' ಎಂದು ಹೈಕೋರ್ಟ್‌ಗೆ ದೆಹಲಿ ಪೊಲೀಸರು ಹೇಳಿಕೆ ಕೊಟ್ಟರು. ಆದರೆ, ಈ ವರ್ಷ ಅವರ ಬಂಧನವಾದ ಕೂಡಲೇ, 2018ರ ಟ್ವೀಟ್ ಆಧರಿಸಿ ಬೇರೆ ಬೇರೆ ನಗರಗಳಲ್ಲಿ ಅವರ ಮೇಲೆ ಮೊಕದ್ದಮೆ ಹೂಡಲಾಯಿತು.

ಜೂನ್ 27ರಂದು ದೆಹಲಿ ಪೊಲೀಸರು ಅವರನ್ನು ಬಂಧಿಸಿದ್ದಾರೆ. ಇದೇ 8ರಂದು ಸೀತಾಪುರ್ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದೆ. ದೆಹಲಿ ಹೈಕೋರ್ಟ್ 2020ರ ಮೊಕದ್ದಮೆಗೆ ಸಂಬಂಧಿಸಿದಂತೆ 15ರಂದು ಜಾಮೀನು ನೀಡಿದ್ದರೆ, 2021ರ ಮೊಕದ್ದಮೆಗೆ ಸಂಬಂಧಿಸಿದಂತೆ ಲಖಿಂಪುರ್ ನ್ಯಾಯಾಲಯವು 16ರಂದು ಜಾಮೀನು ನಿರಾಕರಿಸಿದೆ. ಇನ್ನೂ ನಾಲ್ಕು ಮೊಕದ್ದಮೆಗಳಲ್ಲಿ ಜಾಮೀನು ದೊರೆಯುವ ತನಕ ಜುಬೈರ್ ಅವರು ತಿಹಾರ್ ಜೈಲಿನಲ್ಲಿ ಇರಬೇಕಾಗುತ್ತದೆ.

ಈ ವಿವರಗಳೇ ಎಲ್ಲವನ್ನೂ ಹೇಳುವುದರಿಂದ, ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯವರು ಇದೇ 16ರಂದು ಜೈಪುರದಲ್ಲಿ ಹೇಳಿರುವ ಒಂದು ವಾಕ್ಯವನ್ನು ಉದ್ಧರಿಸಬಹುದು: 'ಆತುರದ, ವಿವೇಚನಾರಹಿತ ಬಂಧನಗಳಿಂದ ಹಿಡಿದು, ಜಾಮೀನು ಪಡೆಯುವಲ್ಲಿನ ಕಷ್ಟದವರೆಗೆ ಈ ಪ್ರಕ್ರಿಯೆ ಕ್ರಿಮಿನಲ್ ನ್ಯಾಯವ್ಯವಸ್ಥೆಯಲ್ಲಿ 'ಒಂದು ಶಿಕ್ಷೆ'ಯೇ ಆಗಿದೆ'.

ವಾಚಕರ ವಾಣಿ

ಭಾಷಾ ತಜ್ಞರ ನೆರವು ಪಡೆಯಿರಿ

ರಾಜ್ಯ ಸರ್ಕಾರವು ಕನ್ನಡದಲ್ಲಿ ಹೊರಡಿಸುತ್ತಿರುವ ಕೆಲವು ಆದೇಶಗಳಲ್ಲಿ ಕಣ್ಣಿಗೆ ರಾಚುವಂತೆ ಭಾಷಾ ದೋಷಗಳು ಇರುವುದು ಅಸಹನೀಯ. ಕನ್ನಡದಲ್ಲಿ ಹೊರಡಿಸುವ ಎಲ್ಲಾ ಆದೇಶಗಳ ಕರಡು ಪ್ರತಿಯನ್ನು ಪ್ರಕಟಣೆಗೆ ಮೊದಲೇ ಪರಿಶೀಲಿಸಿ, ಅಗತ್ಯವಿದ್ದಲ್ಲಿ ಪರಿಷ್ಕರಿಸಲು ಕನ್ನಡ ವಿದ್ವಾಂಸರನ್ನು ನೇಮಿಸಿಕೊಳ್ಳುವುದು ಉಚಿತ.

ಎಚ್.ಎಸ್.ಚಂದ್ರಶೇಖರ, ಬೆಂಗಳೂರು

ಹಕ್ಕುದಾರರಿಗೆ ಸಲ್ಲಲಿ ಗೌರವ

ಕುವೆಂಪು ಸಾಹಿತ್ಯ ಸುಲಭವಾಗಿ ದೊರೆಯುವಂತೆ ಮಾಡುವ ದಾರಿ ಅದನ್ನು ಹಕ್ಕುಸ್ವಾಮ್ಯದಿಂದ ಮುಕ್ತಗೊಳಿಸುವುದು ಎಂದು ವಸಂತರಾಜು ಎನ್. (ವಾ.ವಾ., ಜುಲೈ 15) ಹೇಳಿದ್ದಾರೆ. ಗೌರವಧನ ಪಾವತಿಸುವುದರಿಂದ ಸಂಪುಟಗಳ ಬೆಲೆ ಹೆಚ್ಚಾಗುತ್ತದೆ ಎಂಬುದು ಮಾತ್ರ ಉತ್ಪ್ರೇಕ್ಷೆ. ಇಂದು ಕಾಗದ ಮತ್ತು ಮುದ್ರಣದ ವೆಚ್ಚ ಅತ್ಯಂತ ದುಬಾರಿಯಾಗಿದೆ. ಜೊತೆಗೆ, ಶೇ 18ರಷ್ಟು ಜಿಎಸ್‌ಟಿಯನ್ನು ಪಾವತಿಸಬೇಕಾಗುತ್ತದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ಕುವೆಂಪು ಸಾಹಿತ್ಯ ಸಂಪುಟಗಳ ಮರುಮುದ್ರಣಕ್ಕೆ ಅನುಕೂಲ ಇದೆ. ಅವರ ಇಡೀ ಸಾಹಿತ್ಯ ರೆಡಿ-ಟು-ಪ್ರಿಂಟ್ ಆಗಿ ಇರುವಂತೆ ತೇಜಸ್ವಿ ಅವರು ಸಿದ್ಧಪಡಿಸಿರುವುದೇ ಆ ಅನುಕೂಲ.

ಹಕ್ಕುಸ್ವಾಮ್ಯ ಅವರದಿದ್ದರೂ, ಕುಟುಂಬವರ್ಗದವರು ಅವರ ಸಾಹಿತ್ಯವನ್ನು ಖಂಡಿತಾ ಕಬ್ಬಿಣದ ಕಪಾಟಿನಲ್ಲಿಟ್ಟು ಬೀಗ ಜಡಿದಿಲ್ಲ! ಹಾಗಿದ್ದರೆ ಉದಯರವಿ ಪ್ರಕಾಶನದಿಂದ ಬಿಡಿಬಿಡಿಯಾಗಿ ಪ್ರಕಟವಾಗಿ, ಸಮರ್ಪಕವಾಗಿ ಪೂರೈಕೆಯಾಗುತ್ತಿರುವಾಗಲೇ, ರಾಜ್ಯದ ಎರಡು ಪ್ರಮುಖ ಸಂಸ್ಥೆಗಳಿಗೆ (ಕುವೆಂಪು ಪ್ರತಿಷ್ಠಾನ ಮತ್ತು ಹಂಪಿ ವಿ.ವಿ) ಸಮಗ್ರ ಮುದ್ರಣಕ್ಕೆ ಅವಕಾಶ ದೊರೆಯುತ್ತಿರಲಿಲ್ಲ! ಮೇಲಾಗಿ, ಸುಮಾರು 10 ವರ್ಷಗಳಿಂದಲೂ ಕುವೆಂಪು ಅವರ ಸಾಹಿತ್ಯ ಪೂರ್ತಿಯಾಗಿ ಸರ್ಕಾರಿ ಜಾಲತಾಣ ಕಣಜ.ಕಾಂ (https://kanaja.karnataka.gov.in/) ಮತ್ತು ಭಾಗಶಃ ಬೇರೆ ಬೇರೆ ಜಾಲತಾಣಗಳಲ್ಲಿ ಉಚಿತವಾಗಿಯೇ ಸಿಗುತ್ತಿದೆ! ಇನ್ನೂ ಕಡಿಮೆ ಬೆಲೆಗೆ ಮುದ್ರಿತ ಪುಸ್ತಕಗಳು ಸಿಗಬೇಕೆಂದರೆ, ಸರ್ಕಾರವೇ ಅನುದಾನ ನೀಡಬೇಕು ಇಲ್ಲವೇ ಜಿಎಸ್‌ಟಿ ಮುಕ್ತಗೊಳಿಸಬೇಕು. ಹಕ್ಕುದಾರರಿಗೆ ಸಲ್ಲಬೇಕಾದ ಗೌರವವೂ ಸಲ್ಲಬೇಕು. ಗೌರವಧನ ಪಾವತಿಸುವುದು ನಾಗರಿಕ ಸಮಾಜದ ಕರ್ತವ್ಯ ಮತ್ತು ಅದು ಕವಿಗೆ ತೋರಬೇಕಾದ ಗೌರವ ಕೂಡಾ. ಈ ದಿಸೆಯಲ್ಲಿ ಸರ್ಕಾರ ಯೋಚಿಸಬೇಕಿದೆ.

ಡಾ. ಬಿ.ಆರ್.ಸತ್ಯನಾರಾಯಣ, ಬೆಂಗಳೂರು

ಮರುಮೌಲ್ಯಮಾಪನ: ತೊಡಕು ನಿವಾರಿಸಿ

ಪಿಯುಸಿ ವಾರ್ಷಿಕ, ಸಪ್ಲಿಮೆಂಟರಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ತಾವು ಬರೆದ ಉತ್ತರಗಳಿಗೆ ಸರಿಯಾದ ಅಂಕಗಳು ದೊರಕಿಲ್ಲ ಎಂದು ಮರುಮೌಲ್ಯಮಾಪನ ಬಯಸಿ ಪ್ರತೀ ವಿಷಯಕ್ಕೆ ₹ 1,670 ಶುಲ್ಕ ಕಟ್ಟಿ ಅರ್ಜಿ ಸಲ್ಲಿಸುತ್ತಾರೆ. ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿಯಮದಂತೆ, ಮರುಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಯಲ್ಲಿ ಕನಿಷ್ಠ 6 ಅಂಕಗಳು ಹೆಚ್ಚಾದಲ್ಲಿ ಮಾತ್ರ ವಿದ್ಯಾರ್ಥಿಗೆ ಆ ಅಂಕಗಳನ್ನು ನೀಡಲಾಗುತ್ತದೆ, ಇಲ್ಲದಿದ್ದರೆ ಇಲ್ಲ. ಹಾಗಾದಲ್ಲಿ 100ಕ್ಕೆ 99 ಅಂಕ ಗಳಿಸಿದ ವಿದ್ಯಾರ್ಥಿಗೆ ಇನ್ನೊಂದು ಅಂಕ ಬರುವಂತಿದ್ದರೂ ಅದನ್ನು ನೀಡಲಾಗುವುದಿಲ್ಲ. ಏಕೆ ನೀಡುವುದಿಲ್ಲ ಎಂಬುದನ್ನು ಪ್ರಶ್ನಿಸುವಂತಿಲ್ಲ. ನ್ಯಾಯಾಲಯಕ್ಕೆ ಮೊರೆ ಇಡುವಂತಿಲ್ಲ.

ಇನ್ನು ನೂರಕ್ಕೆ 30ರಿಂದ 34 ಅಂಕ ಪಡೆದ ವಿದ್ಯಾರ್ಥಿಗಳು ಸಹ 1ರಿಂದ 5 ಅಂಕಗಳು ಬಂದರೆ ತೇರ್ಗಡೆಯಾಗುತ್ತಾರೆ. ಕನಿಷ್ಠ 6 ಅಂಕ ಬರಲೇಬೇಕೆಂಬ ನಿಯಮ ಇರುವುದರಿಂದ ಅವರೂ ಮರುಮೌಲ್ಯಮಾಪನದಿಂದ ತಮಗೆ ಪ್ರಯೋಜನವಾಗದು ಎಂದು ನಿರಾಶರಾಗಿದ್ದಾರೆ. ಮರುಮೌಲ್ಯಮಾಪನಕ್ಕೂ ಮುನ್ನ ಉತ್ತರ ಪತ್ರಿಕೆಯ ಸ್ಕ್ಯಾನ್ಡ್ ಕಾಪಿ ಪಡೆದುಕೊಳ್ಳುವ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರ ಬಳಿ ತೋರಿಸಿ, ಎಷ್ಟು ಅಂಕ ಹೆಚ್ಚಾಗಬಹುದು ಎಂದು ತಿಳಿದುಕೊಂಡಿರುತ್ತಾರೆ. ವಾರ್ಷಿಕ ಪತ್ರಿಕೆಯ ಸ್ಕೀಮ್ ಆಫ್ ವ್ಯಾಲುಯೇಶನ್‌ನ ಪ್ರಕಾರ 'ನಿನಗೆ ಇಂತಿಷ್ಟು ಅಂಕ ಬರುತ್ತದೆ' ಎಂದು ಅಧ್ಯಾಪಕರು ಹೇಳುತ್ತಾರೆ. ಆದರೆ ಬಂದೇ ಬರುತ್ತದೆ ಎಂದು ಹೇಳುವ ಧೈರ್ಯ ಯಾವ ಅಧ್ಯಾಪಕರಿಗೂ ಇರುವುದಿಲ್ಲ. ಏಕೆಂದರೆ ಕನಿಷ್ಠ 6 ಅಂಕ ಬರಬೇಕೆಂಬ ನಿಯಮ. 6ರ ಕೆಳಗೆ ಬರುವ ಅಂಕಗಳು ಅಂಕಗಳೇ ಅಲ್ಲವೆ ಎಂಬ ಪ್ರಶ್ನೆ ವಿದ್ಯಾರ್ಥಿ ಮತ್ತು ಪೋಷಕರದ್ದು. ಎಸ್‌ಎಸ್‌ಎಲ್‌ಸಿ ಮರುಮೌಲ್ಯಮಾಪನದಲ್ಲಿ ಒಂದು ಅಂಕ ಹೆಚ್ಚಾದರೂ ಕೊಡುವ ವ್ಯವಸ್ಥೆ ಇದೆ, ಪಿಯುಸಿಯಲ್ಲಿ ಏಕಿಲ್ಲ ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿದೆ. ಸಾಮಾನ್ಯ ಪ್ರವೇಶ ಪರೀಕ್ಷೆ ಮತ್ತು ವಾರ್ಷಿಕ ಪರೀಕ್ಷೆಯ ಅಂಕಗಳ ಮೇಲೆ ವೃತ್ತಿಪರ ಕೋರ್ಸ್‌ಗೆ ಪ್ರವೇಶ ಗಿಟ್ಟಿಸುವ ವಿದ್ಯಾರ್ಥಿಗಳಿಗೆ ಪ್ರತೀ ಅಂಕವೂ ಮಹತ್ವದ್ದು. ಹಾಗೆಯೇ ಒಂದೆರಡು ಅಂಕ ಹೆಚ್ಚಾದರೆ ಪಾಸಾಗುತ್ತೇನೆ ಎನ್ನುವ ಮತ್ತು ಒಂದು ಅಂಕ ಬಂದರೆ ರಾಜ್ಯ ಮಟ್ಟದಲ್ಲಿ ಸ್ಥಾನ ಹೆಚ್ಚುತ್ತದೆ ಎಂದು ಬಯಸುವ ವಿದ್ಯಾರ್ಥಿಗಳಿಗೆ ಈ ನಿಯಮದಿಂದ ತೀರಾ ತೊಂದರೆಯಾಗಿದೆ. ಶಿಕ್ಷಣ ಸಚಿವರು ಮತ್ತು ಇಲಾಖೆಯು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಶೀಘ್ರ ನಿರ್ಧಾರ ಕೈಗೊಳ್ಳಲಿ.

ಶಿಶಿರ ವಸಿಷ್ಠ, ಬೆಂಗಳೂರು

ಇಲ್ಲವಾಯಿತೇ ಸಂವೇದನೆ?

ಸಾಹಿತಿಗಳು, ರಾಜಕೀಯ ಪಕ್ಷಗಳ ಮುಖಂಡರು ಸೇರಿದಂತೆ 61 ಜನರಿಗೆ ಬೆದರಿಕೆ ಪತ್ರ ಬಂದಿರುವುದನ್ನು ನೋಡಿದರೆ, ಮತಭೇದದ ಅಸಹಿಷ್ಣುತೆಯು ಪರಾಕಾಷ್ಠೆ ಮುಟ್ಟಿದೆ ಅಂತ ಅನ್ನಿಸುತ್ತದೆ. ಅಲ್ಲದೆ, ನಮ್ಮನ್ನು ಆಳುವವರ ಹಾಗೂ ಬೇಲಿ ಮೇಲೆ ಕೂತು ತಮಾಷೆ ನೋಡುತ್ತಿರುವ ಪ್ರಜ್ಞಾವಂತರ ಸಂವೇದನೆ 'ಇನ್ನಿಲ್ಲ'ವಾಗಿದೆ ಎಂಬುದರ ಅರಿವನ್ನೂ ಮೂಡಿಸುತ್ತದೆ.

ಇದಕ್ಕೂ ಮೊದಲು ಕೆಲವು ಸಾಹಿತಿಗಳಿಗೆ ಈ ಪರಿಯ ಬೆದರಿಕೆಗಳು ಮತ್ತೆ ಮತ್ತೆ ಬಂದಾಗಲೂ ಬೆದರಿಕೆಕೋರರ ವಿರುದ್ಧ ಸರ್ಕಾರ ಗಂಭೀರ ಕ್ರಮಕ್ಕೆ ಮುಂದಾಗದೇ ಹೋದುದರ ಪರಿಣಾಮ ಇದಾಗಿರಬಹುದೇ? ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಸರ್ಕಾರದ ಈ ಪರಿಯ ಹಿಂದೇಟು ಯಾವ ಕಾರಣಕ್ಕಾಗಿ?

ಶ್ರೀಧರ ಎಚ್. ಗಾರೆಮನೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವರದಿ ಅಭಿಪ್ರಾಯ

ಎಸ್‌ಎಚ್‌ಜಿ ಹಣಕಾಸು ನೆರವು ಕೆಲ ರಾಜ್ಯಗಳಿಗೆ ಸಿಂಹಪಾಲು

ಗ್ರಾಮೀಣ, ಅರೆನಗರಗಳಲ್ಲಿ ಸ್ವಸಹಾಯ ಸಂಘಗಳು ಕೇಂದ್ರೀಕೃತ



10 ರಾಜ್ಯಗಳಿಗೆ ಶೇ 95ರಷ್ಟು ಹಣ ಹಂಚಿಕೆ

ಆರ್ಥಿಕ ಸಬಲೀಕರಣ ಉದ್ದೇಶಕ್ಕಾಗಿ ರೂಪುಗೊಂಡ ಸ್ವಸಹಾಯ ಸಂಘಗಳು (ಎಸ್‌ಎಚ್‌ಜಿ) ದೇಶದ ಗ್ರಾಮೀಣ ಹಾಗೂ ಅರೆನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿವೆ. ಅವುಗಳಿಗೆ ಸಾಲದ ರೂಪದಲ್ಲಿ ಹಣಕಾಸಿನ ನೆರವು ಒದಗಿಸಲಾಗುತ್ತದೆ. ಸ್ವಸಹಾಯ ಸಂಘಗಳ ಚಟುವಟಿಕೆಗಳನ್ನು ದೇಶದಾದ್ಯಂತ ವಿಸ್ತರಿಸುವ ಯತ್ನದ ಹೊರತಾಗಿಯೂ, ಅವುಗಳಿಗೆ ನೀಡುವ ಸಾಲದ ಪಾಲು ಕೆಲವೇ ರಾಜ್ಯಗಳಲ್ಲಿ ಕೇಂದ್ರೀಕೃತವಾಗಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ವರದಿ ಅಭಿಪ್ರಾಯಪಟ್ಟಿದೆ. ದೇಶದ 10 ರಾಜ್ಯಗಳ ಸ್ವಸಹಾಯ ಸಂಘಗಳು ಶೇ 95ಕ್ಕೂ ಹೆಚ್ಚು ಸಾಲದ ನೆರವು ಪಡೆದಿವೆ. ಈ ಪಟ್ಟಿಯಲ್ಲಿ ಆಂಧ್ರಪ್ರದೇಶ ಮುಂಚೂಣಿಯಲ್ಲಿದ್ದು ಇಲ್ಲಿನ ಎಸ್‌ಎಚ್‌ಜಿಗಳು ಶೇ 33ರಷ್ಟು ಹಣವನ್ನು ಸಾಲವಾಗಿ ಪಡೆದಿವೆ. ಎರಡನೇ ಸ್ಥಾನದಲ್ಲಿರುವ ಕರ್ನಾಟಕವು ಶೇ 13ರಷ್ಟು ಪಾಲು ಹೊಂದಿದೆ.



ಬದಲಾದ ನೀತಿ ಬಿಹಾರಕ್ಕೆ ಹೆಚ್ಚು ಹಣ

ಸರ್ಕಾರದ ಕೆಲವು ನೀತಿಗಳ ಜಾರಿಯಿಂದ ಸಾಲದ ಹಣ ಹಂಚಿಕೆ ವಿಧಾನದಲ್ಲಿ ಬದಲಾವಣೆಯಾಗಿದೆ. ಹಾಗಾಗಿ, 2021–22ನೇ ಸಾಲಿನಲ್ಲಿ ಆಂಧ್ರಪ್ರದೇಶ, ಕರ್ನಾಟಕ, ತೆಲಂಗಾಣ ರಾಜ್ಯಗಳಿಗೆ ಸಿಂಹಪಾಲು ಸಿಕ್ಕಿಲ್ಲ. ಬದಲಿಗೆ ಇತರ ರಾಜ್ಯಗಳಿಗೆ ಅಧಿಕ ಹಣ ಹಂಚಿಕೆಯಾಗಿದೆ. ಈ ಅವಧಿಯಲ್ಲಿ ಹಣಕಾಸು ನೆರವು ಒದಗಿಸಲಾದ ಸುಮಾರು 8 ಲಕ್ಷ ಸ್ವಸಹಾಯ ಸಂಘಗಳ ಪೈಕಿ ಬಿಹಾರದ ಎಸ್‌ಎಚ್‌ಜಿಗಳು (ಶೇ 16) ಅಧಿಕ ಪಾಲು ಪಡೆದಿವೆ. ನಂತರದ ಸ್ಥಾನದಲ್ಲಿ ಉತ್ತರ ಪ್ರದೇಶ (ಶೇ 12), ಪಶ್ಚಿಮ ಬಂಗಾಳ (ಶೇ 12) ರಾಜ್ಯಗಳಿವೆ.



ಕರ್ನಾಟಕ: 5 ಜಿಲ್ಲೆಗಳಿಗೆ ಶೇ 83ರಷ್ಟು ಹಂಚಿಕೆ

ಸಾಲದ ರೂಪದಲ್ಲಿ ಹಂಚಿಕೆ ಮಾಡಲಾದ ಹಣದಲ್ಲಿ ಅತಿ ಹೆಚ್ಚನ್ನು ಪಡೆದ ಐದು ರಾಜ್ಯಗಳಲ್ಲಿ ಆಂಧ್ರ ಪ್ರದೇಶ, ಕರ್ನಾಟಕ, ತೆಲಂಗಾಣ, ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ಇವೆ. ಈ ರಾಜ್ಯಗಳಲ್ಲಿ ಅತಿಹೆಚ್ಚು ಹಣ ಹಂಚಿಕೆಯಾದ ಜಿಲ್ಲೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಪೈಕಿ ಕರ್ನಾಟಕದ ಐದು ಜಿಲ್ಲೆಗಳಿಗೆ ಅತ್ಯಧಿಕ ಮೊತ್ತ ದಕ್ಕಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ತುಮಕೂರು, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಿಗೆ ಒಟ್ಟು ಹಣದ ಶೇ 83ರಷ್ಟು ವಿತರಣೆಯಾಗಿದೆ. ಆಂಧ್ರ ಪ್ರದೇಶ ಹಾಗೂ ತೆಲಂಗಾಣದ ತಲಾ ಐದು ಜಿಲ್ಲೆಗಳಿಗೆ ಶೇ 50ಕ್ಕೂ ಹೆಚ್ಚು ಹಣವನ್ನು ನೀಡಲಾಗಿದೆ.

ಒಟ್ಟು ಹಂಚಿಕೆಯಲ್ಲಿ ಐದು ಜಿಲ್ಲೆಗಳು ಪಡೆದ ಮೊತ್ತದ ಪ್ರಮಾಣ



ಮಹತ್ವಾಕಾಂಕ್ಷಿ ಜಿಲ್ಲೆಗಳಲ್ಲಿ ಪ್ರಗತಿ

ಅಭಿವೃದ್ಧಿಯಲ್ಲಿ ಹಿಂದುಳಿದಿರುವ ದೇಶದ 124 ಜಿಲ್ಲೆಗಳನ್ನು ಗುರುತಿಸಿ, ಅವುಗಳ ಸಮಗ್ರ ಅಭಿವೃದ್ಧಿಗೆ ನೆರವಾಗುವ 'ಮಹತ್ವಾಕಾಂಕ್ಷಿ ಜಿಲ್ಲೆಗಳ ಯೋಜನೆ'ಯನ್ನು ಕೇಂದ್ರ ಸರ್ಕಾರವು 2018ರಲ್ಲಿ ಜಾರಿಗೆ ತಂದಿತ್ತು. ಈ ಯೋಜನೆ ಜಾರಿಗೆ ಬಂದ ಬಳಿಕ, ಸ್ವಸಹಾಯ ಸಂಘಗಳಿಗೆ ಹಣಕಾಸು ಹಂಚಿಕೆ ಮಾಡುವ ವಿಚಾರದಲ್ಲಿ ದೊಡ್ಡ ಮಟ್ಟದ ಯಶಸ್ಸು ಸಿಕ್ಕಿದೆ ಎಂದು ವರದಿ ಹೇಳಿದೆ. ದೇಶದ ಎಸ್‌ಎಚ್‌ಜಿಗಳಿಗೆ ಹಂಚಿಕೆಯಾದ ಹಣದ ಪೈಕಿ ಶೇ 18ರಷ್ಟು ಹಣ ಈ ಜಿಲ್ಲೆಗಳಿಗೆ ಹಂಚಿಕೆಯಾಗಿದೆ. ಈ ಪಟ್ಟಿಯಲ್ಲಿ ಕರ್ನಾಟಕದ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಿವೆ. ಜಾರ್ಖಂಡ್‌ನ ಅತಿಹೆಚ್ಚು, ಅಂದರೆ 19 ಜಿಲ್ಲೆಗಳಿವೆ.

3 ರಾಜ್ಯಗಳಲ್ಲಿ ಶೇ 25ಕ್ಕೂ ಹೆಚ್ಚು ಎನ್‌ಪಿಎ

ಸ್ವಸಹಾಯ ಸಂಘಗಳಿಗೆ ಹಂಚಿಕೆ ಮಾಡಲಾದ ಹಣ ಸಾಲದ ರೂಪದಲ್ಲಿದ್ದು, ಕೆಲವು ರಾಜ್ಯಗಳು ಸಾಲ ಮರುಪಾವತಿಯಲ್ಲಿ ಹಿಂದೆ ಬಿದ್ದಿದ್ದರೆ, ಇನ್ನೂ ಕೆಲವು ರಾಜ್ಯಗಳು ನಿಗದಿತ ಅವಧಿಯೊಳಗೆ ಸಾಲ ಮರುಪಾವತಿಸಿವೆ. ವಸೂಲಾಗದ ಸಾಲದ (ಎನ್‌ಪಿಎ) ಪ್ರಮಾಣವು ಉತ್ತರ ಪ್ರದೇಶ, ಹರಿಯಾಣ ಹಾಗೂ ಪಂಜಾಬ್‌ನಲ್ಲಿ ಶೇ 25ಕ್ಕೂ ಅಧಿಕವಾಗಿದೆ ಎಂದು ವರದಿ ತಿಳಿಸಿದೆ. ಅರುಣಾಚಲ ಪ್ರದೇಶ ಹಾಗೂ ತ್ರಿಪುರಾ ರಾಜ್ಯಗಳ ಎಸ್‌ಜಿಒಗಳೂ ಸಾಲ ಮರುಪಾವತಿಯಲ್ಲಿ ಹಿಂದಿವೆ. ಆಂಧ್ರಪ್ರದೇಶವು ಅತಿಕಡಿಮೆ (ಶೇ 0.8) ಎನ್‌ಪಿಎ ಹೊಂದಿದೆ.



ಆಂಧ್ರ, ತೆಲಂಗಾಣಕ್ಕೆ ಭರಪೂರ ಹಣ ಹಂಚಿಕೆ

ಸ್ವಸಹಾಯ ಸಂಘಗಳಿಗೆ ನೀಡಲಾದ ಸಾಲದ ಹಣದ ಪ್ರಮಾಣವನ್ನು ವಿಶ್ಲೇಷಿಸಿದಾಗ, ಶೇ 60ಕ್ಕೂ ಅಧಿಕ ಪ್ರಮಾಣದ ಹಣವು ದೇಶದ 25 ಜಿಲ್ಲೆಗಳಿಗೆ ವಿತರಣೆಯಾಗಿದೆ ಎಂದು ವರದಿ ತಿಳಿಸಿದೆ. ಈ ಪೈಕಿ ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲೇ ಅತ್ಯಧಿಕ ಜಿಲ್ಲೆಗಳು ಇವೆ. ಅತಿಹೆಚ್ಚು ಹಣ ನೀಡಲಾದ ಮೊದಲ 25 ಜಿಲ್ಲೆಗಳನ್ನು ಪರಿಗಣಿಸಿದರೆ, ಕರ್ನಾಟಕದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಹಾಗೂ ಪಶ್ಚಿಮ ಬಂಗಾಳದ ಒಂದು ಜಿಲ್ಲೆಯನ್ನು ಬಿಟ್ಟರೆ, ಉಳಿದ ಜಿಲ್ಲೆಗಳು ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿಯೇ ಇರುವುದು ವಿಶೇಷ.



ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಸಂಸತ್ತಿನ ಮುಂಗಾರು ಅಧಿವೇಶ ಸುಗಮವಾಗಿ ನಡೆಯುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 176

ಯಜ್ಞನಾಶವ ನುಡಿದ ಆಕಾಶವಾಣಿ

ಸತೀದೇವಿಯ ಆತ್ಮಾರ್ಪಣೆ ನಂತರ ಆಕಾಶವಾಣಿಯೊಂದು ಹೀಗೆ ನುಡಿಯಿತು: 'ಎಲೈ ದಕ್ಷನೇ, ನೀನು ದುರಾಚಾರಿ, ಗರ್ವಿಷ್ಠ, ಮೂರ್ಖ. ಡಂಬಾಚಾರಿಯಾದ ನಿನ್ನ ಯಜ್ಞವು ಅನರ್ಥಕಾರಿ. ಪರಮಶಿವಭಕ್ತನಾದ ದಧೀಚಿಮುನಿಯ ಮಾತನ್ನು ಕೇಳಲಿಲ್ಲ. ಆ ಮುನಿಯ ಮಾತು ಕೇಳಿದ್ದರೆ ನಿನಗೆ ಮಂಗಳವಾಗಿ, ಯಜ್ಞಕಾರ್ಯ ಯಶಸ್ವಿಯಾಗುತ್ತಿತ್ತು. ದಧೀಚಿಮುನಿಯು ನಿನ್ನ ಯಜ್ಞವು ನಾಶವಾಗುವಂತೆ ಶಾಪವನ್ನಿತ್ತು ಯಜ್ಞಶಾಲೆಯಿಂದ ಹೊರಟುಹೋದ. ಆಗಲೂ ಮೂಢನಾದ ನಿನಗೆ ತಿಳಿವಳಿಕೆ ಬರಲಿಲ್ಲ. ಸುಮಂಗಳೆಯಾದ ನಿನ್ನ ಪುತ್ರಿ ಸತೀದೇವಿಯು ತಾನಾಗಿಯೇ ನಿನ್ನ ಮನೆಗೆ ಬಂದಳು. ನೀನು ಅವಳನ್ನು ಆದರಿಸಿ ಗೌರವಿಸಲಿಲ್ಲ. ಪರಮಪೂಜ್ಯರಾದ ಸತೀಶಂಕರರನ್ನು ಅರ್ಚಿಸಲಿಲ್ಲ. ನಾನು ಬ್ರಹ್ಮಪುತ್ರನೆಂದು ವೃಥಾ ಗರ್ವಿಷ್ಠನಾದೆ. ಸತೀದೇವಿಯನ್ನು ನಿತ್ಯವೂ ಅರ್ಚಿಸಿದರೆ ಸಕಲ ಸೌಭಾಗ್ಯಗಳೂ ಲಭಿಸುವುವು. ಆಕೆ ಭಕ್ತರಿಗೆ ಸಕಲ ಕಲ್ಯಾಣವನ್ನ ಉಂಟುಮಾಡುವ ಜಗನ್ಮಾತೆ. ಅಂಥ ಮಹಾಮಹಿಮಳು ಸತೀದೇವಿ. ಅವಳು ಆದಿಯಿಲ್ಲದ ಮಾಯಾಶಕ್ತಿ. ಜಗತ್ತನ್ನು ಸೃಷ್ಟಿಸುವವಳು, ರಕ್ಷಿಸುವವಳು, ಪ್ರಳಯಕಾಲದಲ್ಲಿ ಸಂಹರಿಸುವವಳು. ಸತೀದೇವಿಯೇ ಜಗತ್ತಿಗೆ ತಾಯಿ. ಆಕೆ ವಿಷ್ಣುವಿಗೂ ತಾಯಿ. ಬ್ರಹ್ಮ ಇಂದ್ರ ಚಂದ್ರ ಅಗ್ನಿ ಸೂರ್ಯ ಮುಂತಾದ ದೇವತೆಗಳಿಗೂ ಮಾತೆ. ಸತೀದೇವಿಯೇ ತಪಸ್ಸು, ಧರ್ಮ, ದಾನ ಮುಂತಾದ ಶುಭಕಾರ್ಯಗಳಿಗೆ ಫಲವನ್ನು ಕೊಡುತ್ತಾಳೆ. ಅವಳು ಶಿವನ ಶಕ್ತಿ(ಮಾಯೆ)ಯು, ದೇವತೆಗಳಿಗೆ ದೇವಿಯು, ದುಷ್ಟರನ್ನು ಶಿಕ್ಷಿಸುವ ಸರ್ವೋತ್ಕೃಷ್ಟಳು. ಇಂತಹ ಮಹಿಮೆಯುಳ್ಳ ಸತೀದೇವಿಯ ಪತಿ ಶಂಕರನಿಗೆ ದುರ್ಬುದ್ಧಿಯುಳ್ಳ ನೀನು ಯಜ್ಞಭಾಗವನ್ನು ಕೊಡಲಿಲ್ಲ.

'ಶಂಕರನು ಸಕಲ ಮಂಗಳರೂಪ. ದೇವತೆಗಳೂ ಅವನನ್ನು ಸೇವಿಸುತ್ತಾರೆ. ಶಿವನ ಸಾಕ್ಷಾತ್ಕಾರವನ್ನು ಪಡೆಯುವುದಕ್ಕಾಗಿ ಸಿದ್ಧರು ತಪಸ್ಸನ್ನ ಆಚರಿಸುತ್ತಾರೆ. ಯೋಗಿಗಳು ಯೋಗಾಭ್ಯಾಸವನ್ನು ಮಾಡುತ್ತಾರೆ. ಶಿವನೇ ಜಗತ್ತನ್ನು ಸೃಷ್ಟಿಸುವವನು, ಸಕಲ ವಿದ್ಯೆಗಳಿಗೂ ಒಡೆಯ. ಅವನು ಆದಿವಿದ್ಯಾರೂಪಳಾದ ಆದಿಶಕ್ತಿಯ ಪ್ರಿಯಪತಿ. ಎಲೈ ಮೂರ್ಖನಾದ ದಕ್ಷನೇ, ಶಿವನ ಶಕ್ತಿರೂಪಳಾದ ಸತೀದೇವಿಗೆ ನೀನು ಸತ್ಕಾರವನ್ನು ಮಾಡಲಿಲ್ಲ. ಆದಕಾರಣ ಈ ನಿನ್ನ ಯಜ್ಞವು ನಾಶವಾಗುವುದು. ಏಕೆಂದರೆ, ಪೂಜಿಸಲು ಯೋಗ್ಯರಾದವರನ್ನು ಪೂಜಿಸದಿದ್ದರೆ ಅಮಂಗಳವುಂಟಾಗುವುದು. ಹೀಗಿರಲು ಪೂಜಿಸಲು ಯೋಗ್ಯಳಾದಂತಹ ಸತೀದೇವಿಯನ್ನು ನೀನು ಅರ್ಚಿಸಲಿಲ್ಲ. ಇದರಿಂದ ನಿನಗೆ ಆಪತ್ತುಗಳು ಸಿದ್ಧವಾಗಿರುವುವು. ಮಂಗಳಕರನಾದ ಶಿವನನ್ನ ಅರ್ಚಿಸದೆ ಶ್ರೇಯಸ್ಸನ್ನು ಪಡೆಯುವೆನೆಂಬ ಗರ್ವ ನಿನಗಿದ್ದರೆ, ಆ ಗರ್ವವು ಈಗ ನಾಶವಾಗುವುದು. ಈಗ ನಿನ್ನ ಮುಖವು ಭಸ್ಮವಾಗಿ, ಯಜ್ಞವು ನಾಶವಾಗುವುದು.

'ಈಶ್ವರನನ್ನು ದ್ವೇಷಿಸುವಂತಹ ನಿನಗೆ ದೇವತೆಗಳು ಸಹಾಯ ಮಾಡಿದರೆ, ಬೆಂಕಿಯಿಂದ ಪತಂಗಗಳು ನಾಶವಾಗುವಂತೆ ಈಶ್ವರನ ತೇಜಸ್ಸಿನಿಂದ ನಾಶವಾಗುವರು. ಆದಕಾರಣ ಎಲೈ ದೇವತೆಗಳೇ! ನೀವೆಲ್ಲರೂ ಈ ಯಜ್ಞಶಾಲೆಯನ್ನು ಬಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೊರಟುಹೋಗಿರಿ, ಇಲ್ಲದಿದ್ದರೆ ನಿಮಗೆ ತೊಂದರೆಯಾಗುವುದು.

'ಎಲೈ ದಕ್ಷನೆ, ನಿನಗೆ ಯಾರು ಸಹಾಯ ಮಾಡುವರೋ ಅವರು ಉರಿದುಹೋಗುತ್ತಾರೆ. ಇಲ್ಲಿರುವವರೆಲ್ಲರೂ ಯಜ್ಞದಿಂದ ಹೊರಟುಹೋಗಿರಿ. ಇಲ್ಲದಿದ್ದರೆ ನಿಮಗೆ ಪಾಪ ಆವರಿಸುವುದು. ಎಲೈ ವಿಷ್ಣು, ನೀನೂ ಸಹ ಈ ಯಜ್ಞಶಾಲೆಯಿಂದ ಹೊರಟುಹೋಗು. ಇಲ್ಲದಿದ್ದರೆ ನಿನಗೂ ನಾಶದ ಬಿಸಿ ತಟ್ಟುವುದು ಖಂಡಿತ. ಎಲೈ ಬ್ರಹ್ಮ, ನೀನು ಈಗಲೇ ಈ ಯಜ್ಞಶಾಲೆಯಿಂದ ಹೊರಡು ಇಲ್ಲದಿದ್ದರೆ ನೀನೂ ನಾಶವನ್ನು ಹೊಂದುತ್ತೀಯೆ' ಎಂದು ಆಕಾಶವಾಣಿ ಹೇಳಿತು. ಇದನ್ನು ಕೇಳಿದ ಇಂದ್ರಾದಿದೇವತೆಗಳು, ಮುನಿಗಳು ತುಂಬಾ ಆಶ್ಚರ್ಯಭರಿತರಾದರು ಎಂಬಲ್ಲಿಗೆ ಸತೀಖಂಡದ ಮೂವತ್ತೊಂದನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಮನೆಯಿಂದಲೇ ಕೆಲಸ ಮಾಡಿ ಹಣ ಸಂಪಾದಿಸಿ' ಎಂದು ದೇಶದ ಪ್ರಮುಖ ಪೆನ್ಸಿಲ್ ತಯಾರಿಕಾ ಸಂಸ್ಥೆಯಾದ ಹಿಂದೂಸ್ಥಾನ್ ಪೆನ್ಸಿಲ್ಸ್ ಪ್ರೈವೇಟ್ ಲಿಮಿಟೆಡ್ ಹೊರಡಿಸಿದೆ ಎನ್ನಲಾದ ಜಾಹೀರಾತುಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿವೆ. ನಟರಾಜ್ ಪೆನ್ಸಿಲ್ ಸಂಸ್ಥೆಯಲ್ಲಿ ಪೆನ್ಸಿಲ್ ಪ್ಯಾಕ್ ಮಾಡುವ ಉದ್ಯೋಗಗಳು ಖಾಲಿ ಇವೆ. ಮನೆಯಲ್ಲಿಯೇ ಕುಳಿತು ₹35,000ದ ವರೆಗೆ ಹಣ ಸಂಪಾದಿಸಬಹುದು ಎಂದು ಹಲವಾರು ಜಾಹೀರಾತುಗಳನ್ನು ನೀಡಲಾಗಿದೆ. ಜೊತೆಗೆ, ಸಂಪರ್ಕಕ್ಕಾಗಿ ದೂರವಾಣಿ ಸಂಖ್ಯೆಗಳನ್ನೂ ನೀಡಲಾಗಿದೆ. ಸಂಸ್ಥೆಯ 'ಅಪ್ಸರಾ ಪೆನ್ಸಿಲ್' ಪೊಟ್ಟಣಕ್ಕೆ ಪೆನ್ಸಿಲ್‌ಗಳನ್ನು ತುಂಬುತ್ತಿರುವ ವಿಡಿಯೊ ಜೊತೆ ಈ ಮಾಹಿತಿ ಹರಿಬಿಡಲಾಗಿದೆ.

ವೈರಲ್ ಆಗಿರುವ ಜಾಹೀರಾತುಗಳು ನಕಲಿ ಎಂದು ಹಿಂದೂಸ್ಥಾನ್ ಪೆನ್ಸಿಲ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೇ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಿದೆ. ನಟರಾಜ್ ಪೆನ್ಸಿಲ್‌ಗಳನ್ನು ಪ್ಯಾಕ್ ಮಾಡುವ ಕೆಲಸ ಲಭ್ಯ ಇದೆ ಎಂಬಂತಹ ಜಾಹೀರಾತುಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಇವು ನಕಲಿ ಜಾಹೀರಾತುಗಳಾಗಿದ್ದು, ಹಿಂದೂಸ್ಥಾನ್ ಪೆನ್ಸಿಲ್ಸ್ ಸಂಸ್ಥೆಗೆ ಸಂಬಂಧಿಸಿಲ್ಲ. ಸಂಸ್ಥೆಯ ಪೆನ್ಸಿಲ್‌ಗಳ ತಯಾರಿ ಮತ್ತು ಪ್ಯಾಕಿಂಗ್ ಸಂಪೂರ್ಣವಾಗಿ ಯಂತ್ರಗಳ ಮೂಲಕ ನಡೆಯುತ್ತದೆ. ಜನರ ಅಗತ್ಯವಿಲ್ಲ ಎಂದು ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜುಲೈ 19, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಷಷ್ಠಿ ಗಂ. 07-50 ನಕ್ಷತ್ರ: ಉತ್ತರಾಭಾದ್ರಾ ಗಂ. 12-12 ಯೋಗ: ಅತಿಗಂಡ ಗಂ. 13-43, ಕರಣ: ವಣಿಜ ಗಂ. 07-50, ಕರ್ಕಾಟಕ ಮಾಸದ 02 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 – 04:30
ಸೂರ್ಯೋದಯ : 06-16 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 19 ಜುಲ್‌ಹಿಜಾನ್
ಅದೃಷ್ಟ ಸಂಖ್ಯೆ : 6, 11

ಮೇಷ : ವೃತ್ತಿ ಪರವಾಗಿ ಇರುವ ಸ್ಪರ್ಧೆಗಳಲ್ಲಿ ಹೆಚ್ಚಿನ ಮುನ್ನಡೆ ನಿಮ್ಮ ಪಾಲಿಗೆ ಇರುವುದು. ಪೌಷ್ಟಿಕಾಂಶ ಆಹಾರ ಮತ್ತು ಆಯಾಸ ನೀಗುವಷ್ಟು ವಿಶ್ರಾಂತಿಯನ್ನು ತೆಗೆದುಕೊಳ್ಳುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ವೃಷಭ : ಉತ್ತಮ ವರಮಾನವನ್ನು ಪಡೆಯುವ ಮುಖ್ಯ ಆಕಾಂಕ್ಷೆಯಿಂದ ಸುಲಭದ ಮತ್ತು ಹತ್ತಿರದ ಕೆಲಸವನ್ನು ತಿರಸ್ಕರಿಸಬೇಡಿ. ನಿಶ್ಚಿತ ವರ-ವಧುಗಳ ಮಧ್ಯದಲ್ಲಿ ಸಣ್ಣ-ಪುಟ್ಟ ವಿಚಾರಗಳಿಗೆ ಭಿನ್ನಾಭಿಪ್ರಾಯ ಬರುವ ಸಂಭವವಿದೆ.

ಮಿಥುನ : ತಾಂತ್ರಿಕ ವಿದ್ಯಾಭ್ಯಾಸದ ಅಂತಿಮ ಹಂತ ತಲುಪಿದವರಿಗೆ ಉತ್ತಮ ಉದ್ಯೋಗ ದೊರಕುವುದು. ದುಬಾರಿ ಜೀವನ ಶೈಲಿಯನ್ನು ಇಷ್ಟ ಪಡುವ ನಿಮಗೆ ಅದಕ್ಕೆ ತಕ್ಕಂತಹ ಸರ್ವ ವಿಧದ ಸೌಕರ್ಯ ಸಿಗುವುದು.

ಕರ್ಕಾಟಕ : ವ್ಯವಹಾರದ ಪ್ರಯುಕ್ತ ಇರುವ ಪ್ರವಾಸವು ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿಯನ್ನೂ ಅನಿರೀಕ್ಷಿತ ಲಾಭವನ್ನೂ ತಂದು ಕೊಡುವುದು. ಹೊಸ ಸುದ್ದಿಯನ್ನು ಕೇಳುವಿರಿ.

ಸಿಂಹ : ನೂತನ ವ್ಯಕ್ತಿಯ ಪರಿಚಯವು ನಿಮ್ಮ ಸರ್ಕಾರಿ ಕೆಲಸಕ್ಕೆ ಅನುಕೂಲ ಉಂಟುಮಾಡುವವನಾಗಿರುತ್ತಾನೆ. ಲೆಕ್ಕ ಪತ್ರಗಳ ಪರಿಶೀಲನೆ ನಡೆಸುವಿರಿ. ಮಕ್ಕಳ ವಿಚಾರದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು ಉತ್ತಮ.

ಕನ್ಯಾ : ಸಂತಾನ ಅಪೇಕ್ಷಿಗಳಿಗೆ ಫಲ ಪ್ರಾಪ್ತಿಯಾದ ಕಾರಣದಿಂದಾಗಿ ಮನೆಯಲ್ಲಿ ಸಂತಸದ ವಾತಾವರಣ ಇರುವುದು. ವ್ಯವಹಾರದಲ್ಲಿ ಮುಂಗಡ ಹಣ ನೀಡಿ ಯಾವುದೇ ರೀತಿಯ ಒಪ್ಪಂದಗಳನ್ನು, ತೀರ್ಮಾನಗಳನ್ನು ಮಾಡಿಕೊಳ್ಳಬೇಡಿ.

ತುಲಾ : ವ್ಯವಹಾರದಲ್ಲಿ ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ನಿಮ್ಮ ಸಾಮರ್ಥ್ಯ ತೋರಿಸುವ ಬಗ್ಗೆ ನಿಮ್ಮ ಶ್ರಮವಿರಲಿ. ವಾತಾವರಣದ ಅನುಕೂಲತೆಯಿಂದ ಕೃಷಿ ಕಾರ್ಯಗಳು ಭರದಿಂದ ಸಾಗಲಿದೆ.

ವೃಶ್ಚಿಕ : ಹೆಚ್ಚಿನ ಜವಾಬ್ದಾರಿಯುತವಾದ ಹುದ್ದೆಯನ್ನು ಅಲಂಕರಿಸಲು ಅವಕಾಶ ಮತ್ತು ಆಸೆ ಇದ್ದರೂ ಸಾಮರ್ಥ್ಯದ ಕೊರತೆ ಕಾಣುವುದು. ಸಾವಧಾನದಿಂದ ದಿನದ ಕೆಲಸಗಳನ್ನು ಮಾಡಿ ಮುಗಿಸುವಿರಿ.

ಧನು : ನಿಮ್ಮ ಬುದ್ಧಿವಂತಿಕೆಗೆ ಅಕ್ಕಪಕ್ಕದವರಿಂದ ಅಥವಾ ನಿಮ್ಮ ಪಾಲುದಾರಕರಿಂದ ಉತ್ತಮ ಪ್ರೋತ್ಸಾಹ ಲಭಿಸಲಿದೆ. ನಿಮ್ಮ ಆಸೆ ಆಕಾಂಕ್ಷೆಗೂ ಪ್ರಚಲಿತ ವಿದ್ಯಮಾನಕ್ಕೂ ಇರುವ ವ್ಯತ್ಯಾಸಗಳ ಬಗ್ಗೆ ಚರ್ಚಿಸಿ.

ಮಕರ : ಹಣದ ವಿಚಾರದಲ್ಲಿ ಸರಿಯಾಗಿ ಲೆಕ್ಕ ಪತ್ರವನ್ನು ಕಾಪಾಡುವುದು ಅಗತ್ಯ. ನಿಮ್ಮ ನಿಷ್ಠೂರದ ನಡೆಯಿಂದಾಗಿ ಧನಾರ್ಜನೆಗೆ ಅಡ್ಡಿಯಾಗಲಿದೆ. ಆದಾಯದ ಬಹು ಮೊತ್ತ ಉಳಿತಾಯವಾಗಲಿದೆ. ಗಣಪತಿಯನ್ನು ಆರಾಧಿಸಿ

ಕುಂಭ : ನಿಮ್ಮ ಜೀವನಕ್ಕೆ ತತ್ವ ಆದರ್ಶಗಳ ಜೊತೆಗೆ ಹಿರಿಯರ ಅನುಭವ ಸಲಹೆಗಳನ್ನು ಅಳವಡಿಸಿಕೊಳ್ಳುವಿರಿ. ಬಾಕಿ ಇದ್ದಂತಹ ಹಣ ಕೈಸೇರಲಿದೆ. ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಬಹುಮಾನ ಸಿಗಲಿದೆ.

ಮೀನ : ಬಂಗಾರದ ಮೇಲೆ ಬಂಡವಾಳ ಹಾಕಲು ಉತ್ತಮ. ನಿಮ್ಮ ಚಾಣಾಕ್ಷತನ ನಿಮ್ಮ ಸರಳತೆಗೆ ಹಿರಿಯರಿಂದ ಮೆಚ್ಚುಗೆಯನ್ನು ಪಡೆಯುವಿರಿ. ಪತ್ರಿಕೋದ್ಯಮದವರಿಗೆ ಇಂದು ಶುಭ ದಿನ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಹುಟ್ಟು-ಸಾವುಗಳ ಲೆಕ್ಕ

ತೊಟ್ಟಿಲುಗಳೆಷ್ಟೊ ಮಸಣಗಳಷ್ಟು ಧರೆಯೊಳಗೆ
|ತೊಟ್ಟಿಲಿಗೆ ಹಬ್ಬ ಮಸಣವು ತೇಗುತಿರಲು ||
ಹುಟ್ಟಿದವರೆಲ್ಲ ಸಾಯದೆ ನಿಲ್ಲೆ, ಹೊಸತಾಗಿ |
ಹುಟ್ಟುವರ್ಗೆಡೆಯೆಲ್ಲಿ? – ಮಂಕುತಿಮ್ಮ ||

ಪದ-ಅರ್ಥ: ಮಸಣಗಳಷ್ಟು = ಮಸಣಗಳು + ಅಷ್ಟು,
ಹುಟ್ಟುವರ್ಗೆಡೆಯೆಲ್ಲಿ = ಹುಟ್ಟುವರ್ಗೆ(ಹುಟ್ಟುವವರಿಗೆ) + ಎಡೆ(ಸ್ಥಳ) + ಎಲ್ಲಿ.

ವಾಚ್ಯಾರ್ಥ: ಭೂಮಿಯಲ್ಲಿ ಎಷ್ಟು ತೊಟ್ಟಿಲುಗಳು ತೂಗುತ್ತವೋ ಅಷ್ಟೇ ಮಸಣಗಳೂ ಇವೆ. ಒಂದೆಡೆಗೆ ತೊಟ್ಟಿಲ ಹಬ್ಬವಾದರೆ ಮತ್ತೊಂದೆಡೆಗೆ ಮಸಣದ ಹೊಟ್ಟೆ ತುಂಬುತ್ತದೆ. ಹುಟ್ಟಿದವರೆಲ್ಲ ಸಾಯದೆ ಹೋದರೆ ಹೊಸದಾಗಿ ಹುಟ್ಟುವವರಿಗೆ ಜಾಗೆ ಎಲ್ಲಿದೆ?

ವಿವರಣೆ: ಮೊನ್ನೆಯ ದಿನ ಕುತೂಹಲದಿಂದ ಪ್ರಪಂಚದಲ್ಲಿ ದಿನವೂ ಎಷ್ಟು ಜನ ಹುಟ್ಟುತ್ತಾರೆ ಮತ್ತು ಎಷ್ಟು ಜನ ಸಾಯುತ್ತಾರೆ ಎಂಬ ಅಂಕಿ-ಸಂಖ್ಯೆಗಳನ್ನು ನೋಡುತ್ತಿದ್ದೆ. ಪ್ರಪಂಚದ ಇಂದಿನ ಜನಸಂಖ್ಯೆ ಸುಮಾರು ಏಳುನೂರಾ ಎಪ್ಪತ್ತು ಕೋಟಿ. ಅದರಲ್ಲಿ ಪ್ರತಿಶತ ನಲವತ್ತರಷ್ಟು ಜನ ಕೇವಲ ಚೀನಾ ಮತ್ತು ಭಾರತದಲ್ಲಿದ್ದಾರೆ. ಪ್ರತಿವರ್ಷ 14.5 ಕೋಟಿ ಹೊಸ ಜೀವಗಳು ಹುಟ್ಟುತ್ತವೆ ಮತ್ತು 5.8 ಕೋಟಿ ಸಾವುಗಳು ಸಂಭವಿಸುತ್ತವೆ. ಇನ್ನು ಪ್ರತಿದಿನದ ಲೆಕ್ಕ ನೋಡುವುದಾದರೆ ನಾಲ್ಕು ಲಕ್ಷ ಜನ ಹುಟ್ಟುತ್ತಾರೆ ಮತ್ತು 1.6 ಲಕ್ಷ ಜನ ಸಾಯುತ್ತಾರೆ. ಹೀಗೆಯೇ ಇದನ್ನು ಮುಂದುವರೆಸಿ ನೋಡಿದರೆ ಜಗತ್ತಿನಲ್ಲಿ ಪ್ರತಿ ಸೆಕೆಂಡಿಗೆ ನಾಲ್ಕು ಹುಟ್ಟು ಮತ್ತು ಎರಡು ಸಾವುಗಳು ಆಗುತ್ತಿವೆ. ಮೊದಲು ನಿಧಾನವಾಗಿ ಹೆಚ್ಚಾಗುತ್ತಿದ್ದ ಜನಸಂಖ್ಯೆ ಕಳೆದ 200 ವರ್ಷಗಳಲ್ಲಿ ಅತ್ಯಂತ ವೇಗವಾಗಿ ಬೆಳೆಯಿತು. ಜನಸಂಖ್ಯೆ ನೂರು ಕೋಟಿ ಆಗುವುದಕ್ಕೆ ಭೂಮಿಗೆ ಎರಡು ಲಕ್ಷ ವರ್ಷ ತೆಗೆದುಕೊಂಡರೆ ಮುಂದಿನ ಇನ್ನೂರು ವರ್ಷಗಳಲ್ಲಿ ಅದು ಏಳುನೂರು ಕೋಟಿಯಾಗಿದೆ ಇಂಗ್ಲೆಂಡಿನ ಖ್ಯಾತ ವಿಜ್ಞಾನಿ ಜೆ.ಎಚ್. ಫ್ರಿಮ್ಲಿನ್ ಹೇಳುತ್ತಾರೆ, 'ಪ್ರತಿವರ್ಷ ನಾವು 7.8 ಕೋಟಿ ಹೊಸ ಜನರನ್ನು ಭೂಮಿಗೆ ಸೇರಿಸುತ್ತಿದ್ದೇವೆ. 2025ಕ್ಕೆ ಪ್ರಪಂಚದ ಜನಸಂಖ್ಯೆ ಎಂಟುನೂರು ಕೋಟಿಯಾಗುತ್ತದೆ. ಇನ್ನು ಐವತ್ತು ವರ್ಷಗಳಲ್ಲಿ ಸುತ್ತಮುತ್ತಲಿನ ಗ್ರಹಗಳನ್ನು ತುಂಬುವಷ್ಟು ಜನರಾಗುತ್ತಾರೆ. ಆಮೇಲೆ ಮುಂದೇನು?'.ಇದು ವಿಜ್ಞಾನಿಗಳ ಲೆಕ್ಕಾಚಾರ. ಜೀವನಪದ್ಧತಿಗಳಿಂದ, ಔಷಧಿ ಮತ್ತು ಚಿಕಿತ್ಸೆಗಳ ವೃದ್ಧಿಯಿಂದ ಮನುಷ್ಯನ ಆಯುಪ್ರಮಾಣ ಹೆಚ್ಚಾಗಿದೆ. ಸಾವಿನ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ವಿಧಿಯ ಲೆಕ್ಕಾಚಾರವೇ ಬೇರೆ. ಅದು ಜನಸಂಖ್ಯೆಯನ್ನು ಕಡಿಮೆಮಾಡಲು ಹೊಸ ಹೊಸ ಯೋಜನೆಗಳನ್ನು ಹಾಕುತ್ತದೆ. ಹಿಂದೆ ಬರುತ್ತಿದ್ದ ಪ್ಲೇಗ್, ಕಾಲರಾ, ಫ್ಲೂ, ನ್ಯೂಮೋನಿಯಾಗಳಿಂದ ಸಾವಿರಾರು ಜನರು ಪ್ರಾಣ ಕಳೆದುಕೊಂಡರೆ, ಇತ್ತೀಚಿನ ಸುನಾಮಿ, ಭೂಕುಸಿತಗಳಿಂದ ಲೆಕ್ಕವಿಲ್ಲದಷ್ಟು ಸಾವು ನಡೆದವು. ಇತ್ತೀಚೆಗೆ ಬಂದ ಮಹಾಮಾರಿ ಕೊರೊನಾದಲ್ಲಿ 63.7 ಲಕ್ಷ ಜನ ಮರಣ ಹೊಂದಿದರು. ಮನುಷ್ಯ ಶಾಶ್ವತನಾಗಲು ಒದ್ದಾಡಿದಂತೆ ದೈವ ಜನಸಂಖ್ಯೆಯನ್ನು ಹತೋಟಿಯಲ್ಲಿಡಲು ನೋಡುತ್ತದೆ. ಕಗ್ಗ ಅದನ್ನು ಕಾವ್ಯಾತ್ಮಕವಾಗಿ ಹೇಳುತ್ತದೆ. ತೊಟ್ಟಿಲುಗಳು ಹೆಚ್ಚಾದಂತೆ ಸ್ಮಶಾನಗಳೂ ಹೆಚ್ಚಾಗುತ್ತಿವೆ. ಹಾಗೆ ಆಗಲೇಬೇಕಲ್ಲವೆ? ಬರೀ ಹೊಸ ಜೀವಗಳು ಬಂದು ಜನರು ಮರಣ ಹೊಂದದಿದ್ದರೆ ಮುಂದೆ ಬರುವ ಜೀವಗಳಿಗೆ ಸ್ಥಳವೆಲ್ಲಿದೆ?

ಪದಬಂಧ 5023

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆರಕ್ಷಕನು ಕಲಿತಿರುವ ವರ್ಣ(3)
3.ಸಾಧುವಿನಿಂದ ಉಂಟಾದ ಆನಂದ(3)
5.ಸರಕ್ಕನೆ ಧರಿಸಿರುವ ಮಾಲೆ(2)
6.ಸರ ಹಿಡಿದಿರುವ ಆರೋಹಿ(3)
7.ರಭಸವಾಗಿ ಹರಿಯುತ್ತಿರುವ ದ್ರವ!(2)
9.ಕಾವಿ ಬಣ್ಣದ ಬಟ್ಟೆ(3)
10.ದರಿಯ ಹತ್ತಿರ ಬಡವನಿದ್ದಾನಲ್ಲಾ!(3)
11.ನಗರದಲ್ಲಿ ಖರೀದಿಸಿದ ದಾಗೀನು(2)
13.ಪುಷ್ಪಗಳನ್ನು ಜೋಡಿಸಿಟ್ಟಿರುವ ಕರಂಡಕ(3)
15.ಯಜಮಾನನ ಸುತ್ತ ನೆರೆದಿರುವ ಮಂದಿ(2)
16.ತರುಲತೆಗಳನ್ನು ನೋಡುತ್ತಿರುವ ಯೌವ್ವನಿಗ!(3)
17.ನಯವಾಗಿ ಹೊಳೆಯುತ್ತಿರುವ ಅಕ್ಷಿ(3)

ಮೇಲಿಂದ ಕೆಳಕ್ಕೆ
1.ಚುಂಬಿಸಲು ಯೋಗ್ಯವಾಗಿರುವ ತುಟಿ(3)
2.ಬೊಕ್ಕಸದ ಹತ್ತಿರ ಅಸುರನಿದ್ದಾನೆ(3)
3.ಸಾರವಿರುವ ಲೌಕಿಕ ಜೀವನ(3)
4.ಕೊನೆಗೆ ಬೆಲೆಯಿಟ್ಟು ನೀಡಿರುವ ಸಲುಗೆ(3)
5.ಒಂದೇ ಕಾಲದಲ್ಲಿದ್ದವನು(5)
8.ಸಾಗರದ ಮೇಲೆ ಕೈಗೊಂಡಿರುವ ಪಯಣ(5)
12.ಗಣಿಯ ಹತ್ತಿರ ಕಲಿತಿರುವ ಲೆಕ್ಕಶಾಸ್ತ್ರ(3)
13.ಪುಷ್ಪದ ಶರವಿದು(3)
14.ನಿಧಾನವಾಗಿ ಗೊತ್ತಾದ ಸಾವು (3)
15.ಜನರ ಹತ್ತಿರ ಕಾಣಿಸಿಕೊಂಡಿರುವ ಸೇವಕ(3)



5022ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದಲುಮಾತು3.ಹೆಸರು5.ತಲೆಬರಹ7.ಷರಾ9.ಹಗಲು 11.ಕದ13.ವಿಮಾನಯಾನ15.ಅವನಿ16.ವರದಿಗಾರ

ಮೇಲಿಂದ ಕೆಳಕ್ಕೆ:
1.ಬದ್ಧದ್ವೇಷ2.ಮಾವು34.ಸನ್ನಾಹ6.ಬಯಲು8.ರಾಸು 9.ಹವನ10.ಶ್ಲೋಕ12.ದರಕಾರ13.ವಿಪ್ಲವ14.ನಗರ

ಸುಡೊಕು 5409

		3	1			4		
6				5				8
	4		8				6	
4			5		9	2		1
	2			4			5	
3		5	2		8		4	6
5	7					8		9
		1	4		5			
	8			7			3	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5408 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಷೇರುಪೇಟೆ ವಹಿವಾಟು 761



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,049
ಇಂದಿನ ಅಂತ್ಯ	16,278
▲	229
ದಿನದ ಗರಿಷ್ಠ	16,066

ವಿನಿಮಯ ದರ

$ ಡಾಲರ್	79.98
£ ಪೌಂಡ್	95.58
€ ಯುರೊ	81.14
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1635 (1635)
ಸೋಯಾ (ರಿಫೈನ್ಡ್)	₹1240 (1230)
ಸೂರ್ಯಕಾಂತಿ (ರಿಫೈನ್ಡ್)	₹1580 (1580)
ಪಾಮೋಲಿನ್	₹1185 (1155)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹222-501
ದ್ವಿತಳಿ (ಬಿ.ವಿ)	₹239-755

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹172
ಆರ್‌ಎಸ್‌ಎಸ್-5	₹163
ಗುಡ್ ಲಾಟ್	₹157

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1800
ಮಧ್ಯಮ	₹1000-1500
ಸಣ್ಣ	₹500-1000

₹ 80ರ ಮಟ್ಟ ಸ್ಪರ್ಶಿಸಿದ ರೂಪಾಯಿ

ಮುಂಬೈ (ಪಿಟಿಐ): ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಇದೇ ಮೊದಲ ಬಾರಿಗೆ ₹ 80ರ ಮಟ್ಟಕ್ಕೆ ಕುಸಿದಿತ್ತು. ನಂತರ ತುಸು ಚೇತರಿಸಿಕೊಂಡಿತು. ಸೋಮವಾರದ ವಹಿವಾಟಿನ ಕೊನೆಯಲ್ಲಿ ರೂಪಾಯಿಯು ಡಾಲರ್ ಎದುರು 16 ಪೈಸೆ ಕುಸಿದು ₹ 79.98ಕ್ಕೆ ತಲುಪಿದೆ.

ಕಚ್ಚಾ ತೈಲದ ಬೆಲೆ ಹೆಚ್ಚಾಗುತ್ತಿರುವುದು ಹಾಗೂ ವಿದೇಶಿ ಬಂಡವಾಳ ಹೊರ-ಹೋಗುತ್ತಿರುವುದು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣ ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಹಿರಿಯ ಸಂಶೋಧನಾ ವಿಶ್ಲೇಷಕ ಶ್ರೀರಾಮ್ ಅಯ್ಯರ್ ಹೇಳಿದ್ದಾರೆ.

2014ರ ನಂತರ ಹೆಚ್ಚಿದ ಕೃಷಿ ಸಾಲ ಮನ್ನಾ ಯೋಜನೆ • ಎಸ್‌ಬಿಐ ಸಂಶೋಧನಾ ವರದಿ

ಎನ್‌ಪಿಎ ಅಲ್ಲದ ಖಾತೆಗೂ ಸಾಲ ಮನ್ನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2018ರಲ್ಲಿ ಘೋಷಿಸಿದ್ದ ಸಾಲ ಮನ್ನಾ ಯೋಜನೆಯ ಪ್ರಯೋಜನವು ಶೇಕಡ 38ರಷ್ಟು ರೈತರಿಗೆ ಮಾತ್ರ ಲಭಿಸಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಸಂಶೋಧನಾ ವರದಿಯೊಂದು ಹೇಳಿದೆ.

ರಾಜ್ಯ ಸರ್ಕಾರವು 2018ರಲ್ಲಿ ₹ 44 ಸಾವಿರ ಕೋಟಿ ಮೊತ್ತದ ಸಾಲ ಮನ್ನಾ ಯೋಜನೆ ಪ್ರಕಟಿಸಿತು. ಈ ಯೋಜನೆಯ ಪ್ರಯೋಜನ ಪಡೆಯಲು ಒಟ್ಟು 50 ಲಕ್ಷ ರೈತರು ಅರ್ಹರಾಗಿದ್ದರು.

ದೇಶದಲ್ಲಿ 2014ರ ನಂತರ ಬೇರೆ ಬೇರೆ ಸಂದರ್ಭಗಳಲ್ಲಿ ಘೋಷಣೆಯಾದ ಕೃಷಿ ಸಾಲ ಮನ್ನಾ ಯೋಜನೆಯ ಪ್ರಯೋಜನ ಪಡೆಯಲು ಅರ್ಹವಾಗಿದ್ದ ಸಾಲದ ಖಾತೆಗಳ ಪೈಕಿ ಹೆಚ್ಚಿನವು 'ಎನ್‌ಪಿಎ' (ವಸೂಲಾಗದ) ಎಂದು ವರ್ಗೀಕೃತವಾಗಿರಲಿಲ್ಲ. ಕರ್ನಾಟಕ-ದಲ್ಲಿ ಈ ಯೋಜನೆಗೆ ಅರ್ಹವೆಂದು ಗುರುತಿಸಲಾಗಿದ್ದ 50 ಲಕ್ಷ ರೈತರ ಖಾತೆಗಳ ಪೈಕಿ ಶೇ 46ರಷ್ಟು ಖಾತೆಗಳು ಎನ್‌ಪಿಎ ಆಗಿರಲಿಲ್ಲ ಎಂದು ಎಸ್‌ಬಿಐ ಮುಖ್ಯ ಅರ್ಥಶಾಸ್ತ್ರಜ್ಞ ಸೌಮ್ಯಕಾಂತಿ ಘೋಷ್ ಸಿದ್ಧಪಡಿಸಿರುವ ವರದಿಯಲ್ಲಿ ವಿವರಿಸಲಾಗಿದೆ.

ಅಂದರೆ, ಎನ್‌ಪಿಎ ಅಲ್ಲದ, ಸಕಾಲದಲ್ಲಿ ಮರುಪಾವತಿ ಆಗುತ್ತಿದ್ದ ಸಾಲದ ಖಾತೆಗಳಿಗೂ ಮನ್ನಾ ಪ್ರಯೋಜನ ಸಿಕ್ಕಿದೆ.

'ಮತ್ತೆ ಮತ್ತೆ ಘೋಷಣೆಯಾಗುವ ಸಾಲ ಮನ್ನಾ ಯೋಜನೆಗಳು ಯಾರ ಹಿತಾಸಕ್ತಿಗೆ ಪೂರಕವಾಗಿವೆ ಎಂಬ ಪ್ರಶ್ನೆ ಇದೆ. ಸಾಲ ಮನ್ನಾ ಯೋಜನೆಗಳು ವಾಸ್ತವದಲ್ಲಿ ಆತ್ಮಘಾತುಕ' ಎಂದು ವರದಿಯಲ್ಲಿ ಹೇಳಲಾಗಿದೆ.

ಬೇರೆ ಬೇರೆ ರಾಜ್ಯ ಸರ್ಕಾರಗಳು ರೈತರ ಸಾಲ ಮನ್ನಾ ಮಾಡುವುದು 2014ರ ನಂತರದಲ್ಲಿ ಹಿಂದೆಂದೂ ಕಾಣದ ಪ್ರಮಾಣದಲ್ಲಿ ಹೆಚ್ಚಳವಾಗಿದೆ. 2014ರ ನಂತರದಲ್ಲಿ ರಾಜ್ಯ ಸರ್ಕಾರಗಳು ಒಟ್ಟು ₹ 2.52 ಲಕ್ಷ ಕೋಟಿ ಮೊತ್ತದ ಕೃಷಿ ಸಾಲ ಮನ್ನಾ ಯೋಜನೆ ಘೋಷಣೆ ಮಾಡಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯು ಕೃಷಿ ಸಾಲ ಮನ್ನಾಕ್ಕೆ ಸಂಬಂಧಿಸಿದ ಒಟ್ಟು ಹತ್ತು ಯೋಜನೆಗಳನ್ನು ವಿಶ್ಲೇಷಣೆಗೆ ಆಯ್ಕೆ ಮಾಡಿಕೊಂಡಿತ್ತು.

ಸಾಲ ಮನ್ನಾ ಯೋಜನೆಯ ಪ್ರಯೋಜನಕ್ಕೆ ಅರ್ಹರಾಗಿದ್ದ ಒಟ್ಟು 3.7 ಕೋಟಿ ರೈತರ ಪೈಕಿ ಶೇ 50ರಷ್ಟು ಮಂದಿಗೆ ಮಾತ್ರ ಪ್ರಯೋಜನ ಸಿಕ್ಕಿದೆ. ಕೃಷಿ ಸಾಲ ಮನ್ನಾ ಯೋಜನೆಗಳು ಸಾಲ ಮರುಪಾವತಿಯ ಶಿಸ್ತನ್ನು ಕೆಲವು ಕಡೆಗಳಲ್ಲಿ ಹಾಳು ಮಾಡಿವೆ. ಇದರಿಂದಾಗಿ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಮತ್ತೆ ಸಾಲ ನೀಡಲು ಹಿಂದೇಟು ಹಾಕುತ್ತಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮುಖ್ಯಾಂಶಗಳು

- ಸಾಲ ಮನ್ನಾ ಯೋಜನೆಗಳು ವಾಸ್ತವದಲ್ಲಿ ಆತ್ಮಘಾತುಕ: ವರದಿ
- ಸಾಲ ಮನ್ನಾ: ಒಟ್ಟು 10 ಯೋಜನೆಗಳ ವಿಶ್ಲೇಷಣೆ
- ಸಾಲ ಮರುಪಾವತಿ ಶಿಸ್ತು ಹಾಳು ಮಾಡಿದ ಯೋಜನೆಗಳು

ಸಾಲ ಮನ್ನಾ: ಒಂದಿಷ್ಟು ವಿವರ



ಸುದ್ದಿ 2 ನಿಮಿಷ

ಸೆನ್ಸೆಕ್ಸ್ 760 ಅಂಶ ಜಿಗಿತ

ಮುಂಬೈ (ಪಿಟಿಐ): ಮಾಹಿತಿ ತಂತ್ರಜ್ಞಾನ (ಐ.ಟಿ), ಬ್ಯಾಂಕಿಂಗ್ ಹಾಗೂ ತೈಲ ಮತ್ತು ಅನಿಲ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿ ಮಾಡಿದ ಪರಿಣಾಮವಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇಕಡ 1ಕ್ಕೂ ಹೆಚ್ಚಿನ ಗಳಿಕೆ ಕಂಡುಕೊಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 761 ಅಂಶ ಹೆಚ್ಚಾಗಿ 54,521 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 229 ಅಂಶ ಏರಿಕೆ ಕಂಡು 16,278 ಅಂಶಗಳಿಗೆ ಏರಿಕೆ ಕಂಡಿತು.

'ಇನ್ಫೊಸಿಸ್, ಟೆಕ್ ಮಹೀಂದ್ರದಂತಹ ದೊಡ್ಡ ಕಂಪನಿಗಳ ಗಳಿಕೆಯು ಷೇರುಪೇಟೆ ವಹಿವಾಟು ಏರಿಕೆಗೆ ಕಾರಣವಾದವು' ಎಂದು ಆನಂದ ರಾಠಿ ಕಂಪನಿಯ ಈಕ್ವಿಟಿ ಸಂಶೋಧನೆಯ ಮುಖ್ಯಸ್ಥ ನರೇಂದ್ರ ಸೋಲಂಕಿ ತಿಳಿಸಿದ್ದಾರೆ.



'ಅಮೆರಿಕದ ರಿಟೇಲ್ ಮಾರಾಟವು ಹೆಚ್ಚಾಗಿರುವು-ದರಿಂದ ಅಲ್ಲಿನ ಕೇಂದ್ರೀಯ ಬ್ಯಾಂಕ್ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿ ದರ ಏರಿಕೆ ಮಾಡುವ ಆತಂಕ ಕಡಿಮೆ ಆಗಿದೆ. ಇದು ಸಕಾರಾತ್ಮಕ ವಹಿವಾಟಿಗೆ ಕಾರಣ ಆಯಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಎರಡು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 4.73 ಲಕ್ಷ ಕೋಟಿಯಷ್ಟು ವೃದ್ಧಿಯಾಗಿದೆ. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 255.39 ಲಕ್ಷ ಕೋಟಿಗೆ ತಲುಪಿದೆ.

ಕ್ರಿಪ್ಟೊ ನಿರ್ಬಂಧಿಸಲು ಆರ್‌ಬಿಐ ಸಲಹೆ: ಸಚಿವೆ ನಿರ್ಮಲಾ

ನವದೆಹಲಿ (ಪಿಟಿಐ): ಕ್ರಿಪ್ಟೊಕರೆನ್ಸಿಗಳು ದೇಶದ ಹಣಕಾಸು ಮತ್ತು ಆರ್ಥಿಕ ಸ್ಥಿರತೆಯನ್ನು ಹಾಳುಮಾಡುವ ಸಾಮರ್ಥ್ಯ ಹೊಂದಿರುವ ಕಾರಣ ಅವುಗಳನ್ನು ನಿಷೇಧಿಸಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಲೋಕಸಭೆಗೆ ತಿಳಿಸಿದ್ದಾರೆ.

ಕ್ರಿಪ್ಟೊಕರೆನ್ಸಿ ಎಂಬುದು ಒಂದು ಕರೆನ್ಸಿಯೇ ಅಲ್ಲ ಎಂದು ಆರ್‌ಬಿಐ ಹೇಳಿದೆ. ಏಕೆಂದರೆ, ಆಧುನಿಕ ಕಾಲದ ಕರೆನ್ಸಿಗಳನ್ನು ಕೇಂದ್ರೀಯ ಬ್ಯಾಂಕ್ ಅಥವಾ ಕೇಂದ್ರ ಸರ್ಕಾರದಿಂದ ಹೊರಡಿಸಬೇಕಾಗುತ್ತದೆ ಎಂದು ನಿರ್ಮಲಾ ಅವರು ವಿವರಣೆ ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-11000
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಅಡಿಕೆ	
ಕುಮಟ	
ಚಿಪ್ಪು	26589-31089
ಕೋಕ	18089-30019
ಹಳೆಚಾಲಿ	42569-46969
ಹೊಸಚಾಲಿ	36089-39019
ಸಾಗರ	
ಬಿಳಿಗೋಟು	19699-29299
ಚಾಲಿ	30989-37112
ಕೋಕ	10299-31299
ಕೆಂಪುಗೋಟು	23899-37399
ರಾಶಿ	42690-49769
ಸಿಪ್ಪೆಗೋಟು	16210-20610
ಶಿವಮೊಗ್ಗ	
ಬೆಟ್ಟೆ	51969-53700
ಗೊರಬಲು	18100-37698
ರಾಶಿ	46069-49449
ಸರಕು	56469-78396
ಸಿದ್ದಾಪುರ	
ಬಿಳಿಗೋಟು	26112-32390
ಚಾಲಿ	35899-38699
ಕೋಕ	23699-32119
ಕೆಂಪುಗೋಟು	28199-32499
ರಾಶಿ	45099-47699
ಶಿರಸಿ	
ಬೆಟ್ಟೆ	38199-46892
ಬಿಳಿಗೋಟು	21119-33599
ಚಾಲಿ	34599-39111
ರಾಶಿ	41699-48689
ಯಲ್ಲಾಪುರ	
ಬಿಳಿಗೋಟು	26899-31499
ಚಾಲಿ	34319-38599
ಕೋಕ	18899-29012
ಕೆಂಪುಗೋಟು	28619-34839

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15650	15400	15700	207.35
ಎಸಿ	8400	8400	8550	
ಆರ್‌ಪಿ	9400	9500	9500	ಲಂಡನ್
ಆರ್‌ಸಿ	4700	4500	4550	1981 ಡಾಲರ್ಸ್

ಸಾಗಾಟಕ್ಕೆ ಮಳೆ ಅಡ್ಡಿ: ಖರೀದಿಗೆ ವರ್ತಕರ ನಿರಾಸಕ್ತಿ

ಮಳೆ: ಇಳಿಕೆ ಕಂಡ ಟೊಮೆಟೊ ದರ

ಪ್ರಜಾವಾಣಿ ವಾರ್ತೆ

ಕೋಲಾರ: ತಿಂಗಳ ಹಿಂದಷ್ಟೇ ಉತ್ತಮ ದರ ದೊರೆತ ಕಾರಣ ಹೆಚ್ಚಾಗಿ ಟೊಮೆಟೊ ಬೆಳೆದಿದ್ದ ರೈತರು ಜಿಟಿಜಿಟಿ ಮಳೆಯಿಂದ ಟೊಮೆಟೊ ದರ ಹಾಗೂ ಗುಣಮಟ್ಟ ಕುಸಿದು ಕಂಗಾಲಾಗಿದ್ದಾರೆ.

ಬೇಡಿಕೆಗಿಂತ ಅಧಿಕ ಟೊಮೆಟೊ ಮಾರುಕಟ್ಟೆಗೆ ಬರುತ್ತಿದ್ದು ಖರೀದಿಗೆ ಹೊರಗಿನ ವ್ಯಾಪಾರಸ್ಥರು ಆಸಕ್ತಿ ತೋರುತ್ತಿಲ್ಲ. ರಾಜ್ಯ ಹಾಗೂ ಹೊರ-ರಾಜ್ಯಗಳಲ್ಲಿ ಹೆಚ್ಚು ಮಳೆ ಸಾಗಾಟಕ್ಕೆ ಅಡ್ಡಿಯಾಗಿದೆ. ನಿತ್ಯ ಬರುವ ಲಾರಿಗಳ ಸಂಖ್ಯೆ 140 ರಿಂದ 80ಕ್ಕೆ ಇಳಿದಿದೆ.

> **ಕೆ.ಜಿಗೆ ಕನಿಷ್ಠ ₹10 ಬೆಂಬಲ ಬೆಲೆ ನೀಡಿ ರೈತರನ್ನು ಸಂಕಷ್ಟದಿಂದ ಪಾರು ಮಾಡಬೇಕು. ಎಪಿಎಂಸಿಯಲ್ಲಿ ಜಾಗದ ಕೊರತೆ ಇದ್ದು, ಅದನ್ನು ಬಗೆಹರಿಸಬೇಕು**
> **ಎ.ನಳಿನಿಗೌಡ, ಜಿಲ್ಲಾ ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ**

'ಜಿಲ್ಲೆಯಲ್ಲಿ ಜಿಟಿಜಿಟಿ ಮಳೆಯ ಕಾರಣ ಟೊಮೆಟೊ ಮೇಲೆ ಚುಕ್ಕಿ ಮೂಡುತ್ತಿದೆ. ಲಾರಿಗೆ ಲೋಡ್ ಮಾಡಿದ ಗುಣಮಟ್ಟದ ಟೊಮೆಟೊ 15ರಿಂದ 20 ದಿನ ಬಾಳಿಕೆ ಬರುತ್ತದೆ. ಆದರೆ, ಈಗ ಮಾರುಕಟ್ಟೆಗೆ ಬರುತ್ತಿರುವ ಟೊಮೆಟೊ ಬೇಗನೇ ನೀರು ಬಿಡುತ್ತಿದ್ದು, 3- 4 ದಿನಗಳಲ್ಲಿ ಕೆಟ್ಟು ಹೋಗುತ್ತಿದೆ. ಮಳೆಯಿಂದ ಕೆಲವೆಡೆ ಹೆದ್ದಾರಿ ಬಂದ್ ಆಗಿದೆ, ಸುತ್ತುಬಳಸಿ ಸಾಗಿಸಲು ಸಮಯ ಹಿಡಿಯುತ್ತಿದೆ. ಹೀಗಾಗಿ, ಖರೀದಿಗೆ ವ್ಯಾಪಾರಸ್ಥರು ಆಸಕ್ತಿ ತೋರಿಸುತ್ತಿಲ್ಲ' ಎಂದು ಕೋಲಾರ ಎಪಿಎಂಸಿ ಕಾರ್ಯದರ್ಶಿ ವಿಜಯಲಕ್ಷ್ಮಿ 'ಪ್ರಜಾವಾಣಿ'ಗೆ ತಿಳಿಸಿದರು.

30ಗಳಲ್ಲಿ ಭಾರಿ ದರ ಕುಸಿತ

ಇಲ್ಲಿನ ಎಪಿಎಂಸಿಯಲ್ಲಿ ಸೋಮವಾರ ಹರಾಜಿನಲ್ಲಿ 15 ಕೆ.ಜಿ ಬಾಕ್ಸ್ ಟೊಮೆಟೊ ಕನಿಷ್ಠ ₹50ರಿಂದ ₹200ಕ್ಕೆ ಮಾರಾಟವಾಗಿದೆ. ದರ ದಿನೇ ದಿನೇ ಕುಸಿಯುತ್ತಲೇ ಸಾಗಿದೆ. ತಿಂಗಳ ಹಿಂದೆ ಬಾಕ್ಸ್‌ಗೆ ಕನಿಷ್ಠ ₹500 ರಿಂದ ₹ 1,000ವರೆಗೂ ಇತ್ತು. ಹರಾಜಿನಲ್ಲಿ ಗುಣಮಟ್ಟವಿಲ್ಲದ ಟೊಮೆಟೊ ಖರೀದಿಸಲು ಯಾರೂ ಮುಂದೆ ಬರುತ್ತಿಲ್ಲ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಧಾರಣೆ

ಶೇಂಗಾ
18-7-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1645 (1645)
ಒಂದು ವಾರದ ಡೆಲಿವರಿ	1640 (1640)
ಸೋಯಾ ಕಚ್ಚಾ	1170 (1140)
ಪಾಮ್ ವಾರದ ಡೆಲಿವರಿ	1183 (1153)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,550 (50,250)
ಬೆಳ್ಳಿ ಕೆ.ಜಿ 55,650 (55,100)

ಆವರಣದಲ್ಲಿ ಶನಿವಾರದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಾಳೆ ನೂತನ ಅಧ್ಯಕ್ಷರ ಆಯ್ಕೆ: ವಿಕ್ರಮಸಿಂಘೆ ಸೇರಿ ನಾಲ್ವರು ಕಣದಲ್ಲಿ

ಶ್ರೀಲಂಕಾದಲ್ಲಿ ತುರ್ತು ಸ್ಥಿತಿ ಘೋಷಣೆ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ತಕ್ಷಣದಿಂದಲೇ ಜಾರಿಗೆ ಬರುವಂತೆ ದೇಶವ್ಯಾಪಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ನೂತನ ಅಧ್ಯಕ್ಷರ ಆಯ್ಕೆಗೆ ಇದೇ 20ರಂದು ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಹೊರಬಿದ್ದಿದೆ.

ಹಂಗಾಮಿ ಅಧ್ಯಕ್ಷರಾಗಿರುವ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಈ ಬಗ್ಗೆ ಸೋಮವಾರ ಆದೇಶ ಹೊರಡಿಸಿದ್ದಾರೆ. ಜನಾಕ್ರೋಶಕ್ಕೆ ಮಣಿದು ಅಧ್ಯಕ್ಷ ಸ್ಥಾನಕ್ಕೆ ಗೋಟಬಯ ರಾಜಪಕ್ಸ ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಕ್ಕೆ ಈಗ ಚುನಾವಣೆ ನಡೆಯಲಿದೆ.

225 ಸದಸ್ಯ ಬಲದ ಸಂಸತ್ತು ನೂತನ ಅಧ್ಯಕ್ಷರ ಆಯ್ಕೆಗೆ ಇದೇ 20ರಂದು ಸಭೆ ಸೇರಲಿದೆ. ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಮಂಗಳವಾರ ಆರಂಭವಾಗಲಿದೆ. ಹೊಸ ಅಧ್ಯಕ್ಷರ ಅಧಿಕಾರವಧಿ ನವೆಂಬರ್ 2024ರವರೆಗೆ ಇರಲಿದೆ.

ತುರ್ತು ಪರಿಸ್ಥಿತಿ ಘೋಷಣೆಯೊಂದಿಗೆ ಭದ್ರತಾ ಪಡೆಗಳಿಗೆ ಬಂಧಿಸುವ, ಜಪ್ತಿ ಮಾಡುವ ಮತ್ತು ಯಾವುದೇ ವ್ಯಕ್ತಿಗೆ ಸೇರಿದ ಸ್ಥಳದಲ್ಲಿ ತಪಾಸಣೆ ನಡೆಸುವ ಮುಕ್ತ ಅಧಿಕಾರ ಸಿಗಲಿದೆ. ಚುನಾವಣೆ ಹಿನ್ನೆಲೆಯಲ್ಲಿ ಸಂಸತ್ ಸದಸ್ಯರಿಗೆ ಬೆದರಿಕೆ ಒಡ್ಡುವವರ ಮೇಲೆ ಕಣ್ಗಾವಲು ಇಡಬೇಕು ಎಂದು ಸರ್ಕಾರ ಪೊಲೀಸರಿಗೆ ಸೂಚನೆ ನೀಡಿದೆ.

ನೂತನ ಅಧ್ಯಕ್ಷ ಸ್ಥಾನದ ಸ್ಪರ್ಧೆಯಲ್ಲಿ ವಿಕ್ರಮಸಿಂಘೆ ಸೇರಿದಂತೆ ಕನಿಷ್ಠ ನಾಲ್ವರು ಕಣದಲ್ಲಿದ್ದಾರೆ. ಆಡಳಿತಾ-ರೂಢಪಕ್ಷ ಎಸ್‌ಎಲ್‌ಪಿಪಿ ಈಗಾಗಲೇ ವಿಕ್ರಮಸಿಂಘೆ ಅವರಿಗೆ ಬೆಂಬಲ ಘೋಷಿಸಿದೆ. ವಿರೋಧಪಕ್ಷದ ನಾಯಕ ಸಜಿತ್ ಪ್ರೇಮದಾಸ, ಮಾರ್ಕಿಸ್ಟ್ ಜನತಾ ವಿಮುಕ್ತಿ ಪೆರಮುನಾ (ಜೆವಿಪಿ) ನಾಯಕ ಅರುಣ ಕುಮಾರ ದಿಸ್ಸಾನಾಯಕೆ ಮತ್ತು ಎಸ್‌ಎಲ್‌ಪಿಪಿಯಿಂದ ಪ್ರತ್ಯೇಕಗೊಂ-ಡಿರುವ ಗುಂಪಿನ ನಾಯಕ ಡುಲ್ಲಾಸ್ ಅಲಹಪ್ಪೆರುಮಾ ಅವರು ಸ್ಪರ್ಧೆಯಲ್ಲಿ ಇರುವ ಇತರರು.

ಗೋಟಬಯ ರಾಜೀನಾಮೆ ನಂತರ, ಕಳೆದ ಶುಕ್ರವಾರ ಪ್ರಧಾನಿ, 73 ವರ್ಷದ ರಾನಿಲ್ ವಿಕ್ರಮಸಿಂಘೆ ಅವರು ಹಂಗಾಮಿ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ದೇಶದಿಂದ ಪಲಾಯನ ಮಾಡಿರುವ ಗೋಟಬಯ ಸದ್ಯ ಸಿಂಗಪುರದಲ್ಲಿ ಇದ್ದಾರೆ.

> **ಇದು ಪ್ರಜಾಪ್ರಭುತ್ವ ವಿರೋಧಿ ಕ್ರಮ. ಶಾಂತಿ ಪ್ರಿಯರಾದ ಜನತೆ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರತಿಭಟನೆ ನಡೆಸುವ ಹಕ್ಕು ಹೊಂದಿದ್ದಾರೆ. ಪ್ರಜಾಪ್ರಭುತ್ವ ಅಮರ**
> **ಸಜಿತ್ ಪ್ರೇಮದಾಸ,** ವಿರೋಧ ಪಕ್ಷದ ನಾಯಕ

> **ಅಧಿಕಾರ ಕಬಳಿಕೆಯು ಶ್ರೀಲಂಕಾದಲ್ಲಿ ಕೆಟ್ಟ ಅಂತ್ಯ ಕಾಣಲಿದೆ**
> **ಎಂ.ಎ.ಸುಮನ್‌ತೀರನ್,** ತಮಿಳು ರಾಷ್ಟ್ರೀಯ ಮೈತ್ರಿಕೂಟದ (ಟಿಎನ್‌ಎ) ಸಂಸದ

ಅಧ್ಯಕ್ಷ ಗೋಟಬಯ ರಾಜೀನಾಮೆ ಕೊಡುವಂತೆ ಒತ್ತಡ ಹೇರುವಲ್ಲಿ ಯಶಸ್ವಿಯಾದ ಶ್ರೀಲಂಕಾದ ಹೋರಾಟಗಾರರು ಈಗ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದು, ರಾಜೀನಾಮೆಗೆ ಆಗ್ರಹಿಸುತ್ತಿದ್ದಾರೆ —ಎಪಿ ಚಿತ್ರ

ಹೊಸ 'ಮರ್‌ಬರ್ಗ್' ವೈರಾಣು ಘಾನಾದಲ್ಲಿ ಪತ್ತೆ: ಜಿಎಚ್‌ಎಸ್

ಡಾಕರ್, ಘಾನಾ (ರಾಯಿಟರ್ಸ್): 'ಮರ್‌ಬರ್ಗ್' ವೈರಾಣುವಿನ ಮೊದಲ ಪ್ರಕರಣ ಪಶ್ಚಿಮ ಆಫ್ರಿಕಾ ಖಂಡದ ಘಾನಾದಲ್ಲಿ ಪತ್ತೆಯಾಗಿದೆ. ಎಬೊಲಾ ಮಾದರಿಯ ಈ ವೈರಾಣು ಹೆಚ್ಚು ಸೋಂಕುಕಾರಕವಾದುದು ಎಂದು ಘಾನಾ ಪ್ರತಿಕ್ರಿಯಿಸಿದೆ.



ಸೋಂಕು ಪತ್ತೆಯಾಗಿದ್ದ ಇಬ್ಬರು ರೋಗಿಗಳು ಮೃತಪಟ್ಟಿದ್ದಾರೆ.

ದಾಕರ್‌ನ ಪಸ್ತೇರ್ ಇನ್‌ಸ್ಟಿ-ಟ್ಯೂಟ್‌ನಲ್ಲಿ ಹೆಚ್ಚಿನ ತಪಾಸಣೆಯ ನಂತರ ದೃಢಪಡಿಸಿಕೊಳ್ಳಲಾಗಿದೆ ಎಂದು ಘಾನಾ ಆರೋಗ್ಯ ಸೇವೆಯು (ಜಿಎಚ್‌ಎಸ್) ಹೇಳಿಕೆ ನೀಡಿದೆ.

ಮರ್‌ಬರ್ಗ್ ವೈರಾಣು ಜುಲೈ 10ರಂದು ಪತ್ತೆಯಾಗಿತ್ತು. ಆದರೆ, ದೃಢಪಡಿಸಿಕೊಳ್ಳಲು ಪ್ರಯೋಗಾಲಯದಲ್ಲಿ ಹೆಚ್ಚಿನ ತಪಾಸಣೆ ನಡೆಸಬೇಕಿತ್ತು. ಸೋಂಕು ಪೀಡಿತರಾಗಿದ್ದ ಇಬ್ಬರು ರೋಗಿಗಳಿಗೆ ಜ್ವರ, ನೆಗಡಿ, ವಾಂತಿ ಲಕ್ಷಣಗಳು ಕಂಡುಬಂದಿದ್ದವು ಎಂದು ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯುಎಚ್‌ಒ) ಪ್ರತಿಕ್ರಿಯಿಸಿದೆ.

1967ರ ಬಳಿಕ ಮರ್‌ಬರ್ಗ್ ಸೋಂಕು ಪ್ರಕರಣಗಳು ಸುಮಾರು 12 ಬಾರಿ, ಬಹುತೇಕ ಆಫ್ರಿಕಾ ಪ್ರಾಂತ್ಯದಲ್ಲೇ ಕಾಣಿಸಿಕೊಂಡಿದೆ. ಈ ಹಿಂದೆ ರೋಗಿಯ ಸಾವಿನ ಸಾಧ್ಯತೆಗಳು ಶೇ 24 ರಿಂದ 88ರಷ್ಟಿದ್ದವು. ಮೊದಲು ಬಾವಲಿಗಳಿಂದ ತಗುಲುವ ಸೋಂಕು, ನಂತರ ಪರಸ್ಪರ ಸಂಪರ್ಕಕ್ಕೆ ಬರುವ ಮನುಷ್ಯರಿಗೆ ಹರಡಲಿದೆ ಎಂದು ಡಬ್ಲ್ಯುಎಚ್‌ಒ ತಿಳಿಸಿದೆ.

'ಬೂಸ್ಟರ್ ಡೋಸ್ ಅಗತ್ಯ'

ವಾಷಿಂಗ್ಟನ್ (ಪಿಟಿಐ): ಕೋವಿಡ್‌ನಿಂದ ರಕ್ಷಣೆಗೆ ಪಡೆದಿರುವ ಲಸಿಕೆಯ ಪರಿಣಾಮ ಅಲ್ಪಾವಧಿ ಮಾತ್ರ. ಹೆಚ್ಚಿನ ಸುರಕ್ಷತೆಗೆ ಬೂಸ್ಟರ್ ಡೋಸ್ ಪಡೆಯುವುದು ಅಗತ್ಯ ಎಂದು ನೂತನ ಅಧ್ಯಯನ ತಿಳಿಸಿದೆ.

ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ನಿಯತಕಾಲಿಕದಲ್ಲಿ ನೂತನ ಅಧ್ಯಯನ ವರದಿ ಪ್ರಕಟವಾಗಿದೆ. ಸೋಂಕಿನ ಪರಿಣಾಮ ಭಿನ್ನ. ಲಸಿಕೆ ನಂತರವೂ ಸೋಂಕಿಗೆ ಒಳಗಾಗುವ ಸಾಧ್ಯತೆಗಳು ಆತ ಪಡೆದಿರುವ ಲಸಿಕೆಯ ಮಾದರಿಯನ್ನು ಆಧರಿಸಿರುತ್ತದೆ ಎಂದಿದೆ.

ಈ ಅಧ್ಯಯನದ ಪ್ರಕಾರ, ಫೈಜರ್ ಮತ್ತು ಮೊಡರ್ನಾ ಲಸಿಕೆಯು ಜಾನ್ಸನ್ ಅಂಡ್ ಜಾನ್ಸನ್ ಮತ್ತು ಆಸ್ಟ್ರಾ ಜೆನಿಕಾ ಲಸಿಕೆಗೆ ಹೋಲಿಸಿದಲ್ಲಿ ಹೆಚ್ಚು ಪರಿಣಾಮವು ಬೀರಲಿದೆ ಎಂದು ತಿಳಿಸಿದೆ.

ರಷ್ಯಾ ಪರ ಕೆಲಸ, ಭದ್ರತಾ ಪಡೆ ಮುಖ್ಯಸ್ಥ ವಜಾ

ಕೀವ್ (ರಾಯಿಟರ್ಸ್): ರಷ್ಯಾದ ಜೊತೆಗೂಡಿ ನೂರಾರು ರಾಜದ್ರೋಹ ಪ್ರಕರಣಗಳನ್ನು ದಾಖಲಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಆಂತರಿಕ ಭದ್ರತಾ ಸೇವೆ ಮತ್ತು ನ್ಯಾಯಾಂಗದ ಮುಖ್ಯಸ್ಥನನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ವಜಾಗೊ-ಳಿಸಿದ್ದಾರೆ.

ರಷ್ಯಾ ಆಕ್ರಮಿತ ಉಕ್ರೇನ್‌ನ ಭಾಗದಲ್ಲಿ ಆಂತರಿಕ ಭದ್ರತಾ ವ್ಯವಸ್ಥೆಯ 60ಕ್ಕೂ ಹೆಚ್ಚು ಅಧಿಕಾರಿಗಳು ರಷ್ಯಾ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಕಾನೂನು ಜಾರಿ ಅಧಿಕಾರಿಗಳ ವಿರುದ್ಧ 651ಕ್ಕೂ ಅಧಿಕ ರಾಜದ್ರೋಹದ ಪ್ರಕರಣ ದಾಖಲಿಸಲಾಗಿದೆ ಎಂದಿದ್ದಾರೆ.

ರಾಷ್ಟ್ರೀಯ ಭದ್ರತೆಗೆ ಕಾರ್ಯನಿರ್ವಹಿಸುತ್ತಿರುವವರ ವಿರುದ್ಧ ಇಷ್ಟು ಪ್ರಮಾಣದಲ್ಲಿ ಪ್ರಕರಣ ದಾಖಲಿಸುವುದು, ಸಂಬಂಧಿತ ಅಧಿಕಾರಿಗಳ ಗಂಭೀರತೆಯನ್ನೇ ಪ್ರಶ್ನಾರ್ಹವಾಗಿಸಿದೆ. ಪ್ರತಿ ಪ್ರಶ್ನೆಗೂ ಸೂಕ್ತ ಉತ್ತರ ಸಿಗಲಿದೆ ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ.

ಇನ್ನೊಂದೆಡೆ, ಉಕ್ರೇನ್ ವಿರುದ್ಧ ರಷ್ಯಾ ತನ್ನ ಸೇನಾ ಕಾರ್ಯಾಚರಣೆಯ-ನ್ನು ಇನ್ನಷ್ಟು ಚುರುಕುಗೊಳಿಸಿದೆ.

ರಾಜಧಾನಿ ಕೀವ್ ವಶಕ್ಕೆ ಪಡೆಯಲು ವಿಫಲವಾಗಿರುವ ರಷ್ಯನ್ ಪಡೆಗಳು, ಇನ್ನಷ್ಟು ಶೆಲ್, ಕ್ಷಿಪಣಿ ದಾಳಿ ನಡೆಸಿವೆ.

'ರಷ್ಯಾ 3,000ಕ್ಕೂ ಹೆಚ್ಚು ಕ್ಷಿಪಣಿ ದಾಳಿ ನಡೆಸಿದೆ. ಕ್ಷಿಪಣಿ, ಶೆಲ್‌ಗಳ ದಾಳಿ ಲೆಕ್ಕಕ್ಕೆ ಸಿಗದಂತಾಗಿದೆ' ಎಂದು ಝೆಲೆನ್‌ಸ್ಕಿ ಹೇಳಿದ್ದಾರೆ.

ಉಕ್ರೇನ್‌ನ ಪ್ರತಿ ದಾಳಿ ತಡೆಯುವ ನಿಟ್ಟಿನಲ್ಲಿ ಸೇನಾ ಕಾರ್ಯಾಚರಣೆ ತೀವ್ರಗೊಳಿಸುವಂತೆ ರಷ್ಯಾದ ರಕ್ಷಣಾ ಸಚಿವ ಸೆರ್ಗೆ ಶೊಯಿಗು ಅವರು ಆದೇಶ ನೀಡಿದ ಬೆನ್ನಲ್ಲೇ ರಷ್ಯಾ ಅತಿಕ್ರಮಣ ಕಾರ್ಯವನ್ನು ತೀವ್ರಗೊಳಿಸಿದೆ.

ಅತ್ತೆ, ಮಾವನ ಸಾಧನೆಗೆ ಹೆಮ್ಮೆ ಇದೆ: ರಿಷಿ ಸುನಕ್

ಲಂಡನ್ (ಪಿಟಿಐ): ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಹಾಗೂ ಅವರ ಪತ್ನಿ ಸುಧಾ ಮೂರ್ತಿ ಅವರ ಸಾಧನೆಗಳ ಬಗ್ಗೆ ಹೆಮ್ಮೆ ಇದೆ ಎಂದು ಬ್ರಿಟನ್‌ನ ಪ್ರಧಾನಿ ಹುದ್ದೆಗೆ ಮುಂಚೂಣಿಯಲ್ಲಿರುವ ಅವರ ಅಳಿಯ ರಿಷಿ ಸುನಕ್ ಹೇಳಿದ್ದಾರೆ.

'ನನ್ನ ಮಾವ ಬಹಳ ಕಷ್ಟದಿಂದ ಮುಂದೆ ಬಂದಿದ್ದಾರೆ. ಅವರ ಬಳಿ ಕನಸೊಂದೇ ಇತ್ತು; ಹಣ ಇರಲಿಲ್ಲ. ನನ್ನ ಅತ್ತೆ ನೀಡಿದ ಉಳಿತಾಯದ ಹಣವನ್ನು ಬಳಸಿಕೊಂಡು ಇಷ್ಟೊಂದು ದೊಡ್ಡ ಸಂಸ್ಥೆಯನ್ನು ಕಟ್ಟಿದ್ದಾರೆ. ಈ ಸಂಸ್ಥೆಯು ಬ್ರಿಟನ್‌ನ ಸಾವಿರಾರು ಜನರಿಗೆ ಉದ್ಯೋಗವನ್ನು ನೀಡಿದೆ' ಎಂದರು.

ಸುದ್ದಿ ವಾಹಿನಿಯೊಂದರಲ್ಲಿ ಭಾನುವಾರ ರಾತ್ರಿ ಪ್ರಸಾರವಾದ ಚರ್ಚೆಯಲ್ಲಿ ಭಾಗವಹಿಸಿದ್ದ ರಿಷಿ, ತಮ್ಮ ಪತ್ನಿ ಅಕ್ಷತಾ ಮೂರ್ತಿ ಅವರ ಕುಟುಂಬದ ಸಂಪತ್ತಿನ ಕುರಿತ ಮಾಧ್ಯಮ ವರದಿಗಳ ಬಗ್ಗೆ ಹೀಗೆ ಪ್ರತಿಕ್ರಿಯೆ ನೀಡಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-. 9513330916, 9513330914.

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

★||ಶ್ರೀಕೇದಾರನಾಥ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9535088827"

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರೇಮ-ವಿಚಾರ, ವಶೀಕರಣ, ಮಾಟ-ಮಂತ್ರ, ಇನ್ನು ಮುಂತಾದ ಸಮಸ್ಯೆಗಳಿಗೆ ಚಿಂತಿಸುವ ಅವಶ್ಯಕತೆ ಇಲ್ಲ,ನಿಮ್ಮ ಸಮಸ್ಯೆ ಏನೇ ಇರಲಿ ಪರಿಹಾರ ಶತಸಿದ್ಧ: 9513707409

ರೆಂಟಲ್ ಪ್ರಾಪರ್ಟೀಸ್

Accommodation Available

Commercial

ಚನ್ನಗಿರಿ ನಗರದ ವ್ಯಾಪಾರ ದಟ್ಟಣೆ ಇರುವ ಜಾಗದಲ್ಲಿ 500 ಹಾಗು 600 ಚದುರ ವಿಸ್ತಾರಣೆ ಇರುವ ಮಳಿಗೆ ಆಫೀಸ್/ ಶೋ ರೂಮ್ / ಟೆಕ್ಸೈಲ್ /ಟೀಚಿಂಗ್ ಪರ್ಪಸ್ ಗಳಿಗೆ ಲಭ್ಯವಿದೆ. ಸಂಪರ್ಕಿಸಿ 9916188788/ hssmurthy@yahoo.in

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ ರಜಾ ದಿನಗಳಲ್ಲಿ ಅಗಸ್ಟ್ 12 ರಿಂದ 15ರವರೆಗೆ ನವಗ್ರಹ ದರ್ಶನ ತಂಜಾವೂರು ಕುಂಭಕೋಣಂ ಚಿದಂಬರಂ,ವೆಲಾಂಗಣಿ ಪೂಂಪುಹಾರ್‌ಬೀಚ್ ಇತ್ಯಾದಿ 18 ಕ್ಷೇತ್ರಗಳು 6200/. ಕಾಶಿ,ವೈಷ್ಣೋದೇವಿ,ದ್ವಾರಕಾ ಉಜ್ಜಯಿನಿ,ಸೋಮನಾಥ್ ಶಿರಡಿ,ಅಹೋಬಿಲಂ ಪ್ರವಾಸಗಳಿಗೆ ಸಂಪರ್ಕಿಸಿ: 9448390735 9449721678 9731159966

ಸಾರ್ವಜನಿಕ ಪ್ರಕಟಣೆ

ಘೋಷಣೆ

ಶ್ರೀಮತಿ ತಸ್ಮಿಯಾ ತಾಜ್

ನಮೂನೆ ಸಂಖ್ಯೆ 4
ಆಪಾದಿತ ವ್ಯಕ್ತಿಯ ಹಾಜರಾತಿಯನ್ನು ಆಗತ್ಯಪಡಿಸುವ ಉದ್ಘೋಷಣೆ
(82 ನೆ ಪ್ರಕರಣವನ್ನು ನೋಡಿ)

ಶ್ರೀಮತಿ. ತಸ್ಮಿಯಾ ತಾಜ್, ವಯಸ್ಸು ಸುಮಾರು 28 ವರ್ಷ, W/o ಅಬ್ದುಲ್ ರಹಮಾನ್ ಪಾಷಾ, ಮನೆ ನಂ. 180/1, 'ಬಿ' ಬ್ಲಾಕ್, III ಕ್ರಾಸ್, ರಶಾದ್ ನಗರ, ಗೋವಿಂದಪುರ, ಬೆಂಗಳೂರು – 560045, ಅವರು ಕಸ್ಟಮ್ಸ್ ಆಕ್ಟ್, 1962ರ 132, 135(1)(ಎ), 135(1) (ಬಿ) ಸೆಕ್ಷನ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವರೆಂದು (ಅಥವಾ ಮಾಡಿರಬಹುದೆಂಬ ಶಂಕೆಯ ಮೇಲೆ) ನನಗೆ ಫಿರ್ಯಾದು ಬಂದಿರುವುದರಿಂದ ಮತ್ತು ಅದರ ಮೇಲೆ ಹೊರಡಿಸಲಾದ ದಸಗಿರಿ ವಾರಂಟು ಸದರಿ ವ್ಯಕ್ತಿ ಶ್ರೀಮತಿ. ತಸ್ಮಿಯಾ ತಾಜ್ ಸಿಕ್ಕಿಲ್ಲವೆಂಬ ಬರಹದೊಂದಿಗೆ ವಾಪಸಾಗಿರುವುದರಿಂದ ಮತ್ತು ಸದರಿ ವ್ಯಕ್ತಿಯು ಶ್ರೀಮತಿ. ತಸ್ಮಿಯಾ ತಾಜ್ ತಲೆ ತಪ್ಪಿಸಿಕೊಂಡಿರುವರೆಂದು ಅಥವಾ ಸದರಿ ವಾರಂಟಿನ ಜಾರಿಯನ್ನು ತಪ್ಪಿಸಿಕೊಳ್ಳಲು ಸ್ವತಃ ಬಚ್ಚಿಟ್ಟು ಕೊಂಡಿರುವರೆಂದು ನನಗೆ ಮನದಟ್ಟಾಗಿರುವುದರಿಂದ ದಿನಾಂಕ 24.08.2022 ರಂದು ಸದರಿ ಫಿರ್ಯಾದಿಗೆ ಉತರಿಸಲು ಶ್ರೀಮತಿ. ತಸ್ಮಿಯಾ ತಾಜ್ ಅವರು ಬೆಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಈ ಮೂಲಕ ಉದ್ಘೋಷಿಸಲಾಗಿದೆ.
ದಿನಾಂಕ 29 ಜೂನ್ 2022.

ಅಪ್ಪಣೆಯ ಮೆರೆಗೆ, ಅಧ್ಯಕ್ಷಾಧಿಕಾರಿಗಳು, ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ, ನೃಪತುಂಗ ರಸ್ತೆ, ಬೆಂಗಳೂರು 560 001.

ಶಿಕ್ಷಣಕ್ಕೆ

ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

Classifieds
Book Your Classifieds Ads
Online Log in to
dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೆಲವರಿಂದ 'ಆತ್ಮಸಾಕ್ಷಿ' ಮತ, ಅಡ್ಡ ಮತದಾನ ಆರೋಪ • ಗುರುವಾರ ಮತ ಎಣಿಕೆ, ಫಲಿತಾಂಶ

ರಾಷ್ಟ್ರಪತಿ ಚುನಾವಣೆ: ಶೇ 99 ಮತದಾನ

ನವದೆಹಲಿ (ಪಿಟಿಐ): ದೇಶದ 15ನೇ ರಾಷ್ಟ್ರಪತಿ ಆಯ್ಕೆಗೆ ಸೋಮವಾರ ರಾಷ್ಟ್ರ ರಾಜಧಾನಿ ಮತ್ತು ವಿವಿಧ ರಾಜ್ಯಗಳಲ್ಲಿ ಸೌಹಾರ್ದದಿಂದ ಚುನಾವಣೆ ನಡೆದಿದ್ದು, ಶೇ 99.12ರಷ್ಟು ಮತದಾನವಾಗಿದೆ. ಮತಎಣಿಕೆ ಇದೇ 21ರಂದು ನಡೆಯಲಿದ್ದು, ಅಂದೇ ಫಲಿತಾಂಶ ಹೊರಬೀಳಲಿದೆ.

ಕರ್ನಾಟಕ ಸೇರಿದಂತೆ 10 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಶೇ 100ರಷ್ಟು ಮತದಾನವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, 771 ಸಂಸದರು, 4,025 ಶಾಸಕರು ಈ ಚುನಾವಣೆಯಲ್ಲಿ ಹಕ್ಕು ಚಲಾಯಿಸಿದ್ದಾರೆ. ಸುಮಾರು 44 ಸಂಸದರು ತಾವು ಪ್ರತಿನಿಧಿಸುವ ರಾಜ್ಯಗಳಲ್ಲಿ ಹಕ್ಕು ಚಲಾಯಿಸಲು ಅನುಮತಿ ಪಡೆದಿದ್ದರು.

ಸಂಸದರು, ಶಾಸಕರು ಸೇರಿದಂತೆ ಸುಮಾರು 4,800 ಮಂದಿಗೆ ಮತದಾನದ ಹಕ್ಕು ಇತ್ತು. ಸಂಸತ್ತಿನ ನಾಮಕರಣ ಸದಸ್ಯರು ಹಾಗೂ ವಿವಿಧ ರಾಜ್ಯಗಳ ವಿಧಾನ ಪರಿಷತ್ತಿನ ಸದಸ್ಯರಿಗೆ ಮತದಾನದ ಹಕ್ಕು ಇಲ್ಲ.

ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು ಮತ್ತು ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಯಶವಂತ ಸಿನ್ಹಾ ಕಣದಲ್ಲಿದ್ದಾರೆ. ಎನ್‌ಡಿಎ ಅಭ್ಯರ್ಥಿಗೆ ಪ್ರಾದೇಶಿಕ ಪಕ್ಷಗಳಾದ ಬಿಜು ಜನತಾ ದಳ, ಬಹುಜನ ಸಮಾಜ ಪಕ್ಷ, ಶಿರೋಮಣಿ ಅಕಾಲಿ ದಳ, ಶಿವಸೇನಾ, ಜಾರ್ಖಂಡ್ ಮುಕ್ತಿ ಮೋರ್ಚಾ ಕೂಡಾ ಬೆಂಬಲಿಸಿವೆ.

ನವದೆಹಲಿಗೆ ಮತಪೆಟ್ಟಿಗೆಗಳು: ಸಂಸತ್ತು ಹಾಗೂ ಶಾಸಕರು ಹಕ್ಕು ಚಲಾಯಿಸಲು ಆಯಾ ರಾಜ್ಯಗಳ ವಿಧಾನಸಭೆಗಳಲ್ಲಿ ಮತಗಟ್ಟೆಯನ್ನು ಸ್ಥಾಪಿಸಲಾಗಿತ್ತು. ಈ ಮತಪೆಟ್ಟಿಗೆಗಳು ಸೋಮವಾರವೇ ರಸ್ತೆ ಅಥವಾ ವಿಮಾನದ ಮೂಲಕ ನವದೆಹಲಿಗೆ ತಲುಪಿವೆ.

ಸಂಸತ್ ಭವನದ ಮತಗಟ್ಟೆಗಳಲ್ಲಿ ಶೇ 98.9 ಮತದಾನವಾಗಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿ ಹಲವು ವಿವಿಧ ಪಕ್ಷಗಳ ನಾಯಕರು ಅವರು ಇಲ್ಲಿ ಹಕ್ಕು ಚಲಾಯಿಸಿದರು.

ಸಂಸತ್ತು ಮತಗಟ್ಟೆಯ ಚುನಾವಣಾದಿಕಾರಿ ಪಿ.ಸಿ.ಮೋದಿ ಪ್ರಕಾರ, ಇಲ್ಲಿ ಹಕ್ಕು ಚಲಾಯಿಸಲು 727 ಸಂಸದರು, 9 ಶಾಸಕರಿಗೆ ಚುನಾವಣಾ ಆಯೋಗ ಅನುಮೋದನೆ ನೀಡಿತ್ತು. ಈ ಪೈಕಿ ಕ್ರಮವಾಗಿ 719 ಸಂಸದರು, 9 ಶಾಸಕರು ಹಕ್ಕು ಚಲಾಯಿಸಿದ್ದಾರೆ.

ರಾಜ್ಯದಲ್ಲಿ ಸಂಪೂರ್ಣ ಮತದಾನ

ನೂತನ ರಾಷ್ಟ್ರಪತಿ ಆಯ್ಕೆಗಾಗಿ ಸೋಮವಾರ ನಡೆದ ಚುನಾವಣೆಯಲ್ಲಿ ರಾಜ್ಯದ ಎಲ್ಲ ಶಾಸಕರೂ ಮತ ಚಲಾಯಿಸಿದರು. ಸಂಸದರಾದ ವಿ. ಶ್ರೀನಿವಾಸ ಪ್ರಸಾದ್, ಎಚ್.ಡಿ. ದೇವೇಗೌಡ ಕೂಡ ಬೆಂಗಳೂರಿನಲ್ಲಿಯೇ ಹಕ್ಕು ಚಲಾಯಿಸಿದ್ದು, ಒಟ್ಟು 226 ಮತಗಳ ಚಲಾವಣೆಯಾಗಿದೆ.

ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮೊದಲಿಗರಾಗಿ ಮತ ಚಲಾವಣೆ ಮಾಡಿದರು. ಬಳಿಕ ಉಳಿದ ಶಾಸಕರು ಸರದಿಯೋಪಾದಿಯಲ್ಲಿ ಬಂದು ಮತ ಚಲಾಯಿಸಿದರು. ನಿಗದಿತ ಅವಧಿಗೂ ಮೊದಲೇ ಎಲ್ಲರೂ ಮತದಾನ ಮಾಡಿದರು. ರಾತ್ರಿ 9.20ಕ್ಕೆ ವಿಮಾನದ ಮೂಲಕ ಮತಪೆಟ್ಟಿಗೆಯನ್ನು ದೆಹಲಿಗೆ ಕೊಂಡೊಯ್ಯಲಾಯಿತು.

ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಅವರು ಗಾಲಿ ಕುರ್ಚಿಯಲ್ಲಿ ಕುಳಿತು ರಾಷ್ಟ್ರಪತಿ ಆಯ್ಕೆಗೆ ಮತ ಚಲಾಯಿಸಿದರು. ಜಂಟಿ ಮುಖ್ಯ ಚುನಾವಣಾಧಿಕಾರಿ ರಾಘವೇಂದ್ರ, ರಾಷ್ಟ್ರಪತಿ ಚುನಾವಣೆಯ ಸಹಾಯಕ ಚುನಾವಣಾಧಿಕಾರಿಯಾಗಿರುವ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಇದ್ದರು

ಗಾಲಿ ಕುರ್ಚಿಯಲ್ಲಿ ದೇವೇಗೌಡರು

ಬೆಂಗಳೂರು: ಗಾಲಿ ಕುರ್ಚಿಯಲ್ಲಿ ಬಂದು ಹಕ್ಕು ಚಲಾಯಿಸಿದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಮತಗಟ್ಟೆ ಬಳಿ ಮುಖಾಮುಖಿಯಾದ ಸಿದ್ದರಾಮಯ್ಯ–ಶ್ರೀನಿವಾಸ ಪ್ರಸಾದ್, ಕಾಂಗ್ರೆಸ್ ಶಾಸಕ ಬೈರತಿ ಸುರೇಶ್ ಕೊರಳಿಗೆ ಕೇಸರಿ ಶಾಲು...

– ಇವು ನೂತನ ರಾಷ್ಟ್ರಪತಿ ಆಯ್ಕೆಗಾಗಿ ಸೋಮವಾರ ವಿಧಾನಸೌಧದಲ್ಲಿ ನಡೆದ ಮತದಾನದ ವೇಳೆ ಕಂಡ ವಿಶೇಷಗಳು. ಬಿಜೆಪಿಯ ಬಹುತೇಕ ಶಾಸಕರು ಕೇಸರಿ ಶಾಲು ಧರಿಸಿಕೊಂಡು ಬಂದು ಮತದಾನ ಮಾಡಿದರು.

ರಾಜ್ಯದ 224 ಚುನಾಯಿತ ಶಾಸಕರು ವಿಧಾನಸೌಧದ ಮೊದಲ ಮಹಡಿಯಲ್ಲಿನ ಮತಗಟ್ಟೆಗೆ ಬಂದು ಮತ ಚಲಾಯಿಸಿದರು. ಚಾಮರಾಜನಗರ ಸಂಸದ ವಿ. ಶ್ರೀನಿವಾಸ ಪ್ರಸಾದ್ ಮತ್ತು ರಾಜ್ಯಸಭಾ ಸದಸ್ಯರಾಗಿರುವ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಇಲ್ಲಿಯೇ ಮತ ಚಲಾಯಿಸಲು ಅನುಮತಿ ಪಡೆದಿದ್ದರು. ಅವರೂ ತಮ್ಮ ಹಕ್ಕು ಚಲಾಯಿಸಿದರು.

ಗಾಲಿ ಕುರ್ಚಿಯಲ್ಲಿ ಕುಳಿತು ಮತದಾನ: ದೇವೇಗೌಡರು ಅನಾರೋಗ್ಯದ ಕಾರಣದಿಂದ ಬೆಂಗಳೂರಿನಲ್ಲೇ ಮತದಾನ ಮಾಡಲು ಕೇಂದ್ರ ಚುನಾವಣಾ ಆಯೋಗದಿಂದ ಅನುಮತಿ ಪಡೆದಿದ್ದರು. ಸೋಮವಾರ ಮಧ್ಯಾಹ್ನ 2.30ರ ಸುಮಾರಿಗೆ ಕಾರಿನಲ್ಲಿ ವಿಧಾನಸೌಧದವರೆಗೆ ಬಂದ ಅವರನ್ನು ಗಾಲಿ ಕುರ್ಚಿಯಲ್ಲಿ ಕುಳ್ಳಿರಿಸಿ ಮತಗಟ್ಟೆಗೆ ಕರೆದೊಯ್ಯಲಾಯಿತು. ಗಾಲಿ ಕುರ್ಚಿಯಲ್ಲೇ ಕುಳಿತು ಅವರು ಮತ ಚಲಾಯಿಸಿದರು.

ದೀರ್ಘ ಕಾಲದ ಬಳಿಕ ಮುಖಾಮುಖಿ: ಕಂದಾಯ ಸಚಿವರ ಸ್ಥಾನದಿಂದ ಕೈಬಿಟ್ಟ ಬಳಿಕ ಸಿದ್ದರಾಮಯ್ಯ ವಿರುದ್ಧ ಮುನಿಸಿಕೊಂಡಿದ್ದ ಶ್ರೀನಿವಾಸ ಪ್ರಸಾದ್, ಆಗಾಗ ವಾಗ್ದಾಳಿ ನಡೆಸುತ್ತಲೇ ಇದ್ದರು. ಆ ಬಳಿಕ ಇಬ್ಬರೂ ಮುಖಾಮುಖಿ ಆಗಿದ್ದು ಕಡಿಮೆ. ರಾಷ್ಟ್ರಪತಿ ಚುನಾವಣೆಯ ಮತಗಟ್ಟೆ ಬಳಿ ಮುಖಾಮುಖಿಯಾದ ಇಬ್ಬರೂ ನಗುತ್ತಾ ಹಸ್ತಲಾಘವ ಮಾಡಿದರು.

ಶ್ರೀನಿವಾಸ ಪ್ರಸಾದ್ ಮೈಸೂರಿನಿಂದ ಬಂದು ಮತಗಟ್ಟೆಗೆ ಹೋಗಿ ಹಕ್ಕು ಚಲಾಯಿಸಿ ಹಿಂದಿರುಗುತ್ತಿದ್ದರು. ಅದೇ ವೇಳೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತಗಟ್ಟೆಯತ್ತ ಹೊರಟಿದ್ದರು. ವಿಧಾನಸೌಧದ ಮೊಗಸಾಲೆಯಲ್ಲಿ ಇಬ್ಬರೂ ಮುಖಾಮುಖಿಯಾದರು.

ಧನಕರ್ ನಾಮಪತ್ರ ಸಲ್ಲಿಕೆ

ಉಪ ರಾಷ್ಟ್ರಪತಿ ಚುನಾವಣೆ: ಆಗಸ್ಟ್ 6ರಂದು ಮತದಾನ

ನವದೆಹಲಿ (ಪಿಟಿಐ): ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಜಗದೀಪ್ ಧನಕರ್ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು.

ಈ ವೇಳೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ನಿತಿನ್ ಗಡ್ಕರಿ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಜೆಡಿಯು ಮುಖ್ಯಸ್ಥ ಲಲನ್ ಸಿಂಗ್, ಬಿಜೆಡಿ ನಾಯಕ ಪಿನಾಕಿ ಮಿಶ್ರಾ ಹಾಜರಿದ್ದರು.

ನಾಮಪತ್ರ ಸಲ್ಲಿಸಿದ ಬಳಿಕ ಪ್ರತಿಕ್ರಿಯಿಸಿದ ಧನಕರ್ ಅವರು, 'ಸಾಮಾನ್ಯ ರೈತ ಕುಟುಂಬದಿಂದ ಬಂದಿರುವ ನನ್ನಂಥವರಿಗೆ ಈ ರೀತಿಯ 'ಐತಿಹಾಸಿಕ' ಅವಕಾಶ ಸಿಗುತ್ತದೆ ಎಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ' ಎಂದರು.

'ನಾನು ಯಾವಾಗಲೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೆಚ್ಚಿಸಲು ಶ್ರಮಿಸುತ್ತೇನೆ' ಎಂದು ಭರವಸೆ ನೀಡಿದರು.

ಚುನಾವಣೆ ಆಗಸ್ಟ್6ರಂದು ನಡೆಯಲಿದ್ದು, ವಿರೋಧ ಪಕ್ಷಗಳು ತಮ್ಮ ಒಮ್ಮತದ ಅಭ್ಯರ್ಥಿಯಾಗಿ ಕರ್ನಾಟಕದ ಮಾರ್ಗರೇಟ್ ಆಳ್ವ ಅವರನ್ನು ಆರಿಸಿವೆ.

ಲೋಕಸಭಾ ಮತ್ತು ರಾಜ್ಯಸಭೆಯ ಸದಸ್ಯರು (ಎಲೆಕ್ಟೋರಲ್ ಕಾಲೇಜ್) ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸುವರು. ಒಟ್ಟಾರೆ 780 ಸದಸ್ಯರ ಪೈಕಿ ಬಿಜೆಪಿ ಬಳಿಯೇ 394 ಸದಸ್ಯರ ಬಲವಿದೆ. ಚುನಾವಣೆಯಲ್ಲಿ ಗೆಲ್ಲಲು 391 ಮತಗಳು ಸಾಕು.

ಜೆಡಿಯು, ಬಿಜೆಡಿ ಮತ್ತು ವೈಎಸ್‌ಆರ್ ಕಾಂಗ್ರೆಸ್ ಧನಕರ್ ಅವರಿಗೆ ಬೆಂಬಲ ಸೂಚಿಸಿವೆ. ಈ ಪಕ್ಷಗಳು ಕ್ರಮವಾಗಿ 21, 21 ಮತ್ತು 31 ಸಂಸದರನ್ನು ಹೊಂದಿವೆ. ಬಿಜೆಪಿಯ 394 ಮತಗಳೊಂದಿಗೆ ಈ ಪಕ್ಷಗಳ ಮತಗಳೂ ಸೇರಿದರೆ, ಧನಕರ್ ಅವರಿಗೆ 467 ಮತಗಳ ಬೆಂಬಲ ದೊರೆತಂತಾಗುತ್ತದೆ.

ಉಪ ರಾಷ್ಟ್ರಪತಿ ಚುನಾವಣೆಯ ಎನ್‌ಡಿಎ ಅಭ್ಯರ್ಥಿ ಜಗದೀಪ್ ಧನಕರ್ ಅವರು ಸೋಮವಾರ ನವದೆಹಲಿಯ ಸಂಸತ್ ಭವನದಲ್ಲಿ ನಾಮಪತ್ರ ಸಲ್ಲಿಸಿದರು. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ರಾಜನಾಥ ಸಿಂಗ್, ಅಮಿತ್ ಶಾ, ನಿತಿನ್ ಗಡ್ಕರಿ ಇದ್ದರು –ಪಿಟಿಐ ಚಿತ್ರ



'ಎನ್‌ಸಿಇಆರ್‌ಟಿ ಪಠ್ಯಪುಸ್ತಕ ಕೊರತೆ ಇಲ್ಲ'

ನವದೆಹಲಿ (ಪಿಟಿಐ): ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳ ಕೊರತೆ ಇಲ್ಲ. 2022–23ನೇ ಶೈಕ್ಷಣಿಕ ವರ್ಷದಲ್ಲಿ ದೇಶದಾದ್ಯಂತ ನಾಲ್ಕು ಕೋಟಿ ಪಠ್ಯಪುಸ್ತಕಗಳನ್ನು ವಿತರಿಸಲಾಗಿದೆ ಎಂದು ಶಿಕ್ಷಣ ಖಾತೆ ರಾಜ್ಯ ಸಚಿವೆ ಅನ್ನಪೂರ್ಣಾ ದೇವಿ ಅವರು ಸೋಮವಾರ ಲೋಕಸಭೆಯಲ್ಲಿ ಮಾಹಿತಿ ನೀಡಿದರು.

'ಎನ್‌ಸಿಇಆರ್‌ಟಿ ಪ್ರಧಾನ ಕಚೇರಿಯಲ್ಲಿರುವ ಮಾರಾಟ ಕೇಂದ್ರ, ಅಜ್ಮೀರ್, ಭೋಪಾಲ್, ಭುವನೇಶ್ವರ, ಮೈಸೂರು ಮತ್ತು ಶಿಲ್ಲಾಂಗ್‌ನಲ್ಲಿರುವ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳಲ್ಲಿ (ಆರ್‌ಐಇ) ಹಾಗೂ ಅಹಮದಾಬಾದ್, ಬೆಂಗಳೂರು, ಕೋಲ್ಕತ್ತ ಮತ್ತು ಗುವಾಹಟಿಯಲ್ಲಿರುವ ಪ್ರಾದೇಶಿಕ ಕೇಂದ್ರಗಳ ಮೂಲಕ ಪಠ್ಯಪುಸ್ತಕಗಳನ್ನು ವಿತರಿಸಲಾಗಿದೆ' ಎಂದರು. 'ಎನ್‌ಸಿಇಆರ್‌ಟಿ ವೆಬ್ ಪೋರ್ಟಲ್ ಮೂಲಕವೂ ಪಠ್ಯಪುಸ್ತಕಗಳನ್ನು ಆರ್ಡರ್ ಮಾಡಬಹುದು' ಎಂದೂ ತಿಳಿಸಿದ್ದಾರೆ.

ಬೆಲೆ ಏರಿಕೆ ಕುರಿತು ಚರ್ಚಿಸುವಂತೆ ವಿರೋಧ ಪಕ್ಷಗಳ ಪ್ರತಿಭಟನೆ

ಮೊದಲ ದಿನ ನಡೆಯದ ಕಲಾಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನವು ಭಾರಿ ಗದ್ದಲದಿಂದಲೇ ಸೋಮವಾರ ಆರಂಭವಾಯಿತು. ಬೆಲೆ ಏರಿಕೆ ಕುರಿತು ಕೂಡಲೇ ಚರ್ಚೆ ನಡೆಸಬೇಕು ಎಂದು ಬೇಡಿಕೆಯಿಟ್ಟ ವಿರೋಧ ಪಕ್ಷಗಳ ಸಂಸದರು ಸ್ಪೀಕರ್ ಮತ್ತು ಸಭಾಪತಿ ಪೀಠದ ಮುಂದೆ ಜಮಾಯಿಸಿ ಪ್ರತಿಭಟನೆ ನಡೆಸಿದ ಕಾರಣ ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಸದನಗಳಲ್ಲೂ ಕಲಾಪ ನಡೆಯಲಿಲ್ಲ.

ಕಳೆದ ಐದು ವರ್ಷಗಳಲ್ಲಿ ರಾಜ್ಯಸಭೆಯ ಕಲಾಪಗಳಲ್ಲಿ ಶೇ 57ರಷ್ಟು ಭಾಗಶಃ ಅಥವಾ ಸಂಪೂರ್ಣವಾಗಿ ವ್ಯರ್ಥವಾಗಿವೆ. ಕಲಾಪವನ್ನು ಉತ್ತಮಪಡಿಸಿಕೊಳ್ಳಲು ಮತ್ತು ಈ ಹಿಂದಿಗಿಂತ ಭಿನ್ನವಾಗಿರಲು ಸಮಯ ಬಂದಿದೆ ಎಂದು ರಾಜ್ಯಸಭೆ ಸಭಾಪತಿ ಎಂ. ವೆಂಕಯ್ಯ ನಾಯ್ಡು ಅವರು ಹೇಳಿದ ಬಳಿಕವೂ ರಾಜ್ಯಸಭೆಯಲ್ಲಿ ಪ್ರತಿಭಟನೆ ಮುಂದುವರಿಯಿತು.

ವೆಂಕಯ್ಯ ನಾಯ್ಡು ಅವರು ಕಲಾಪದ ಆರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡುವಾಗಲೇ ಪ್ರತಿಭಟನೆ ಆರಂಭಿಸಿದ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) ಸಂಸದರು ದರ ಏರಿಕೆ ಕುರಿತು ಕೂಡಲೇ ಚರ್ಚೆ ನಡೆಸಬೇಕು ಎಂದು ಆಗ್ರಹಿಸಿದರು.

ಅಧಿವೇಶನವನ್ನು ಆದಷ್ಟು ಫಲಪ್ರದವಾಗಿಸಬೇಕು, ನೀತಿ, ನಿಯಮಗಳಿಗೆ ಸಕಾರಾತ್ಮಕ ಕೊಡುಗೆ ನೀಡುವ ದಿಸೆಯಲ್ಲಿ ಟೀಕೆ ಮತ್ತು ವಿಶ್ಲೇಷಣೆಗಳನ್ನು ಮಾಡಬೇಕು ಎಂದು ಸಂಸದರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಧಿವೇಶನ ಆರಂಭಕ್ಕೂ ಮುನ್ನವೇ ಮನವಿ ಮಾಡಿದ್ದರು.

'ಸದನವು ಸಂವಾದಕ್ಕೆ ಅತ್ಯಂತ ಪರಿಣಾಮಕಾರಿ ಮಾಧ್ಯಮ ಮತ್ತು ತೀರ್ಥಯಾತ್ರೆಯ ಸ್ಥಳ ಎಂದು ನಾವು ಪರಿಗಣಿಸುತ್ತೇವೆ' ಎಂದು ಮೋದಿ ಅವರು ವರದಿಗಾರರ ಎದುರು ಹೇಳಿದರು.

'ದೆಹಲಿಯಲ್ಲಿ ಮಳೆಗಾಲ ಆರಂಭವಾಗಿದೆ. ಆದರೂ ಉಷ್ಣಾಂಶ ಕಡಿಮೆ ಆಗಿಲ್ಲ. ಸಂಸತ್ತಿನ ಒಳಗೂ ಉಷ್ಣಾಂಶ ಕಡಿಮೆ ಆಗಲಿದೆಯೇ ಎಂಬುದು ನನಗೆ ಗೊತ್ತಿಲ್ಲ' ಎಂದು ಹಾಸ್ಯ ಮಾಡಿದರು.

ರಾಷ್ಟ್ರಪತಿ ಚುನಾವಣೆ ಕೂಡಾ ಸೋಮವಾರವೇ ನಡೆದ ಕಾರಣ, ಸಂಸದರಿಗೆ ಮತದಾನಕ್ಕೆ ಅವಕಾಶ ನೀಡುವುದಕ್ಕಾಗಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಬೆಳಿಗ್ಗಿನ ಕಲಾಪವನ್ನು ಮಧ್ಯಾಹ್ನ 2 ಗಂಟೆ ವರೆಗೆ ಮುಂದೂಡಿದ್ದರು. ಕಲಾಪ ಮುಂದೂಡುವ ಮೊದಲೂ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಪ್ರಸ್ತಾಪಿಸಲು ಇಚ್ಛಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್, ಭಾರತದಲ್ಲಿ ಚುನಾವಣೆಗಳನ್ನು ಹಬ್ಬದಂತೆ ಆಚರಿಸಲಾಗುತ್ತದೆ. ಈಗ ರಾಷ್ಟ್ರಪತಿ ಚುನಾವಣೆ ನಡೆಯುತ್ತದೆ. ಅದನ್ನೂ ಹಬ್ಬದಂತೆಯೇ ಆಚರಿಸಬೇಕು ಎಂದರು.

ಮಧ್ಯಾಹ್ನ 2 ಗಂಟೆಗೆ ಕಲಾಪ ಪುನಃ ಆರಂಭವಾಯಿತು. ಆಗ ಎಡ ಪಕ್ಷಗಳ ಸಂಸದರು ಫಲಕಗಳನ್ನು ಹಿಡಿದು ಸ್ಪೀಕರ್ ಪೀಠದ ಮುಂದೆ ಸೇರಿ, ಬೆಲೆ ಏರಿಕೆ ಕುರಿತು ಪ್ರತಿಭಟಿಸಿದರು. ಅದೇ ವೇಳೆ, ವಿರೋಧಪಕ್ಷಗಳು ಹಣದುಬ್ಬರ ಮತ್ತು ಅಗ್ನಿಪಥ ಯೋಜನೆಗಳ ಕುರಿತು ಚರ್ಚಿಸಲು ಇಚ್ಛಿಸುತ್ತಿವೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧಿರ್ ರಂಜನ್ ಚೌಧರಿ ಹೇಳಿದರು.

ಕಲಾಪ ಆರಂಭವಾದ ಬಳಿಕ, 29 ಸಂಸದರು ರಾಜ್ಯಸಭೆಯಲ್ಲಿ ಮತ್ತು ಇಬ್ಬರು ಸಂಸದರು ಲೋಕಸಭೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಕೌಟುಂಬಿಕ ನ್ಯಾಯಾಲಯ (ತಿದ್ದುಪಡಿ) ಮಸೂದೆಯನ್ನು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಸದನದಲ್ಲಿ ಮಂಡಿಸಿದರು. ಹಿಮಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್‌ನಲ್ಲಿ ಸ್ಥಾಪಿಸಲಾಗಿರುವ ಕೌಟುಂಬಿಕ ನ್ಯಾಯಾಲಯಗಳಿಗೆ ಶಾಸನಬದ್ಧ ಅಧಿಕಾರವನ್ನು ನೀಡುವುದಕ್ಕಾಗಿ ಈ ಮಸೂದೆ ಮಂಡಿಸಲಾಗಿದೆ.

ಕಾಡಾನೆ ದಾಳಿ: ಮೂರು ವರ್ಷಗಳಲ್ಲಿ 69 ಮಂದಿ ಸಾವು

ನವದೆಹಲಿ: ಕಾಡಾನೆ ದಾಳಿಯಿಂದಾಗಿ ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ 69 ಮಂದಿ ಮೃತಪಟ್ಟಿದ್ದಾರೆ ಎಂದು ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ತಿಳಿಸಿದರು.

ಲೋಕಸಭೆಯಲ್ಲಿ ಸದಸ್ಯ ಕೆ.ಸುಧಾಕರ್ ಅವರ ಪ್ರಶ್ನೆಗೆ ಸೋಮವಾರ ಉತ್ತರ ನೀಡಿದ ಅವರು, '2019–20ರಲ್ಲಿ 29 ಮಂದಿ, 20–21ರಲ್ಲಿ 23 ಮಂದಿ ಹಾಗೂ 2021–22ರಲ್ಲಿ 17 ಮಂದಿ ಮೃತಪಟ್ಟಿದ್ದಾರೆ' ಎಂದು ಮಾಹಿತಿ ನೀಡಿದರು.

ಕಾಡಾನೆ ದಾಳಿಯಿಂದ ದೇಶದಲ್ಲಿ 2019–20ರಲ್ಲಿ 585, 20–21ರಲ್ಲಿ 461 ಹಾಗೂ 22–22ರಲ್ಲಿ 532 ಮಂದಿ ಮೃತಪಟ್ಟಿದ್ದಾರೆ ಎಂದೂ ಅವರು ತಿಳಿಸಿದರು. 'ಕಾಡಾನೆ ದಾಳಿಯಿಂದ ಮೃತಪಟ್ಟವರಿಗೆ ಕೇಂದ್ರ ಪ್ರಾಯೋಜಿತ ಯೋಜನೆಯಡಿ ಪರಿಹಾರ ನೀಡಲಾಗುತ್ತದೆ. ಆದರೆ, ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದ ಯಾರಿಗೂ ಪರಿಹಾರ ನೀಡಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಉದ್ಧವ್ ಬಣದಿಂದ ಹೊರನಡೆದ ಮಾಜಿ ಸಚಿವ ಕದಂ

ಮುಂಬೈ (ಪಿಟಿಐ): ಶಿವಸೇನಾದ ಹಿರಿಯ ನಾಯಕ ಮತ್ತು ಮಾಜಿ ಸಚಿವ ರಾಮದಾಸ್ ಕದಂ ಅವರು ಪಕ್ಷದ ಉದ್ಧವ್ ಠಾಕ್ರೆ ಬಣದಿಂದ ಹೊರ ನಡೆದಿದ್ದಾರೆ. ಈ ಸಂಬಂಧ ಅವರು ಮಾಜಿ ಮುಖ್ಯಮಂತ್ರಿ ಉದ್ಧವ್ ಅವರಿಗೆ ರಾಜೀನಾಮೆ ಪತ್ರ ರವಾನಿಸಿದ್ದಾರೆ.

ರಾಜೀನಾಮೆ ನೀಡಿದ ಬೆನ್ನಲ್ಲೇ ಉದ್ಧವ್ ಠಾಕ್ರೆ ಅವರು ರಾಮದಾಸ್ ಕದಂ ಮತ್ತು ಆನಂದರಾವ್ ಅಡ್ಸುಲ್ ಅವರನ್ನು ಪಕ್ಷದಿಂದ ಉಚ್ಚಾಟಿಸಿದ್ದಾರೆ.

2014–19ರ ಅವಧಿಯಲ್ಲಿ ಬಿಜೆಪಿ– ಶಿವಸೇನಾ ಮೈತ್ರಿ ಸರ್ಕಾರದಲ್ಲಿ ಕದಂ ಅವರು ಪರಿಸರ ಖಾತೆ ಸಚಿವರಾಗಿದ್ದರು. 2019ರಿಂದ 2022ರ ಜೂನ್‌ವರೆಗಿನ ಠಾಕ್ರೆ ನೇತೃತ್ವದ ಮಹಾ ವಿಕಾಸ ಆಘಾಡಿ (ಎಂವಿಎ) ಸರ್ಕಾರದಲ್ಲಿ ಕದಂ ಅವರಿಗೆ ಯಾವುದೇ ಹುದ್ದೆ ನೀಡಿರಲಿಲ್ಲ.

ಅಲ್ಲದೆ ಕಳೆದ ವರ್ಷ ಮತ್ತೊಂದು ಅವಧಿಗೆ ವಿಧಾನ ಪರಿಷತ್ತಿನ ಸದಸ್ಯರಾಗಲೂ ಅವರಿಗೆ ಅವಕಾಶ ನೀಡಿರಲಿಲ್ಲ.

ಕಳೆದ ತಿಂಗಳು ಸೇನಾ ಶಾಸಕ ಏಕನಾಥ ಶಿಂದೆ ನೇತೃತ್ವದಲ್ಲಿ 39 ಶಾಸಕರು ಬಂಡಾಯವೆದ್ದಿದ್ದರು. ರಾಮದಾಸ್ ಕದಂ ಅವರ ಮಗ ಹಾಗೂ ರತ್ನಾಗಿರಿ ಜಿಲ್ಲೆಯ ಶಾಸಕ ಯೋಗೇಶ್ ಕದಂ ಅವರು ಏಕನಾಥ ಶಿಂದೆ ಬಣ ಸೇರಿದ್ದರು.

ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಷಿಪ್

ಧೀನಿಧಿ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಧೀನಿಧಿ ದೇಸಿಂಗು

ಬೆಂಗಳೂರು: ಕರ್ನಾಟಕದ ಧೀನಿಧಿ ದೇಸಿಂಗು ಅವರು ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಸೋಮವಾರ ನಡೆದ ಬಾಲಕಿಯರ 12–14 ವರ್ಷದೊಳಗಿನವರ ವಿಭಾಗದ 100 ಮೀ. ಬಟರ್‌ಫ್ಲೈನಲ್ಲಿ ಅವರು 1 ನಿ. 4.01 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ಕರ್ನಾಟಕದವರೇ ಆದ ಹಷಿಕಾ ರಾಮಚಂದ್ರ (1:05.51) ಅವರು 2021 ರಲ್ಲಿ ಸ್ಥಾಪಿಸಿದ್ದ ದಾಖಲೆ ಮುರಿದರು. ಹಷಿಕಾ ಈ ಬಾರಿ ಎರಡನೇ ಸ್ಥಾನ ಪಡೆದರು.

ಎಸ್.ಎಸ್.ರುಜುಲಾ 800 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ 9 ನಿ. 36.82 ಸೆ.ಗಳಲ್ಲಿ ಗುರಿತಲುಪಿ ಚಿನ್ನ ಜಯಿಸಿದರು. ಕರ್ನಾಟಕದವರೇ ಆದ ಮೀನಾಕ್ಷಿ ಮೆನನ್ (9 ನಿ. 38 ಸೆ.) ಎರಡನೇ ಸ್ಥಾನ ಪಡೆದುಕೊಂಡರು.

ಇದೇ ವಯೋವರ್ಗದ ಬಾಲಕರ 400 ಮೀ. ಮೆಡ್ಲೆಯಲ್ಲಿ ಕರ್ನಾಟಕದ ಆರ್.ನವನೀತ್ ಗೌಡ 4 ನಿ. 53.33 ಸೆ.ಗಳೊಂದಿಗೆ ಮೊದಲ ಸ್ಥಾನ ಪಡೆದರು. ಬಾಲಕರ 100 ಮೀ. ಫ್ರೀಸ್ಟೈಲ್‌ನಲ್ಲಿ ಇಶಾನ್ ಮೆಹ್ರಾ 55.14 ಸೆ.ಗಳೊಂದಿಗೆ ಚಿನ್ನ ಗೆದ್ದರು.

ಬಾಲಕಿಯರ 15–17 ವರ್ಷದೊಳಗಿನ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ರಿಧಿಮಾ ವೀರೇಂದ್ರಕುಮಾರ್ ಮೊದಲ ಸ್ಥಾನ ಗಳಿಸಿದರು. ಅವರು 30.25 ಸೆ.ಗಳಲ್ಲಿ ಗುರಿ ತಲುಪಿದರು. ಗೋವಾದ ಸಂಜನಾ ಪ್ರಭುಗಾಂವ್ಕರ್ ಬೆಳ್ಳಿ ಹಾಗೂ ಕರ್ನಾಟಕದ ಶಾಲಿನಿ ಆರ್.ದೀಕ್ಷಿತ್ ಕಂಚು ಜಯಿಸಿದರು.

ಬಾಲಕರ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಉತ್ಕರ್ಷ್ ಸಂತೋಷ್ ಪಾಟೀಲ್, 100 ಮೀ. ಫ್ರೀಸ್ಟೈಲ್‌ನಲ್ಲಿ ಕಾರ್ತಿಕೇಯನ್ ನಾಯರ್ ಮತ್ತು ಬಾಲಕಿಯರ 1,500 ಮೀ. ಫ್ರೀಸ್ಟೈಲ್‌ನಲ್ಲಿ ಶಿರಿನ್ ಬೆಳ್ಳಿ ಜಯಿಸಿದರೆ, ಬಾಲಕಿಯರ 100 ಮೀ. ಬಟರ್‌ಫ್ಲೈನಲ್ಲಿ ನೀನಾ ವೆಂಕಟೇಶ್ ಕಂಚು ತಮ್ಮದಾಗಿಸಿಕೊಂಡರು.

ಸಂಕ್ಷಿಪ್ತ ಸುದ್ದಿ

ಎಫ್‌ಐಆರ್ ಒಗ್ಗೂಡಿಸಿ: ಮತ್ತೆ ನೂಪುರ್ ಮನವಿ

ನವದೆಹಲಿ (ಪಿಟಿಐ): ಪ್ರವಾದಿ ಮೊಹಮ್ಮದ್ ಕುರಿತ ಹೇಳಿಕೆಗಾಗಿ ತಮ್ಮ ವಿರುದ್ಧ ವಿವಿಧೆಡೆ ದಾಖಲಿಸಿರುವ ಎಫ್‌ಐಆರ್‌ಗಳನ್ನು ಒಗ್ಗೂಡಿಸಬೇಕು ಎಂದು ಕೋರಿ ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಮತ್ತೆ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಸುಪ್ರೀಂ ಕೋರ್ಟ್ ಈ ಹಿಂದೆ ತಮ್ಮ ವಿರುದ್ಧ ಬಳಸಿದ ಕಟು ಮಾತುಗಳ ಹಿನ್ನೆಲೆಯಲ್ಲಿ ತಮಗೆ ಅತ್ಯಾಚಾರ ಮತ್ತು ಜೀವಬೆದರಿಕೆ ಕರೆಗಳು ಬರುತ್ತಿವೆ ಈ ನೂಪುರ್ ಈಗ ಸಲ್ಲಿಸಿರುವ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಅರ್ಜಿಯು ಮಂಗಳವಾರ ವಿಚಾರಣೆ ಬರಲಿದೆ.

ಜ್ಞಾನವಾಪಿ: ಇದೇ 21ರಂದು 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ವಾರಾಣಸಿಯ ಜ್ಞಾನವಾಪಿ ಮಸೀದಿ ಆವರಣದಲ್ಲಿ ನ್ಯಾಯಾಲಯದ ಮೇಲ್ವಿಚಾರಣೆಯ ಸಮೀಕ್ಷೆ ವೇಳೆ ಕಂಡುಬಂದ 'ಶಿವಲಿಂಗ'ಕ್ಕೆ ಪೂಜೆ ಸಲ್ಲಿಸಲು ಅನುಮತಿ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಹೊಸ ಅರ್ಜಿಯ ವಿಚಾರಣೆಯನ್ನು ಇದೇ 21ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಈ 'ಶಿವಲಿಂಗ'ವನ್ನು ಕಾರ್ಬನ್ ಡೇಟಿಂಗ್‌ಗೆ ಒಳಪಡಿಸುವ ಮೂಲಕ ಅದರ ಕಾಲಮಾನವನ್ನು ತಿಳಿದುಕೊಳ್ಳಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಸೂಚಿಸಬೇಕು ಎಂದೂ ಈ ಅರ್ಜಿಯಲ್ಲಿ ಕೋರಲಾಗಿದೆ.

ಜ್ಞಾನವಾಪಿ ಮಸೀದಿಗೆ ಸಂಬಂಧಿಸಿದಂತೆ ಅಲ್ಲಿನ ವ್ಯವಹಾರಗಳನ್ನು ನೋಡಿಕೊಳ್ಳುವ 'ಅಂಜುಮನ್ ಇಂತಿಯಾಜ್ ಮಸೀದಿ ಸಮಿತಿ' ಸಲ್ಲಿಸಿರುವ ಅರ್ಜಿಯ ವಿಚಾರಣೆ ಇದೇ 21ರಂದು ನಡೆಯಲಿದೆ. ಅದರ ಜತೆಗೆ ವಕೀಲ ವಿಷ್ಣು ಶಂಕರ್ ಜೈನ್ ಅವರು ಸಲ್ಲಿಸಿರುವ ಈ ಹೊಸ ಅರ್ಜಿಯ ವಿಚಾರಣೆಯನ್ನೂ ತಗೆದುಕೊಳ್ಳುವುದಾಗಿ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಅವರನ್ನೊಳಗೊಂಡ ಪೀಠವು ತಿಳಿಸಿತು.

ನಾನು ಕ್ರಿಮಿನಲ್ ಅಲ್ಲ : ಕೇಜ್ರಿವಾಲ್

ನವದೆಹಲಿ (ಪಿಟಿಐ): 'ಸಿಂಗಪುರದಲ್ಲಿ ನಡೆಯುವ ಶೃಂಗಸಭೆಯಲ್ಲಿ ನಾನು ಭಾಗವಹಿಸುವುದಕ್ಕೆ ಅನುಮತಿ ನೀಡಲು ವಿಳಂಬ ಮಾಡುತ್ತಿರುವುದರ ಹಿಂದೆ ರಾಜಕೀಯ ಕಾರಣ ಇದೆ' ಎಂದು ಆರೋಪಿಸಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, 'ನಾನು ಕ್ರಿಮಿನಲ್ ಅಲ್ಲ' ಎಂದು ಹೇಳಿದ್ದಾರೆ.

'ನಾನು ಕ್ರಿಮಿನಲ್ ಅಲ್ಲ. ನಾನು ಮುಖ್ಯಮಂತ್ರಿ ಮತ್ತು ದೇಶದ ಪ್ರಜೆ. ಸಿಂಗಪುರಕ್ಕೆ ಭೇಟಿ ನೀಡುವುದನ್ನು ತಡೆಯಲು ಯಾವುದೇ ಕಾನೂನು ಆಧಾರವಿಲ್ಲ. ಇದರ ಹಿಂದೆ ರಾಜಕೀಯ ಕಾರಣವಿದೆ. ಸಾಮಾನ್ಯವಾಗಿ ವಿದೇಶಗಳಿಗೆ ಭೇಟಿ ನೀಡುವುದಿಲ್ಲ. ಆದರೆ, ದೇಶದ ಪ್ರಗತಿಯ ದೃಷ್ಟಿಯಿಂದ ಸಿಂಗಪುರಕ್ಕೆ ಭೇಟಿ ನೀಡಲು ನಿರ್ಧರಿಸಿದ್ದೇನೆ' ಎಂದು ತಿಳಿಸಿದರು.

ಭಾನುವಾರವಷ್ಟೇ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದ ಕೇಜ್ರಿವಾಲ್, 'ಸಿಂಗಪುರದಲ್ಲಿ ನಡೆಯಲಿರುವ ಸಭೆಯಲ್ಲಿ ಪಾಲ್ಗೊಳ್ಳಲು ಅನುಮತಿಗಾಗಿ ಒಂದು ತಿಂಗಳಿನಿಂದ ಕಾಯುತ್ತಿದ್ದೇನೆ. ಅಲ್ಲಿ ನಗರಗಳ ಅಭಿವೃದ್ಧಿ ಕುರಿತು ಭಾಷಣ ಮಾಡಬೇಕಿದೆ. ಈ ಭೇಟಿ ರಾಷ್ಟ್ರಕ್ಕೆ ಹೆಮ್ಮೆ ತರುತ್ತದೆ' ಎಂದು ಹೇಳಿದ್ದರು.

ಒಳ ಉಡುಪು ತೆಗೆಸಿ ಅಪಮಾನ?

ಕೊಲ್ಲಂ, ಕೇರಳ (ಪಿಟಿಐ): ಕೇರಳದ ಕೊಲ್ಲಂ ಜಿಲ್ಲೆಯ ಖಾಸಗಿ ಶಿಕ್ಷಣ ಸಂಸ್ಥೆಯ ಕೇಂದ್ರದಲ್ಲಿ ನೀಟ್ ಪರೀಕ್ಷೆಗೆ ಹಾಜರಾಗಲು ಅವಕಾಶ ಕಲ್ಪಿಸುವ ಮುನ್ನ ವಿದ್ಯಾರ್ಥಿನಿಯರಿಗೆ ಒಳ ಉಡುಪು ತೆಗೆಸಿ ಅವಮಾನ ಮಾಡಿರುವ ಕೃತ್ಯ ನಡೆದಿದೆ.

ಇದೇ ಮೊದಲ ಬಾರಿಗೆ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿನಿಯೊಬ್ಬರ ತಂದೆ ಈ ಕುರಿತು ದೂರು ನೀಡಿದ್ದು, ಮಗಳು ಇನ್ನೂ ಆ ಮಾನಸಿಕ ಆಘಾತದಿಂದ ಹೊರಬರಬೇಕಾಗಿದೆ ಎಂದು ಹೇಳಿದ್ದಾರೆ.

ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುವ ಅವರು, ಮಾನವ ಹಕ್ಕುಗಳ ಆಯೋಗಕ್ಕೂ ದೂರು ಸಲ್ಲಿಸಲು ತಿಳಿಸಿದ್ದಾರೆ. ನೀಟ್ ಪರೀಕ್ಷೆಗೆ ನೀಡಿದ್ದ ವಸ್ತ್ರ ಸಂಹಿತೆಗೆ ಅನುಗುಣವಾಗಿಯೇ ಮಗಳು ಉಡುಪು ಧರಿಸಿದ್ದರೂ ಆಕೆಗೆ ಅವಮಾನ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಘಟನೆ ಕುರಿತು ತನಿಖೆಗೆ ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗ ತನಿಖೆಗೆ ಆದೇಶಿಸಿದೆ. 15 ದಿನದಲ್ಲಿ ವರದಿ ಸಲ್ಲಿಸಬೇಕು ಎಂದು ಕೊಲ್ಲಂ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದೆ.

8 ಬಂಧನ (ನವದೆಹಲಿ ವರದಿ): ನೀಟ್ ಪರೀಕ್ಷೆಯಲ್ಲಿ ಅಕ್ರಮ ನಡೆಸುತ್ತಿದ್ದ ಜಾಲವನ್ನು ಸಿಬಿಐ ಪತ್ತೆಮಾಡಿದ್ದು, ಪ್ರಮುಖ ಆರೋಪಿ ಸೇರಿದಂತೆ ಒಟ್ಟು ಎಂಟು ಜನರನ್ನು ಬಂಧಿಸಿದೆ. ಪ್ರಶ್ನೆಗಳಿಗೆ ಉತ್ತರ ಒದಗಿಸುವುದು, ನಕಲಿ ಅಭ್ಯರ್ಥಿಗಳ ಹಾಜರಿ ಮೂಲಕ ಅಕ್ರಮ ಎಸಗಲಾಗುತ್ತಿತ್ತು.

ಸ್ಫೋಟ: ಇಬ್ಬರು ಸೇನಾಧಿಕಾರಿಗಳ ಸಾವು

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಪೂಂಚ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯ ಬಳಿ ಆಕಸ್ಮಿಕವಾಗಿ ಗ್ರೆನೇಡ್ ಸ್ಫೋಟಗೊಂಡು ಕ್ಯಾಪ್ಟನ್ ಸೇರಿ ಇಬ್ಬರು ಸೇನಾಧಿಕಾರಿಗಳು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಕ್ಯಾಪ್ಟನ್ ಆನಂದ್ ಮತ್ತು ನಾಯಬ್ ಸುಬೇದಾರ್ ಭಗವಾನ್ ಸಿಂಗ್ ಮೃತಪಟ್ಟವರು.

ಇಬ್ಬರು ಅಧಿಕಾರಿಗಳು ಭಾನುವಾರ ರಾತ್ರಿ ಗಡಿನಿಯಂತ್ರಣ ರೇಖೆಯ ಮೆಂಧರ್ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ ಎಂದು ಸೇನೆಯ ವಕ್ತಾರ ಲೆಫ್ಟಿನೆಂಟ್ ಕರ್ನಲ್ ದೇವೇಂದರ್ ಆನಂದ್ ಹೇಳಿದ್ದಾರೆ.

ಗಾಯಗೊಂಡಿದ್ದ ಇಬ್ಬರು ಅಧಿಕಾರಿಗಳನ್ನು ಕೂಡಲೇ ಹೆಲಿಕಾಪ್ಟರ್ ಮೂಲಕ ಉಧಂಪುರದ ಸೇನಾ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು ಎಂದೂ ಮಾಹಿತಿ ನೀಡಿದ್ದಾರೆ. ಈ ಕುರಿತು ತನಿಖೆಗೆ ಸೇನೆ ಆದೇಶಿಸಿದೆ.

ವಿಐಟಿ–ಎಪಿಯಿಂದ ಮೆರಿಟ್ ಸ್ಕಾಲರ್‌ಶಿಪ್

ಅಮರಾವತಿ: ಆಂಧ್ರ ಪ್ರದೇಶದ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ–ಎಪಿ) ವಿಶ್ವವಿದ್ಯಾಲಯವು ಎಂಜಿನಿಯರಿಂಗ್‌ಯೇತರ ಪದವಿ ಕೋರ್ಸ್ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ನೆರವಾಗುವ ಉದ್ದೇಶದಿಂದ 2022–23ನೇ ಸಾಲಿನ ಜಿ.ವಿ.ಮೆರಿಟ್ ಸ್ಕಾಲರ್‌ಶಿಪ್ ಮತ್ತು ರಾಜೇಶ್ವರಿ ಅಮ್ಮಾಳ್ ಮೆರಿಟ್ ಸ್ಕಾಲರ್‌ಶಿಪ್ ನೀಡಲಿದೆ ಎಂದು ಕುಲಾಧಿಪತಿ ಡಾ.ಜಿ. ವಿಶ್ವನಾಥನ್ ತಿಳಿಸಿದ್ದಾರೆ.

ಈ ಕುರಿತು ಕುಲಪತಿ ಡಾ.ಎಸ್. ವಿ.ಕೋಟಾ ರೆಡ್ಡಿ ಮಾಹಿತಿ ನೀಡಿದ್ದು, ದೇಶದಾದ್ಯಂತ ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಟಾಪರ್ ಆಗಿರುವ ವಿದ್ಯಾರ್ಥಿ ಜಿ.ವಿ.ಮೆರಿಟ್ ಸ್ಕಾಲರ್‌ಶಿಪ್ ಪಡೆಯಬಹುದು. ಇದರಡಿಯಲ್ಲಿ ವಿದ್ಯಾರ್ಥಿಯು ಪದವಿಯ ಅಷ್ಟೂ ವರ್ಷ ಶೇ 100ರಷ್ಟು ಸ್ಕಾಲರ್‌ಶಿಪ್ ಪಡೆಯಲಿದ್ದಾರೆ ಎಂದು ತಿಳಿಸಿದ್ದಾರೆ.

ರಾಜೇಶ್ವರಿ ಅಮ್ಮಾಳ್ ಮೆರಿಟ್ ಸ್ಕಾಲರ್‌ಶಿಪ್ ಪಡೆಯುವ ವಿದ್ಯಾರ್ಥಿಗಳು ದೇಶದ ಯಾವುದೇ ರಾಜ್ಯದ ಜಿಲ್ಲೆಯ ಟಾಪರ್ ಆಗಿರಬೇಕು. ಇವರು ಪದವಿಯಲ್ಲಿ ಪಡೆಯುವ ಟ್ಯೂಷನ್ ಶುಲ್ಕದಲ್ಲಿ ಶೇ 50ರಷ್ಟು ಸ್ಕಾಲರ್‌ಶಿಪ್ ಪಡೆಯಲು ಅರ್ಹರಾಗಿರುತ್ತಾರೆ. ಜಿಲ್ಲೆಯ ಟಾಪರ್ ವಿದ್ಯಾರ್ಥಿನಿಯಾಗಿದ್ದಲ್ಲಿ ಹೆಚ್ಚುವರಿ ಶೇ 25ರಷ್ಟು ಸ್ಕಾಲರ್‌ಶಿಪ್ ಪಡೆಯಲಿದ್ದಾರೆ ಎಂದು ತಿಳಿಸಿದ್ದಾರೆ.

ಸ್ನಾತಕೋತ್ತರ ಮೆರಿಟ್ ಸ್ಕಾಲರ್‌ಶಿಪ್ ಸಹ ಇದ್ದು, ಅದರ ಬಗ್ಗೆ ರಿಜಿಸ್ಟ್ರಾರ್ ಡಾ.ಜಗದೀಶ್ ಚಂದ್ರ ಮುದುಗಂಟಿ ಮಾಹಿತಿ ನೀಡಿದರು. ಜುಲೈ 31ರೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ www.vitap.ac.in ಸಂಪರ್ಕಿಸಲು ತಿಳಿಸಲಾಗಿದೆ.

ವಿಂಡೀಸ್ ತಂಡ: ಹೋಲ್ಡರ್‌ಗೆ ಸ್ಥಾನ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಭಾರತ ವಿರುದ್ಧದ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಗೆ 13 ಸದಸ್ಯರ ವೆಸ್ಟ್ ಇಂಡೀಸ್ ತಂಡವನ್ನು ಪ್ರಕಟಿಸಲಾಗಿದ್ದು, ಆಲ್‌ರೌಂಡರ್ ಜೇಸನ್ ಹೋಲ್ಡರ್ ಅವರಿಗೆ ಅವಕಾಶ ನೀಡಲಾಗಿದೆ.

ಬಾಂಗ್ಲಾದೇಶ ಎದುರು ತವರಿನಲ್ಲಿ ಇತ್ತೀಚೆಗೆ ನಡೆದ ಸರಣಿಯಲ್ಲಿ ಮಾಜಿ ನಾಯಕನೂ ಆಗಿರುವ ಹೋಲ್ಡರ್ ಅವರಿಗೆ ಸ್ಥಾನ ನೀಡಿರಲಿಲ್ಲ. ಆದರೆ ಕ್ರಿಕೆಟ್ ವೆಸ್ಟ್ ಇಂಡೀಸ್ ಆಯ್ಕೆ ಸಮಿತಿ, ಭಾರತ ವಿರುದ್ಧದ ಸರಣಿಗೆ ಅವರನ್ನು ಪರಿಗಣಿಸಿದೆ.

ಬಾಂಗ್ಲಾದೇಶದ ಎದುರು ಏಕದಿನ ಸರಣಿಯಲ್ಲಿ 0–3 ರಲ್ಲಿ ಮುಖಭಂಗ ಎದುರಾದರೂ ನಿಕೊಲಸ್ ಪೂರನ್ ಅವರನ್ನು ನಾಯಕರಾಗಿ ಮುಂದುವರಿಸಲಾಗಿದೆ. ಶಾಯ್ ಹೋಪ್‌ಗೆ ಉಪ ನಾಯಕನ ಜವಾಬ್ದಾರಿ ನೀಡಲಾಗಿದೆ.

ಭಾರತ– ವೆಸ್ಟ್‌ಇಂಡೀಸ್ ನಡುವಿನ ಮೂರು ಏಕದಿನ ಪಂದ್ಯಗಳು ಕ್ರಮವಾಗಿ ಜುಲೈ 22, 24 ಮತ್ತು 27 ರಂದು ನಡೆಯಲಿವೆ.



ಜೇಸನ್ ಹೋಲ್ಡರ್

ವೆಸ್ಟ್ ಇಂಡೀಸ್ ತಂಡ: ನಿಕೊಲಸ್ ಪೂರನ್ (ನಾಯಕ), ಶಾಯ್ ಹೋಪ್ (ಉಪನಾಯಕ), ಶಮರ್ ಬ್ರೂಕ್ಸ್, ಕೀಸ್ ಕಾರ್ಟಿ, ಜೇಸನ್ ಹೋಲ್ಡರ್, ಅಕೀಲ್ ಹೊಸೇನ್, ಅಲ್ಜಾರಿ ಜೋಸೆಫ್, ಬ್ರೆಂಡನ್ ಕಿಂಗ್, ಕೈಲ್ ಮೇಯರ್ಸ್, ಗುಡಾಕೇಶ್ ಮೋತಿ, ಕೀಮೊ ಪೌಲ್, ರೊವ್ಮನ್ ಪೊವೆಲ್, ಜೇಡೆನ್ ಸೀಲ್ಸ್.

ರ‍್ಯಾಂಕಿಂಗ್: 3ನೇ ಸ್ಥಾನದಲ್ಲಿ ಭಾರತ

ದುಬೈ (ಪಿಟಿಐ): ಇಂಗ್ಲೆಂಡ್ ಎದುರಿನ ಮೂರು ಪಂದ್ಯಗಳ ಸರಣಿಯನ್ನು 2–1 ರಲ್ಲಿ ಗೆದ್ದ ಭಾರತ ತಂಡ, ಐಸಿಸಿ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.

ಭಾನುವಾರ ನಡೆದ ಕೊನೆಯ ಪಂದ್ಯದಲ್ಲಿ ಭಾರತ ತಂಡ ಇಂಗ್ಲೆಂಡ್ ವಿರುದ್ಧ ಐದು ವಿಕೆಟ್ ಜಯ ಸಾಧಿಸಿತ್ತು. ಅಜೇಯ ಶತಕ ಗಳಿಸಿದ ರಿಷಭ್ ಪಂತ್ (125) ಮತ್ತು ಆಲ್‌ರೌಂಡ್ ಆಟವಾಡಿದ ಹಾರ್ದಿಕ್ ಪಾಂಡ್ಯ (71) ಭಾರತದ ಗೆಲುವಿಗೆ ಕಾರಣರಾಗಿದ್ದರು.

ಒಟ್ಟು 109 ಪಾಯಿಂಟ್‌ಗಳನ್ನು ಹೊಂದಿರುವ ಭಾರತ, ರ‍್ಯಾಂಕಿಂಗ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಪಾಕಿಸ್ತಾನಕ್ಕಿಂತ (106) ಮೂರು ರೇಟಿಂಗ್ ಪಾಯಿಂಟ್‌ಗಳಿಂದ ಮುನ್ನಡೆಯಲ್ಲಿದೆ.

128 ಪಾಯಿಂಟ್ ಹೊಂದಿರುವ ನ್ಯೂಜಿಲೆಂಡ್ ಅಗ್ರಸ್ಥಾನದಲ್ಲಿದ್ದು, ಇಂಗ್ಲೆಂಡ್ (121) ಎರಡನೇ ಸ್ಥಾನದಲ್ಲಿದೆ.

ಕ್ರಿಕೆಟ್: ಲಂಕಾ ನೆರವಿಗೆ ಚಾಂಡಿಮಲ್

ಗಾಲ್ (ಪಿಟಿಐ): ದಿನೇಶ್ ಚಾಂಡಿಮಲ್ (ಬ್ಯಾಟಿಂಗ್ 86) ಮತ್ತು ಕುಸಾಲ್ ಮೆಂಡಿಸ್ (76) ಅವರ ಅರ್ಧಶತಕದ ನೆರವಿನಿಂದ ಶ್ರೀಲಂಕಾ ತಂಡ, ಪಾಕಿಸ್ತಾನ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಮರುಹೋರಾಟ ನಡೆಸಿದೆ.

ಮೂರನೇ ದಿನವಾದ ಸೋಮವಾರದ ಆಟದ ಅಂತ್ಯಕ್ಕೆ ಲಂಕಾ ತಂಡ ಎರಡನೆ ಇನಿಂಗ್ಸ್‌ನಲ್ಲಿ 9 ವಿಕೆಟ್‌ಗೆ 329 ರನ್ ಗಳಿಸಿದ್ದು, ಒಟ್ಟಾರೆ 333 ರನ್‌ಗಳ ಮುನ್ನಡೆ ಸಾಧಿಸಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ಶ್ರೀಲಂಕಾ 222, ಪಾಕಿಸ್ತಾನ 218. ಎರಡನೇ ಇನಿಂಗ್ಸ್ ಶ್ರೀಲಂಕಾ 9ಕ್ಕೆ 329 (96 ಓವರ್) ಒಶಾದ ಫೆರ್ನಾಂಡೊ 64, ಕುಸಾಲ್ ಮೆಂಡಿಸ್ 76, ದಿನೇಶ್ ಚಾಂಡಿಮಲ್ ಬ್ಯಾಟಿಂಗ್ 86, ನವಾಜ್ 88ಕ್ಕೆ 5, ಯಾಸಿರ್ ಶಾ 122ಕ್ಕೆ 3)

ಎಫ್‌ಐಎಚ್‌ ಅಧ್ಯಕ್ಷ ಸ್ಥಾನಕ್ಕೆ ನರೀಂದರ್ ರಾಜೀನಾಮೆ

ನರೀಂದರ್ ಬಾತ್ರಾ

ನವದೆಹಲಿ (ಪಿಟಿಐ): ಹಿರಿಯ ಕ್ರೀಡಾ ಆಡಳಿತಗಾರ ನರೀಂದರ್ ಬಾತ್ರಾ ಅವರು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಅಧ್ಯಕ್ಷ ಸ್ಥಾನ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷ ಸ್ಥಾನದಿಂದಲೂ ಅಧಿಕೃತವಾಗಿ ಕೆಳಗಿಳಿದಿದ್ದಾರೆ. ಐಒಎ ಅಧ್ಯಕ್ಷರಾಗಿ ಯಾವುದೇ ಕೆಲಸ ನಿರ್ವಹಿಸಬಾರದು ಎಂದು ದೆಹಲಿ ಹೈಕೋರ್ಟ್ ಈ ಹಿಂದೆಯೇ ಅವರಿಗೆ ಸೂಚಿಸಿತ್ತು.

ಐಒಎ, ಐಒಸಿ ಮತ್ತು ಎಫ್‌ಐಎಚ್‌ಗೆ ಪ್ರತ್ಯೇಕವಾಗಿ ರಾಜೀನಾಮೆ ಪತ್ರ ಬರೆದು ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ. ‘ವೈಯಕ್ತಿಕ ಕಾರಣಗಳಿಂದಾಗಿ ರಾಜೀನಾಮೆ ನೀಡುತ್ತಿದ್ದೇನೆ’ ಎಂದೂ ಪತ್ರದಲ್ಲಿ ಹೇಳಿದ್ದಾರೆ.

ಹಾಕಿ ಇಂಡಿಯಾದಲ್ಲಿ (ಎಚ್‌ಐ) ‘ಆಜೀವ ಸದಸ್ಯತ್ವ’ ಎಂಬ ಪದವಿಯನ್ನು ಕಿತ್ತುಹಾಕಿರುವುದಾಗಿ ದೆಹಲಿ ಹೈಕೋರ್ಟ್ ಮೇ 25 ರಂದು ತೀರ್ಪು ನೀಡಿತ್ತು. ಬಾತ್ರಾ ಅವರು ಎಚ್‌ಐ ಆಜೀವ ಸದಸ್ಯರಾಗಿದ್ದುಕೊಂಡು 2017ರಲ್ಲಿ ಐಒಎ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದರು.

ದೆಹಲಿ ಹೈಕೋರ್ಟ್ ತೀರ್ಪಿನ ಕಾರಣ ಅವರು ಐಒಎ ಅಧ್ಯಕ್ಷ ಸ್ಥಾನ ಕಳೆದುಕೊಂಡಿದ್ದರು. ಹಿರಿಯ ಉಪಾಧ್ಯಕ್ಷ ಅನಿಲ್ ಖನ್ನಾ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ಹೈಕೋರ್ಟ್ ನೇಮಕ ಮಾಡಿತ್ತು.

ಈ ತೀರ್ಪಿಗೆ ತಡೆಯಾಜ್ಞೆ ಕೋರಿ ಬಾತ್ರಾ ಸಲ್ಲಿಸಿದ್ದ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿತ್ತು. ಈ ಎಲ್ಲಾ ಬೆಳವಣಿಗೆಯ ಹಿನ್ನೆಲೆಯಲ್ಲಿ ಅವರು ವಿವಿಧ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ.

65 ವರ್ಷದ ಬಾತ್ರಾ 2017ರಲ್ಲಿ ಮೊದಲ ಬಾರಿ ಐಒಎ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಮತ್ತೊಮ್ಮೆ ಸ್ಪರ್ಧಿಸುವ ಅರ್ಹತೆಯನ್ನೂ ಹೊಂದಿದ್ದರು. ಐಒಎ ಚುನಾವಣೆ ಕಳೆದ ಡಿಸೆಂಬರ್‌ನಲ್ಲಿ ನಡೆಯಬೇಕಿತ್ತು. ಆದರೆ ನಿಯಮಗಳಲ್ಲಿ ತಿದ್ದುಪಡಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ಚುನಾವಣೆ ನಿಗದಿತ ವೇಳಾಪಟ್ಟಿಯಂತೆ ನಡೆದಿಲ್ಲ. ಅವರು 2019ರಲ್ಲಿ ಐಒಸಿ ಸದಸ್ಯರಾಗಿದ್ದರು.

ಬಾತ್ರಾ ಆಡಳಿತ ವಿವಾದಗಳಿಂದ ಹೊರತಾಗಿರಲಿಲ್ಲ. ಅವರ ವಿರುದ್ಧ ಹಣ ದುರುಪಯೋಗ ಆರೋಪ ಹೊರಿಸಿ ಐಒಎ ಉಪಾಧ್ಯಕ್ಷ ಸುಧಾಂಶು ಮಿತ್ತಲ್ 2020 ರಲ್ಲಿ ಐಒಸಿಗೆ ಪತ್ರ ಬರೆದಿದ್ದರು.

ಐದು ಕಡೆ ಸಿಬಿಐ ಶೋಧ

ನರೀಂದರ್ ಬಾತ್ರಾ ಅವರಿಗೆ ಸೇರಿದ ಕಚೇರಿಗಳು ಒಳಗೊಂಡಂತೆ ಐದು ಸ್ಥಳಗಳಲ್ಲಿ ಸಿಬಿಐ ಅಧಿಕಾರಿಗಳು ಸೋಮವಾರ ಶೋಧಕಾರ್ಯ ನಡೆಸಿದ್ದಾರೆ. ರಾಜೀನಾಮೆ ನಿರ್ಧಾರದ ದಿನದಂದೇ ಈ ಬೆಳವಣಿಗೆ ನಡೆದಿದೆ.

‘ದೆಹಲಿ ಮತ್ತು ಜಮ್ಮುವಿನಲ್ಲಿ ಶೋಧ ಕಾರ್ಯ ನಡೆದಿದೆ. ಭ್ರಷ್ಟಾಚಾರ ಪ್ರಕರಣದಲ್ಲಿ ಬಾತ್ರಾ ವಿರುದ್ಧ ಎಫ್‌ಐಆರ್ ದಾಖಲಿಸಿದ ಬಳಿಕ ಶೋಧ ಕಾರ್ಯ ನಡೆಸಿದ್ದೇವೆ’ ಎಂದು ಸಿಬಿಐ ಅಧಿಕಾರಿಯೊಬ್ಬರು ತಿಳಿಸಿದರು.

‘ಹಾಕಿ ಇಂಡಿಯಾಕ್ಕೆ ಸೇರಿದ ₹ 35 ಲಕ್ಷ ಮೊತ್ತವನ್ನು ಬಾತ್ರಾ ತಮ್ಮ ವೈಯಕ್ತಿಕ ಬಳಕೆಗೆ ವಿನಿಯೋಗಿಸಿದ್ದಾರೆ ಎಂದು ದೂರು ಬಂದಿತ್ತು. ಆ ದೂರಿನಂತೆ ಏಪ್ರಿಲ್ ತಿಂಗಳಲ್ಲಿ ಅವರ ವಿರುದ್ಧ ಪ್ರಾಥಮಿಕ ತನಿಖೆಯ ಆರಂಭಿಸಲಾಗಿತ್ತು’ ಎಂದರು.

ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್: ಮಹಿಳಾ ತಂಡಕ್ಕೆ ಕಂಚು

ಮೈರಾಜ್‌ಗೆ ಐತಿಹಾಸಿಕ ಚಿನ್ನ

ಮುಖ್ಯಾಂಶಗಳು

- ಸ್ಕೀಟ್ ವಿಭಾಗದಲ್ಲಿ ಈ ಸಾಧನೆ ಮಾಡಿದ ಮೊದಲ ಭಾರತೀಯ
- ಕಂಚು ಗೆದ್ದ ಅಂಜುಮ್, ಆಶಿ ಮತ್ತು ಸಿಫ್ಟ್ ಕೌರ್ ಅವರಿದ್ದ ತಂಡ
- ಪದಕಪಟ್ಟಿಯಲ್ಲಿ ಭಾರತದ ಅಗ್ರಸ್ಥಾನ ಮತ್ತಷ್ಟು ಭದ್ರ

ಚಾಂಗ್ವಾನ್, ದಕ್ಷಿಣ ಕೊರಿಯಾ: ಭಾರತದ ಮೈರಾಜ್ ಅಹ್ಮದ್ ಖಾನ್ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಟೂರ್ನಿಯಲ್ಲಿ ಚಿನ್ನದ ಪದಕಕ್ಕೆ ಗುರಿಯಿಟ್ಟಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಸೋಮವಾರ ಪುರುಷರ ಸ್ಕೀಟ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸುವ ಈ ಸಾಧನೆ ಮಾಡಿದ ಮೊದಲ ಭಾರತದ ಶೂಟರ್ ಎಂಬ ಶ್ರೇಯ ತಮ್ಮದಾಗಿಸಿಕೊಂಡರು.

46 ವರ್ಷದ ಮೈರಾಜ್, 40 ಶಾಟ್‌ಗಳ ಫೈನಲ್‌ನಲ್ಲಿ ಅಮೋಘ 37 ಪಾಯಿಂಟ್ಸ್ ಕಲೆಹಾಕಿದರು. ದಕ್ಷಿಣ ಕೊರಿಯಾದ ಮಿನ್ಸು ಕಿಮ್ (36 ಪಾಯಿಂಟ್ಸ್) ಮತ್ತು ಬ್ರಿಟನ್‌ನ ಬೆನ್ ಲೆವೆಲ್ಲಿನ್ (26) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಕೊರಳೊಡ್ಡಿದರು.

ಅರ್ಹತಾ ಸುತ್ತಿನಲ್ಲಿ 125ರ ಪೈಕಿ ಮೈರಾಜ್ 119 ಪಾಯಿಂಟ್ಸ್ ಕಲೆಹಾಕಿದ್ದರು.

ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ವಿಜಯ್‌ವೀರ್ ಸಿಧು ರ್‍ಯಾಂಕಿಂಗ್ ಸುತ್ತಿಗೆ ಅವಕಾಶ ಪಡೆದರೂ ಪದಕದ ಸುತ್ತಿಗೆ ಅರ್ಹತೆ ಗಳಿಸಲು ವಿಫಲರಾದರು. ಪುರುಷರ 25 ಮೀ. ರ್‍ಯಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಕಣಕ್ಕಿಳಿದಿದ್ದ ಅನೀಶ್ 12ನೇ ಮತ್ತು ಸಮೀರ್ 30ನೇ ಸ್ಥಾನ ಗಳಿಸಿದರು. ಮಹಿಳೆಯರ ಸ್ಕೀಟ್‌ನಲ್ಲಿ ಮುಫದ್ದಾಲ್ ದೀಸ್ವಾಲ 23ನೇ ಸ್ಥಾನ ಗಳಿಸಿದರು.

ಎರಡು ಬಾರಿಯ ಒಲಿಂಪಿಯನ್, ಚಾಂಗ್ವಾನ್‌ಗೆ ತೆರಳಿರುವ ಭಾರತ ತಂಡದ ಅತ್ಯಂತ ಹಿರಿಯ ಶೂಟರ್ ಆಗಿರುವ ಮೈರಾಜ್, 2016ರ ರಿಯೊ ಡಿ ಜನೈರೊ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು.

ಮೈರಾಜ್ ಅಹ್ಮದ್ ಖಾನ್

ಇದಕ್ಕೂ ಮೊದಲು ಅಂಜುಮ್ ಮೌದ್ಗಿಲ್, ಆಶಿ ಚೌಕ್ಸಿ ಮತ್ತು ಸಿಫ್ಟ್ ಕೌರ್ ಸಮ್ರಾ ಅವರಿದ್ದ ಭಾರತ ಮಹಿಳಾ ತಂಡವು 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಕಂಚಿನ ಪದಕಕ್ಕೆ ಮುತ್ತಿಟ್ಟಿತು.

ಕಂಚಿನ ಪದಕದ ಸುತ್ತಿನಲ್ಲಿ ಈ ಶೂಟರ್‌ಗಳು 16–6ರಿಂದ ಆಸ್ಟ್ರಿಯಾದ ಶಲೀನ್ ವೈಬೆಲ್, ನದಿನ್ ಉಂಗ್‌ರಂಕ್ ಮತ್ತು ರೆಬೆಕ್ಕಾ ಕೊಯೆಕ್ ಅವರನ್ನು ಪರಾಭವಗೊಳಿಸಿದರು.

ಸೋಮವಾರ ಗೆದ್ದ ತಲಾ ಒಂದು ಚಿನ್ನ ಮತ್ತು ಕಂಚಿನ ಪದಕದೊಂದಿಗೆ ಭಾರತ ತಂಡವು ಪದಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದೆ. ತಂಡದ ಬಳಿ ಸದ್ಯ ಒಟ್ಟು 13 (ತಲಾ ಐದು ಚಿನ್ನ, ಬೆಳ್ಳಿ ಮತ್ತು 3 ಕಂಚು) ಪದಕಗಳಿವೆ.

ಏಕದಿನ ಕ್ರಿಕೆಟ್: ಬೆನ್ ಸ್ಟೋಕ್ಸ್ ವಿದಾಯ

ಬೆನ್ ಸ್ಟೋಕ್ಸ್

ಲಂಡನ್ (ಪಿಟಿಐ): ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಬೆನ್ ಸ್ಟೋಕ್ಸ್, ಏಕದಿನ ಕ್ರಿಕೆಟ್‌ಗೆ ನಿವೃತ್ತಿ ಪ್ರಕಟಿಸಿದ್ದಾರೆ. ಅತ್ಯುತ್ತಮ ಫಾರ್ಮ್‌ನಲ್ಲಿ ಇರುವ ಸಮಯದಲ್ಲೇ ನಿವೃತ್ತಿ ನಿರ್ಧಾರ ಕೈಗೊಂಡಿರುವುದು ಅಚ್ಚರಿ ಉಂಟುಮಾಡಿದೆ.

31 ವರ್ಷ ಸ್ಟೋಕ್ಸ್ ಅವರು ಮಂಗಳವಾರ ಡರ್‌ಹ್ಯಾಮ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ತಮ್ಮ ಕೊನೆಯ ಏಕದಿನ ಪಂದ್ಯ ಆಡಲಿದ್ದಾರೆ.

‘ಏಕದಿನ ಮಾದರಿಯಿಂದ ನಿವೃತ್ತಿ ಆಗಲು ನಿರ್ಧರಿಸಿದ್ದೇನೆ’ ಎಂದು ಇಸಿಬಿ ಹೇಳಿಕೆಯಲ್ಲಿ ಸ್ಟೋಕ್ಸ್ ತಿಳಿಸಿದ್ದಾರೆ.

‘ಕ್ರಿಕೆಟ್‌ನ ಎಲ್ಲ ಮೂರು ಮಾದರಿಗಳಲ್ಲಿ ಆಡಲು ನನಗೆ ಕಷ್ಟವಾಗುತ್ತಿದೆ. ನಿಬಿಡ ವೇಳಾಪಟ್ಟಿಗೆ ಹೊಂದಿಕೊಳ್ಳಲು ದೇಹಕ್ಕೆ ಸಾಧ್ಯವಾಗುತ್ತಿಲ್ಲ. ಏಕದಿನ ಮಾದರಿಯಿಂದ ನಿವೃತ್ತಿಯಾದರೆ, ಟೆಸ್ಟ್ ಮತ್ತು ಟಿ20 ಆಟದತ್ತ ಹೆಚ್ಚಿನ ಗಮನ ಹರಿಸಲು ಸಾಧ್ಯ’ ಎಂದು ಹೇಳಿದ್ದಾರೆ.

2011 ರಲ್ಲಿ ಐರ್ಲೆಂಡ್ ವಿರುದ್ಧ ಡಬ್ಲಿನ್‌ನಲ್ಲಿ ನಡೆದ ಪಂದ್ಯದ ಮೂಲಕ ಸ್ಟೋಕ್ಸ್ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಮಂಗಳವಾರ ನಡೆಯಲಿರುವ ಪಂದ್ಯ ಅವರ 105ನೇ ಪಂದ್ಯ ಆಗಿದೆ.

ಮೂರು ವರ್ಷಗಳ ಹಿಂದೆ ಲಾರ್ಡ್ಸ್‌ನಲ್ಲಿ ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಅಮೋಘ ಆಟವಾಡಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದಿದ್ದರು. ಆ ಪ್ರದರ್ಶನ ಅವರ ವೃತ್ತಿಜೀವನದ ಸ್ಮರಣೀಯ ಗಳಿಗೆ ಎನಿಸಿಕೊಂಡಿದೆ.

ಸ್ಟೋಕ್ಸ್ ಅವರು ಏಪ್ರಿಲ್ ತಿಂಗಳಲ್ಲಿ ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕತ್ವದ ಜವಾಬ್ದಾರಿ ಹೊತ್ತುಕೊಂಡಿದ್ದರು. ಟೆಸ್ಟ್ ಅಲ್ಲದೆ, ಟಿ20 ಮಾದರಿಯಲ್ಲೂ ಅವರು ಆಟ ಮುಂದುವರಿಸಲಿದ್ದಾರೆ.

ಸ್ಟೋಕ್ಸ್ ಸಾಧನೆ

ಪಂದ್ಯ	104
ರನ್	2,919
ಸರಾಸರಿ	39.44
ಸ್ಟ್ರೈಕ್‌ರೇಟ್	95.26
ಶತಕ	3
ಅರ್ಧಶತಕ	21
ವಿಕೆಟ್	74

ಮೂರು ಪದಕದ ಸಂಭ್ರಮ.... ಮಹಿಳೆಯರ 100 ಮೀ. ಓಟದಲ್ಲಿ ಪದಕ ಗೆದ್ದ (ಎಡದಿಂದ) ಜಮೈಕಾದ ಶೆರಿಕ ಜಾನ್ಸನ್, ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ ಮತ್ತು ಎಲೈನ್ ಥಾಂಪ್ಸನ್ ಹೆರಾ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ವಿಶ್ವ ಅಥ್ಲೆಟಿಕ್ಸ್: ಮಹಿಳೆಯರ 100 ಮೀಟರ್ಸ್ ಓಟ

ಫ್ರೇಸರ್ ಪ್ರೈಸ್ ದಾಖಲೆ

ಯೂಜೀನ್, ಅಮೆರಿಕ (ರಾಯಿಟರ್ಸ್/ಎಎಫ್‌ಪಿ): ಜಮೈಕಾದ ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್, ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ 100 ಮೀ. ಓಟದಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.

ಭಾನುವಾರ ನಡೆದ ಸ್ಪರ್ಧೆಯಲ್ಲಿ ಅವರು ಕೂಟ ದಾಖಲೆಯೊಂದಿಗೆ 10.67 ಸೆಕೆಂಡುಗಳಲ್ಲಿ ಗುರಿ ತಲುಪಿದರು. 35 ವರ್ಷದ ಫ್ರೇಸರ್ ಪ್ರೈಸ್‌ಗೆ ವಿಶ್ವ ಅಥ್ಲೆಟಿಕ್ಸ್‌ನ 100 ಮೀ. ಓಟದಲ್ಲಿ ಒಟ್ಟಾರೆಯಾಗಿ ದೊರೆತ ಐದನೇ ಪದಕ ಇದಾಗಿದೆ.

ಅವರು ಈ ಮೊದಲು 2009, 2013, 2015 ಮತ್ತು 2019 ರಲ್ಲಿ 100 ಮೀ. ಓಟದಲ್ಲಿ ಚಿನ್ನ ಗೆದ್ದಿದ್ದರು. ವಿಶ್ವ ಅಥ್ಲೆಟಿಕ್ಸ್‌ನ ಟ್ರ್ಯಾಕ್ ಸ್ಪರ್ಧೆಯ ಒಂದೇ ವಿಭಾಗದಲ್ಲಿ ಐದು ಚಿನ್ನ ಗೆದ್ದ ಮೊದಲ ಅಥ್ಲೀಟ್ ಎಂಬ ಹಿರಿಮೆ ಅವರಿಗೆ ಒಲಿಯಿತು.

ಜಮೈಕಾ ಕ್ಲೀನ್‌ಸ್ವೀಪ್: ಮಹಿಳೆಯರ 100 ಮೀ. ಓಟದ ಮೂರೂ ಪದಕಗಳು ಜಮೈಕಾ ಪಾಲಾದವು. ಶೆರಿಕ ಜಾನ್ಸನ್ (10.73 ಸೆ.) ಬೆಳ್ಳಿ ಹಾಗೂ ಎಲೈನ್ ಥಾಂಪ್ಸನ್ ಹೆರಾ (10.81 ಸೆ.) ಕಂಚು ಗೆದ್ದರು.

ವಿಶ್ವ ಅಥ್ಲೆಟಿಕ್ಸ್‌ನ ಮಹಿಳೆಯರ 100 ಮೀ. ಓಟದ ಮೂರೂ ಪದಕಗಳು ಒಂದೇ ದೇಶದ ಅಥ್ಲೀಟ್‌ಗಳ ಪಾಲಾಗಿದ್ದು ಇದೇ ಮೊದಲು. ಪುರುಷರ ವಿಭಾಗದಲ್ಲಿ ಅಮೆರಿಕ ಕೂಡಾ ‘ಕ್ಲೀನ್‌ಸ್ವೀಪ್’ ಸಾಧನೆ ಮಾಡಿತ್ತು.

‘ವೃತ್ತಿಜೀವನದಲ್ಲಿ ಎಷ್ಟು ಬಾರಿ ಹಿನ್ನಡೆ ಅನುಭವಿಸಿದ್ದೇನೆ, ಎಷ್ಟು ಬಾರಿ ಪುಟಿದೆದ್ದು ಬಂದಿದ್ದೇನೆ ಎಂಬುದನ್ನು ನನಗೆ ಊಹಿಸಲೂ ಸಾಧ್ಯವಿಲ್ಲ. ಇಲ್ಲಿ ಮತ್ತೆ ಎದ್ದು ಬಂದಿದ್ದೇನೆ’ ಎಂದು ಐತಿಹಾಸಿಕ ಚಿನ್ನ ಗೆದ್ದ ಫ್ರೇಸರ್ ಪ್ರೈಸ್ ಪ್ರತಿಕ್ರಿಯಿಸಿದರು.

ಗೆಬ್ರೆಸೆಲಾಸಿಗೆ ಮ್ಯಾರಥಾನ್ ಚಿನ್ನ: ಕೊನೆಯ ಎರಡು ಕಿ.ಮೀ.ಗಳಲ್ಲಿ ವೇಗ ಹೆಚ್ಚಿಸಿಕೊಂಡ ಇಥಿಯೋಪಿಯದ ಗೊಟಿಟೊಮ್ ಗೆಬ್ರೆಸೆಲಾಸಿ, ಮಹಿಳೆಯರ ಮ್ಯಾರಥಾನ್‌ನಲ್ಲಿ ಚಿನ್ನ ಗೆದ್ದರು. ಅವರು 42 ಕಿ.ಮೀ. ದೂರವನ್ನು ಎರಡು ಗಂಟೆ 18.11 ನಿಮಿಷಗಳಲ್ಲಿ ಕ್ರಮಿಸಿದರು.

ಕೆನ್ಯಾದ ಜುಡಿತ್ ಜೆಪ್ತುಮ್ ಕೊರಿರ್ (2 ಗಂ. 18.20 ನಿ.) ಬೆಳ್ಳಿ ಗೆದ್ದರೆ, ಕೆನ್ಯಾ ಮೂಲದ ಇಸ್ರೇಲ್‌ನ ಅಥ್ಲೀಟ್ ಲೊನಾ ಚೆಮ್ತಾಯ್ ಸಲ್ಪಿಟರ್ (2 ಗಂ. 20.18 ನಿ.) ಅವರು ಬೆಳ್ಳಿ ತಮ್ಮದಾಗಿಸಿಕೊಂಡರು.

2021ರ ಬರ್ಲಿನ್ ಮ್ಯಾರಥಾನ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದ ಗೆಬ್ರೆಸೆಲಾಸಿ, ಕಳೆದ ವರ್ಷ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಪಡೆದಿದ್ದರು.

ಗಾಲ್ಫ್: ವಾಣಿಗೆ ಜಂಟಿ ಮೂರನೇ ಸ್ಥಾನ

ವಾಣಿ ಕಪೂರ್

ಅರ್ನ್‌ಹೆಮ್, ನೆದರ್ಲೆಂಡ್ಸ್ (ಪಿಟಿಐ): ಭಾರತದ ಗಾಲ್ಫ್ ಆಟಗಾರ್ತಿ ವಾಣಿ ಕಪೂರ್ ಅವರು ಇಲ್ಲಿ ನಡೆದ ಬಿಗ್ ಗ್ರೀನ್ ಎಗ್ ಓಪನ್ ಟೂರ್ನಿಯಲ್ಲಿ ಜೀವನಶ್ರೇಷ್ಠ ಜಂಟಿ ಮೂರನೇ ಸ್ಥಾನ ಗಳಿಸಿದರು.

2017ರಲ್ಲಿ ನಡೆದ ಇಂಡಿಯನ್ ಓಪನ್ ಮಹಿಳಾ ಗಾಲ್ಫ್ ಟೂರ್ನಿಯಲ್ಲಿ ಜಂಟಿ ಆರನೇ ಸ್ಥಾನ ಗಳಿಸಿದ್ದ ವಾಣಿ, ಲಯ ಕಳೆದುಕೊಂಡಿದ್ದರು. ಆದರೆ ಇಲ್ಲಿ ಉತ್ತಮ ಸಾಮರ್ಥ್ಯ ತೋರಿದರು.

ಸ್ವೀಡನ್‌ನ ಅನ್ನಾ ನಾರ್ಡ್‌ವಿಸ್ಟ್ ಪ್ರಶಸ್ತಿ ಜಯಿಸಿದರು. ಆಸ್ಟ್ರಿಯಾದ ಸಾರಾ ಶೋಬರ್ ರನ್ನರ್ ಅಪ್ ಆದರು. ವಾಣಿ ಅವರೊಂದಿಗೆ ಜರ್ಮನಿಯ ಸೋಫಿಯಾ ವಿಟ್ ಮತ್ತು ಸ್ಪೇನ್‌ನ ನೂರಿಯಾ ಇಟುರಿಜ್ ಮೂರನೇ ಸ್ಥಾನ ಗಳಿಸಿದರು.

ಭಾರತದ ಇನ್ನುಳಿದ ಆಟಗಾರ್ತಿಯರಾದ ದೀಕ್ಷಾ ದಾಗರ್ 17ನೇ, ಅಮನ್‌ದೀಪ್ ಡ್ರಾಲ್ ಜಂಟಿ 48ನೇ ಮತ್ತು ರಿಧಿಮಾ ದಿಲಾವರಿ ಜಂಟಿ 57ನೇ ಸ್ಥಾನ ಗಳಿಸಿದರು.

ಕೌಶಲ್ ಕಿಶೋರ್ ಆನಂದ್ (ವ್ಯಾಪಾರಿ)

ಮೊದಲು ನನಗೆ ನಡೆದಾಡಲಿಕ್ಕೂ ಕಷ್ಟವಾಗುತ್ತಿತ್ತು ಆದರೀಗ ಓಡಾಡಬಲ್ಲವನಾಗಿದ್ದೇನೆ.

ಹಿಂದೆ 15 ವರ್ಷಗಳಿಂದ ನಾನು ಮಂಡಿಗಳ ನೋವಿನಿಂದ ಬಳಲುತ್ತಿದ್ದೆ. ನಾನಾ ರೀತಿಯ ಚಿಕಿತ್ಸೆ ಪಡೆದರೂ, ವಿವಿಧ ತೈಲಗಳನ್ನು ಲೇಪಿಸಿದರೂ, ನಡೆದಾಡುವಾಗ ಮತ್ತು ಮೆಟ್ಟಿಲುಗಳನ್ನು ಏರುವಾಗ ನೋವಿನಿಂದ ನರಳುತ್ತಿದ್ದೆ. ಎಲ್ಲಿಗೂ ಹೋಗಿ ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಂತರ ಒಂದು ದಿನ ಚತುರ್ಭುಜ ತೈಲ ಮತ್ತು ಟ್ಯಾಬ್ಲೆಟ್ ಕುರಿತು ಮಾಹಿತಿ ಸಿಕ್ಕ ಬಳಿಕ, ಪ್ರತಿದಿನ ಬೆಳಗ್ಗೆ 1 ಮತ್ತು ರಾತ್ರಿ 1 ಚತುರ್ಭುಜ ಟ್ಯಾಬ್ಲೆಟ್ ಸೇವಿಸತೊಡಗಿದೆ ಮತ್ತು ಈ ನೋವು ಚರ್ಮದ ಮೇಲೆ ಇರುವುದಿಲ್ಲ, ಕೀಲುಗಳಲ್ಲಿ ಹಾಗೂ ಮಾಂಸಖಂಡಗಳಲ್ಲಿ ಇರುತ್ತದೆ ಎಂದು ನನಗೆ ತಿಳಿದಿದ್ದರಿಂದ, ಯಾವುದೇ ಮುಲಾಜಿಲ್ಲದೆ ದಿನಕ್ಕೆ 3 ಬಾರಿ 8 ರಿಂದ 10 ಎಂ.ಎಲ್. ತೈಲದಿಂದ 15 ರಿಂದ 20 ನಿಮಿಷ ಚೆನ್ನಾಗಿ ಮಂಡಿಗಳನ್ನು ಮಾಲಿಷ್ ಮಾಡಿಕೊಂಡೆ. ಹೆಚ್ಚಿನ ಪ್ರಮಾಣದ ತೈಲದಿಂದ ಮಸಾಜ್ ಮಾಡಿಕೊಂಡಿದ್ದರಿಂದ, ತೈಲವು ಆಳದವರೆಗೆ ಇಳಿದು ಪ್ರಭಾವ ಬೀರಿತು ಮತ್ತು ನನಗೆ ಬಹುಬೇಗ ನಿವಾರಣೆ ಲಭಿಸಿತು. ಇದೀಗ ನಾನು ಎಲ್ಲಿಗೆ ಬೇಕಾದರೂ ಕಾಲ್ನಡಿಗೆಯಲ್ಲೇ ಹೋಗಿ ಬರುವಂತಾಗಿದ್ದೇನೆ ಮತ್ತು ಮನೆಯ ಮೆಟ್ಟಿಲುಗಳನ್ನು ಓಡುತ್ತ ಏರಬಲ್ಲವನಾಗಿದ್ದೇನೆ. ನನ್ನ ಕುಟುಂಬ ಸದಸ್ಯರು ಚತುರ್ಭುಜ ತೈಲ ಮತ್ತು ಚತುರ್ಭುಜ ಟ್ಯಾಬ್ಲೆಟ್‌ಗಳನ್ನು ಹಲವಾರು ನೋವಿಗಾಗಿ ಬಳಸುತ್ತಿದ್ದಾರೆ ಮತ್ತು ನೋವುಗಳಿಂದ ಮುಕ್ತರಾಗುತ್ತಿದ್ದಾರೆ. ನನಗೆ ಇದರ ಫಲಿತಾಂಶ ಅತ್ಯಂತ ತೃಪ್ತಿ ನೀಡಿದೆ. ಎಲ್ಲಾ ಜನರು ನೋವುಗಳಿಂದ ಮುಕ್ತರಾಗಲಿ ಎಂಬ ಏಕೈಕ ಸಾರ್ವಜನಿಕ ಹಿತಾಸಕ್ತಿಯಿಂದ ಇಲ್ಲಿ ನನ್ನ ವೈಯಕ್ತಿಕ ಅನುಭವವನ್ನು ಹಂಚಿಕೊಳ್ಳುತ್ತಿದ್ದೇನೆ.

ಆಯುರ್ವೇದಿಕ ಔಷಧಿ
ಚತುರ್ಭುಜ®
ತೈಲ ಮತ್ತು ಟ್ಯಾಬ್ಲೆಟ್
ಎಲ್ಲಾ ಮೆಡಿಕಲ್ ಮತ್ತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ

ಬ್ಯಾಸ್ಕೆಟ್‌ಬಾಲ್: ಭಾರತ್‌ಗೆ ಪ್ರಶಸ್ತಿ

ಬೆಂಗಳೂರು: ಭಾರತ್ ಸ್ಪೋರ್ಟ್ಸ್ ಯೂನಿಯನ್ ತಂಡವು ಎಂ.ಸಿ. ಶ್ರೀನಿವಾಸ್ ಸ್ಮಾರಕ ಟ್ರೋಫಿಗಾಗಿ ನಡೆದ ರಾಜ್ಯ ಬಿ ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ್ ಎಸ್‌ಯು 84–68ರಿಂದ ಬಿಎಸ್‌ಎನ್‌ಎಲ್ ಸ್ಪೋರ್ಟ್ಸ್ ಕ್ಲಬ್ ಎದುರು ಜಯಿಸಿತು. ವಿಜೇತ ತಂಡದ ಅಕ್ಷಯ್ 33 ಪಾಯಿಂಟ್ಸ್ ಗಳಿಸಿದರು.

ಸಿ. ರಂಗರಾಜನ್ ಸ್ಮಾರಕ ಟ್ರೋಫಿಗಾಗಿ ನಡೆದ ಸಿ ಡಿವಿಷನ್ ಟೂರ್ನಿಯಲ್ಲಿ ವಿವೇಕ್ ಸ್ಪೋರ್ಟ್ಸ್ ಕ್ಲಬ್‌ಗೆ ಪ್ರಶಸ್ತಿ ಒಲಿಯಿತು. ಫೈನಲ್‌ನಲ್ಲಿ ತಂಡವು 73–57ರಿಂದ ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ಎದುರು ಗೆದ್ದಿತು.

ಬಿ ಡಿವಿಷನ್ ಪ್ರಶಸ್ತಿ ವಿಜೇತ ಭಾರತ್ ಎಸ್‌ಯು ತಂಡ: ಎಡದಿಂದ– ಮಂಡಿಯೂರಿದವರು: ಸಂಕಲ್ಪ್, ವಿಷ್ಣು, ಉಜ್ವಲ್, ತಾರೀಶ್, ಕೃಷ್ಣ ಮತ್ತು ಅಕ್ಷತ್. ನಿಂತವರು: ನಕುಲ್, ಶ್ರೀವತ್ಸ, ನಿತಿನ್, ಶ್ರೇಯಸ್ (ಸಹಾಯಕ ಕೋಚ್), ಸಚಿನ್ (ಕೋಚ್), ಶ್ರೀನಿವಾಸ್ (ಜೂನಿಯರ್ ಕೋಚ್), ಅಕ್ಷಯ್, ಆನಂದ್ ಮತ್ತು ದಿನೇಶ್– ಪ್ರಜಾವಾಣಿ ಚಿತ್ರ

ಉತ್ತಮ ಸಾಮರ್ಥ್ಯ ತೋರುವ ಗುರಿ: ನೀರಜ್ ಚೋಪ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರುವತ್ತ ನನ್ನ ಚಿತ್ತ ಇರುತ್ತದೆ; ಸೋಲು ಗೆಲುವಿನ ಕುರಿತು ಲೆಕ್ಕಹಾಕುವುದಿಲ್ಲ ಎಂದು ಭಾರತದ ಜಾವೆಲಿನ್ ಥ್ರೊ ಅಥ್ಲೀಟ್ ನೀರಜ್ ಚೋಪ್ರಾ ಹೇಳಿದ್ದಾರೆ.

ಉಡುಪು ತಯಾರಿಕಾ ಕಂಪನಿ ಅಂಡರ್ ಆರ್ಮರ್ ಸೋಮವಾರ ಆಯೋಜಿಸಿದ್ದ ವರ್ಚುವಲ್ ಸಂವಾದದಲ್ಲಿ ಅವರು ಮಾತನಾಡಿದರು.

ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ನೀರಜ್, ಸದ್ಯ ವಿಶ್ವ ಚಾಂಪಿಯನ್‌ಷಿಪ್ ಸ್ಪರ್ಧೆಗಾಗಿ ಅಮೆರಿಕದ ಯೂಜೀನ್‌ನಲ್ಲಿದ್ದಾರೆ. ಅಂಡರ್ ಆರ್ಮರ್ ಕಂಪನಿ ಅವರಿಗೆ ಪ್ರಾಯೋಜಕತ್ವ ನೀಡುತ್ತಿದೆ.

‘ತರಬೇತಿ ಮತ್ತು ಸ್ಪರ್ಧೆಗೆ ತುಂಬಾ ವ್ಯತ್ಯಾಸವಿರುತ್ತದೆ. ಕ್ರೀಡಾಂಗಣದಲ್ಲಿ ಪ್ರೇಕ್ಷಕರ ಕೂಗು, ಶಿಳ್ಳೆ, ಚಪ್ಪಾಳೆಗಳ ಸದ್ದು ಒತ್ತಡ ಹೆಚ್ಚಿಸುತ್ತದೆ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಜಾವೆಲಿನ್ ಎಸೆಯುವ ದೂರದ ಕುರಿತು ಆಲೋಚಿಸಿಲ್ಲ’ ಎಂದು ನೀರಜ್ ನುಡಿದರು.

ಐಎಸ್‌ಎಲ್: ಬಿಎಫ್‌ಸಿಗೆ ಕೃಷ್ಣ

ರಾಯ್ ಕೃಷ್ಣ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫ್ರಾಂಚೈಸ್ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ), ಫಿಜಿ ಆಟಗಾರ ರಾಯ್ ಕೃಷ್ಣ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಫಿಜಿ ರಾಷ್ಟ್ರೀಯ ತಂಡದ ನಾಯಕ ಆಗಿರುವ 34 ವರ್ಷದ ಕೃಷ್ಣ ಅವರ ಆಗಮನದಿಂದ ತಂಡದ ಬಲ ವೃದ್ಧಿಸುವ ನಿರೀಕ್ಷೆಯಿದೆ. ಈ ಹಿಂದೆ ಅವರು ಎಟಿಕೆ ಎಫ್‌ಸಿ ಮತ್ತು ಮೋಹನ್ ಬಾಗನ್ ತಂಡಗಳಲ್ಲಿ ಆಡಿದ್ದರು.

ಫಿಜಿ ಪರ ಅತಿ ಹೆಚ್ಚು ಗೋಲು ಗಳಿಸಿರುವ ಆಟಗಾರನಾಗಿರುವ ಕೃಷ್ಣ, ಈ ವರ್ಷ ಬಿಎಫ್‌ಸಿ ತಂಡ ಸೇರಿಕೊಂಡ ಆರನೇ ಆಟಗಾರನಾಗಿದ್ದಾರೆ. ಐಎಸ್‌ಎಲ್‌ನ ಮೂರು ಆವೃತ್ತಿಗಳಲ್ಲಿ ಕೃಷ್ಣ ಒಟ್ಟು 36 ಗೋಲು ಗಳಿಸಿದ್ದಾರೆ. 18 ಬಾರಿ ಅಸಿಸ್ಟ್ ಮಾಡಿದ್ದಾರೆ.

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ. ಇಂದೇ ಖರೀದಿಸಿದಲ್ಲಿ 50% ಡಿಸ್ಕೌಂಟ್ ಪಡೆಯಿರಿ
ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ
02262676816

ರಾಜ್ಯ ಕಬಡ್ಡಿ ತಂಡಕ್ಕೆ ಪ್ರಶಾಂತ್ ನಾಯಕ

ಪ್ರಜಾವಾಣಿ ವಾರ್ತೆ

ಪ್ರಶಾಂತ್ ಕುಮಾರ್ ರೈ

ಬೆಂಗಳೂರು: ಪ್ರಶಾಂತ್ ಕುಮಾರ್ ರೈ ಅವರು ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕ ಕಬಡ್ಡಿ ತಂಡಕ್ಕೆ ನಾಯಕತ್ವ ವಹಿಸಿಕೊಂಡಿದ್ದಾರೆ.

ಹರಿಯಾಣದ ದಾದ್ರಿಯಲ್ಲಿ ಗುರುವಾರದಿಂದ ಜುಲೈ 24ರವರೆಗೆ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಯಲಿದೆ.

ಕರ್ನಾಟಕ ತಂಡ ಇಂತಿದೆ: ಪ್ರಶಾಂತ್ ಕುಮಾರ್ ರೈ (ನಾಯಕ), ಸುಕೇಶ್ ಹೆಗ್ಡೆ, ರಕ್ಷಿತ್ ಎಸ್, ಸಚಿನ್ ವಿಠ್ಠಲ, ಅಭಿಷೇಕ್ ಎನ್, ನರೇಂದ್ರಕುಮಾರ್ ಎ, ರತನ್ ಕೆ.ಎ, ಬಿ.ವೈ.ಸೋಮೇಶ್ವರ್ ದರ್ಶನ್, ಆರ್ಮುಗಂ ಎಂ, ಸಚಿನ್ ಪೂವಯ್ಯ, ಮಹಮ್ಮದ್ ಅಫ್ರೀದ್, ರಾಕೇಶ್ ಗೌಡ ಕೆ.ಎ. ಮ್ಯಾನೇಜರ್: ಸಿ. ಹೊನ್ನಪ್ಪ ಗೌಡ, ಕೋಚ್: ಮೊಹಮ್ಮದ್ ಇಸ್ಮಾಯಿಲ್ ಲತೀಫ್

ಚೆಸ್ ಒಲಿಂಪಿಯಾಡ್ ಕ್ರೀಡಾ ಜ್ಯೋತಿಗೆ ಅದ್ದೂರಿ ಸ್ವಾಗತ

ಚೆಸ್ ಕಂಪು ಹರಡಿದ ಜ್ಯೋತಿಯಾತ್ರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಹಾಬಲಿಪುರಂನಲ್ಲಿ ಜುಲೈ 28 ರಿಂದ ಆಗಸ್ಟ್ 10ರ ವರೆಗೆ ಟೂರ್ನಿ
- ಇಂದು ಮಂಗಳೂರಿನಲ್ಲಿ ಜ್ಯೋತಿಯಾತ್ರೆ

ಬೆಂಗಳೂರು: ಭಾರತದ ಆತಿಥ್ಯದಲ್ಲಿ ನಡೆಯಲಿರುವ 44ನೇ ಚೆಸ್ ಒಲಿಂಪಿಯಾಡ್‌ನ ಕ್ರೀಡಾ ಜ್ಯೋತಿ ಯಾತ್ರೆಯು ಉದ್ಯಾನನಗರಿಯಲ್ಲಿ ಸೋಮವಾರ ವೈಭವದಿಂದ ನಡೆಯಿತು.

ಚೆಸ್ ಒಲಿಂಪಿಯಾಡ್ ತಮಿಳುನಾಡಿನ ಮಹಾಬಲಿಪುರಂನಲ್ಲಿ ಜುಲೈ 28 ರಿಂದ ಆಗಸ್ಟ್ 10ರ ವರೆಗೆ ಆಯೋಜನೆಯಾಗಿದೆ. ದೇಶದ ವಿವಿಧ ನಗರಗಳಲ್ಲಿ ಯಾತ್ರೆ ಮಾಡಿದ ಜ್ಯೋತಿಯನ್ನು ಸೋಮವಾರ ಬೆಳಿಗ್ಗೆ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ತರಲಾಯಿತು.

ಕರ್ನಾಟಕದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಜಿ.ಎ.ಸ್ಟ್ಯಾನಿ, ಎಂ.ಎಸ್. ತೇಜಕುಮಾರ್ ಮತ್ತು ಗಿರೀಶ್ ಕೌಶಿಕ್ ಅವರು ವಿಮಾನ ನಿಲ್ದಾಣದಲ್ಲಿ ಕ್ರೀಡಾ ಜ್ಯೋತಿಯನ್ನು ಸ್ವೀಕರಿಸಿದರು. ಆ ಬಳಿಕ ಮೆರವಣಿಗೆ ಮೂಲಕ ರಾಜಭವನಕ್ಕೆ ತರಲಾಯಿತು.

ಕ್ರೀಡಾ ಇಲಾಖೆ ಮತ್ತು ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಆಶ್ರಯದಲ್ಲಿ ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ, ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್, ರಾಜ್ಯ ಚೆಸ್ ಸಂಸ್ಥೆ ಅಧ್ಯಕ್ಷ ಡಿ.ಪಿ.ಅನಂತ, ಕಾರ್ಯದರ್ಶಿ ಅರವಿಂದ್ ಶಾಸ್ತ್ರಿ ಹಾಗೂ ಸಂಸ್ಥೆಯ ಪದಾಧಿಕಾರಿಗಳು, ಚೆಸ್ ಸ್ಪರ್ಧಿಗಳು ಪಾಲ್ಗೊಂಡರು.

ಗ್ರ್ಯಾಂಡ್‌ಮಾಸ್ಟರ್ ತೇಜಕುಮಾರ್, ಚೆಸ್ ಆಟಗಾರ ಡಿ.ವಿ.ಪ್ರಸಾದ್, ಗ್ರ್ಯಾಂಡ್‌ಮಾಸ್ಟರ್‌ಗಳಾದ ಜಿ.ಎ.ಸ್ಟ್ಯಾನಿ ಮತ್ತು ಗಿರೀಶ್ ಕೌಶಿಕ್ ಅವರು ವಿಧಾನಸೌಧದ ಮುಂಭಾಗ ಚೆಸ್ ಒಲಿಂಪಿಯಾಡ್ ಕ್ರೀಡಾ ಜ್ಯೋತಿಯಾತ್ರೆಯಲ್ಲಿ ಪಾಲ್ಗೊಂಡರು –ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ದನ್

ಜುಲೈ 19 ರಂದು ಮಂಗಳೂರಿನಲ್ಲಿ ಜ್ಯೋತಿಯಾತ್ರೆ ನಡೆಯಲಿದೆ.

100 ವರ್ಷಗಳ ಇತಿಹಾಸ ಹೊಂದಿರುವ ಚೆಸ್ ಒಲಿಂಪಿಯಾಡ್ ಭಾರತದಲ್ಲಿ ಆಯೋಜನೆಯಾಗಿರುವುದು ಇದೇ ಮೊದಲು. ಈ ಬಾರಿ ದಾಖಲೆಯ 187 ರಾಷ್ಟ್ರಗಳ ತಂಡಗಳು ಪಾಲ್ಗೊಳ್ಳುತ್ತಿವೆ.

ಅಂತರರಾಷ್ಟ್ರೀಯ ಚೆಸ್ ಸಂಸ್ಥೆ (ಫಿಡೆ) ಇದೇ ಮೊದಲ ಬಾರಿಗೆ ಚೆಸ್ ಒಲಿಂಪಿಯಾಡ್‌ನಲ್ಲಿ ಒಲಿಂಪಿಕ್ ಮಾದರಿಯಲ್ಲಿ ಜ್ಯೋತಿಯಾತ್ರೆ ಪರಿಚಯಿಸಿತ್ತು. ಜ್ಯೋತಿ ಯಾತ್ರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಕಳೆದ ತಿಂಗಳು ಚಾಲನೆ ನೀಡಿದ್ದರು.